ಮಧ್ಯಪ್ರದೇಶದ ಮಡಿಲಲ್ಲಿ

(ಪ್ರವಾಸ ಸಾಹಿತ್ಯ)

ಡಾ. ಕೃಷ್ಣಾನಂದ ಕಾಮತ್



ಮಧ್ಯಪ್ರದೇಶದ ಮಡಿಲಲ್ಲಿ

ಡಾ॥ ಕೃಷ್ಣಾನಂದ ಕಾಮತ್

ಪ್ರಕಾಶಕರು

ಪುಸ್ತಕಾಲಯ :: ಜಯನಗರ :: ಬೆಂಗಳೂರು - 41.

MADHYAPRADESHADA MADILALLI: A travelogue in Kannada by Dr.Krishnananda Kamath, published by K.S.Gopal, Pustakalaya, 746, 16th Main, 37th 'F' Cross, 4th 'T' Block, Jayanagar, Bangalore - 560 041.

ಮೊದಲ ಮುದ್ರಣ : 1993


ಬೆಲೆ : ಇಪ್ಪತ್ತೈದು ರೂಪಾಯಿಗಳು ಮಾತ್ರ.

ಅಕ್ಷರ ಜೋಡಣೆ : ಸಪ್ತಗಿರಿ ಗ್ರಾಫಿಕ್ಸ್,
ಜಯನಗರ, ಬೆಂಗಳೂರು.

ಮುದ್ರಣ : ವಾಗಲೇ ಆಫ್‌ಸೆಟ್ ಪ್ರಿಂಟರ್ಸ್
ನಂ. 9 ಮನ್ಸೂರಿಯಾ ಲೇನ್
ಓ.ಟಿ.ಸಿ. ರೋಡ್ ಕ್ರಾಸ್
ಕಾಟನ್ ಪೇಟೆ
ಬೆಂಗಳೂರು 560 009.

ಶ್ರೀ ಆರ್.ಎನ್. ಕಾಮತರ ಸ್ಮಾರಕ ಗ್ರಂಥ ಪ್ರಕಟನೆ

ಪ್ರಪ್ರಥಮ ಕುಸುಮ



ಉತ್ತರ ಕನ್ನಡ ಜಿಲ್ಲೆಯ ನವ ನಿರ್ಮಾಪಕರಲ್ಲಿ ಹೊನ್ನಾವರದ ಶ್ರೀ ಆರ್.ಎನ್. ಕಾಮತ್ (02.02.1912 - 01.04.1989) ಬಿ.ಎಸ್.ಸಿ., ಎಲ್.ಎಲ್.ಬಿ. ಅವರ ಹೆಸರು ಶಾಶ್ವತವಾಗಿ ನಿಲ್ಲುವಂತಹದು. ಅವರು ನ್ಯಾಯವಾದಿಗಳಾಗಿ, ಮುಂಬಯಿ ಇಲಾಖೆಯ ವಿಧಾನ ಸಭೆಯ ಸದಸ್ಯರಾಗಿ, ಹೊನ್ನಾವರ ಅರ್ಬನ ಬ್ಯಾಂಕಿನ ಚೇರ್‌ಮನ್ನರಾಗಿ, ಕುಮಟಾ-ಹೊನ್ನಾವರ ಕಾಲೇಜುಗಳ ಅಧ್ಯಕ್ಷರಾಗಿ, ಶೈಕ್ಷಣಿಕ, ರಾಜಕೀಯ, ಆರ್ಥಿಕ, ಔದ್ಯೋಗಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಈ ಸಾಧನೆಗಳನ್ನು ಗುರುತಿಸಿದ ಗೋಕರ್ಣ - ಪರತಕಾಳದ ಜೀವೋತ್ತಮ ಮಠದ ಸ್ವಾಮಿಗಳವರು 'ವಿದ್ಯಾಧಿರಾಜ ಪುರಸ್ಕಾರ' ಅವರಿಗೆ ಕೊಟ್ಟು ಗೌರವಿಸಿದ್ದಾರೆ.

ಈ ಗ್ರಂಥದ ಮುದ್ರಣದ ವೆಚ್ಚವನ್ನು ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ)ದ ಶ್ರೀ ಆರ್.ಎನ್. ಕಾಮತ್ ಸ್ಮಾರಕ ಪ್ರತಿಷ್ಠಾನದವರು ನಿರ್ವಹಿಸಿಕೊಂಡಿದ್ದಕ್ಕಾಗಿ ಕೃತಜ್ಞತೆಗಳು.

- ಪ್ರಕಾಶಕರು

ಮೊದಲ ಮಾತು

ಮಧ್ಯಪ್ರದೇಶ ಒಂದು ಮಾಯಾಲೋಕವಿದ್ದಂತೆ. ಅಲ್ಲಿಯ ವಿಂಧ್ಯ, ಸೌತಪುಡಾ ಪರ್ವತಾವಳಿಗಳು, ನರ್ಮದಾ, ತಾಪಿ ನದಿಗಳು, ಗುಡ್ಡ-ಬೆಟ್ಟಗಳು, ಗಿರಿಕಂದರಗಳು, ಕಾಡು-ಮೇಡುಗಳು, ಗೊಂಡ-ಕೊರ್ಕುಗಳಂಥ ಆದಿವಾಸಿಗಳು. ಅವರ ನೃತ್ಯ ಸಂಗೀತ, ಹಬ್ಬ - ಹುಣ್ಣಿಮೆಗಳನ್ನು ನೆನೆಸಿಕೊಂಡಾಗೊಮ್ಮೆ, ಅಲ್ಲಿಯ ಅನುಭವಗಳು ಸುಂದರಸ್ವಪ್ನದಂತೆ ಭಾಸವಾಗುತ್ತದೆ. ಅಶೋಕ, ವಿಕ್ರಮಾದಿತ್ಯ, ಭೋಜರಾಜ, ಚಂದೇಲ ಅರಸರು ಆ ರಾಜ್ಯವನ್ನು ವೈಭವಶಿಖರಕ್ಕೇರಿಸಿದ ಶಿಖಾಮಣಿಗಳು. ವರಕವಿ ಕಾಳಿದಾಸ ಆ ಭೂಮಿಯನ್ನು ಅಮರವಾಗಿಸಿದ. ಸಂಗೀತ ಸಾಮ್ರಾಟ್ ತಾನ್‌ಸೇನ್ ಗ್ವಾಲೇರದಲ್ಲಿ ಶಾಶ್ವತವಾದ ಕುರುಹು ಬಿಟ್ಟು ಹೋಗಿದ್ದಾನೆ. ಮಾಂಡುವಿನ ಬಾಝ್ ಬಹಾದುರ ಮತ್ತು ರಾಣಿ ರೂಪಮತಿಯರ ಆದರ್ಶಪ್ರೇಮ ಅಜರಾಮರವಾಗಿದೆ. ಖಜುರಾಹೋ ತನ್ನ ಅಪೂರ್ವ ಶಿಲ್ಪಗಳಿಂದ ವಿಶ್ವಖ್ಯಾತಿ ಪಡೆದಿದೆ. ಇವೆಲ್ಲವುಗಳಿಗಿಂತ ಆಕರ್ಷಕವಾಗಿರುವ ಆದರೆ ಭರದಿಂದ ಕಣ್ಮರೆಯಾಗುತ್ತಿರುವ ಮೂಲ ಬುಡಕಟ್ಟಿನವರ ಅಪರೂಪದ ಸರಳ, ಸಭ್ಯಜೀವನ ಇಂದಿಗೂ ಹೊರಜಗತ್ತಿಗೆ ಅಜ್ಞಾತವಾಗಿಯೇ ಉಳಿದಿದೆ. ಅಲ್ಲಿ ಪಡೆದ ವಿಸ್ತಾರವಾದ ಅನುಭವಗಳೆಲ್ಲ ಈ ಒಂದು ಗ್ರಂಥದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗದಿದ್ದರೂ ಆ ರಾಜ್ಯದ ಇಣುಕುನೋಟ ಕೊಡಲು ಸರ್ವಪ್ರಯತ್ನ ಮಾಡಿದ್ದೇನೆ.

ಮಧ್ಯಪ್ರದೇಶದ ಒಂದು ಬೃಹತ್ ಜಿಲ್ಲೆಯ ಕುರಿತು ಬರೆದು ಪ್ರಕಟಿಸಿದ '**ಬಸ್ತರ ಪ್ರವಾಸ**' ಕೃತಿಗೆ ಕನ್ನಡಿಗರು ಕೊಟ್ಟ ಹಾರ್ದಿಕ ಸ್ವಾಗತದಿಂದ ಉತ್ಸಾಹಿತನಾಗಿದ್ದೇನೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯು ೧೯೮೯ನೇ ಸಾಲಿನ ಪ್ರವಾಸ ಸಾಹಿತ್ಯ ಪ್ರಕಾರದ ಉತ್ತಮ ಕೃತಿಯೆಂದು ಪರಿಗಣಿಸಿ ಬಹುಮಾನ ನೀಡಿ ಪ್ರೋತ್ಸಾಹಿಸಿದ್ದರಿಂದ ಈ ಪ್ರವಾಸ ಕಥನವನ್ನು ಬೇಗನೆ ಹೊರತರಲು ಅನುಕೂಲವಾಯಿತು. ಪುಸ್ತಕಾಲಯದ ಪ್ರಕಾಶಕರಾದ ಶ್ರೀ ಕೆ.ಎಸ್. ಗೋಪಾಲ್ ಅವರು ಎಂದಿನಂತೆ ಉತ್ಸಾಹದಿಂದ ಅಲ್ಪಾವಧಿಯಲ್ಲಿ ಅಂದವಾಗಿ ಪ್ರಕಟಿಸಿದ್ದಕ್ಕಾಗಿ ಕೃತಜ್ಞತೆಗಳು. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಶ್ರೀ ಆರ್.ಎನ್. ಕಾಮತ್ ಪ್ರತಿಷ್ಠಾನದವರು ಇದನ್ನು ತಮ್ಮ ಪ್ರಕಟನಾ ಯೋಜನೆಯಲ್ಲಿ ಪ್ರಥಮ ಕುಸುಮವೆಂದು ಪರಿಗಣಿಸಿ ಪ್ರಕಟನೆಯ ವೆಚ್ಚವನ್ನು ಭರಿಸಿದ್ದಕ್ಕಾಗಿ ಅವರಿಗೆ ಕೃತಜ್ಞತೆಗಳು.

ಕೃಷ್ಣಾನಂದ ಕಾಮತ್
110 ಶಶಿಕಿರಣ್,
18ನೇ ಅಡ್ಡ ರಸ್ತೆ,
ಮಲ್ಲೇಶ್ವರಂ,
ಬೆಂಗಳೂರು - 560 005.

ಬೆಂಗಳೂರು
ದೀಪಾವಳಿ 1993.

ಪರಿವಿಡಿ

ಯಾವ ಊರು?



"ಸರಕಾರಿ ಸಂಬಳ ತಿನ್ನುತ್ತಿರುವ ಇವರೆಲ್ಲ ಎಲ್ಲಿ ಹಾಳಾಗಿ ಹೋದರೋ!" ಎಂದು ನಾಗಪುರ ರೇಲ್ವೆ ಬುಕಿಂಗ್ ಆಫೀಸಿನ ಒಂದು ಕೌಂಟರ್ ಬಳಿ ಗುಡುಗಿದಾಗ, ಯಾವನೋ ಬಡಪಾಯಿ ಧಾವಿಸಿ ಬಂದು, "ಏನಾಗ ಬೇಕಿತ್ತು?" ಎಂದು ವಿಚಾರಿಸಿದ. "ಎರಡು ಗಂಟೆಯಿಂದ ಕಾಯುತ್ತಿದ್ದೇನೆ. ಟ್ರೇನ್ ಬಿಡಲು ಕೇವಲ ಹತ್ತೇ ನಿಮಿಷಗಳಿವೆ. ಇನ್ನೂ ಟಿಕೇಟು ಕೊಡಲು ಯಾರೂ ಕೌಂಟರ್ ಬಳಿ ಇಲ್ಲ!" ಎಂದಾಗ, "ಎಲ್ಲಿಗೆ?" ಎಂದು ಕೇಳಿದ. 'ಬೆಂಡವಾರಾ' ಎಂದು ಬಂದ ಉತ್ತರದಿಂದ ಅರ್ಥವಾಯಿತು ಎಂಬಂತೆ ನಕ್ಕು, 'ಸ್ವಾಮಿ, ಅದು ಛಿಂದವಾಡಾ!' ಎಂದು ಟಿಕೇಟು ಕೊಟ್ಟು, "ತಾವು ದೂರದಿಂದ ಬಂದಂತೆ ಕಾಣುತ್ತೀರಿ! ಯಾವೂರು" ಎಂದು ಕೇಳಿ ಬಂದ ಉತ್ತರದಿಂದ, ಓಹೋ ಅರ್ಥವಾಯಿತು ಎಂಬಂತೆ ನಕ್ಕು, ಬೇರಾರಿಗೂ ಟಿಕೇಟು ಕೊಡುವ ಗೊಡವೆಗೇ ಹೋಗದೇ ಬಂದಂತೆ ಹೊರಟುಹೋದ.

ಏದುತ್ತ ಹೊಗೆ ಕಾರುತ್ತ ನೀಲಗಿರಿ ಬೆಟ್ಟ ಹತ್ತಿ ಉದಕಮಂಡಲಕ್ಕೆ ಬುಸುಗುಡುತ್ತ ಮುಟ್ಟುವಂತಹದೇ ಆಟಿಗೆಯ ರೇಲು ಇಲ್ಲಿ ಉಸಿರಾಡದೇ ಸ್ತಬ್ಧವಾಗಿ ಹಳಿಗಳ ಮೇಲೆ ನಿಂತಿತ್ತು. ವೇಳೆಗೆ ಸರಿಯಾಗಿ ಹೊರಡುವ ಸೂಚನೆ ಇಲ್ಲದಾಗ, ಹಮಾಲನೊಬ್ಬ "ಮನಸ್ಸಿಗೆ ಬಂದಾಗ ಹೊರಡುವ ರೈಲು ಇದು" ಎಂದು ತೀರ್ಪನ್ನು ಕೊಟ್ಟ ತಮ್ಮ ಗಂಟು, ಗದಡಿ ಸಾಮಾನುಗಳನ್ನು ಹೊತ್ತು ತರುವವರನ್ನು ನೋಡಿದಾಗ ಇದು ಹಳ್ಳಿಗರಿಗೆ, ಆದಿವಾಸಿಗಳಿಗೇ ಮೀಸಲಾದ ಗಾಡಿ, ಎಂದು

ತಿಳಿಯುವಂತಾಯಿತು. ಕೊನೆಗೂ ಒಂದು ತಾಸು ತಡವಾಗಿ ಹೊರಟಾಗ, ಕೌಂಟರಿನ ವ್ಯಕ್ತಿ ಯಾವೂರೆಂದು ವಿಚಾರಿಸಿ ನಕ್ಕದ್ದು ಏಕೆಂದು ಅರ್ಥವಾಯಿತು. ಆದಿವಾಸಿ ಹಳ್ಳಿಗಳನ್ನು ತೀರ ಹತ್ತಿರದಿಂದ ನೋಡುವ ಹಂಬಲದಿಂದ ಖಿಡಕಿಯ ಹತ್ತಿರ ಕುಳಿತವನಿಗೆ ಮೊದಲು ಗೋಚರಿಸಿದ್ದು ನಾಗಪುರದ ಕೊಳಚೆ ಪ್ರದೇಶ. ಒಂದೆಡೆ ಬಡಿಗತನ, ಇನ್ನೊಂದೆಡೆ ನೇಕಾರಿಕೆ ಏಕಪ್ರಕಾರವಾಗಿ ಸಾಗಿವೆ. ವಾಸ, ಊಟ, ನಿದ್ರೆ, ಜಲಬಾಧೆ, ಮಲವಿಸರ್ಜನೆಗಳೆಲ್ಲ ಪಕ್ಕಪಕ್ಕದಲ್ಲೇ ಪೂರೈಸಿಕೊಳ್ಳುವುದರಿಂದ ಪ್ರದೇಶವೆಲ್ಲ ಏಕಪ್ರಕಾರವಾಗಿ ನಾರುತ್ತದೆ. ಬಡತನಕ್ಕೂ ಅನಾರೋಗ್ಯದ ಪರಿಸರಕ್ಕೂ ಸಂಬಂಧವಿದೆಯೇ? ಎಂಬ ಪ್ರಶ್ನೆ ಕಾಡಿತ್ತು. ಸಿರಿಗೂ ಸ್ವಚ್ಛತೆಗೂ ಸಂಬಂಧವಿಲ್ಲ! ಎನಿಸಿದ್ದೂ ಉಂಟು. ಆಗರ್ಭ ಶ್ರೀಮಂತರೂ ಸುತ್ತಮುತ್ತಲನ್ನು ಮಾಲಿನ್ಯ ಪೂರ್ಣವಾಗಿ ಇಟ್ಟದ್ದನ್ನು ಕರಾಚಿಯಲ್ಲಿ ನೋಡಿದ್ದೆ. ಮಧ್ಯಮವರ್ಗದವರು ಕಸಮುಸುರೆಗಳನ್ನು ಸಿಕ್ಕಲ್ಲಿ ಎಸೆಯುವದನ್ನು ಮುಂಬಯಿಯಲ್ಲಿ ಕಾಣಬಹುದು. ಅತ್ಯಂತ ಬಡವರೂ, ಕುಡಿಯಲು ನೀರಿಲ್ಲದವರೂ ಆದ ರಾಜಸ್ಥಾನಿಗಳು ತಮ್ಮ ಪರಿಸರವನ್ನು ಶುಭ್ರ ಇಡುವದರಲ್ಲಿ ವಿಶೇಷ ಆಸಕ್ತಿ ವಹಿಸುತ್ತಾರೆ. ಅದೇ ನೋಡಿದಲ್ಲೆಲ್ಲ ನೀರಿರುವ ಬಂಗಾಲದಲ್ಲಿ, ಕಂಡಲ್ಲೆಲ್ಲ ಕಸದ ರಾಶಿ ಬಿದ್ದಿರುತ್ತದೆ. ಕೊಳಚೆವಾಸಿಗಳು ಮನಸ್ಸು ಮಾಡಿದರೆ ಸ್ವಚ್ಛ ಪರಿಸರವನ್ನು ತಮ್ಮದನ್ನಾಗಿಸಬಹುದಿತ್ತು, ಅನಿಸಿತು.

ಹೊಲ-ಗುಡ್ಡಗಳ ಮಧ್ಯದಲ್ಲಿ ಹಚ್ಚ ಹಸುರಾದ ಕಿತ್ತೀಳೆ ಗಿಡಗಳು ರೇಲುಹೋಕರನ್ನು ತಲೆದೂಗಿ ಬೀಳ್ಕೊಂಡವು. ಗಿಡ-ಮರ ಕಾಡುಗಳ ಸಂಖ್ಯೆ ಕ್ರಮೇಣ ಹೆಚ್ಚಾಗಿದ್ದರಿಂದ ಮಧ್ಯಪ್ರದೇಶ ಸಮೀಪಿಸುತ್ತಿರುವ ಸೂಚನೆಯಾಯಿತು. ಅಲ್ಲಲ್ಲಿ ಕೆಲ ಮಾಮರಗಳು ಹೂ ಹೊತ್ತು ನಿಂತಿವೆ. ಹೆಚ್ಚಿನ ಹೊಂಡ, ಹೊಳೆಗಳು, ಬೇಸಿಗೆಯ ಧಗೆ ತಾಳಲಾರದೇ ಬತ್ತಿಹೋಗಿದ್ದವು. ಎತ್ತರವಾಗಿದ್ದ ಗುಡ್ಡದ ತುತ್ತತುದಿಯಲ್ಲಿರುವ ಹತ್ತಾರು ಗುಡಿಸಲುಗಳೇ ಅದೊಂದು ಹಳ್ಳಿ ಎಂದು ಸಾರಿದವು. ಇಳಿಜಾರನ್ನೇ ಹೊಲಗಳನ್ನಾಗಿ ಪರಿವರ್ತಿಸಿ ಮಳೆರಾಯನ ಸ್ವಾಗತಕ್ಕಾಗಿ ಏಕಚಿತ್ತದಿಂದ ಊಳಲಾರಂಭಿಸಿದ್ದರು, ಗೊಂಡರು.

ನಾಗಪುರದ ಬೈಲು ಮತ್ತು ಸಾತಪುಡಾ ಪರ್ವತಾವಳಿಗಳಲ್ಲಿ ಅಂತರ ಎಂಥವರಿಗೂ ಎದ್ದು ಕಾಣುವಂಥದು. ಅಲ್ಲಿ ಬಿಸಿಲಿನ ತಾಪ-ಧಗೆಯಿಂದ ಮನುಷ್ಯ ಬೆಂದು ಹೋಗುವಂತಿದ್ದರೆ, ಇಲ್ಲಿಯಾದರೋ ಅಲ್ಲಲ್ಲಿ ಅಲ್ಪ ಸ್ವಲ್ಪ ಮಳೆಯಾಗಿ ಆಲ್ಹಾದಕರವಾಗಿತ್ತು. ನಾಗಪುರದಲ್ಲಿ ಮಹಾತ್ಮಾ ಗಾಂಧಿಯವರ ಸಂದೇಶವನ್ನು ಶಿರಸಾವಹಿಸಿಕೊಂಡವರಂಥ ಗಾಂಧಿಟೋಪಿಯವರೇ ಹೆಚ್ಚು! ಇಲ್ಲಿ ಎಂಥ ಹೊರೆಯನ್ನೂ ಸಲೀಸಾಗಿ ಹೊರಲು ಬರುವಂತೆ ರುಮಾಲು ಬಿಗಿದುಕೊಂಡಿದ್ದರು. ಅಲ್ಲಿ, ಹಳ್ಳಿಗಳಿಗೆ ಮರಾಠಿ ಹೆಸರು, ಇಲ್ಲಿ ಹಿಂದಿ ಹೆಸರುಗಳಿಗೆ ಪ್ರಾಮುಖ್ಯತೆ. ಪೇಶ್ವೆಯರಕಾಲದಿಂದಲೂ, ಮೇಯಲು ಹೊಸ ಹೊಸ ತಾಣಗಳನ್ನು ಹುಡುಕುತ್ತ ಮರಾಠಿಗರು ಅಂದಿನ ಮಧ್ಯಭಾರತದಲ್ಲಿ ದೊಡ್ಡ ಪ್ರಮಾಣದಲ್ಲಿ ವಲಸೆ ಹೋದರು. ಅಂತೆಯೇ ಅವರ ವಂಶಜರ ಸಂಖ್ಯೆಯೂ ದೊಡ್ಡ ಪ್ರಮಾಣದಲ್ಲಿ ಇದ್ದೀತು. ಸಹ ಪ್ರಯಾಣ ಮಾಡುತ್ತಿದ್ದ ಆರು ಮಕ್ಕಳ ಮಾತೆ, ಪತಿಯ ಔಷಧೋಪಚಾರ, ಊಟ-ಉಡಿಗೆ, ಎಳೆಯರ ಶಾಲಾಫೀ ಕಟ್ಟುವ ಯೋಗ್ಯತೆ ತನಗಿಲ್ಲವೆಂದು ಕಣ್ಣೀರು ಹಾಕಿದಾಗ, ವಲಸೆ ಹೋದವರೆಲ್ಲ ಸುಖಿಯಾಗಿರಬೇಕೆಂದಿಲ್ಲ, ಎಂದು ಅರಿವಾಯ್ತು.

ರೈಲು ಅಲ್ಲಲ್ಲಿ ನಿಲ್ಲುತ್ತಿತ್ತು, ಜನರು ಇಳಿಯುತ್ತಿದ್ದರು, ಹೊಸ ಪ್ರಯಾಣಿಕರನ್ನು ಹತ್ತಿಸಿಕೊಂಡು ಮುಂದೆ ಓಡುತ್ತಿತ್ತು. ಎಲ್ಲಿಯೂ ಚಾಯ್, ಕಾಫಿ, ಗರಮ್ ಪಕೋಡ, ಅಂಜೂರ್, ಸಂತ್ರಾ ಎಂಬ ಕೂಗೇ ಕೇಳಿಸಲಿಲ್ಲ. ಹೊಟ್ಟೆ ತಾಳ ಹಾಕಲಾರಂಭಿಸಿದಾಗ, ಇಲ್ಲಿಯವರಿಗೆ ಹಸಿವೇ ಆಗುವುದಿಲ್ಲವೇ? ಎಂದು ವಿಚಾರಿಸಿದಾಗ, ಒಬ್ಬಾತ ನಕ್ಕು "ಯಾವೂರಿಗೆ ಹೋಗಬೇಕು?" ಎಂದು ವಿಚಾರಿಸಿದ. ಬಂದ ಉತ್ತರದಿಂದ ಕಂಗಾಲಾಗಿ, "ಬಾಬೂಜೀ ಒಂದೆರಡು ಸ್ಟೇಶನ್ನಿಗೆ

ಹೋಗುವವರಷ್ಟೇ ಈ ಟ್ರೈನು ಹತ್ತುತ್ತಾರೆ. ಆದ್ದರಿಂದ ಅವರಿಗೆ ತಿಂಡಿ-ತೀರ್ಥದ ಅವಶ್ಯಕತೆಯಿಲ್ಲಾ. ಅರ್ಧತಾಸಿಗೊಮ್ಮೆ ನಾಗಪುರ-ಛಿಂದವಾಡಾಕ್ಕೆ ಬಸ್‌ಗಳು ಓಡಾಡುತ್ತವೆ. ಮೂರು ತಾಸಿನಲ್ಲಿ ಅಲ್ಲಿರುತ್ತಿದ್ದಿರಿ! ಈಗ ಇಡೀ ದಿನ ಪ್ರವಾಸದಲ್ಲಿ ಕಳೆಯುತ್ತದೆ". ಎಂದು ಮರುಗಿದ. ಮಕ್ಕಳಿಗಾಗಿ ಖರೀದಿಸಿದ ಕಡ್ಲೆಪುರಿಯನ್ನು ಕೊಡಬಂದ " ಬೆಳಿಗ್ಗೆ ನಾಶ್ತಾ ಆಗಿದೆ. ಈಗ ಏನೂ ಬೇಡ" ಎಂದಾಗ ಇನ್ನೂ ಐದು ಸ್ಟೇಶನ್ ಕಳೆದಬಳಿಕ ಬಿಸಿಬಿಸಿ ಚಹಾ ಸಿಗುತ್ತದೆಂದು ಸಂತೈಸಲು ಯತ್ನಿಸಿದ. ಮಣ್ಣಿನ ಮಕ್ಕಳ ಬೆವರವಾಸನೆ ಪರೀಕ್ಷಿಸಲು ಹೊರಟವನಿಗೆ ಈ ರೇಲು ವರದಾನವೆಂದು ಅವನಿಗೆ ಪಾಪ, ಹೇಗೆ ಗೊತ್ತಾಗಬೇಕು.

ಸೂರ್ಯಾಸ್ತದ ಹೊತ್ತಿಗೆ ರೈಲು, ಛಿಂದವಾಡಾ ಮುಟ್ಟಿದಾಗ ಕೋಲಂಬಸ್‌ನಿಗೆ ಅಮೇರಿಕೆ ಕಂಡಾಗ ಆದಷ್ಟು ಆನಂದವಾಯಿತು. ನನ್ನೊಬ್ಬನದೇ ಟಿಕೇಟು ಕಲೆಹಾಕಲು ನಿಂತ ಕರಿಕೋಟಿನ ರೇಲು ಬಾಬುವಿಗೆ, "ಇಲ್ಲಿ ಆದಿವಾಸಿ ಸಂಶೋಧನಾ ಕೇಂದ್ರ ಎಲ್ಲಿದೆ?" ಎಂದು ವಿಚಾರಿಸಿದಾಗ, ಅವನ ನಿರ್ವಿಕಾರ ಭಾವದಿಂದ ಇಂಗ್ಲೀಷ್ ಬಾರದೆಂದು ಅರಿತು, ಅದೇ ಪ್ರಶ್ನೆಯನ್ನು ಹಿಂದಿಯಲ್ಲಿ ಕೇಳಿದಾಗ, ಅಂಥ ಸಂಸ್ಥೆಯ ಹೆಸರನ್ನೆ ತಾನು ಕೇಳಿಲ್ಲವೆಂದ. ಇಳಿದುಕೊಳ್ಳಲು ಹೊಟೇಲು ಯಾವುದು ಚನ್ನಾಗಿದೆ? ಎಂದು ವಿಚಾರಿಸಿದಾಗ, ಎದುರಿಗೇ ಇದ್ದ 'ದುರ್ಗಾ ಲಾಜ್' ಕಡೆ ಬೆರಳು ಮಾಡಿ ತೋರಿಸಿ ಕೈ ತೊಳಕೊಂಡ!.

ನಿಲ್ದಾಣದಿಂದ ಹೊರ ಬೀಳುತ್ತಿದ್ದಂತೆ "ಗಣೇಶ ಬೀಡಿಗಳನ್ನೇ ಸೇದಿರಿ" ಎಂದು ದೊಡ್ಡ ಹಿಂದಿ ಜಾಹೀರಾತು ಸ್ವಾಗತಿಸಿತು. ಕನ್ನಡ ನಾಡಿನ ವ್ಯವಹಾರ ಕುಶಲಿಗಳು, ಬೀಡಿಯಲ್ಲೂ ಭಾರತಾದ್ಯಂತ ಹೆಸರು ಮಾಡಿದ್ದಾರಲ್ಲಾ! ಎಂದು ಯೋಚಿಸುವಲ್ಲಿ ಹೊಟೇಲು ಬಂದು ಬಿಟ್ಟಿತು. ಮೆಟ್ಟಿಲುಗಳನ್ನು ಏರುತ್ತಿದ್ದಂತೆ, ಇದು ಕೃಶಾಂಗರಿಗೆ ಮಾತ್ರ! ಅನಿಸಿತು. ರೂಂ ವಿಚಾರಿಸಿದಾಗ ಮ್ಯಾನೇಜರನು ರಜಿಸ್ಟರ್ ತೆಗೆದು ಅದರಲ್ಲಿ ವಿವರಗಳನ್ನು ದಾಖಲಿಸಲು ಹೇಳಿದ. ಎಲ್ಲಾ ಹಿಂದಿಮಯವಾಗಿದ್ದರಿಂದ ಇಂಗ್ಲೀಷಿನಲ್ಲಿ ಬರೆದರಾಗದೇ? ಎಂದು ವಿಚಾರಿಸಿದ್ದಕ್ಕೆ, ಆ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡು, ಯಾವ ಊರು? ಎಂದು ವಿಚಾರಿಸಿ ಬೆಂಗಳೂರಿ ಎಂದು ಬರೆಯುವ ಬದಲಾಗಿ ಮದ್ರಾಸಿ, ಎಂದು ಬರೆದು, ಎಲ್ಲಿ ಹೋಗಬೇಕಾಗಿದೆ ಎಂದು ಕೇಳುವ ಗೋಜಿಗೂ ಹೋಗದೇ ಭೋಪಾಲ್ ಎಂದು ಸೇರಿಸಿಯೇ ಬಿಟ್ಟ.

ಸಂಜೆಯೂಟದೊಂದಿಗೆ ಮಧ್ಯಾಹ್ನದ್ದನ್ನೂ ಸೇರಿಸುವ ಉದ್ದೇಶದಿಂದ ಉತ್ತಮ ಹೋಟೇಲಿನ ಸಂಶೋಧನೆ ಪ್ರಾರಂಬವಾಯಿತು. ಜನಜಂಗುಳಿ ಹೆಚ್ಚಾಗಿರುವ ಅಂಗಡಿಗಳು ಚೆನ್ನಾಗಿರುವವು, ಎಂಬುದು ಅನುಭವದಿಂದ ಅರಿತುಕೊಂಡದ್ದರಿಂದ ಅಂಥದನ್ನೆ ಆರಿಸಿ, ಪಂಜಾಬಿ ಊಟಕ್ಕೆ ಆರ್ಡರ್ ಕೊಟ್ಟು ಕಾಯುತ್ತಿದ್ದಾಗ, ಹೆಚ್ಚಿನ ಗಿರಾಕಿಗಳು ತಿಂಡಿ-ಊಟಕ್ಕಾಗಿ ಬರುತ್ತಿಲ್ಲವೆಂದು ತಿಳಿಯಿತು. ಕಛೇರಿ ಬಾಬುಗಳು, ಕಾರ್ಮಿಕರು, ದಾರಿಹೋಕರು ಮಾಲಿಕರ ಸುತ್ತ ದುಂಬಿಯಂತೆ ಮುತ್ತಿಕೊಂಡು ಕಪಾಟಿನ ಹಿಂದೆ ಕೈ ಚೀಲದಲ್ಲಿ ಅಡಗಿಸಿಟ್ಟ ಬಾಟ್ಲಿಯೊಳಗಿನ ದ್ರವವನ್ನು ಗ್ಲಾಸಿಗೆ ಸುರುವಿದ ನಂತರವೇ ಕೈಗೆ ಕಾಸು ಪಡೆದು, ಗ್ಲಾಸನ್ನು ಪಡೆಯುವ ವ್ಯವಸ್ಥೆ ಹೊಂದಿದ್ದಾರೆ! ಇಷ್ಟೊಂದು ಕಡಿಮೆಯೇ! ಎಂದು ಗಿರಾಕಿಯೊಬ್ಬ ಉದ್ಗರಿಸಿದಾಗ, ಬೇಡವಾದರೆ ಬಿಡು ಎಂದು ಬಂದ ಉತ್ತರದಿಂದ ತೆಪ್ಪಗಾಗಿ, ತೀರ್ಥವೆಂಬಂತೆ ಕುಡಿದು ಹೊರಬಿದ್ದ. ಇಲ್ಲಿಯದು "ವಿಶೇಷ ಪಾನಕವೇ?" ಎಂದು ಊಟ ತಂದಿಟ್ಟ ಮಾಣಿಗೆ ವಿಚಾರಿಸಿದಾಗ, ಕಣ್ಸನ್ನೆಯಿಂದ ಹೌದೆಂದು ಸೂಚಿಸಿ ಮಾಯವಾದ.

ಮೇಣಬತ್ತಿಯಷ್ಟು ಪ್ರಖರವಾಗಿ ಉರಿಯುವ ದೀಪದಡಿಯಲ್ಲಿ ದೊಡ್ಡದೊಂದು ಟೇಬಲ್, ಸುತ್ತಲ ಕುರ್ಚಿಗಳನ್ನು ಯುವಜನರು ಆಕ್ರಮಿಸಿಕೊಂಡು ಬಿಟ್ಟಿದ್ದಾರೆ. ವಿಶೇಷ ಪಾನಕ್ಕಾಗಿ ಬಾಟ್ಲಿ,

ಸೋಡಾ, ಗ್ಲಾಸುಗಳು, ಟೇಬಲ್ ತುಂಬ ಹರಡಿವೆ. ಜೊತೆಯಲ್ಲಿ ಕಲೇಜಿ ಪಕೋಡ, ಆಲೂ ಟಿಕ್ಕಿ, ಚಿಪ್ಸ್‌ಗಳೂ ಇವೆ. ಹರಟೆ, ಸಿಗರೇಟು ಸೇದುವಿಕೆ, ತಿಂಡಿ, ಕುಡಿತಗಳು ಏಕಪ್ರಕಾರವಾಗಿ ಸಾಗಿದ್ದವು. ಬಲಿತ, ಮೀಸೆ, ಕುಡಿಮೀಸೆಯವರೊಂದಿಗೆ ಮೀಸೆಬಾರದವರೂ ಅದರಲ್ಲಿ ಸೇರ್ಪಡೆಯಾಗಿದ್ದರು. ಒಬ್ಬ ಎಳೆಯ, ಅನನುಭವಿಯೆಂದು ತೋರುತ್ತದೆ, ವಾಕರಿಕೆಯಿಂದ, ಉದರವು ನಿರಾಕರಿಸಿದ್ದನ್ನೆಲ್ಲ ಹೊರಗೆ ಹಾಕಿಬಿಟ್ಟ. ಕುಳಿತ ಭೂಪರು ಮಾಣಿಯನ್ನು ಕರೆದು, ಸ್ವಚ್ಛಮಾಡಲು ಹೇಳಿದುರು. ಆತ, ಅದು ತನ್ನ ಕೆಲಸವಲ್ಲ, ನೀರು, ಬಟ್ಟೆ ಒದಗಿಸುವೆ. ನೀವೆ ಸಾಫ್ ಮಾಡಿಕೊಳ್ಳಿ! ಎಂದು ಪಟ್ಟು ಹಿಡಿದ. ಮಾತು ಬೆಳೆದು ಕೈಗೆ ಕೈ ಹತ್ತಿದರೆ, ಆಮಂತ್ರಣ ಕಳಿಸಿದಂತೆ ಪೋಲಿಸರು ಹಾಜರಾಗುತ್ತಾರೆ, ಎಂದು ಕಳವಳದಿಂದ ಮಾಲಿಕನು ನೀವೇನೂ ಯೋಚಿಸಬೇಕಿಲ್ಲ, ನಾನು ನೋಡಿಕೊಳ್ಳುತ್ತೇನೆ, ಎಂದು ಉಪಾಯದಿಂದ ಯುವಕರನ್ನು ಸಾಗಹಾಕಿದ. ವಿಪರೀತ ಹಸಿದಿದ್ದರೂ, ಈ ನೋಟದಿಂದ ಊಟ ಸೇರದೇ, ಹಾಗೇ ಬಿಟ್ಟು ಹಣಕೊಟ್ಟು ಹೊಟೇಲ್ ಸೇರಬೇಕಾಯಿತು.

ಹಸಿದಹೊಟ್ಟೆ, ದಣಿದ ದೇಹಗಳು, ತಿಗಣೆ-ಸೊಳ್ಳೆಗಳ ಕಾಟವನ್ನೂ ಲೆಕ್ಕಿಸದೇ ನಿದ್ರಾಸುಖ ಅನುಭವಿಸಿದವು. ಮುಂಜಾವಿನಲ್ಲಿ ಎರಡು ನಿಮಿಷವೂ ಸಹಿಸಲಾಗದ ಕಕ್ಕಸು ದರ್ಶನ ಮಾಡಿದ್ದಾಯಿತು. ಮುಖ ತೊಳೆಯಲು ಕಲುಷಿತ ನೀರು. ಸ್ನಾನದ ಸ್ಥಳ ವಿಚಾರಿಸಿದಾಗ (ಛತ್) ಮಾಡನ್ನೇ ಮಾಣಿ, ತೋರಿಸಿದ. ಈ ರಾಜ್ಯದ ಒಂದು ವರ್ಷ ಅಧ್ಯಯನ ಮಾಡುವದಿರಲಿ, ಬದುಕಿರುವದಾದರೂ ಹೇಗೆ? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳದೇ ಬೇರೆ ಮಾರ್ಗವಿರಲಿಲ್ಲ. ಯೋಚಿಸುತ್ತ ಬೀದಿಗಿಳಿದ್ದ ದ್ದಾಯಿತು. ಎಲ್ಲಿ ನೋಡಿದರೂ ಕರಿಮೋಡಗಳಂತೆ ದಟ್ಟಹೊಗೆ. ಹತ್ತಿರದಲ್ಲಿ ದೊಡ್ಡ ಕಾರಖಾನೆ ಇದೆಯೇ? ಅಥವಾ ದೊಡ್ಡ ಕೈಗಾರಿಕಾ ಕೇಂದ್ರ, ಈ ಊರೇ? ಎಂದು ಸಂಶೋಧನೆ ನಡೆಸಿದಾಗ, ಕಲ್ಲಿದ್ದಲಿಯ ಹೊಗೆ ಬರುತ್ತಿರುವದು ಚಿಕ್ಕಚಿಕ್ಕ ಚಾದಂಗಡಿ, ಹೊಟೇಲುಗಳಿಂದ, ಎಂದು ಅರಿತು ತಮಾಷೆಯೆನಿಸಿತು. ಖಾಲಿ ಡಾಂಬರಿನ ಡ್ರಮ್ಮಿಗೆ ಇಟ್ಟಿಗೆಗಳನ್ನು ಜೋಡಿಸಿ, ಮಣ್ಣು ಮೆತ್ತಿ ಚೂಲಾ (ಒಲೆ) ಯನ್ನು ನಿರ್ಮಿಸಿದ್ದಾರೆ. ಅನಾರೋಗ್ಯಕರ ಹೊಗೆ ಮೇಲಕ್ಕೇರಲು ಐದಡಿಯ ತಗಡಿನ ಕೊಳವೆಗಳನ್ನು ಜೋಡಿಸಿದ್ದಾರೆ. ಜೋಡಣೆ ಸರಿಯಾ ಗಿರದ್ದರಿಂದ, ಮಳೆಯ ನೀರಿನಿಂದಾಗಿ, ಹಲವಾರು ತೂತು ಬಿದ್ದದ್ದರಿಂದ, ಹೊಗೆ ಎಲ್ಲೆಡೆ ವ್ಯಾಪಿಸಿಕೊಂಡಿದೆ. ಸಾಲದ್ದಕ್ಕೆ ಮನೆಮನೆಯಲ್ಲೂ ಗೃಹಿಣಿಯರು ತಮ್ಮ 'ಬಾಲ್ಟಿ-ಚೂಲಾ' (ಲೋಹದ ಬಕೆಟಿನಲ್ಲಿ ಹೊಂದಿಸಿದ ಒಲೆ) ಗಳನ್ನು, ಗಾಳಿಗೆ ಹೊತ್ತಿಸಿಕೊಳ್ಳಲು ರಸ್ತೆಯ ಪಕ್ಕದಲ್ಲಿ ಇಡುವದು ರೂಢಿಯಾದ್ದರಿಂದ, ರೇಲ್ವೆ ಯಾರ್ಡಿನಲ್ಲಿ ನಡೆದಾಡಿದ ಅನುಭವವಾಯಿತು.

ಅಲ್ಲಿ ಇದ್ದವುಗಳೆಲ್ಲ ರಸ್ತೆ ಪಕ್ಕದ ಚಾದಂಗಡಿಗಳೇ. ಒಂದು ಬೆಂಚಿನ ಮೇಲೆ ಕುಳಿತರೆ, ಇನ್ನೊಂದು ಬೆಂಚಿನ ಮೇಲೆ ತಿಂಡಿ ಇಡುವದು ಪದ್ಧತಿ. ಆದಾಗಲೇ ಬಿಸಿಬಿಸಿ ಪೊವ್ವಾ(ಒಗ್ಗರಣೆ ಅವಲಕ್ಕಿ), ಜಿಲೇಬಿಗಳು ತಯಾರಾಗಿದ್ದವು. ಒಂದು ಪ್ಲೇಟು ಜಿಲೇಬಿಗೆ ಆರ್ಡರ್ ಕೊಟ್ಟಾಗ, "ಐವತ್ತೋ ನೂರೋ?" ಎಂದು ಮಾಣಿ ಕೇಳಿದ ನಿದ್ರಾಧ್ವನಿಯ ಪ್ರಶ್ನೆಗೆ ಹೌಹಾರುವಂತೆ ಆಯಿತು. ಸಮೀಪದಲ್ಲಿ ಕುಳಿತವನು, "ಐವತ್ತೋ ನೂರೋ ಗ್ರಾಂ ಎಂದು ವಿಚಾರಿಸುತ್ತಿದ್ದಾನೆ" ಎಂದು ವಿವರಿಸಿದ. ಅರ್ಥವಾಗಿ "ಇನ್ನೂರೈವತ್ತು" ಎಂದಾಗ ಮಾಣಿ ನಂಬದೇ ಪಿಳಿ ಪಿಳಿ ಕಣ್ ಬಿಟ್ಟ. ಜಿಲೇಬಿ, ಅವಲಕ್ಕಿಗಳ ನಂತರ ಅದೇ ಆಗ ತಯಾರಾಗುತ್ತಿದ್ದ ಕಚೋರಿ, ಸಾಮೋಸಾಗಳಿಗೂ ಆರ್ಡರ್ ಕೊಟ್ಟಾಗ, ಮಾಣಿ ಹೌಹಾರುವಂತಾಯಿತು. ಅವಕಾಶ ಸಿಕ್ಕಾಗಲೆಲ್ಲ ಮುಕ್ಕುವ ಮಾಣಿಗೆ, 30 ತಾಸುಗಳ ಹಸಿವಿನ ತೀವ್ರತೆ ಹೇಗೆ ಅರ್ಥವಾಗಬೇಕು? ಎಂದೂ ತೊಳೆಯದಂತೆ ತೋರುತ್ತಿದ್ದ ಹಿಡಿಕೆಯ ಆಲ್ಯೂಮಿನಿಯಂ ಪಾತ್ರೆ, ನೀರಿಗಿಂತ ಹೆಚ್ಚು ಹಾಲು, ಚಹಾ ಸೊಪ್ಪು, ಏಲಕ್ಕಿ ಸೇರಿಸಿದ ಕಾಢಾವನ್ನು ಬಟ್ಟೆಯಿಂದ ಸೋಸಿ ಗ್ಲಾಸಿನಲ್ಲಿ ತಂದಿಟ್ಟ 'ಮಸಾಲೆ ಚಾ' ಸೇವಿಸಬೇಕು ಎಂದು ಅನುಮಾನಿಸಿದರೂ, ಕುದಿಸಿದ್ದರಿಂದ ರೋಗಾಣುಗಳು ಇರಲಾರವು! ಎಂದು ಸೇವಿಸಿದಾಗ, ಅಮೃತ ಕುಡಿದ ಭಾಸವಾಯಿತು. ಅಲ್ಲಿ ಅದ್ರಕ್ ಚಾ, ಬಾದಾಮಿ ಚಾ, ಗುಲಾಬಿ ಚಾಗಳೂ ದೊರೆಯುತ್ತವೆಂದು

ಬೋರ್ಡು ಸೂಚಿಸಿತು. ತಿಂಡಿಗಳು ರುಚಿಯಾಗಿದ್ದವು. ಬಡವರಾದರೂ ರಸಿಕತೆಗೆ ಕಡಿಮೆ ಇಲ್ಲವೆನಿಸಿತು.

ನಗರಸಭೆಯವರು ತಮಗೆ ಅನುಕೂಲವಾದಾಗ, ಸರಿ ಎನಿಸಿದಷ್ಟು ನೀರು ಪೂರೈಸುವ ಹಕ್ಕನ್ನು ಕಾದಿರಿಸಿದ್ದರಿಂದ, ನಾಗರಿಕರೂ ತಾವು ಹಣಕೊಡುವ ಪ್ರತಿಯೊಂದು ನೀರು ಹನಿಯೂ ತಮ್ಮದಾಗಬೇಕೆಂಬ ಪಣ ತೊಟ್ಟಿದ್ದರು. ಹೀಗಾಗಿ ಯಾರೂ ಕೊಳಾಯಿಗಳಿಗೆ ನಲ್ಲಿಗಳನ್ನು ಕೂಡ್ರಿಸುವ ತೊಂದರೆಯನ್ನು ತೆಗೆದು ಕೊಂಡಿರಲಿಲ್ಲ. ಹೌದುಗಳು ತಮ್ಮಿಂದ ದಾಸ್ತಾನು ಮಾಡಿಕೊಳ್ಳಲಾಗದ ನೀರನ್ನು ಚರಂಡಿಗೆ ಹರಿಬಿಡುತ್ತಿವೆ! ಕೆಲವು ಓಣಿಗಳಲ್ಲಿ ನೀರಿನ ಅಭಾವ ಇರುವದರಿಂದ ಚಕ್ಕಡಿಗಳಲ್ಲಿ ನೀರು ಪೂರೈಸುವ ಏರ್ಪಾಡುಬೇಕಾಗಿದ್ದರೂ, ನೀರು ಇರುವದು ಎಲ್ಲರ ಬಳಕೆಗಾಗಿಯೇ ಹೊರತು ವಿನಾಕಾರಣ ಹರಿಸುವದಕ್ಕಾಗಿ ಅಲ್ಲ, ಎಂಬ ಕಲ್ಪನೆ ಯಾರಲ್ಲೂ ಇದ್ದಂತಿರಲಿಲ್ಲ. ಬೇಸಿಗೆಯ ದಿನಗಳಲ್ಲಿ ನೀರಿನ ಅಭಾವದಿಂದ ವಾರಗಟ್ಟಲೆ ನಲ್ಲಿಗಳು ಸಂಪು ಹೂಡಿಬಿಡುವದೂ ಇದೆಯಂತೆ.

ಕಟ್ಟಡಗಳನ್ನು ಇಟ್ಟಂಗಿಗಳಿಂದ ಕಟ್ಟಿದರೂ ಅವಕ್ಕೆ ಗಚ್ಚು, ಸಿಮೆಂಟಿನಿಂದ ಗಿಲಾಯಿಮಾಡುವ ಪರಿಪಾಠ ಇಲ್ಲ. ಹಂಚಿನ ಮಾಡು ಇದ್ದ ಮನೆಗಳೇ ಹೆಚ್ಚು. ಹಂಚುಗಳ ವೈವಿಧ್ಯವೂ ಅಪಾರ. ತೀರ ಸಪಾಟ, ಗೋಲಾಕಾರದವು, ತೀರಾ ಗಿಡ್ಡನವು, ಉದ್ದನವು, ಕೆಂಪು ಬಣ್ಣದವು, ಕಾಡಿಗೆಯನ್ನು ನಾಚಿಸುವಂಥವು, ಎಲ್ಲ ತರದ ಹಂಚುಗಳು ಕಾಣಸಿಗುತ್ತವೆ. ಕೆಲವು ಆಧುನಿಕ ಮನೆಗಳಿಗೆ ಮಂಗಳೂರು ಹಂಚುಗಳನ್ನು ಹೊದಿಸಿದ್ದು ನೋಡಿ, ಇವು ಎಲ್ಲಿ ಸಿದ್ಧವಾಗುತ್ತವೆ? ಎಂದು ವಿಚಾರಿಸಿದಾಗ, ನಮ್ಮಲ್ಲಿಂದಲೇ ಅವುಗಳ ಪೂರೈಕೆಯಾಗುತ್ತದೆ, ಎಂದು ತಿಳಿದು ಅಭಿಮಾನವೆನಿಸಿತು. "ಈ ಅಪರಿಚಿತ ಕ್ಯಾಮೆರಾಧಾರಿ, ನಿಬಿಡವಾದ ಓಣಿಗಳಲ್ಲಿ, ಅತ್ತ-ಇತ್ತ ನೋಡುತ್ತ ಏನೇನನ್ನೊ ಪರೀಕ್ಷಿಸುತ್ತ ಏಕೆ ಅಲೆಯುತ್ತಿದ್ದಾನೆ?" ಎಂದು ನಾಲ್ಕಾರು ಹೆಂಗಳೆಯರು, ವಿಸ್ಮಯದಿಂದ, ಸಂದೇಹದಿಂದ, ಪಿಸುಗುಟ್ಟಿದಾಗ ಹೊಟೇಲಿಗೆ ಹಿಂದಿರುಗಬೇಕಾಯಿತು.

***

೨. ಕೀರ್ತಿಯ ಹಾದಿಯಲ್ಲಿ



ನೇಸರನು ನೆತ್ತಿಗೇರುತ್ತಿದ್ದಂತೆ, ದೂರದ ಹಳ್ಳಿಯ ಕೃಷಿಕರು, ಆದಿವಾಸಿಗಳು, ತಂತಮ್ಮ ಬೆಳೆಗಳನ್ನು ತಲೆಯಮೇಲೆ ಹೊತ್ತು ಸಂತೆಯ ಸ್ಥಳಕ್ಕೆ ಸೇರಿದರು. ವಾರಕ್ಕೆ ಒಂದೇ ಎಡೆ ಸೇರುವ ಸಂತೆಯಲ್ಲಿ ಇವರಿಗೆ ವಿಶ್ವಾಸವಿದ್ದಂತಿಲ್ಲ. ಊರಿನಲ್ಲಿ ದಿನಕ್ಕೊಂದು ಕಡೆಯಲ್ಲಿ ಸೇರಿ, ಮಂಗಳವಾರ, ಬುಧವಾರ, ಆದಿತ್ಯವಾರ ಬೇರೆ ಬೇರೆ ಎಡೆ ನೆರೆದು, ಮಂಗಳವಾರಿ, ಬುಧವಾರಿ, ಇತವಾರಿ, ಎಂದು ಆ ಸಂತೆಗೆ ಹೆಸರಿಟ್ಟಿದ್ದಾರೆ. ತಮಗೆ ಮೀಸಲಾದ ಸ್ಥಾನವನ್ನು ಗುಡಿಸಿ, ನೀರು ಸಿಂಪಡಿಸಿ, ಗೋಣಿತಟ್ಟು ಹಾಸಿ, ಸರಕನ್ನು ಸುರಿದಾಗ, ವ್ಯಾಪಾರಿ, ಮಾರವಾಡಿಗಳು ಜೇನ್ನೊಣಗಳಂತೆ ಮುತುರಿಕೊಳ್ಳುತ್ತಾರೆ. ಮಾಲಿನ ಪರೀಕ್ಷೆಗಾಗಿ ಕೆಲವನ್ನು ಎತ್ತಿಕೊಂಡರೆ, ಕದಿಯಲೆಂದೇ ಬರುವ ಸಣ್ಣ ತಂಡಗಳಿರುತ್ತವೆ. ಬೇಸಿಗೆಯ ದಿನಗಳಾದ್ದರಿಂದ 'ಆಮಚೂರ' ವಿಪುಲವಾಗಿ ಬಂದಿತ್ತು. ಹುಳಿಮಾವಿನ ಕಾಯಿಯ ಬಾಳಕಗಳನ್ನು ಮಾಡಿ ಬಿಸಿಲಿಗೆ ಒಣಗಿಸಿದಾಗ 'ಆಮಚೂರ'ಗಳಾಗುತ್ತವೆ. ಹುಣಸೆ ಹಣ್ಣಿನ ಬದಲಾಗಿ ಅಡಿಗೆಗೆ ಬಳಸುತ್ತಾರಲ್ಲದೇ ಪಾನಕಕ್ಕೆ ಉಪಯೋಗಿಸುತ್ತಾರಂತೆ. ಶುಭ್ರ ಬಿಳಿ ಆಮಚೂರದಿಂದ ಕಧ್ರಗಿನವುಗಳವರೆಗೆ ಎಲ್ಲ ಬಣ್ಣದವೂ ಅಲ್ಲಿದ್ದವು. ತೀರಬಡವರಿಗಾಗಿ ಗೊರಟೆಯ ಆಮಚೂರ ಕೂಡ ಅಲ್ಲಿ ಮಾರುತ್ತಿದ್ದದ್ದು ವಿಶಿಷ್ಟವಾಗಿ ಕಂಡಿತು.

ಎಣ್ಣೆಕಾಳುಗಳು ಅಧಿಕ ಪ್ರಮಾಣದಲ್ಲಿದ್ದವು. ಕಡಲೆಕಾಯಿ, ಬಣ್ಣ, ಖಾರ ಪುಡಿ ಬಳಿದುಕೊಳ್ಳದೆಯೇ ಏಕಪ್ರಕಾರವಾಗಿ ಕಮ್ಯುನಿಸ್ಟ್‌ರಂಗು ತಳೆದಿದ್ದವು! ಆದಿವಾಸಿಗಳ

ಕುಲದೇವತೆಯಾದ ಮಹುವಾಬೀಜದ ರಾಶಿಗಂತೂ ಲೆಕ್ಕವಿಲ್ಲ. ಅದರಂತೆ ಕಹಿ ಬೇವಿನ ಬೀಜದ ಎಣ್ಣೆಯನ್ನು ಸಾಬೂನು ಮಾಡಲು ಬಳಸುವುದರಿಂದ ಆ ಬೀಜಗಳೂ ಇದ್ದವು. ಬೆಲೆ ಬಾಳುವ ಎಣ್ಣೆಕೊಡುವ, ಕಾಡುಗಳಲ್ಲಿ ಬೆಳೆಯುವ, ಕಾಳುಗಳನ್ನು ಇಲ್ಲಿ ದುಡ್ಡಿಗೆ ಪಂಭೇರಿನಂತೆ ವ್ಯಾಪಾರಿಗಳು ಕೊಳ್ಳುವದನ್ನು ನೋಡಿದಾಗ ಕಸಿವಿಸಿ ಆಗದೇ ಇದ್ದೀತೆ? ಗೋದಿಯನ್ನು ವಿಂಗಡಿಸಿ ಆರು ಬಗೆಯ ರಾಶಿಗಳನ್ನಾಗಿ ಹರವಿದ್ದರು. ಉತ್ತಮ, ಮಧ್ಯಮ ಮತ್ತು ಕನಿಷ್ಟ ಪ್ರಕಾರಗಳಲ್ಲದೇ ಪ್ರತಿಯೊಂದರಲ್ಲಿಯೂ ಆರಿಸಿದ್ದು, ಆರಿಸದೇ ಇದ್ದದ್ದು ಇತ್ತು. ಖಾಂಡವಾ ಮತ್ತು ಬನ್ಸಿ ಎಂಬ ಗೋದಿಯ ಪ್ರಸಿದ್ಧ ಪ್ರಕಾರಗಳು, ಈ ಪರಿಸರದಲ್ಲಿಯೇ ಬೆಳೆಯುವಂಥವು. ಎಂದು ಸ್ಮರಿಸಿಕೊಳ್ಳಬಹುದು. ಇಲ್ಲಿ ಬೆಳೆಯುವ ವಿವಿಧ ಪ್ರಕಾರದ ಅಕ್ಕಿಯ ಸುವಾಸನೆ ನೋಡಿಯೇ ಬಾಯಿ ನೀರೂರುತ್ತದೆ. ಡೆಹರಾಡೂನದ ಬಾಸಮಲೆ ಜಗತ್ ಪ್ರಸಿದ್ಧಿ ಪಡೆದರೂ ಇಲ್ಲಿಯ ಚಿನೋರ್, ತುಳಸಿ ಅಮೃತ್ ಪ್ರಕಾರಗಳು ಬಾಸಮತಿಯ ಅರ್ಧ, ಕಾಲು ಬೆಲೆಗೆ ಮಾರುತ್ತಿದ್ದರೂ ಸುವಾಸನೆ-ರುಚಿಗಳಲ್ಲಿ ಅದಕ್ಕಿಂತ ಮಿಗಿಲಾದವು ಎಂದು ಊಟಮಾಡಿದಾಗಲೇ ಗೊತ್ತಾಗಬೇಕು. ಹೆಸರು, ಉದ್ದು, ಕಡಲೆ, ಮಡಿಕೆಗಳಂಥ ಧಾನ್ಯಗಳಿಗೂ ಕೊರತೆಯಿರಲಿಲ್ಲ.

ಉತ್ತಮ ತರಕಾರಿ ತಿನ್ನಲು ಆಸೆ ಪಡುವವರು ಅಲ್ಲಿ ಹೋದರೆ ಏನು ತಿನ್ನಲಿ, ಏನು ಬಿಡಲಿ? ಎಂದು ಆಶ್ಚರ್ಯ ಪಡುತ್ತ ನಿಂತುಬಿಡುವಂತೆ ಆಗುವ ತಾಣವದು. ಹಚ್ಚಹಸಿರಾದ ಬಲಿತ ಬಾಳೆಕಾಯಿಗಳು, ಎಳೆ ಬದನೆಕಾಯಿ, ಕೆಂಬಣ್ಣ ಹಾಕಿಸಿಕೊಂಡ ಆಲೂಗಡ್ಡೆ, ಎಳೆ ಹಿರೇಕಾಯಿ, ಹಾಗಲಕಾಯಿಗಳು, ಟೊಮ್ಯಾಟೊ, ಟೆಂಡೆ, ಬೆಂಡೆಕಾಯಿಗಳು. ಇದರಂತೆ ಹಣ್ಣು-ಹಂಪಲುಗಳಿಗೂ ಏನೂ ಕೊರತೆಯಿರಲಿಲ್ಲ. ಬಾಳೆ, ಮಾವು, ಕಿತ್ತಳೆ, ಕಲ್ಲಂಗಡಿ ಹಣ್ಣುಗಳಿದ್ದವು. ಉತ್ತಮ ದರ್ಜೆಯವುಗಳನ್ನು ವ್ಯಾಪಾರಿ, ದಳ್ಳಾಳಿಗಳು, ಖರೀದಿಸಿ ಲಾರಿಗಳಲ್ಲಿ ತುಂಬಿ, ದಿಲ್ಲಿ-ಕಲಕತ್ತಾದವರೆಗೆ ಕಳಿಸುತ್ತಿದ್ದರು. ಅಳತೆ-ದರ್ಜೆಗಳಲ್ಲಿ ಸಣ್ಣವಿದ್ದವು, ಸ್ಥಳೀಯರಿಗೆ ಮೀಸಲುಗೊಂಡ ಹೆಂಗಳೆಯರು ಇವನ್ನು ರೋಕ್ ಇಲ್ಲವೇ ಚಿಲ್ಲರೆಯಾಗಿ ಖರೀದಿಸಿ, ಮನೆಬಾಗಿಲಿಗೆ ಒಯ್ದು ಮಾರಿ ಉದರ ನಿರ್ವಹಣೆ ಮಾಡುವರು. ಹೊಟೇಲೂಟ ಚೆನ್ನಾಗಿರದಿದ್ದರೂ ಹಣ್ಣು-ಹಂಪಲು ತಿಂದು ಇರಬಹುದು ಎಂಬ ಸಾಧ್ಯತೆಯಿಂದಲೇ ಎಷ್ಟೋ ನೆಮ್ಮದಿಯೆನಿಸಿತು.

ಬೇರೊಂದು ಹೊಟೇಲಿನ ಸಂಶೋಧನೆಯಲ್ಲಿದ್ದಾಗ ಊರಿನ ಪರಿಚಯ ವಾಯಿತು. ಸುತ್ತಮುತ್ತಲಿನ ಕಾಡುಗಳಲ್ಲಿ ಸಾಲ, ಸಾಗವಾನಿಗಳಂಥ ಬೆಲೆಬಾಳುವ ಇಮಾರತಿ ಮರಗಳು ವಿಪುಲವಾಗಿ ಬೆಳೆಯುತ್ತಿದ್ದರಿಂದ ಹತ್ತಾರು ವಿದ್ಯುತ್ ಚಾಲಿತ ಕಟ್ಟಿಗೆ ಕೊರೆಯುವ ಕಾರಖಾನೆಗಳು ಅಲ್ಲಿದ್ದವು. ಕೊರಡಿನ ಬೆಲೆಯನ್ನು ಸರಿಯಾಗಿ ಅರಿಯದವರಾದ್ದರಿಂದ ಅದನ್ನು ಧಾರಾಳವಾದ ಕೈಗಳಿಂದ ಕೊರೆಯುವದು ವಾಡಿಕೆ. ನೈಸರ್ಗಿಕವಾಗಿ ಮರವನ್ನು ಒಣಗಲೂ ಬಿಡದೇ, ರಾಸಾಯನಿಕವಾಗಿ ಪುಷ್ಟೀಕರಣವನ್ನು ಮಾಡದೇ ಇದ್ದುದರಿಂದ ಅವುಗಳಿಂದ ರಚಿತವಾದ ಸಾಮಗ್ರಿಗಳಿಗೆ ಅಂದವಂತೂ ಇರಲಿಲ್ಲ. ಬಾಳಿಕೆ ಬರುವದೂ ಅನುಮಾನಾಸ್ಪದವೆನಿಸಿತು. ಅಲ್ಲಿಯ ತೀವ್ರ ಚಳಿಗಾಲದಲ್ಲಿ ಬೆಚ್ಚಗೆ ಹೊದ್ದು ಮಲಗಲು ಸಹಾಯ ಮಾಡುವ 'ರಜಾಯಿ'ಗಳನ್ನು ತಯಾರಿಸುವ ಅಂಗಡಿಗಳೂ ಇದ್ದವು. ಇನ್ನಿತರ ಅಂಗಡಿಗಳು, ಕೆರೆ, ಮಂದಿರ, ಮಸೀದಿ, ಜೈನ ಬಸದಿಗಳು ಚರ್ಚುಗಳು ಮಾಮೂಲು ಅನಿಸಿದವು. ಕಲೆಕ್ಟರ್ ಆಫೀಸು ಇದ್ದದ್ದು ನೋಡಿ ಇದು ಜಿಲ್ಲಾ ಮುಖ್ಯ ಸ್ಥಳವೆಂದು ಅರಿತು ಅಚ್ಚರಿಯಾಯ್ತು. ಊರಿನಲ್ಲಿ ಇನ್ನೂ ಮೂರು ಲಾಜ್‌ಗಳು ಇರುವದನ್ನು ಪತ್ತೆ ಹಚ್ಚಿ, ಇದ್ದುದರಲ್ಲೇ ಸ್ವಚ್ಛವೆನಿಸಿದ, ಊರಿಗೆ ಮಧ್ಯವರ್ತಿಯಾದ ಕೀರ್ತಿ ಲಾಜಿಕೆ ಸಾಮಾನುಗಳನ್ನು ವರ್ಗಾಯಿಸಲಾಯಿತು.

ಎತ್ತರದ ಕಟ್ಟಡದ ಮೇಲೆ ನಿಂತು ನೋಡಿದಾಗ ಎದುರಿಗೆ ಕಾಣುವದು ಥಿಂದವಾಡಾದ ಹೃದಯಸ್ಥಾನ. ನಾಲ್ಕು ರಸ್ತೆ ಹಸ್ತಲಾಘವ ಮಾಡುವಲ್ಲಿಯೇ ಪಕ್ಕದ ವಿಸ್ತಾರ ಬಯಲಲ್ಲಿ ಕಿರುಕಳ

ವ್ಯಾಪಾರಿಗಳ ಸಂತೆ ರಸ್ತೆಗೂ ವ್ಯಾಪಿಸಿದೆ. ವಿಪರೀತ ಜನ. ಇಂಥ ಇಕ್ಕಟ್ಟಾದ ರಸ್ತೆಯಲ್ಲಿ ಸಾಯಕಲ್ ಸವಾರ ಓಡಾಡುವಿಕೆಯ ಎದೆಗಾರಿಕೆಯನ್ನು ಮೆಚ್ಚತಕ್ಕದ್ದೇ! ದಾರಿಹೋಕರನ್ನೋ, ಇನ್ನೊಬ್ಬ ಸಾಯಕಲ್ ಸವಾರನನ್ನೋ ಡಿಕ್ಕಿ ಹೊಡೆದಾಗ ಕೈಕೈ ಅಥವಾ ಮಾತಿನ ದ್ವಂದ್ವಕ್ಕೆ ಬದಲಾಗಿ, ಇದೇನು ಮಹಾ! ಎನ್ನುವಂತೆ ನಕ್ಕು ಕುಶಲ್‌ಮಂಗಲ್(ಯೋಗಕ್ಷೇಮ) ವಿಚಾರಿಸಿ ಬೀಳ್ಕೊಡುವ ಪದ್ಧತಿ ಅಪರೂಪದ್ದೆನಿಸಿ ನಮ್ಮಲ್ಲೂ ಜಾರಿಗೆ ಬರಬಾರದೇ! ಅನಿಸಿತು. ಸಂತೆಯ ನಡುವೆಯೇ ಮರುಳಿನ ಚೀಲಗಳನ್ನು ಹೊತ್ತ ಕತ್ತೆಗಳೂ ಕಣ್ಣು ಮುಚ್ಚಿ ಮುನ್ನುಗ್ಗುತ್ತಿದ್ದವು. ಅವುಗಳಿಂದ ಹಾಯಿಸಿಕೊಂಡವರು, ಕೆಸರು ಸಿಡಿಸಿಕೊಂಡವರು, ಬೈದರೂ ಅವುಗಳ ಮಾಲಿಕನು ಮಾತ್ರ ನಿಶ್ಯಬ್ದವಾಗಿ ಕಣ್ಣು ಮುಚ್ಚಿ, ತಾನೂ ಆ ಪ್ರಾಣಿಗಳ ವರ್ಗಕ್ಕೇ ಸೇರಿದವನೆಂದು ಸಿದ್ಧಮಾಡುತ್ತ ನಡೆದ. ದೂರದ ಕೃಷಿಕರು, ಚಕಡಾ (ಒಂಟಿ ಎತ್ತು ಎಳೆಯುವ ಎಕ್ಕಾ ಗಾಡಿ) ಮೇಲೆ ಬಂದರು. ವ್ಯಾಪಾರಿಗಳಲ್ಲಿ ಹೆಂಗಳೆಯರೇ ಹೆಚ್ಚು. ಅವರಲ್ಲೂ ಗೊಂಡರೇ (ಅಲ್ಲಿಯ ಪ್ರಕಾರ 'ಗೊಂಡ್' ಎಂದು ಉಚ್ಚರಿಸಬೇಕು) ಅಧಿಕ ಪ್ರಮಾಣದಲ್ಲಿ ಕೆಂಪು, ಹಸಿರು, ನೀಲಿ ಬಣ್ಣದ ರಬ್ಬಾದ ಸೀರೆಗಳನ್ನು ಕಚ್ಚೆ ಹಾಕಿ ಉಟ್ಟು ಕಾಲಿಗೆ ಭಾರವಾದ ಕಡಗ ಧರಿಸಿದ್ದರು. ಎಳೆದಾಟ, ಪರದಾಟ ಮಾಡದೇ ಸಾಮಾನು ಕೊಳ್ಳುವವನು ಮೋಸಹೋಗುವದು ಖಂಡಿತ.

ಹಿಂದೊಮ್ಮೆ ಕೀರ್ತಿಲಾಜಿನ ಕೀರ್ತಿ ಉತ್ತಮವಾಗಿದ್ದಿರಬಹುದಾಗಿದ್ದರೂ ಈಗಿರಲಿಲ್ಲ. ದೊಡ್ಡ ಹಾಲಿನಲ್ಲಿ ಪಾರ್ಟಿಶನ್ ಹಾಕಿ ಪಾರಿವಾಳದ ಗೂಡುಗಳಂತೆ ವಿಂಗಡಿಸಿದ್ದಾರೆ. ಬಲವಾಗಿ ಗುದ್ದಿದ್ದರೆ ಎಲ್ಲವೂ ಕಿತ್ತು ಬರುವಂತಿತ್ತು. 'ಖೋಲಿ'ಯಲ್ಲಿ ಕಾಲಿಡುತ್ತಿದ್ದಂತೆ, ಗಬ್ಬುವಾಸನೆಯಿಂದ ಬವಳಿ ಬಂದಂತಾಯಿತು. ಅತಿಥಿಗಳ ಸೇವೆ ಮಾಡಲು ಬಡಕಲು ದೇಹದ, ಗಡ್ಡ ಬೆಳೆದ 'ಪಂಡಿತಜಿ' ಒಬ್ಬನಿದ್ದ. ಅವನನ್ನು ಕರೆದಾಗ, "ಹುಜೂರರು ಈ ಸೇವಕನಿಂದ ಏನು ಸೇವೆ ಇಚ್ಛಿಸುತ್ತಾರೆ? ಎಂಬ ಆಡಂಬರದ ಭಾಷೆಯಲ್ಲಿ ಪ್ರಶ್ನಿಸಿದಾಗ ಇನ್ನೂ ರೇಗಿತು. ಆತನ ಮೂಗಿಗೂ ವಾಸನೆ ಬಡಿದು ನಿನ್ನೆ ರಾತ್ರಿ ಸಾಹೇಬರೊಂದಿಗೆ ಮೇಮಸಾಬಳೊಬ್ಬಳು ಬಂದಿದ್ದಳು. ಮೂತ್ರ ತಡೆಯಲಾಗದೇ ಇಲ್ಲೇ ಹೊಡೆದಿರಬೇಕು! ಎಂದು ಶಾಪಹಾಕುತ್ತ, ಕುಡಿಯಲು ನೀರಿಟ್ಟ ಹೂಜಿಯಿಂದಲೇ ನೆಲಕ್ಕೆ ಸುರಿದು ತೆಪ್ಪೋತ್ಸವ ಮಾಡಿಟ್ಟ. ಡೆಟ್ಟಾಲ್ ಇಲ್ಲವೇ ಫಿನಾಯಿಲ್ ಹಾಕಿ ಒರಸಲು ಹೇಳಿದ್ದರಿಂದ, ಯಜಮಾನರ ಹತ್ತಿರ ವಿಚಾರಿಸುತ್ತೇನೆಂದು ಗೊಣಗುತ್ತ ಹೋಗಿ ಫಿನಾಲಿನ ನಾಲ್ಕು ಹನಿ ತಂದು ಸಿಂಪಡುಸಿದ. ಒರೆಸಿದ್ದು ಸರಿಯಾಗಲಿಲ್ಲ. ಸಾಲದ್ದಕ್ಕೆ ಹಾಸಿಗೆಯ ತುಂಬ ಲಂಕಾ, ಅಂಡಮಾನ, ನಿಕೋಬಾರಗಳ ನಕಾಶೆಗಳನ್ನು ನೋಡಿ ಹೇಸಿಗೆಯಾಯಿತು. ಅದರ ಮೇಲೊಂದು ಚಾದರ ತಂದು ಹಾಸಿದ.

ಆದಿವಾಸಿ ಸಂಶೋಧನಾಲಯದ ಬಗ್ಗೆ ಹಲವರನ್ನು ವಿಚಾರಿಸಿದರೂ, ಅದರ ಅಸ್ತಿತ್ವದ ಬಗ್ಗೆ ಅರಿಯದೆಂದರು. ಕೊನೆಯವನಂತೂ ಒಂದು ಕಾಲದಲ್ಲಿ ಇತ್ತು, ಈಗ ಭೋಪಾಲಕ್ಕೆ ವರ್ಗಾಯಿಸಿದಂತೆ ಇದೆ, ಎಂದು ಅನುಮಾನ ವ್ಯಕ್ತಪಡಿಸಿದ್ದರಿಂದ ಇಂಥ ಸ್ಥಳದ ಅನಾರೋಗ್ಯಕರ ಹೊಟೇಲಿನಲ್ಲಿದ್ದು ಆರೋಗ್ಯ ಕೆಢಿಸಿಕೊಳ್ಳುವದಕ್ಕಿಂತ, ಒಳ್ಳೆಯ ಹೊಟೇಲ್ ವ್ಯವಸ್ಥೆಯಿರಬಹುದಾದ ಊರಿಗೆ ಹೋದರೆ ಹೇಗೆ? ಎಂದು ಯೋಚಿಸುತ್ತ ಹೊರಟಿದ್ದೆ. ಉತ್ತಮವೆಂದು ಹೊರಗಣ್ಣಿಗೆ ಕಂಡ 'ಸಂಗಮ್' ಹೊಟೇಲ ಹೊಕ್ಕಾಗ ಅಲ್ಲಿ ಬೇರೊಂದು ಜಗತ್ತು ಕಂಡಿತು. ಹಾಲನ್ನು ಶಯನಗೃಹದಂತೆ ಸಿಂಗರಿಸಿದ್ದರು. ಅಲ್ಲಿದ್ದ ತೈಲ, ಜಲವರ್ಣಚಿತ್ರಗಳಿಗೆ ಲೆಕ್ಕವೇ ಇರಲಿಲ್ಲ. ಎದುರಿಗೆ ಕಂಡ ಚಿತ್ರದಲ್ಲಿ ವಿಸ್ತಾರವಾದ ದಿಗಂತ, ಸಣ್ಣದೊಂದು ಗುಡಿಸಲು, ಗಿಡಮರಗಳ ಕಾಡು. ಅಲ್ಲಿಯೇ ದನಗಳನ್ನು ಮೇಯಿಸುತ್ತಿದ್ದ ಗೋಪಾಲಕನನ್ನು ಮನೋಹರವಾಗಿ ಚಿತ್ರಿಸಲಾಗಿದೆ. ವರ್ಣಸಂಯೋಜನೆ ಉತ್ತಮವಾಗಿತ್ತು. ರೈಲಿನಿಂದ ನೋಡಿದ ಹಳ್ಳಿಯೊಂದರ ವರ್ಣ ಚಿತ್ರ ಇದ್ದಿರಬಹುದೇ! ಎಂದು ಭಾಸವಾಯಿತು. ಇನ್ನೊಂದರಲ್ಲಿ ಕಾರ್ಮೋಡಗಳಿಂದ ಕವಿದ ಗಗನದತ್ತ ಮುಖ ಮಾಡಿ ಹೊರಟ

ಜೋಡಿ ಕಬ್ಬಾರೆಯ ಕಣ್ಣಿಗೆ ಕಟ್ಟುವ ಚಿತ್ರವಿದೆ. ಒಂದು ಮೂಲೆಯಲ್ಲಿ ಮೈತುಂಬ ಒಡವೆ ಹೊತ್ತು ಮುಖದ ಅರ್ಧಭಾಗ ಮುಚ್ಚುವಂತೆ ಸೆರಗು ಎಳೆದುಕೊಂಡ ಭಿಲ್ಲಹೆಣ್ಣಿನ, ನೀರಿನ ಕೊಡ ಹೊತ್ತು ಗೃಹಾಭಿಮುಖಿಯಾದ ಚಿತ್ರವಿದ್ದರೆ, ಇನ್ನೊಂದೆಡೆ ಅರೆಬೆತ್ತಲೆ ಮುರಿಯಾನಾರಿ ಕಂಕುಳಲ್ಲಿ ಮಗು, ತಲೆಯ ಮೇಲೆ ಬುಟ್ಟಿತುಂಬ ಸಾಮಾನು ಹೊತ್ತು ಸಂತೆಗೆ ಹೊರಟದ್ದನ್ನು ಮೂಡಿಸಲಾಗಿದೆ.

ಮಾಲಕನ ಕಲಾಭಿರುಚಿಯನ್ನು ಮೆಚ್ಚಿಕೊಳ್ಳುತ್ತ, ಊಟದ ಮನೆ, ಮೂರನೆ ಮಹಡಿಯಲ್ಲಿದೆ ಎಂದು ಸೂಚಿಸಲಾಗಿದ್ದರಿಂದ ಒಂದೊಂದೇ ಮೆಟ್ಟಲೇರುತ್ತಿದ್ದಂತೆ. ಅಲ್ಲಿ ಸ್ಥಳವಿದ್ದಲ್ಲೆಲ್ಲ ಚಿತ್ರಗಳಿದ್ದವು. ಕರಿಕೇಶರಾಶಿಯ ಚಂದ್ರಮುಖಿಯರು, ಉಬ್ಬೆದೆ, ಸಿಂಹಕಟಿ, ತುಂಬಿಕೊಂಡ ಕೈಕಾಲಿನ ನೀರೆಯರನ್ನು ನೋಡುತ್ತ ಎಷ್ಟೊಂದು ಸಜೀವವಾಗಿ ಕಲಾಕಾರ ಚಿತ್ರಿಸಿದ್ದಾನೆ! ಎಂದು ಸೋಜಿಗ ಪಡುತ್ತಿದ್ದಂತೆ, ಚಿತ್ರ ಇರಬೇಕಾದ ಸ್ಥಳದಲ್ಲಿ ಪರದೆ ಕಂಡಿತು. ಕಲ್ಪನಾಲೋಕದಿಂದ ಇಹಲೋಕಕ್ಕೆ ಥಕ್ಕನೆ ಬರಬೇಕಾಯಿತು. ಮ್ಯಾನೇಜರನ ಸಂಸಾರ ಅಲ್ಲಿ ವಾಸಿಸುತ್ತಿದೆ. ಈಗ ನೋಡಿದ ಸಜೀವ ಯುವತಿ, ಆತನ ಮಗಳಿರಬಹುದೆಂದು ಥಟ್ಟನೆ ಲಕ್ಷ್ಯಕ್ಕೆ ಬಂದು ಮುಜುಗರವಾಯಿತು. ಫುಲಕಾಪಲ್ಯಗಳ ಒಣಊಟವಾಗಿದ್ದರೂ ರಸಭರಿತ ಕಲಾಕೃತಿ(ಸಜೀವವಾದದ್ದನ್ನು ಬಿಟ್ಟು)ಗಳನ್ನು ಮೆಲುಕುಹಾಕುತ್ತಿದ್ದುದರಿಂದ ಹಿತವೆನಿಸಿತು. ಮಾಲಕರಿಗೆ ಚಿತ್ರಗಳ ಬಗ್ಗೆ ಬಹಳ ಆಸಕ್ತಿಯೇ? ಎಂದು ಮಾಣಿಯನ್ನು ಕೇಳಿದಾಗ ಅವೆಲ್ಲವೂ ಅವರಿಂದಲೇ ರಚಿತವಾದವು ಎಂದಾಗ ಅತ್ಯಾಶ್ಚರ್ಯವಾಯಿತು. ಪುನಃ ಮೆಟ್ಟಲಿಳಿದು ಬರುತ್ತಿದ್ದಾಗ, ಪರದೆಯ ಹಿಂದಿನಿಂದ ಎರಡು ಕಣ್ಣುಗಳು ಹೊಸಬನನ್ನು ನೋಡುತ್ತಿವೆ, ಎಂದು ಅನಿಸಿದಾಗ, ಸದ್ಯ ಅಪಾರ್ಥಮಾಡಿಕೊಳ್ಳಲಿಲ್ಲವಲ್ಲ! ಎಂದು ನೆಮ್ಮದಿ ಅನಿಸಿತು.

ಚಿತ್ರಯುವತಿಯ ಉಬ್ಬೆದೆಗಳ ಮೇಲೆ ಲೀಲಾಜಾಲವಾಗಿ ಕುಂಚವಾಡಿಸುತ್ತ ಇದ್ದ ಮ್ಯಾನೇಜರರನ್ನು ಏಕಚಿತ್ತದಿಂದ ನೋಡಹತ್ತಿದಾಗ, ಗಿರಾಕಿಯು ಅಪಾರ್ಥ ಮಾಡಿಕೊಳ್ಳಬಾರದೆಂದು, ಮ್ಯಾನೇಜರ್ ರೌಸಲ್ ಅವರು, ವೇಳೆಯ ಸದುಪಯೋಗವಾಗಲೆಂದು ಏನಾದರೂ ಗೀಚುತ್ತಿರುತ್ತೇನೆಂದು ಹೇಳಿ, ಹಾಳೆಯನ್ನು ತೆಗೆದಿಟ್ಟು ನೋಟಿಗಾಗಿ ಕೈಚಾಚಿದರು., "ನಿಮ್ಮ ಎಲ್ಲ ಕಲಾಕೃತಿಗಳೂ (ಜೀವಂತವಾದದ್ದು ಬಿಟ್ಟು!) ರಸದೂಟ ಉಣಿಸಿದವು. ನಿಮ್ಮ ಈ ವೃತ್ತಿಗೂ, ಆಸಕ್ತಿಗೂ ಎಲ್ಲಿಯ ಹೊಂದಾಣಿಕೆ? ಎಂದು ವಿಚಾರಿಸಿದಾಗ ಅವರಿಗಾದ ಆನಂದದ ಆಳ ವರ್ಣಿಸುವದು ಅಶಕ್ಯ. ಕೆಲವುಗಳ ಛಾಯಾಚಿತ್ರಗಳನ್ನು ತೆಗೆಯಬಹುದೇ ಎಂದು ವಿಚಾರಿಸಿದಾಗ ಕೌಸಲರು ಉಬ್ಬಿಹೋದರು. ಊಟ ತಿಂಡಿಬಿಟ್ಟು ಕಲೆಯನ್ನು ನೋಡಿ ಮೆಚ್ಚಿಕೊಂಡು, ಛಾಯಾಚಿತ್ರ ತೆಗೆಯುವ ಆಸಕ್ತಿಯನ್ನು ವ್ಯಕ್ತಪಡಿಸಿದ ತಾವು ನನ್ನ ಪ್ರಥಮಗಿರಾಕಿಯೆಂದರು. ಎರಡು ಗಂಟೆಯ ನಂತರ ಕೊಂಡ ಬಿಡುವು ಇರುತ್ತದೆ. ಆಗ ವಿರಾಮವಾಗಿ ಮಾತನಾಡೋಣ. ಛಾಯಾಚಿತ್ರಣವನ್ನೂ ಮಾಡುವಿರಂತೆ, ಅಂದು ಬೀಳ್ಕೊಂಡರು.

ಛಾಯಾಚಿತ್ರಸರಂಜಾಮಿನೊಂದಿಗೆ ಪುನಃ ಯೋದಾಗ ಗಲ್ಲೆಯ ಮೇಲೆ ಕುಳಿತ ಮಗನು, ನಿವಾಸಕ್ಕೆ ಬರಲು ತಿಳಿಸಿದ್ದಾರೆಂದು ಸೂಚಿಸಿದ. ಅವನೂ ಚಿತ್ರ ಬಿಡಿಸುತ್ತಿದ್ದುದನ್ನು ನೋಡಿ ಖುಷಿಯಾಯಿತು. ಮುಚ್ಚಿಕೊಂಡ ಪಾರದೆಗಳು ಸ್ವಾಗತಕ್ಕಾಗಿ ತೆರೆದಿದ್ದವು. ಎರದಿರ್ನೆ ನಲ್ಲಿ ಗಗನಕ್ಕೆ ತೆರೆದ ಜಗಲಿ ಕಾಸಲರ ಕಲೆಯ ಕರ್ಮಟವಾಗಿತ್ತು, ಕುಂಡಗಳಲ್ಲಿದ್ದ ಹೂಗಿಜಗಳ ನಡುವೆ ಬೋರ್ಡಿಇಟ್ಟು ಜಲಚಿತ್ರರಚನೆಯಲ್ಲಿ ತೊಡಗಿದ ಕಲಾಕಾರರು ನಗುಮುಖದಿಂದ ಬರಮಾಡಿಕೊಂಡರು ಆಗಂತುಕನ ಉದ್ದೇಶ ಕಥನದ ನಂತರ ತಮ್ಮ ಸಾಹಸ ಜೀವನವನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಹುಟ್ಟೂರು, ಉತ್ತರಪ್ರದೇಶದಲ್ಲಿ. ಅನೇಕ ವರ್ಷ ದಿಲ್ಲಿಯಲ್ಲಿ ಪ್ರೆಸ್ಸೊಂದನ್ನು ನಡೆಸುತ್ತಿದ್ದರು. ಆಪ್ತರೊಬ್ಬರು, ಛಿಂದವಾಡಾದಲ್ಲಿ ಮಹುವಾ ಬೀಜಗಳಿಂದ ಎಣ್ಣೆ ಹೊರಡಿಸುವ ಕಾರಖಾನೆ ನಡಿಸಿ ಕೊಳ್ಳೆ ಹೊಡೆಯೋಣವೆಂದು ಸೂಚಿಸಿದಾಗ ೧೯೬೭ ರಲ್ಲಿ ದಿಲ್ಲಿಯ ಪ್ರೆಸ್ಸನ್ನು ತಮ್ಮನಿಗೊಪ್ಪಿಸಿ ಇಲ್ಲಿ ಬಂದರು. ಆದರೆ ಎಣ್ಣೆ ಮಿಲ್ ಕೈಕೊಟ್ಟಿತು. ಸಾವಿರಾರು

ರೂಪಾಯಿ ನಷ್ಟವಾಯಿತಲ್ಲದೇ ಜೀವನೋಪಾಯ ಕಷ್ಟದ್ದಾಯಿತು. ಮನೆತುಂಬ ಮಕ್ಕಳು ಬೇರೆ. ಸದ್ಯಕ್ಕೆ ಕೆಲವು, ತಾಯಿಯ ಜೊತೆಗೆ ಊರಿಗೆ ಹೋಗಿವೆ, ಎಂದು ನಕ್ಕರು. ಅಂಥ ದಿನಗಳಲ್ಲಿ ಈ 'ಸಂಗವ' ನನಗೂ, ಗಿರಾಕಿಗಳಿಗೂ ಅನ್ನದಾತನಾಗಿ ತಲೆಯೆತ್ತಿಕೊಂಡು ನಿಂತಿತು. ಇದರಿಂದಾದ ಲಾಭದಿಂದ ಮುಂದೆ ಗುತ್ತಿಗೆ ಹಿಡಿಯಲಾರಂಭಿಸಿದರು. ಅದರಿಂದ ಬಂದ ನಾಲ್ಕು ಕಾಸುಗಳಿಂದ ಮನೆ ಕಟ್ಟಿಸಿ ಒಳ್ಳೆಯ ದಿನಗಳನ್ನು ಕಾಣುವಂತಾಯಿತೆಂದರು.

ಅತಿಥಿಗಳಿಗೆ ತಿಂಡಿ-ತೀರ್ಥ ಕೊಡಮ್ಮ ಎಂದು ಆಜ್ಞೆಯಿತ್ತರು. ಸಜೀವ ಚಿತ್ರಕನ್ಯೆ ನಾಚಿಕೆ ನಟಿಸುತ್ತ, ಜಾಮೂನು-ಕಚೋರಿಗಳ ಪ್ಲೇಟನ್ನು ಇಬ್ಬರ ಕೈಗಿತ್ತು ಒಳಗೋಡಿದಳು. ಅದನ್ನು ಮುಗಿಸಿ, ಛಾಯಾಚಿತ್ರ ತೆಗೆಯತಾರಂಭಿಸಿದಾಗ, ಚಹಾ ಕಪ್ಪು ಹಿಡಿದು ಕಲಾತ್ಮಕವಾಗಿನಿಂತ ಅವಳ ಭಂಗಿಯನ್ನು ಸೆರೆಹಿಡಿಯಬೇಕೆಂದು ಮನಸ್ಸಾದರೂ, ತಂದೆ ಏನು ತಿಳಿದುಕೊಂಡಾರೆಂದು ಆ ಸಾಹಸ ಮಾಡಲಿಲ್ಲ. ಆ ಚಿತ್ರಗಳಿಗಿಂತ ತಾನೇನು ಕಡಿಮೆ ಸುಂದರಿಯೇ? ಎಂದು ಅವಳ ಕಣ್ಣುಗಳು ಪ್ರಶ್ನಿಸಿದವು. ನಮ್ಮ ಹರಟೆ-ಛಾಯಾಚಿತ್ರಗಳು ಮುಂದುವರಿದಾಗ ಒಂದಿಲ್ಲೊಂದು ನೆಪದಿಂದ ಅವಳು ಅಲ್ಲಿ ಸುಳಿಯದೇ ಇರಲಿಲ್ಲ. ಅವರ ಆತ್ಮೀಯತೆ ಆತಿಥ್ಯ, ಸಹಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದಾಗ, ತನ್ನ ತಿಂಡಿ-ತೀರ್ಥ ಪೂರೈಕೆಯ ಬಗ್ಗೆ ಏನೂ ಹೇಳಲಿಲ್ಲವಲ್ಲ ಎಂದು ಅವಳು ಅಂದುಕೊಂಡಿರಬೇಕು. ಬೇರೆ ಕಲಾಕಾರರನ್ನು ಭೇಟಿಮಾಡುವ ಇಚ್ಛೆ ಇದೆಯೇ? ಎಂದು ಕೇಳಿದ ಪ್ರಶ್ನೆಗೆ ಹೌದೆಂಬ ಉತ್ತರದಿಂದ ಪುಳಕಿತರಾದರು. ನನ್ನೊಬ್ಬ ಸ್ನೇಹಿತರು ಒಳ್ಳೆಯ ಕಲಾಕಾರರು, ಹತ್ತಿರದಲ್ಲಿಯೇ ಮನೆಯಿದೆ. ನಾಳೆ ರಜೆಯಿದ್ದುದರಿಂದ ಮನೆಯಲ್ಲಿಯೇ ಇರುತ್ತಾರೆ. ಮುಂಜಾನೆಯೇ ಎಂದರೆ ಹೋಗಿ ಬರೋಣ, ಎಂದಾಗ ಗೆಲುವಿನಿಂದ ಬೀಳ್ಕೊಡವಂತೆ ಆಯಿತು. ತುಂಬಾ ಕೃತಜ್ಞತೆಗಳು ಎಂದು ಹೇಳಿದ ಮಾತು ತಂದೆಗೋ ಅವರ ಹಿಂದೆ ಕಂಡೂ ಕಾಣದಂತೆ ನಿಂತ ಮಗಳಿಗೋ ಎಂಬ ಮಾತಿಗೆ ಇಂದಿಗೂ ಸರಿಯಾದ ಉತ್ತರ ಸಿಗುತ್ತಿಲ್ಲ!

***

3. ಕಲಾಂಕನ

ರುದ್ರಕುಮಾರ ಝಾ. ಹೆಸರಾಂತ ಕಲಾವಿದರು



ಮರುದಿನ ಕೌಸಲರು ಸಿದ್ಧವಾಗಿಯೇ ಇದ್ದರಿಂದ ಹೊರಡಲು ಹೆಚ್ಚು ಸಮಯ ಹತ್ತಲಿಲ್ಲ. ದಾರಿಯಲ್ಲಿ 'ರೂಪಾಂಕನ್' ಎಂಬ ಹೆಸರು ಹೊತ್ತುನಿಂತ ಸ್ಟುಡಿಯೋ ತೋರಿಸಿ ಇದನ್ನು ತನ್ನ ತಮ್ಮನಿಗಾಗಿ. ಅವರೇ ಸಜ್ಜುಗೊಳಿಸಿದ್ದು ಎಂದರು. ಜನಾಕರ್ಷಣೆಗೆ ಅಲ್ಲಿ ತೂಗಹಾಕಿದ್ದ ಚಿತ್ರಗಳು ಚೆನ್ನಾಗಿಯೇ ಕಂಡವು. ಕೈ, ಕಾಲು, ಗಲ್ಲಗಳೆಲ್ಲಾ ತುಂಬಿಕೊಂಡ ಸೌಂದರ್ಯಭರಿತ ಮಾಡೆಲ್‌ಗಳು ಇಲ್ಲಿ ಸುಲಭದಲ್ಲಿ ಸಿಗುತ್ತವೆಯೇ? ಎಂದು ವಿಚಾರಿಸಿದಾಗ ಅವರು ನಕ್ಕು, ಪರಪುರುಷನ ದರ್ಶನ ಮಾತ್ರದಿಂದಲೇ ತಾವೆಲ್ಲಿ ಭ್ರಷ್ಟರಾಗಿ ಬಿಡುತ್ತೇವೋ ! ಎಂಬ ಅಳುಕಿನ, ಸದಾಕಾಲ ಮುಖಮುಚ್ಚಿಕೊಳ್ಳುವ ಗೊಂಡ ಸಂಸ್ಕೃತಿಯನ್ನು ಒಪ್ಪಿಕೊಂಡ ಈ ಊರಲ್ಲಿ ಮಾಡೆಲ್‌ಗಳು ಎಲ್ಲಿಂದ ಬರಬೇಕು ? ಅವಳು ಛಾಯಾಚಿತ್ರಕಾರನ ಪತ್ನಿ ! ಎಂದು ಗುಟ್ಟನ್ನು ರಟ್ಟು ಮಾಡಿದರು.

ತೀರ ಹಳೆಯದಾದ ಕಟ್ಟಡದಲ್ಲಿ ಹೊಕ್ಕಾಗ, ಕೇಸರಿ ವರ್ಣದ ಲುಂಗಿ ಉಟ್ಟು ಗಾಳಿ ಸಂಚಾರ ಅನುಕೂಲವಾಗಲೆಂದು ಛಿದ್ರಗಳ ನೆಟ್ ಬನಿಯನ್ ತೊಟ್ಟ ಕಲಾಕಾರರು ಆದರದಿಂದ ಬರಮಾಡಿಕೊಂಡರು. ಗೋಡೆಗಳ ಮೇಲಿನ ತೈಲ ಚಿತ್ರ ಕಂಡು ಏನೋ ನೆನಪಾಗಿ, "ನೀವು ರುದ್ರಕುಮಾರರಲ್ಲವೇ ? ಕೆಲಕಾಲದ ಹಿಂದೆ - ಇಂಗ್ಲಿಷ್ ವಾರ ಪತ್ರಿಕೆಯಲ್ಲಿ ನಿಮ್ಮ ಮತ್ತು ಕೃತಿ ಪರಿಚಯಗಳು ಬಂದಿದ್ದವಲ್ಲವೇ? ಎಂದಾಗ, ಹಿಗ್ಗುತ್ತ ಪತ್ರಿಕೆಯಲ್ಲಿ ಕೇವಲ ಓದಿ ನೋಡದೆಯೇ ಜನರ ಪರಿಚಯ ಹಿಡಿಯುವವರೂ ಇರುತ್ತಾರೆಯೇ ? ಎಂದು ವಿಸ್ಮಯ ಪಟ್ಟರು."ನೋಡಿ, ಆ

ಲೇಖನ ಓದಿ, ಕೇರಳದವನೊಬ್ಬನು ನಿಯಮಿತವಾಗಿ ಪತ್ರ ವ್ಯವಹಾರ ಪ್ರಾರಂಭಿಸಿಯೇ ಬಿಟ್ಟ. ಅವನ ಕಲಾಸಕ್ತಿ, ಶ್ರದ್ಧೆಗಳಿಂದ ಪ್ರಭಾವಿತನಾಗಿದ್ದೆ. ಒಂದು ದಿನ, ತಾನೊಂದು ಅಖಿಲ ಭಾರತ ಪ್ರದರ್ಶನವನ್ನು ಏರ್ಪಡಿಸುವವನಿದ್ದೇನೆ. ಅದಕ್ಕಾಗಿ ನಿಮ್ಮ ೩-೪ ಕೃತಿಗಳನ್ನು ಕಳಿಸಿಕೊಟ್ಟರೆ, ಒಂದಿಷ್ಟೂ ಹಾಳಾಗದಂತೆ ನೋಡಿಕೊಳ್ಳುವ ಹೊಣೆ ತನ್ನದೆಂದು ಬರೆದಿದ್ದ. ನನ್ನ ಕೃತಿಗಳ ಪ್ರಚಾರ, ದಕ್ಷಿಣ ಭಾರತದಲ್ಲಿಯೂ ಆಗಲಿ, ಎಂದು ಕಳಿಸಬೇಕೆಂದಿದ್ದೆ. ಆದರೆ ದೈವವಶಾತ್ ಭೋಪಾಲದ ಒಬ್ಬ ಆರ್ಟಿಸ್ಟ್ ಭೇಟಿಯಾದ. ಕೇರಳದ ಆ ವ್ಯಕ್ತಿ, ಅವರ ನಾಲ್ಕು ಕಲಾಕೃತಿಗಳನ್ನು ನುಂಗಿ ನೀರು ಕುಡಿದಿದ್ದಾನೆ ! ಎಂದು ಹೇಳಿದ್ದರಿಂದ ಹೌಹಾರುವಂತಾಯಿತು. ಸದ್ಯ ಮೋಸ ಹೋಗುವದು ತಪ್ಪಿತು. '' ಎಂದರು.

'ನಿಮ್ಮ ಹೆಚ್ಚಿನ ಕಲಾಕೃತಿಗಳು ಮಾಯವಾಗಿವೆಯಲ್ಲ ? ವಿದೇಶಗಳಲ್ಲಿ ವಿಕ್ರಯಿಸಿ ಧನ ಸಂಪಾದನೆ ಮಾಡಿದಿರಾ ? ಎಂದು ಕೌಸಲರು ವಿಚಾರಿಸಿದಾಗ, ಅಂಥ ಭಾಗ್ಯ ನನಗೆಲ್ಲಿ ಬರಬೇಕು? ಮೊನ್ನೆ ಬಂದ ಭಾರೀ ಮಳೆಯಿಂದಾಗಿ ಮಾಡೆಲ್ಲ ಸೋರಿ ಚಿತ್ರಗಳು ಅಂದಗೇಡಿಯಾಗಿವೆ. ಅವನ್ನು ಒಣಗಿಸಿ ದುರಸ್ತಿ ಮಾಡಬೇಕಾದ್ದರಿಂದ ಪ್ಲಾಸ್ಟಿಕ್ ಕವರ್ ಹಾಕಿ ಬಂದೋಬಸ್ತ್ ಮಾಡಿ ಇಟ್ಟಿದ್ದೇನೆ .... ಎನ್ನುತ್ತಿದ್ದಾಗ, ಅವುಗಳನ್ನು ನೋಡುವ ಭಾಗ್ಯ ನನಗಿಲ್ಲವೇ? ಎಂದು ಮಧ್ಯದಲ್ಲೇ ಕಳವಳದಿಂದ ಕೇಳದೇ ಇರಲಾಗಲಿಲ್ಲ ''ಒಂದಿಷ್ಟೂ ಕಾಳಜಿ ಪಡಬೇಕಾಗಿಲ್ಲ. ಅವುಗಳ ಛಾಯಾಚಿತ್ರ ತೆಗೆದು ತಮ್ಮನು ಆಲ್ಬಮ್ ಮಾಡಿಕೊಟ್ಟಿದ್ದಾನೆಂದು ಹೇಳಿ ಎದ್ದು ಹೋಗಿ ಅದನ್ನು ತಂದು ಕೈಗಿತ್ತರು. ಅವುಗಳನ್ನು ನೋಡಿದಾಗ, ಜಗದ್ವಿಖ್ಯಾತ ಮೈಕೇಲ್ ಎಂಜೆಲೊ ಕೃತಿಗಳನ್ನು ಕನ್ನಡ ಕಳಪೆ ವಾರ ಪತ್ರಿಕೆಯ ಮುದ್ರಣದಲ್ಲಿ ನೋಡಿದಂತಾಗಿ ವಾಕರಿಕೆಯೆನಿಸಿತು. ''ಕರ್ನಾಟಕದವರು, ಆ ಕೇರಳದವನಂಥವರಲ್ಲ. ಕೃತಿಗಳನ್ನು ಹಾರಿಸುವ ಬದಲಿಗೆ, ಅವನ್ನು ನೋಡಿ ಆನಂದಿಸಿ, ಸಾಧ್ಯವಿದ್ದರೆ ಛಾಯಾಚಿತ್ರ ಮಾಡುವದರಲ್ಲಿ ವಿಶ್ವಾಸವಿಡುತ್ತಾರೆ" ಎಂದಾಗ ಮಾತಿನ ಇಂಗಿತ ಅರಿತು, 'ಗುಡ್ಡೀ' ಎಂದು ಕರೆದರು. ಒಳಗಿನಿಂದ ಕಂಕಣದ ಸದ್ದು ಕೇಳಿಸಿತು. ಈ ಮೊದಲು ಕಂಡ ಛಾಯಾ ಚಿತ್ರಗಳ ಮಾಡೆಲ್ ಇರಬಹುದು ಎಂದುಕೊಂಡಾಗ ಬಂದವಳು ಚಿಕ್ಕಬಾಲೆಯೆಂದು ತಿಳಿದಾಗ ನಿರಾಸೆ ಯಾಯಿತು. ಇವರಿಗೆ ಒಂದೊಂದಾಗಿ ಚಿತ್ರವನ್ನು ತಂದು ತೋರಿಸಮ್ಮ, ಎಂದಾಗ ಇನ್ನೊಬ್ಬ ಬಂಧುವಿನ ಸಹಾಯದಿಂದ ಹಾಗೇ ಮಾಡಲಾರಂಭಿಸಿದಳು. ಕೌಸಲರು ಏನೋ ಕೆಲಸದ ನೆವ ಹೇಳಿ ಜಾರಿಕೊಂಡರು.

''ಬಿಸಿಲಿಗಿಡಬೇಡಮ್ಮ, ತುಂಬ ಹೊಳಪು ಬಂದುಬಿಡುತ್ತದೆ" ಎಂದಾಗ ಅಪನಂಬಿಕೆಯಿಂದ ಗುಡ್ಡಿ, ಭಾಯಿಸಾಬರು, ಒಳ್ಳೆ ಬಿಸಿಲು ಇಲ್ಲದೇ ಒಳ್ಳೆ ಫೋಟೋಗಳು ಬರುವದಿಲ್ಲ ಎನ್ನುತ್ತಾರಲ್ಲ! ಎಂದು ರಾಗ ಎಳೆದಳು. ಕ್ಯಾಮರಾ ಸರಿಯಾಗಿ ಜೋಡಿಸಿ, ಅದರಲ್ಲಿ ಕಾಣುವ ವರ್ಣಮಯ ಪ್ರತಿಬಿಂಬವನ್ನು ತೋರಿಸಿದಾಗ, ಉತ್ಸಾಹದಿಂದ ನೋಡಲು ತಂದೆಯನ್ನೂ ಆಮಂತ್ರಿಸಿದಳು. ಇದೊಂದು ಬೇಕಾದಂತೆ ಮಣಿಯಬಲ್ಲ ಕ್ಯಾಮರಾ. ಗುಂಡು ಸೂಜಿಯಿಂದ, ಹಿಮಾಲಯದ ಶಿಖರದ ಆಕೃತಿಗಳ ಛಾಯಾಗ್ರಹಣ ಮಾಡಬಹುದು ಎಂದಾಗ, ರುದ್ರಕುಮಾರರು, ತಮ್ಮ ಬಾಲ್ಯದ ಭಾವಚಿತ್ರದ ಪ್ರತಿಕೃತಿ ಬೇರ್ಪಡಿಸಿ ತೆಗೆಯಲು ಸಾಧ್ಯವೇ ? ಎಂದು ವಿಚಾರಿಸಿ, ಶಾಲಾದಿನಗಳ ಗ್ರೂಪ್ ಫೋಟೋ ಒಂದನ್ನು ಧೂಳು ಝಾಡಿಸಿ ತಂದುಕೊಟ್ಟರು. ಕ್ಯಾಮರಾಕ್ಕೆ ಹೆಚ್ಚಿನ ಕೊಳವೆಗಳನ್ನು ಜೋಡಿಸಿ ಹಿಗ್ಗಿಸಿ ತೋರಿಸಿದಾಗ ಅವರ ಕಣ್ಣು ಮಿಂಚಿದವು. ತನಗೆ ತಿಳಿದದ್ದಷ್ಟೇ ಛಾಯಾಗ್ರಹಣವೆಂದು ನನ್ನ ತಮ್ಮ ತಪ್ಪು ತಿಳಿದುಕೊಳ್ಳಬಾರದು. ಇದನ್ನೆಲ್ಲ ಅವನೂ ನೋಡಬೇಕು, ಎಂದು ಸ್ಟುಡಿಯೋದಲ್ಲಿ ಇದ್ದ ಭಾಯಿಸಾಬ (ತಮ್ಮ)ನನ್ನು ಕಳಿಸೆಂದು ಮಗನನ್ನು ಓಡಿಸಿದರು.

ಹೆಸರು ರುದ್ರಕುಮಾರ್ ಎಂದಿದ್ದರೂ ಝಾ ಅವರು ತುಂಬ ಸೌಮ್ಯ ಮೂರ್ತಿ. ಸೌಜನ್ಯ-ಮಾರ್ದವತೆಗಳು ಮೂರ್ತಿಮತ್ತಾಗಿವೆ.. ಧ್ವನಿ ಮೆತ್ತಗೆ, ಮಾತಂತೂ ಇನ್ನೂ ಮೆಲ್ಲಗೆ. ಅದೇ

ಮೋಟಾರ್ ಸೈಕಲ್ ಮೇಲಿಂದ ಬಂದಿಳಿದ ತಮ್ಮನು ತದ್ವಿರುದ್ಧವಾಗಿದ್ದನು. ಬಾಯ್ತುಂಬ ವೀಳ್ಯ ತುಂಬಿಕೊಂಡು ಛಾಯಾಗ್ರಹಣದ ಬಗ್ಗೆ ದೊಡ್ಡ ಉಪನ್ಯಾಸವನ್ನೆ ಬಿಗಿದು ತನಗೆ ಅದರ ಬಗೆಗಿದ್ದ (ಅ)ಜ್ಞಾನ ಪ್ರಕಟಿಸಿದ. "ಅದೆಲ್ಲಾ ಅವರಿಗೆ ಗೊತ್ತೇ ಇದೆ. ನಿನಗೆ ಬಾರದ್ದನ್ನು ಹೊಸದನ್ನು ಅವರಿಂದ ಕಲಿ !" ಎಂದು ಸಹನೆ ಕಳೆದುಕೊಂಡ ಸೌಮ್ಯ ಸಹೋದರರು ಆಜ್ಞಾಪಿಸಿದರು. ಇಂಗು ತಿಂದ ಮಂಗನಂತೆ, ಆತ ತೈಲಚಿತ್ರಗಳ ಮೇಲಿನ ಧೂಳು ಝಾಡಿಸಿ ಎತ್ತರಿಸಿ ಬೇಕಾದ ಕೋನದಲ್ಲಿ ಹಿಡಿಯಲು ಸಹಾಯ ಮಾಡಲಾರಂಭಿಸಿದ. ಕಪ್ಪು-ಬಿಳುಪು ಚಿತ್ರದ ಒಂದು ರೀಲು ಮುಕ್ತಾಯವಾದ್ದರಿಂದ, ವರ್ಣ ಫಿಲ್ಮ ಹಾಕಿ ಕೆಲವನ್ನು ಸೆರೆಹಿಡಿಯುವ ಆಸೆ ವ್ಯಕ್ತಪಡಿಸಿದಾಗ, ಛಾಯಿಸಾಬನು ಹುರುಪುಗೊಂಡನು. ಅದೆಷ್ಟೋ ಕಾಲದಿಂದ ಪತ್ನಿಯ ಕೆಲವಾದರೂ ಸುಂದರ ವರ್ಣಚಿತ್ರಗಳನ್ನು ತೆಗೆಸಬೇಕೆಂಬ ಆಸೆ ಪೂರ್ಣವಾಗಲೇ ಇಲ್ಲ ... ' ಅನ್ನುತ್ತಿದ್ದಾಗಲೇ ಅದೇನು ಮಹಾ! ಇದೀಗಲೇ ಆ ಆಸೆ ಈಡೇರಿಸಬಹುದಲ್ಲ? ಎಂಪಿ. ಆ ಚೆಲುವ ರೂಪದರ್ಶಿಯನ್ನು ಹತ್ತಿರದಿಂದ ನೋಡುವ, ಚಿತ್ರೀಕರಿಸುವ ಅವಕಾಶ ತಾನಾಗಿ ಒದಗಿ ಬಂದ ವಿಸ್ಮಯ ಹತ್ತಿಕ್ಕಿ ಹೇಳಿದ್ದಾಯಿತು. ರುದ್ರಕುಮಾರರು, "ಅವಳು ಮೂರನೆಯ ಬಾಣಂತನವನ್ನು ಸುಖರೂಪವಾಗಿ ಮುಗಿಸಿ ಆಗ್ರಾದಿಂದ ಮರಳಿ ಬರಲಿ. ಆ ನಂತರ ನೀನೇ ಬೇಕಾದಷ್ಟು ಅವಳ ವರ್ಣಚಿತ್ರಗಳನ್ನು ತೆಗೆಯಬಹುದಂತೆ" ಎಂದು ವ್ಯಂಗ್ಯವಾಗಿ ತಮ್ಮನಿಗೆ ನುಡಿದರು. ಸ್ಟುಡಿಯೋ ಹೊರಗೆ ತೂಗ ಹಾಕಿದ ಭಾವಚಿತ್ರಗಳು ಸೊಗಸಾಗಿವೆ, ಎಂದು ಮೆಚ್ಚಿಗೆ ವ್ಯಕ್ತಪಡಿಸಿಗಾಗ, ಅವೆಲ್ಲಾ ಆಕೆ ಕಿಶೋರಾವಸ್ಥೆಯಲ್ಲಿದ್ದಾಗ ಆಗ್ರಾದಲ್ಲಿ ವಿಶೇಷವಾಗಿ ತೆಗೆಸಿದವುಗಳು. ವಿವಾಹವಾದ ನಾಲ್ಕು ವರ್ಷಗಳಲ್ಲಿ ಒಂದೇ ಒಂದು ಅಂಥ ಭಾವಚಿತ್ರ ಹೊರಬೀಳಲಿಲ್ಲ! ಎಂದು ಪರಿತಾಪದ ಧ್ವನಿಯಲ್ಲಿ ಹೇಳಿದರು. ನಾಲ್ಕು ವರ್ಷಗಳಲ್ಲಿ ಮೂರು ಮಕ್ಕಳ ಬದಲಾಗಿ, ಭಾವಚಿತ್ರಗಳಾದರೂ ಮೂಡಿ ಬಂದರೆ ನೆಮ್ಮದಿಯಿಂದ ಇರಬಹುದಾಗಿತ್ತು. ಎಂಬ ಗೂಢಭಾವ ಅವರ ಧ್ವನಿಯಲ್ಲಿತ್ತು. ತೆಪ್ಪಗಾದ ಛಾಯಿಸಾಬನು, ಗಿರಾಕಿಗಳನ್ನು ಕಾಯಲು ಹೇಳಿ ಬಂದಿದ್ದೇನೆ, ಎಂದು ಹೇಳಿ ಮೋಟಾರ್ ಸೈಕಲನ್ನು ದೌಡಾಯಿಸಿದನು.

ದಕ್ಷಿಣದ ಅತಿಥಿಗಾಗಿ ಕಾಫಿ ಮಾಡಿಸಿ, ಮಗಳಿಂದ ಕೊಡಿಸಿ, ಲೋಕಾಭಿರಾಮವಾಗಿ ಮಾತನಾಡುತ್ತ ಕುಳಿತಾಗ, ಮಾತು ಮತ್ತೆ ಛಾಯಾಗ್ರಹಣದತ್ತ ಹೊರಳಿತು. "ಭಾರತದಲ್ಲಿ ಛಾಯಾಗ್ರಹಣ ಸರಿಯಾಗಿ ಮಾಡುವವರೇ ಇಲ್ಲ. ಈ ತಮ್ಮನ ವಿವಾಹ ಕಾಲದಲ್ಲಿ ಮಧು ಪಕ್ಷದವರು ವ್ಯಕ್ತಿ ಛಾಯಾಚಿತ್ರಕಾರರನ್ನು ನೇಮಿಸಿದ್ದರೂ ಆತ ತೆಗೆದ ಅಸಂಖ್ಯ ಛಾಯಾಚಿತ್ರಗಳಲ್ಲಿ ಎರಡೇ ಎರಡು ರೋಲು ಚೆನ್ನಾಗಿ ಬಂದಿವೆ. ಅವನ್ನು ಸ್ವೀಡನ್ನಿಗೆ ಕಳಿಸಿ ಸಿದ್ಧಮಾಡಿಸಿದ್ದರಿಂದ ಸುಂದರವಾಗಿ ಮೂಡಿವೆ. ಇಂಥ ಕಲೆ ಕರಗತಮಾಡಿಕೊಂಡರೆ, ಕೈಹಿಡಿಯುವವರು ಯಾರೂ ಇಲ್ಲ ಎಂದು ತಮ್ಮನಿಗೆ ಎಷ್ಟು ಹೇಳಿದರೂ, ಅತ್ತ ಲಕ್ಷವೇ ಇಲ್ಲ. ಕೆಲಸವಿಲ್ಲದೇ ಪೋಲಿಯಾಗಿ ಅಲೆಯುತ್ತಿದ್ದ ದಿನಗಳಲ್ಲಿ ಸಾಕಷ್ಟು ಖರ್ಚು ಮಾಡಿ ಸ್ಟುಡಿಯೋ ಹಾಕಿ ಕೊಟ್ಟೆ. ಮನಸ್ಸು ಹಾಕಿ ದುಡಿದರೆ ಈ ಊರಿನಲ್ಲೂ ತಿಂಗಳಿಗೆ ಎರಡು ಮೂರು ಸಾವಿರ ರೂಪಾಯಿ ಸಹಜವಾಗಿ ಗಳಿಸಬಹುದು. ಆದರೆ ಇವನು ಮಾಡಿದ ಕೆಲಸ ಸರಿಯಾಗಿರುವುದಿಲ್ಲ. ಅಷ್ಟೇ ಅಲ್ಲ, ಹೇಳಿದ ದಿನ ಮಾಡಿಕೊಟ್ಟು ಗೊತ್ತೇ ಇಲ್ಲ. ಅಂತೆಯೇ ಒಮ್ಮೆ ಬಂದ ಗಿರಾಕಿಗಳು ಬೇಸತ್ತು, ಬೇರೆ ಸ್ಟುಡಿಯೋಕ್ಕೆ ಹೋಗಿಬಿಡುತ್ತಾರೆ. ಇವನಿಗೆ ಅಂಗಡಿ ಮುಚ್ಚಿ ಊರು ಸುತ್ತುವದು ಬಲುಪ್ರೀತಿ. ಮೊನ್ನೆ ತನ್ನ ಮೂರನೆಯ ಮಗುವನ್ನು ನೋಡುವ ನೆಪದಲ್ಲಿ ಮೂರು ವಾರ ಆಗ್ರಾ-ದಿಲ್ಲಿ ಸುತ್ತಾಡಿಕೊಂಡು ಬಂದ. ಆದರೂ ಬರುತ್ತ ಅಲ್ಲಿಂದ ಫೋಟೋ ಕಾಗದ ಅವನಿಂದ ತರಲಾಗಲಿಲ್ಲ. ನಂತರ ಅದನ್ನು ತರಲೆಂದೇ ನಾಗಪುರಕ್ಕೆ ಹೋಗಿ ಬಂದ! ಸ್ಟುಡಿಯೋದಲ್ಲಿ ಸ್ಥಳದ ಅಭಾವದಿಂದಾಗಿ ಮನೆಯಲ್ಲಿಯೇ ಕತ್ತಲೆಕೋಣೆ ಮಾಡಿಕೊಂಡಿದ್ದಾನೆ. ಅದನ್ನು ಸುವ್ಯವಸ್ಥಿತವಾಗಿ ಇಟ್ಟುಕೊಳ್ಳೆಂದರೆ ಬಿಡುವೇ ಇಲ್ಲವೆಂದು ನಟಿಸುತ್ತಾನೆ........' ಎನ್ನುತ್ತಿದ್ದಂತೆ ಇಲ್ಲಿಯೇ ಅವಕಾಶ ದೊರೆತರೆ ಮುಗಿಸಿದ ಫಿಲ್ಮಂ ತೊಳೆದು ಬಿಡಬಹುದಾಗಿತ್ತು....... ಎಂದಾಗ ರುದ್ರಕುಮಾರರು ವಿಚಾರ ಮಗ್ನರಾಗಿದ್ದರು.

ನಿಧಾನವಾಗಿ ನನಗೂ ಛಾಯಾಚಿತ್ರಗಳು ಹೇಗೆ ಬಂದಿವೆ. ಎಂದು ನೋಡುವ ಆಸೆ. ಆದರೆ ಈ ಕತ್ತಲು ಕೋಣೆಯಲ್ಲಿ ಕತ್ತಲಾದ ನಂತರವೇ ಕಾರ್ಯೋನ್ಮುಖಿಯಾಗಲು ಸಾಧ್ಯ ಎಂದು ನಗಲು ಯತ್ನಿಸಿದರು.

ಸಂಜೆಗೆ ಕತ್ತಲು ಕೋಣೆ ಸಿದ್ಧವಾಗುತ್ತದೆ ಎಂದು ಆಶ್ವಾಸನೆ ಪಡೆದು, ರವಿವಾರ ವಿಶೇಷ ಊಟ ಎಂದು ಹೇಳಿದ್ದರಿಂದ ಹೋಟಲಿಗೆ ಮರಳಿದರೆ, ದಿನದ ಊಟವೇ ಚೆನ್ನಾಗಿರುತ್ತಿತ್ತು, ಅನಿಸಿತು. ಕೌಸಲರು ಕಾಸು ಬೇಡವೆಂದರೂ ವ್ಯಾಪಾರ ಬೇರೆ, ಪರಿಚಯ ಬೇರೆ ಎಂದು ವಿವರಿಸುತ್ತಿದ್ದಂತೆ ಅವರ ಕಿಶೋರ ಕುವರಿ ಥಳಕಿನ ಸಲವಾರ ಕಮೀಜ ಧರಿಸಿ, ತುಟಿ, ಗಲ್ಲಗಳಿಗೆ ಬಣ್ಣ ಬಳಿದುಕೊಂಡು, ಚಲಚ್ಚಿತ್ರಕ್ಕೆಂದು ತಂದೆಯಿಂದ ಹತ್ತರ ನೋಟು ವಸೂಲು ಮಾಡಿ ಬಿಂಕದಿಂದ ನಡೆದೇ ಬಿಟ್ಟಳು. ಈ ರಂಗು ರಂಗಾದ ಪೋಷಾಕಿಗಿಂತ ಮನೆಯುಡಿಪಿನಲ್ಲೆ ಹೆಚ್ಚು ಅಂದವಾಗಿದ್ದಳಲ್ಲ ಈ ಹುಡುಗಿ ಎಂದು ಯೋಚಿಸುವಷ್ಟರಲ್ಲಿ ಮ್ಯಾನೇಜರರು ಹಬ್ಬದೂಟದ ಪೂರ್ಣಹಣ ವಸೂಲು ಮಾಡಿದ್ದು ಲಕ್ಷಕ್ಕೆ ಬರಲೇ ಇಲ್ಲ. ಅಂದು ರಾತ್ರಿ ಊಟವಿಲ್ಲವೆಂದರು. ಹಣ್ಣು - ಹಂಪಲು ತಿಂದರಾಯಿತು ಎಂದುಕೊಂಡು ಲಾಜಿಗೆ ಮರಳಿದೆ. ಪಂಡಿತಜಿಗೆ ಬಿಸಿ ನೀರು ಕೊಡಲು ಹೇಳಿದಾಗ, ಸಿಗುವದು ಕಷ್ಟ ಸಾಧ್ಯ, ಎಂದ. ಕಾಸು ಕೈಗಿಟ್ಟ ಐದೇ ನಿಮಿಷಗಳಲ್ಲಿ ಸ್ನಾನ ಮಾಡುವಷ್ಟು ಕಾದ ನೀರನ್ನು ತಂದುಕೊಟ್ಟ! ಜೊತೆಯಲ್ಲಿ ತಂದ ಛಾಯಗ್ರಹಣದ ರಾಸಾಯನಿಕಗಳನ್ನು ಬಿಸಿನೀರಿನಲ್ಲಿ ಕರಗಿಸಿ, ಕಬಾಡಿ ಖಾನೆ (ಗುಜರಿ)ಯಿಂದ ಕೊಂಡು ತಂದು ತೊಳೆದ ಗಾಳಿಯಾಡದ ಬಾಟ್ಲಿಗಳಲ್ಲಿ ಆರಿಸಿದ ದ್ರವಗಳನ್ನು ತುಂಬಿದಾಗ ಪ್ರವಾಸದಲ್ಲಿ ಕೂಡ ಮೊಟ್ಟ ಮೊದಲ ಬಾರಿಗೆ ಫಿಲ್ಮ ತೊಳೆಯಬಹುದು. ಎಂಬ ಧೈರ್ಯ ಬಂದಿತು.

ಮೂರು ನಾಲ್ಕು ದ್ರವದ ಶೀಸೆಗಳು, ಕರಿಪರದೆ, ಇತರ ಸರಂಜಾಮು ಮರೆತದ್ದು ತಿಳಿಯಿತು. ಕತ್ತಲೆ ಕೋಣೆಯ ಬಾಗಿಲು ತೆಗೆಸಿದಾಗ, ದನದ ದೊಡ್ಡಿಯಾಗಿಯೂ ಬಳಸದಷ್ಟು ಅದು ಕೊಳಚೆಯಾಗಿತ್ತು! ವರ್ಷಗಳ ಧೂಳು ಕಸ ಮಧ್ಯಾಹ್ನದ ತುಂತುರು ಮಳೆ ಸೇರಿ ರಾಡಿಯಾಗಿ ಬಿಟ್ಟಿತ್ತು. ಮನೆಯ ಮಕ್ಕಳೆಲ್ಲ ಸಹಾಯಕ್ಕೆ ನಿಂತಿದ್ದರಿಂದ ಎರಡು ಗಂಟೆಗಳಲ್ಲಿ ಒಂದು ಸ್ಥಿತಿಗೆ ಬಂದು ನಿಂತಿತು. ಬೆಲಾತಕಖಾನೆಯಂತಿದ್ದ ಕೊಠಡಿಯ ಸೂರಿಗೆ ಹಾಸಿದ ದೇಶಿ ಹಂಚುಗಳಿಂದ ಬೆಳಕು ಒಳಗೆ ಬಂದರೂ, ಇದ್ದ ಒಂದು ಖಿಡಕಿಯನ್ನು ಶಾಶ್ವತವಾಗಿ ಮುಚ್ಚಿದ್ದರಿಂದ ಗಾಳಿಯ ಸಂಚಾರವೇ ಇರಲಿಲ್ಲ. ಪರದೆ, ವರ್ಣದೀಪ ಪಂಕಗಳಿಲ್ಲದೇ ಈತ ಇಲ್ಲಿ ಏನು ಛಾಯಚಿತ್ರ ಮಾಡುತ್ತಿದ್ದಿರಬೇಕು! ಎಂದು ವಿಸ್ಮಯ ಪಡುತ್ತಿದ್ದಾಗಲೇ 'ಛಾಯಿಸಾಬ' ಮೋಟಾರ ಸೈಕಲ್ಲಿನಿಂದ ಬಂದು ಇಳಿದ. ತನ್ನದು ಝಟ್‌ಪಟ್ ಫೋಟೋಗ್ರಾಫಿ. ಹೀಗಾಗಿ ಅವುಗಳ ಅವಶ್ಯಕತೆಯೇ ತನಗಿಲ್ಲವೆಂದು ಮಾತಿನ ಪಟಾಕಿ ಹಾರಿಸುತ್ತಿದ್ದಾಗ, ರುದ್ರಕುಮಾರರು ಅಲ್ಲಿ ಬಂದು ತಲುಪಿದರು. ಹಳ್ಳಿಗರ ಮುಂದಿನ ನಿನ್ನ ರೇಲು, ಎಲ್ಲರ ಮುಂದೆ ಬಿಡಬೇಡ. ಈ ಮಹಾನುಭಾವರು ವೈಜ್ಞಾನಿಕ ಛಾಯಾಗ್ರಹಣವನ್ನು ವೃತ್ತಿಯಾಗಿ ಹೊಂದಿದ್ದಾರೆ. ಹೇಳಿ ಕಳಿಸಿದಂತೆ ನಮ್ಮಲ್ಲಿ ಬಂದದ್ದು ನಮ್ಮ ಸುಯೋಗ. ಇದೊಂದು ಸುಸಂಧಿ ಎಂದು ಅರಿತು, ಅವರ ಅನುಭವದ ಸಂಪೂರ್ಣ ಲಾಭ ಪಡೆದುಕೋ! ಎಂದು ತಾಕೀದು ಮಾಡಿದರು.

ಕೂಡಲು ಕುರ್ಚಿ, ಕೆಲಸ ಮಾಡಲು ಟೇಬಲ್ ಇಲ್ಲದ್ದರಿಂದ ಖಾಲಿ ಪೆಟ್ಟಿಗೆಗಳನ್ನೆ ಈ ಕೆಲಸಕ್ಕೆ ಬಳಸಬೇಕಾಯಿತು. ಮಕ್ಕಳೆಲ್ಲ ತಾವೂ ಒಳಗೆ ಬರುತ್ತೇವೆ ಎಂದು ಪಟ್ಟು ಹಿಡಿದದ್ದು ಲಾಭದಾಯಕವೇ ಆಯಿತು. ಒಬ್ಬನಿಗೆ ಗಾಳಿಯಿಂದ ಬಾಗಿಲು ತೆಗೆಯದಂತೆ ಎಚ್ಚರವಹಿಸಲು ಹೇಳಿದರೆ, ಇನ್ನೊಬ್ಬನಿಗೆ ಕಪ್ಪುಪರದೆ ಹಿಡಿದು ನಿಲ್ಲಲು ಹೇಳಲಾಯಿತು. ಗುಡ್ಡಿಗೆ ಕೆಂಪು ದೀಪದ ನಿಯಂತ್ರಣದ ಕೆಲಸ ಒಪ್ಪಿಸಲಾಯಿತು. ಹಾಗೆಯೇ ಫಿಲ್ಮ ತೊಳೆಯುವ, ಚಕ್ರಕ್ಕೆ ಸುತ್ತುವ ಕೆಲಸಕ್ಕೆ ನೆರವಾದ ಮಕ್ಕಳು, ಇವನ್ನೆಲ್ಲ ಛಾಯಿಸಾಬ ಮಾಡುವದಿಲ್ಲವೆಂದು ಉದ್ಗರಿಸಿದರು. ಒಮ್ಮೆ ಫಿಲ್ಮ ಒಳಗೆ ಸೇರಿಸಿದರೆ ಉಳಿದೆಲ್ಲ ಕೆಲಸಗಳನ್ನು ಕೆಂಪು ದೀಪದ ಬೆಳಕಿನಲ್ಲಿ ಮಾಡಬಹುದು ಎಂದಾಗ ತಾನೂ ಒಂದನ್ನು ಕೊಳ್ಳಬೇಕು ಎಂದು ಛಾಯಿಸಾಬನು ಸಾರಿದ. ಅಷ್ಟರಲ್ಲಿ ಅವನಿಗೆ ನೀರಡಿಕೆಯಾಗಿ,

ನೀರು ತರಲು ಗುಡ್ಡಿಯನ್ನು ಕಳಿಸಿದ. ಬೆಳಕು ಫಿಲ್ಮಿನ ಮೇಲೆ ಬಿದ್ದು ಮಾಡಿದ ಶ್ರಮ ವ್ಯರ್ಥವಾಗುವದೆಂಬ ಅಳುಕು ತೋರಿದಾಗ, ತಾನು ತೆರೆದ ಟ್ರೇದಲ್ಲಿ ಸಾವಿರಾರು ಫಿಲ್ಮು ತೊಳೆದಿದ್ದೇನೆ. ಒಂದೇ ಒಂದು ಹಾಳಾಗಿಲ್ಲ. ಹೆದರಿಕೆಗೆ ಕಾರಣವಿಲ್ಲ, ಎಂದು ಧೈರ್ಯತುಂಬಿದ. ಕುಡಿದ ನೀರು ಹೆಚ್ಚಾಗಿರಬೇಕು. ಕಾಲು ಮಡಿಯಲು ಓಡಿದ. ಇದೇ ಅವಕಾಶವೆಂದು ರುದ್ರಕುಮಾರರ ಕಿರಿಯ ಮಗನು ಮೆಲುಧ್ವನಿಯಲ್ಲಿ ಕಿವಿಯಲ್ಲಿ 'ಭಾಯಿಸಾಬರು ತೊಳೆದ ಹಲವಾರು ಫಿಲ್ಮಗಳು ಹಾಳಾಗಿ ಹೋಗುತ್ತವಾದ್ದರಿಂದ ತಂದೆಯವರು ಗದರಿಸುತ್ತಲೇ ಇರುತ್ತಾರೆ!' ಎಂದು ಸಾರಿದ. ತೊಳೆಯುವ ಅವಧಿ ಮುಗಿದಿದ್ದರಿಂದ ಎಸಿಟಿಕ್ ಆಮ್ಲವನ್ನು ಕೊಡಲು ಒಳಗೆ ಬರುತ್ತಿದ್ದ ಭಾಯಿಸಾಬನಿಗೆ ಹೇಳಿದಾಗ, ಆಮ್ಲ ಹಾಕಿದರೆ ಫಿಲ್ಮು ಸುಟ್ಟು ಹೋಗುವದಿಲ್ಲವೇ? ಎಂದು ವಿಚಾರಿಸಿದಾಗ, ಇವನೆಂಥ ಛಾಯಾಚಿತ್ರಕಾರ! ಅನಿಸದೇ ಹೋಗಲಿಲ್ಲ.

ನೀರಿನಿಂದ ಹೊರಗೆ ತೆಗೆದ ಫಿಲ್ಮಿನ ಮೇಲೆ ತಮ್ಮ ಭಾವಚಿತ್ರಗಳನ್ನು ನೋಡಿ ಮಕ್ಕಳೆಲ್ಲ ತುಂಬ ಖುಷಿ ಪಟ್ಟರು. ತಮ್ಮ ಕಲಾಕೃತಿಗಳೆಲ್ಲ ಸುಂದರವಾಗಿ ಮೂಡಿದ್ದನ್ನು ನೋಡಿ ರುದ್ರಕುಮಾರರು ಆನಂದಿಸಿದರು. ಅದಕ್ಕೂ ಹೆಚ್ಚಾಗಿ, ತಮ್ಮನಿಂದಾಗದ ತಮ್ಮ ಬಾಲ್ಯದ ಚಿತ್ರ, ಪ್ರತ್ಯೇಕಿಸಿ ಮೂಡಿಸಿದ್ದನ್ನು ಕಂಡು ಹಿಗ್ಗಿ ಹೋದರು. ಭಾಯಿಸಾಬ ಮಾತ್ರ ಎಲ್ಲರೆದುರು ಮುಖಭಂಗವಾದ್ದರಿಂದ ಸುಮ್ಮನೆ ಕುಳಿತಿದ್ದ. ರುದ್ರಕುಮಾರರು, ಮೆಲುದನಿಯಲ್ಲಿ, 'ನೀವು ನಮ್ಮ ಆಫೀಸಿಗೆ ಬರುವಂತೆ ಇದ್ದರೆ, ಅಲ್ಲಿದ್ದ ನನ್ನ ಅನೇಕ ತೈಲಚಿತ್ರಗಳ ಛಾಯಾಚಿತ್ರಗಳನ್ನು ಮಾಡಿಸಬಹುದಾಗಿತ್ತು' ಎಂದು ಪ್ರಸ್ತಾಪವೆತ್ತಿದಾಗ, ಖಂಡಿತ ಬರುತ್ತೇನೆ ಎಂಬ ಆಶ್ವಾಸನೆಯಿಂದ ಪುಳಕಿತರಾದರು. ಬೀಳ್ಕೊಡುವಾಗ 'ಚಕ್ಕರ್ ರಸ್ತೆಯಲ್ಲಿರುವ ಪುರಾನಾ ಬಂಗ್ಲೆ ನಮ್ಮ ಆಫೀಸು. ಯಾವ ಸಾಯಕಲ್ ರಿಕ್ಷಾದವನೂ ಮುಟ್ಟಿಸುತ್ತಾನೆ' ಎಂದರು.

***

4 ಚಕ್ಕರ್ ರಸ್ತೆ



ಕೌಸಲ್, ರುದ್ರಕುಮಾರರೊಂದಿಗೆ ಇಷ್ಟೊಂದು ವಿಚಾರ ವಿಮರ್ಶೆ ಮಾಡಿದರೂ ಆದಿವಾಸಿಗಳ ಸಂಶೋಧನಾ ಕೇಂದ್ರದ ಬಗ್ಗೆ ವಿಚಾರಿಸಲಿಲ್ಲವೆಂದು ಮರುಗುತ್ತ ರಿಕ್ಷಾದವನಿಗೆ ಚಕ್ಕರ್ ರಸ್ತೆಯ ಹಳೆಬಂಗ್ಲೆಗೆ ಒಯ್ಯಲು ಹೇಳಿದೆ. ಅವನು, 'ಆದಿವಾಸಿ ಸಂಶೋಧನಾ ಕೇಂದ್ರ' ಎಂದು ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿ ಬೋರ್ಡು ಹೊತ್ತು ನಿಂತ ಕಟ್ಟಡದ ಆವಾರದಲ್ಲಿ ರಿಕ್ಷಾ ತಂದು ನಿಲ್ಲಿಸಿದಾಗ, ಕನಸು ಕಾಣುತ್ತಿಲ್ಲವಷ್ಟೆ? ಎಂದು ಹಿಗ್ಗುವಂತಾಯಿತು. ರಿಕ್ಷಾದವನಿಗೆ ಕೇಳಿದ್ದಕ್ಕಿಂತ ಒಂದು ರೂಪಾಯಿ ಜಾಸ್ತಿ ಕೊಟ್ಟದ್ದರಿಂದ ಖುಷಿಯಾದ. ನೀಲಗಿರಿ ಮರಗಳ ತೋರಣವಾಗಿ ಉಳ್ಳ ಹೆಬ್ಬಾಗಿಲಿನಲ್ಲಿ ತಡೆ ಹಿಡಿಯಲು ದ್ವಾರಪಾಲಕನಿಲ್ಲದ್ದರಿಂದ ಒಳಗೆ ಬರಲಪ್ಪಣೆ ಕೇಳಬೇಕಾದ ಪ್ರಮೇಯವೇ ಇರಲಿಲ್ಲ.

ಅಲ್ಲಲ್ಲಿ ಗಿಡ-ಮರ, ಹೂಬಳ್ಳಿಗಳು ಇದ್ದರೂ, ಒಂದು ಕಾಲದಲ್ಲಿ ಊರ್ಜಿತಾವಸ್ಥೆಯಲ್ಲಿ ಇದ್ದು ಈಗ ಅಲಕ್ಷಕ್ಕೆ ಒಳಗಾದ ತಾಣವಿದು, ಎಂದು ಒಮ್ಮೆಲೇ ಲಕ್ಷಕ್ಕೆ ಬರುವಂತಿತ್ತು. ಹಳೆಕಾಲದ ಕಟ್ಟಡದತ್ತ ಓಡುವ ಮಾರ್ಗದ ಅಂಚಿನಲ್ಲಿ ಭಿಲ್ಲರ ವೀರಗಲ್ಲುಗಳನ್ನು ನಿಲ್ಲಿಸಿದ್ದಾರೆ. ಎಲ್ಲೆಲ್ಲಿಂದಲೊ ಹೊತ್ತು ತಂದಿರಬಹುದಾದ ಭಗ್ನ ಸ್ಮಾರಕ ಶಿಲೆಗಳನ್ನು ಜೋಡಿಸಿಟ್ಟಿದ್ದಾರೆ. ಆಗಂತುಕರನ್ನು ಸ್ವಾಗತಿಸಲು ಜೋಡಿ ಹಿತ್ತಾಳೆಯ ಮಿಂಚುವ ಆನೆಗಳು ನಿಂತಿವೆ. ಹಸ್ತಿದಂಪತಿ ಇರಬಹುದೇ ಎಂದು ಪರಿಕಿಸಿ ನೋಡಿದರೂ ಉತ್ತರ ಸಿಗಲಿಲ್ಲ! ಹತ್ತಿರದ ಕಂಬ ಒಂದಕ್ಕೆ ಕರ್ನಾಟಕದ

ಕರಾವಳಿಯ ಹಾಲಕ್ಕಿ ಗೌಡರು ಹಬ್ಬಕ್ಕೆ ಬಳಸುವಂಥ ಮರಕಾಲುಗಳನ್ನು ತೂಗ ಹಾಕಿದ್ದಾರೆ. ಇನ್ನೊಂದೆಡೆ ಕೊರ್ಕು ಜನಾಂಗದ ಕೊರಡು ಮೃತ್ಯು - ಪಟ್ಟಿಕೆಗಳನ್ನು ಸಾಲಾಗಿ ನಿಲ್ಲಿಸಿದ್ದಾರೆ. ಬೈಗಾ ಆದಿವಾಸಿಗಳ ಕೆತ್ತನೆಯ ಬಾಗಿಲನ್ನು ಗೋಡೆಗೆ ಜೋಡಿಸಿದ್ದಾರೆ. ಜಗಲಿಯ ತುಂಬೆಲ್ಲ ವಿವಿಧ ಆದಿವಾಸಿ ಸಮೂಹಗಳ ಆಕರ್ಷಕ ಭಾವಚಿತ್ರಗಳನ್ನು ತೂಗಹಾಕಿದ್ದಾರೆ. ಅವನ್ನು ನೋಡಿದ್ದಷ್ಟೂ ಕಡಿಮೆಯೆನಿಸಿತು. ಈ ಛಾಯಾಚಿತ್ರಗಳನ್ನು ತೆಗೆದಾತ. ಉತ್ತಮ ಕಲಾಕಾರನಿರಬೇಕು. ಅವಕಾಶ ಸಿಕ್ಕರೆ ಇಂಥ ಛಾಯಾಚಿತ್ರಗಳನ್ನು ತೆಗೆಯಲು ಯತ್ನಿಸಬೇಕು .... ಎಂದು ಯೋಚಿಸುವಷ್ಟರಲ್ಲಿ ಹಳ್ಳಿಗರ ಗುಂಪೊಂದು ಕಟ್ಟಡದೊಳಗೆ ಸೇರುವುದು ಕಂಡಿದ್ದರಿಂದ ಅವರಲ್ಲಿ ಒಬ್ಬನಾಗಲು ವಿಳಂಬ ಮಾಡಲಿಲ್ಲ.

ಒಂದೆಡೆಗೆ ಆದಿವಾಸಿಗಳ ವಸ್ತುಸಂಗ್ರಹಾಲಯವಿತ್ತು. ಅದನ್ನು ಕಂಡಾಗ ಹೊಸ ಜಗತ್ತು ಕಂಡ ಕೋಲಂಬಸನ ಅನುಭವವಾಯ್ತು. ಅವರ ಬಾಚಣಿಗೆಗಳು. ತಂಬಾಕು ಡಬ್ಬಿ, ಕವಡೆಸರ. ಮೂಗುತಿಗಳು. ಬಳೆಗಳು. ಮಣಿಸರ. ಕಾಲುಂಗರಗಳು. ಗೆಜ್ಜೆಗಳು. ಕಾಲುಸರಗಳು. ಬಿಲ್ಲು-ಬಾಣ ಒಂದೇ ಎರಡೇ! ಅವನ್ನು ನೋಡುತ್ತ ಮೈ ಮರೆತಾಗ 'ಬಾಬೂಜಿ. ಇದಿಷ್ಟೇ ಅಲ್ಲ. ಇನ್ನೂ ಅನೇಕ ಕೋಣೆಗಳು ನೋಡುವಂಥವು ಇವೆ' ಆಳೊಬ್ಬನು ಎಚ್ಚರಿಸಿದ್ದರಿಂದ. ಬೆಚ್ಚಿಬಿದ್ದು ಮುಂದುವರಿಯಬೇಕಾಯಿತು. ಅಲ್ಲಿ ಮಾರಿಯ. ಮುರಿಯ. ಗೊಂಡ. ಕೊರ್ಕು ಮೊದಲಾದ ಆದಿವಾಸಿಗಳ ನಿತ್ಯ ಜೀವನದ ದೃಶ್ಯಗಳನ್ನು ಮೂರ್ತಿಗಳೊಂದಿಗೆ ಜೋಡಿಸಿದ್ದಾರೆ. ಕೋಣೆಯ ಬಾಗಿಲೊಂದನ್ನು ದಾಟಿ ಮುಂದುವರಿಯುತ್ತಿದ್ದಂತೆ ನಡುವೆಯೇ ಯಾರೋ ಟೇಬಲ್ಲಿನ ಮೇಲೆ ತಲೆಯಿಟ್ಟು ನಿದ್ದೆ ಹೋದಂತೆ ಭಾಸವಾಯಿತು! ಇದು ಚಿತ್ರವಲ್ಲವೆಂದು ಖಚಿತ ಪಡಿಸಿಕೊಂಡು ಸರಿಯಾಗಿ ನೋಡಿದಾಗ. ಅದೇ ಹಿಂದಿನ ದಿನ ಪರಿಚಯವಾದ ರುದ್ರಕುಮಾರರು! ಅಂತರವಿಷ್ಟೆ. ಈಗ ಶುಭ್ರವಾದ ಮಲ್ಲಿನ ಕುರ್ತಾ. ಫಿನ್ನೆ ಧೋತರ ಉಟ್ಟಿದ್ದರು. ಅವರ ವಿಶ್ರಾಂತಿಗೆ ಭಂಗ ತರಬಾರದೆಂದು ಅಲ್ಲಿಯೇ ಸುತ್ತಾಡುತ್ತ ನಿಂತಿದ್ದಾಯಿತು. ಅಲ್ಲಿದ್ದ ಆಳಿಗೆ ಸಂಶಯ ಬರಬಾರದೆಂದು ಕಲಾಕಾರರನ್ನು ಕಾಣಬೇಕಿತ್ತು. ಎಂದಾಗ. ಅದಕ್ಕೇನಂತೆ? ಎಬ್ಬಿಸಿದರಾಯಿತು. ಇಲ್ಲಿಯವರಿಗೆ ಇಡೀ ದಿನ ವಿಶ್ರಾಂತಿಗೆ ಅವಕಾಶ ಇದ್ದೇ ಇರುತ್ತದೆ. ಎಂದು ಅರ್ಥಗರ್ಭಿತವಾಗಿ ನಕ್ಕುಬಿಟ್ಟ. ಅವನ ಮಾತಿನ ಸದ್ದಿಗೆ ಎಚ್ಚೆತ್ತವರು ತಲೆ ಎತ್ತಿ ನೋಡಿ ಬನ್ನಿ. ಬನ್ನಿ ಎಂದು ಸ್ವಾಗತಿಸಿ. ಏನೋ ವೈಯಕ್ತಿಕ ಸಮಸ್ಯೆಯ ಕುರಿತು ಯೋಚಿಸುತ್ತಿದ್ದೆ ಎಂದು ಕ್ಷಮಾಪಣೆಯ ಧ್ವನಿಯಲ್ಲಿ ನುಡಿದರು. ಈ ಸಂಸ್ಥೆಯನ್ನೇ ಹುಡುಕಿಕೊಂಡು ಛಿಂದವಾಡಕ್ಕೆ ಬಂದರೂ ಇಲ್ಲಿಯವರಿಗೆ ಯಾರಿಗೂ ಇದರ ಇರುವಿನ ಪರಿಚಯವೇ ಇದ್ದಂತಿಲ್ಲ ಎಂದಾಗ. "ಇಲ್ಲಿಯವರ ಬಗ್ಗೆ ಏನೂ ಹೇಳಬೇಡಿ ಶುದ್ಧಕತ್ತೆಗಳು. ಹಣಗಳಿಕೆಯ ಹೊರತು ಇನ್ನೇನೂ ಅರಿಯರು." ಎನ್ನುತ್ತ ಎದ್ದು ಕೊಠಡಿಯಲ್ಲಿದ್ದ ತಮ್ಮ ಇತರ ಕೃತಿಗಳ ಪರಿಚಯ ಮಾಡಿಸಿದರು. ಅಷ್ಟರಲ್ಲಿ ಸಹೋದ್ಯೋಗಿಗಳೊಬ್ಬರು ಬಂದದ್ದರಿಂದ ಅವರು ಕುಸುಮಾಕರರೆಂದೂ. ವಸ್ತು ಸಂಗ್ರಹಾಲಯದ ಮುಖ್ಯಸ್ಥರೆಂದೂ ಪರಿಚಯ ಮಾಡಿಕೊಟ್ಟರು. ಅವರು ಆದರದಿಂದ ತಮ್ಮ ಕೊಠಡಿಗೆ ಕರೆದೊಯ್ದರು.

ಅಪರೂಪವಾಗಿ ಮಾತನಾಡಿಸಲು ಅಪರಿಚಿತರೊಬ್ಬರು ಸಿಕ್ಕದ್ದರಿಂದಲೋ ಇಲ್ಲವೇ ಆತ್ಮೀಯರೆಂದು ಅನಿಸಿದ್ದರಿಂದಲೋ ಬಾಯ್ತುಂಬ ಇದ್ದ ವೀಳ್ಯವನ್ನು ಉಗುಳಿ ಬಂದು ಕುಸುಮಾಕರರು ಪ್ರಾರಂಭಿಸಿದರು. ನಮ್ಮ ಮುತ್ತಾತನ ಕಾಲದಿಂದ ನಾವು ಇಲ್ಲಿ ಸ್ಥಾಯಿಯಾಗಿದ್ದರೂ 'ನಮ್ಮ ಪೂರ್ವಜರು ಶಿರೋಡೆಯವರು. ನಿಮ್ಮಂತೆಯೇ ಗೋವಾದವರು. ನಮ್ಮ ಕುಲದೇವತೆ ಅಲ್ಲಿಯದೇ! ನೀವು ಸಹಾಯ ಕೋರಿ ಬರೆದ ಪತ್ರ ಬಂದರೂ ನಾವು ಏನೂ ಮಾಡುವಂತಿರಲಿಲ್ಲ. ಹಿಂದೊಮ್ಮೆ ಕೇಂದ್ರ ಸಾಹಿತ್ಯ ಅಕಾಡಮಿಯವರೊಬ್ಬರು ಇಲ್ಲಿ ಬಂದು ವಿವರವಾಗಿ ಅಭ್ಯಾಸಮಾಡಿ

ಹಿಂದಿರುಗಿದ ನಂತರ, ಖಾಸಗಿಯಾಗಿ ಹೇಳಿದ್ದು, ಹೇಳದೇ ಇದ್ದದ್ದು, ಕೈಯಿಂದ ಸೇರಿಸಿದ್ದು, ಲೇಖ ಮಾಡಿ 'ಧರ್ಮಯುಗ'ದಲ್ಲಿ ರೋಚಕವಾದ, ಆದರೆ ಸತ್ಯದಿಂದ ದೂರವಿದ್ದ ಲೇಖನವನ್ನು ಸಂಸ್ಥೆಯ ವಿರುದ್ಧವಾಗಿ ಬರೆದರು. ಇದರಿಂದ ರೊಚ್ಚಿಗೆದ್ದ ಮೇಲಧಿಕಾರಿಗಳು ನಮ್ಮನ್ನು ತರಾಟೆಗೆ ತೆಗೆದುಕೊಂಡರಷ್ಟೇ ಅಲ್ಲ, ಇನ್ನು ಮುಂದೆ ಮೇಲಿನವರ ಅಪ್ಪಣೆ ಇಲ್ಲದೇ ಹೊರಗಿನವರ ಜೊತೆಗೆ ಯಾವದೇ ಪ್ರಕಾರದ ಸಂಭಾಷಣೆ-ಸಂಪರ್ಕ ಇಟ್ಟುಕೊಳ್ಳಕೂಡದೆಂದು ಸುತ್ತೋಲೆ ಹೊರಡಿಸಿದ್ದಾರೆ. ನಮ್ಮಿಂದ ಯಾವ ಉತ್ತರ ಹೋಗದಿದ್ದರೂ ನೀವು ಹೊರಟು ಬಂದಿರಲ್ಲ! ಒಳ್ಳೆಯದಾಯಿತು. ನಿಮ್ಮ ಅಭ್ಯಾಸಕ್ಕೆ ಎಲ್ಲ ತರದ ಸಹಾಯ-ಸಹಕಾರಗಳನ್ನು ನಾವು ನೀಡುತ್ತೇವೆ. ಸದ್ಯ ಪ್ರಿನ್ಸಿಪಾಲರು ರಜೆಯ ಮೇಲಿದ್ದಾರೆ' ಎಂದು ಹಾಜರಾಗುವರೆಂದು ತಿಳಿಯದು. ಆದರೆ ನಾಳೆಯಿಂದಲೇ ನೀವು ಕೆಲಸ ಪ್ರಾರಂಭಿಸಲು ಏನೂ ಅಭ್ಯಂತರವಿಲ್ಲ' ಎಂದರು.

'ಚಟುವಟಿಕೆಯಿಂದ ತುಂಬಿರಬೇಕಾದ ಈ ಕೇಂದ್ರದಲ್ಲಿ ಸ್ಮಶಾನ ಶಾಂತಿ ಏಕೆ ಆವರಿಸಿದೆ, ಎಂದು ಕೇಳಬಹುದೇ?' ಎಂದು ಹಿಂಜರಿಯುತ್ತ ವಿಚಾರಿಸಿದಾಗ, ಒಂದು ನಿಮಿಷ ಸುಮ್ಮನಿದ್ದು ಕುಸುಮಾಕರರು ಪ್ರಾರಂಭಿಸಿದರು. 'ಛಿಂದವಾಡಾ ಮತ್ತು ಪರಿಸರದಲ್ಲಿ ಆದಿವಾಸಿಗಳ ಸಂಖ್ಯೆ ಹೇರಳವಾಗಿದೆ. ಅವರ ಜೀವನ, ಆರ್ಥಿಕ ಸ್ಥಿತಿ-ಗತಿ, ಪ್ರಗತಿಯ ರೀತಿ, ಶಿಕ್ಷಣ ಮೊದಲಾದ ಅಂಶಗಳನ್ನು ಅಭ್ಯಸಿಸುವ ಸಲುವಾಗಿ ಏಪ್ರಿಲ್ ೧೯೫೪ ರಲ್ಲಿ ಈ ಕೇಂದ್ರವನ್ನು ಪ್ರಾರಂಭಿಸಿದರು. ನಂತರ ಕಾರ್ಯ ಪರಿಮಿತಿಯಿಂದ ಆದಿವಾಸಿಗಳ ಚಟುವಟಿಕೆಗಳ ಕೇಂದ್ರಬಿಂದುವಾಗಿ ಬೆಳೆಯಿತು. ಆದಿವಾಸಿಗಳ ಕಲ್ಯಾಣ ಕಾರ್ಯದಲ್ಲಿ ತೊಡಗಬೇಕಾದ ಸಮಾಜಸೇವಕರು, ಕುಟುಂಬಯೋಜನಾ ಕಾರ್ಯಕರ್ತರು, ಬ್ಲಾಕ್ ಡೆವಲಪ್‌ಮೆಂಟ್ ಕರ್ಮಚಾರಿಗಳು ಆಡಳಿತ ಸಿಬ್ಬಂದಿಯವರು, ಪೋಲಿಸ್ ಖಾತೆಯವರಿಗೆಲ್ಲ ವಿವಿಧ ಅವಧಿಯವರೆಗೆ ಇಲ್ಲಿ ತರಬೇತಿ ಕೊಡಲಾರಂಭಿಸಿದರು. ಅವರಿಗೆ ಪ್ರತ್ಯಕ್ಷ ಅನುಭವ ಬರುವ ಸಲುವಾಗಿ, ತಾಮಿಯಾ ಮತ್ತು ಬಕೌನಿಗಳಲ್ಲಿ ಆದಿವಾಸಿ ಪ್ರಗತಿಕೇಂದ್ರಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿಗಳು, ಆದಿವಾಸಿಗಳ ಯಾವುದಾದರೊಂದು ಸಮಸ್ಯೆಯ ಮೇಲೆ ಆಳವಾಗಿ ಅಭ್ಯಾಸ ಮಾಡಿ ಚರ್ಚೆಯಲ್ಲಿ ಭಾಗವಹಿಸಬೇಕಾಗಿತ್ತು. ಅಲ್ಲದೇ ಲಿಖಿತ ವರದಿಯನ್ನು ಒಪ್ಪಿಸಬೇಕಾಗಿತ್ತು. ಇದಕ್ಕಾಗಿ ನಾಲ್ಕೂವರೆ ಸಾವಿರ ಪುಸ್ತಕಗಳುಳ್ಳ ವಾಚನಾಲಯವನ್ನು ಸಂಸ್ಥೆ ಹೊಂದಿದೆ. ಸಮಾಜ ವಿಜ್ಞಾನ, ಮಾನವ ವಿಕಾಸ ಶಾಸ್ತ್ರ, ಮನೋ ವಿಜ್ಞಾನ, ಭಾಷಾಶಾಸ್ತ್ರ, ಅರ್ಥಶಾಸ್ತ್ರಗಳಿಗೆ ಸಂಬಂಧಿಸಿದ ಪುಸ್ತಕಗಳಿವೆ. ತ್ರೈಮಾಸಿಕ ಪತ್ರಿಕೆಯೊಂದು ಹೊರಡುತ್ತಿದೆ. ಹೆಚ್ಚಿನ ಶ್ರಮವಹಿಸಿ, ಆದಿವಾಸಿಗಳು ಪ್ರತಿದಿನ ಬಳಸುವ ಅಸಂಖ್ಯಾತ ಸಾಮಾನುಗಳನ್ನು ಸಂಗ್ರಹಿಸಿದ್ದೇವೆ. ಅಲ್ಲದೇ ಅವರ ದೈನಂದಿನ ಜೀವನ ರೂಪಿಸುವ ಮಾಡೆಲ್‌ಗಳನ್ನು ತಯಾರಿಸುವದಕ್ಕಾಗಿ ಕಲಾಕಮ್ಮಟವೊಂದನ್ನು ತೆಗೆದಿದ್ದೇವೆ......... ' ಎಂದು ಇನ್ನೇನೋ ಹೇಳಲಿದ್ದರು. ಆದರೆ ನಡುವೆಯೇ 'ಇದು ಸಂಸ್ಥೆಯ ವಾರ್ಷಿಕ ವರದಿಯಲ್ಲಿ ಸೇರಿಸಬೇಕಾದ ಮಾಹಿತಿಯಂತಿದೆ! ಆದರೆ ನಿಜಸ್ಥಿತಿಯಿಂದ ದೂರವಾಗಿದೆ. ಎನಿಸುವದಿಲ್ಲವೇ?' ಎಂದು ವಿಚಾರಿಸಿದಾಗ ಅರ್ಥಪೂರ್ಣವಾಗಿ ನಗುತ್ತ ಕೋಣೆಗೆ ಕರೆದೊಯ್ದು, ಪ್ಲಾಸ್ಟಿಕ್ ಪೊಟ್ಟಣದಲ್ಲಿದ್ದ ಬೀಡಾ ತೆಗೆದು ಬಾಯಿಗೆ ಹಾಕಿಕೊಂಡು ಚರ್ವಣ ಪ್ರಾರಂಭಿಸಿದರು. ಕೊಂಚ ಸಮಯದ ನಂತರ, ವೀಳ್ಯದಲ್ಲಿಯ ಜರ್ದಾದಿಂದ ಉತ್ತೇಜಿತರಾದಾಗ ಮಾತು ಹೊರಟಿತು.

"ಮೇಲಧಿಕಾರಿಗಳಿಗೆ ಈ ಮೂಲೆಯಲ್ಲಿದ್ದು ರಾಜಕೀಯದಲ್ಲಿ ಕೈಯಾಡಿಸಲಾಗದೇ, ರಾಜಕಾರಣಿಗಳಿಂದ ಲಾಭ ಪಡೆಯಲಿಕ್ಕಾಗದೇ ಚಡಪಡಿಕೆ ಪ್ರಾರಂಭವಾಯಿತು. ರಾಜ್ಯದ ರಾಜಧಾನಿ ಭೋಪಾಲದಲ್ಲಿ ದೇಶ-ವಿದೇಶಗಳಿಂದ ವಿದ್ಯಾವಂತರು, ಸಂಶೋಧಕರು ಬರುತ್ತಿರುತ್ತಾರೆ. ಆದಿವಾಸಿಗಳಿಗಾಗಿ ಹಿಂದುಳಿದವರಿಗಾಗಿ ನಾವು ಏನು ಮಾಡುತ್ತಿದ್ದೇವೆ ಎಂಬ ಕಲ್ಪನೆಯನ್ನು ಅವರಿಗೆ

ಸ್ಪಷ್ಟವಾಗಿ ನೀಡಬೇಕಾದರೆ ಭೋಪಾಲದಲ್ಲಿಯೂ ಆದಿವಾಸಿ ಸಂಶೋಧನಾ ವಿಭಾಗವೊಂದು ಪೂರ್ವಭಾವಿಯಾಗಿ ಇರಬೇಕು. ಎಂಬ ನೆಪದಿಂದ ಚಿಕ್ಕ ಕೇಂದ್ರ ಸುರುಮಾಡಿದುದೇ ಇಲ್ಲಿಯ ಉತ್ತಮೋತ್ತಮ ವಸ್ತುಗಳನ್ನೆಲ್ಲ ಅಲ್ಲಿಗೆ ಸಾಗ ಹಾಕಿದರು. ಅಲ್ಲಿಯವರು ಕಾಯಂ ಅಧಿಕಾರಾರೂಢರ ಕೃಪಾಛತ್ರದಲ್ಲಿ ಇದ್ದುದರಿಂದ ಎಲ್ಲ ಸವಲತ್ತುಗಳ ಕೊಳ್ಳೆ ಹೊಡೆಯಲಾರಂಭಿಸಿದರು. ಅಂತೆಯೇ ಇಲ್ಲಿಯವರೂ ಭೋಪಾಲಕ್ಕೆ ಹೋಗಬೇಕೆಂದು ಕನಸು ಕಾಣಲಾರಂಭಿಸಿದರು. ಕೆಲವರ್ಷಗಳು ಕಳೆದ ನಂತರ ಎರಡೆರಡು ಕೇಂದ್ರಗಳನ್ನು ನಡೆಸುವದು ಭಾರಿ ದುಬಾರಿ. ಎಂದು ಒಮ್ಮಿಂದೊಮ್ಮೆ ಸರಕಾರದ ಗಮನಕ್ಕೆ ಬಂದು ಈಗ ಎಲ್ಲವನ್ನೂ ಭೋಪಾಲಕ್ಕೆ ಸಾಗಿಸುವದು ಎಂಬ ತೀರ್ಮಾನ ಕೈಕೊಂಡಿದೆ. ರಾಜಧಾನಿಯ ಸುತ್ತ ಒಂದೂ ಆದಿವಾಸಿಗುಂಪಿನ ವಸತಿ ಇಲ್ಲ! ಆದರೂ ಅವರ ಕಲ್ಯಾಣ ಕೇಂದ್ರವನ್ನು ಅಲ್ಲಿ ನಡೆಸುವದು ಹಾಸ್ಯಾಸ್ಪದವಲ್ಲವೇ? ರಾಜಕಾರಣಿಗಳು ಬೇಕಾದ್ದನ್ನು ಮಾಡಿದರೂ ಅವರನ್ನು ಕೇಳುವವರು ಯಾರು? ಕೂಡಲೇ ಎಲ್ಲವನ್ನೂ ಅಲ್ಲಿ ಸ್ಥಳಾಂತರಿಸಿದರೆ ಎಷ್ಟೋ ನೆಮ್ಮದಿ ಇರುತ್ತಿತ್ತು. ಕಳೆದ ಐದು ವರ್ಷಗಳಿಂದ ಅಂಥ ದಿನ ಬಂದೀತು ಎಂಬ ವಿಚಾರದಲ್ಲಿಯೇ ದಿನಕಳೆಯುತ್ತಿದ್ದೇವೆ. ಸರಕಾರಿ ಸಂಬಳ ಪಡೆದು, ಊಟ ಮಾಡಿ ಆಫೀಸಿಗೆ ಬಂದು ನಿದ್ರೆ ಹೊಡೆಯುವದರ ಹೊರತಾಗಿ ಇಲ್ಲಿ ಬೇರೇನೂ ನಡೆಯುತ್ತಿಲ್ಲ. ಜೀವನವನ್ನು ಹಾಳುಗೆಡವಿಕೊಳ್ಳಬೇಕು. ಎನ್ನುವವರು ಮಾತ್ರ ಇಂಥ ಸಂಸ್ಥೆ ಸೇರಬೇಕು!'' ಅನ್ನುತ್ತಿದ್ದಾಗ ಅವರ ಮುಖ ಕೆಂಪೇರಿತ್ತು. ತುಟಿಗಳು ಒಣಗಿದ್ದವು. ಧ್ವನಿಯಲ್ಲಿ ಅಸಮಾಧಾನ ಹತಾಶಾಭಾವಗಳು ತೇಲುತ್ತಿದ್ದವು.

ಕೋಣೆಯ ಎದುರಿನಿಂದ ಹಾದು ಹೋಗುತ್ತಿದ್ದ ನಡುವಯಸ್ಕನೊಬ್ಬನನ್ನು 'ನಾರದ್!' ಎಂದು ಕೂಗಿದರು. ''ಇವರು ನಮ್ಮ ಕಲಾಕಾರರು. ವಸ್ತು ಸಂಗ್ರಹಾಲಯದಲ್ಲಿಯ ಮಾಡೆಲ್ ಗೊಂಬೆಗಳನ್ನು ಇವರೇ ತಯಾರಿಸಿದ್ದು ಆದಿವಾಸಿಗಳ ಹಳ್ಳಿ ಹಳ್ಳಿಗಳಲ್ಲಿ ಓಡಾಡಿ ಅವರನ್ನು ತೀರ ಹತ್ತಿರದಿಂದ ಅರಿತವರು. ನಿಮ್ಮ ಅಧ್ಯಯನಕ್ಕೆ ಇವರ ಸಹಾಯವನ್ನು ಧಾರಾಳವಾಗಿ ಪಡೆಯಬಹುದು'' ಕುಸುಮಾಕರರೆಂದರು. ನಾರದರು 'ತಾವು ಅಷ್ಟು ದೂರದಿಂದ ನಮ್ಮ ಸಾಧನೆ ನೋಡಲು, ಅಭ್ಯಸಿಸಲು ಇಲ್ಲಿಗೆ ಬಂದಿದ್ದೀರಿ. ಆದರೆ ನಮ್ಮವರಿಗೆ ಇದರ ಬೆಲೆ ಏನೂ ತಿಳಿಯದು. ಇಷ್ಟೆಲ್ಲ ಶ್ರಮವಹಿಸಿ. ಅಸಂಖ್ಯಾತ ಮೂರ್ತಿಗಳನ್ನು ತಯಾರಿಸಿಕೊಟ್ಟರೂ. ಯಾರಿಂದಲೂ ಒಂದು ಮೆಚ್ಚಿಕೆಯ ಮಾತಿಲ್ಲ ಕೆಲಸ ಮಾಡುವವರಿಗೂ. ಮಾಡದವರಿಗೂ ಅಂತರವೇ ಇಲ್ಲ. ಅದೇ ಅಮೇರಿಕನ್ ವಿದ್ವಾಂಸರು ಒಬ್ಬರು ಬಂದವರು. ಇವನ್ನೆಲ್ಲ ಎಷ್ಟೊಂದು ಪ್ರಶಂಸಿಸಿದರು ಎನ್ನುತ್ತೀರಿ! ಆಗಾಗ ನಾನು ವೈಯಕ್ತಿಕ ಕಲಾಪ್ರದರ್ಶನವನ್ನು ಏರ್ಪಡಿಸಿದಾಗಲೂ ತುಂಬ ಹೊಗಳಿಕೆ ಬರುತ್ತದೆ. ನಾನು ಕಲಾಕ್ಲಾಸನ್ನೂ ನಡೆಸುತ್ತೇನೆ. ನನ್ನ ಮನೆಯೆಂದರೆ ಒಂದು ವಸ್ತು ಸಂಗ್ರಹಾಲಯದಂತಿದೆ. ಬಿಡುವಿದ್ದಾಗ ಬನ್ನಿ. ಪೋಲಿಸ ಸುಪರಿಂಟೆಂಡೆಂಟರ ಬಂಗ್ಲೆ ಎಂದರೆ ಯಾರೂ ತೋರಿಸುತ್ತಾರೆ ಎಂದಾಗ ಆ ಉಚ್ಚ ಪೋಲಿಸ ಅಧಿಕಾರಿ ಇವರಿಗೆ ಹೇಗೆ ಆಶ್ರಯಕೊಟ್ಟ? ಎಂದು ಕೇಳಬೇಕೆಂದಿದ್ದಾಗ ಆ ಬಂಗಲೆಯ ಬಲಬದಿಯ ಕುಟೀರವೇ ತನ್ನದು. ಎಂದು ನಾರದರು ವಿವರಿಸಿದರು.

ನಂತರ ನಾರದರು ಬ್ಯಾಂಕಿನಲ್ಲಿ ಕೆಲಸವಿದೆ. ಎಂದು ಹೊರಟುಹೋದ ನಂತರ ಕುಸುಮಾಕರರು.'ರುದ್ರಕುಮಾರ ಮತ್ತು ಇವರಲ್ಲಿ ತುರುಸಿನ ಸ್ಪರ್ಧೆ. ಅವರು ಕಲಾಶಾಲೆಯಲ್ಲಿ ತರಬೇತಿ ಪಡೆದವರು. ಲೆಕ್ಕಾಚಾರದಂತೆ ಚಿತ್ರಗಳನ್ನು ಬಿಡಿಸುವ ಕಲಾಕಾರರಾದರೆ. ನಾರದರು ಕುಂಬಾರ ವಂಶಜರು ಹುಟ್ಟು ಕಲಾವಿದರು. ಮೂರ್ತಿ ಮಾಡುವ ಕಲೆ. ದೈವದತ್ತವಾಗಿ ಪಡೆದವರು. ರುದ್ರಕುಮಾರರ ಸಹಾಯಕನೆಂದು ಕೆಲಸ ಪ್ರಾರಂಭಿಸಿದರೂ ಹಿಂದುಳಿದ ಜನಾಂಗದ ಲಾಭವೂ ಸಿಕ್ಕು

ಬಡ್ತಿ ಕೊಟ್ಟು ಈಗ ಕಲಾಕಾರನಾಗಿ ನೇಮಿಸಿದ್ದಾರೆ. ರುದ್ರಕುಮಾರರನ್ನು ಸಂಶೋಧನಾ ಅಧಿಕಾರಿಯನ್ನಾಗಿಸಿದ್ದಾರೆ. ಅವರು ಮೇಲಿನ ಹುದ್ದೆ ಅಧಿಕಾರ, ಸಂಬಳಗಳನ್ನೆಲ್ಲ ಬಳಸಿಕೊಂಡರೂ ಕಲಾಕಾರನ ಪ್ರಚಾರ, ಕೀರ್ತಿಗಳನ್ನು ಬಿಟ್ಟುಕೊಡಲು ಸಿದ್ಧರಿಲ್ಲ! ಹೀಗಾಗಿ ಇಬ್ಬರಲ್ಲೂ ಗುಪ್ತಕಾಳಗ ನಡೆದೇ ಇದೆ. ಯಾವುದೇ ಸಂಚಿಕೆಗೆ ಚಿತ್ರ ಬಿಡಿಸಿದ್ದಕ್ಕೆ ರುದ್ರಕುಮಾರರು ತನ್ನ ಹೆಸರು ಸೇರಿಸಿದರೆ, ತಾನು ಕಲಾಕಾರನೆಂದು ನೇಮಕ ಹೊಂದಿದ್ದರಿಂದ, ಆ ಕೆಲಸ ತನಗೆ ಕೊಟ್ಟು ತನ್ನ ಹೆಸರು ಹಾಕಿಸಬೇಕಿತ್ತು ಎಂದು ಈತನ ವಾದ. ಚಿತ್ರಕಾರನು ಮೂರ್ತಿಕಾರನಲ್ಲ, ಮೂರ್ತಿಕಾರ, ಚಿತ್ರಕಾರನಾಗಲಾರ ಎಂಬ ಸತ್ಯವನ್ನು ಒಪ್ಪಿಕೊಳ್ಳಲು ಇಬ್ಬರೂ ಸಿದ್ಧರಿಲ್ಲ. ಒಬ್ಬನು ಪ್ರದರ್ಶನ ಏರ್ಪಡಿಸಿದರೆ ಇನ್ನೊಬ್ಬನೂ ಹಿಂದೆ ಬೀಳುವುದಿಲ್ಲ. ದಿಲ್ಲಿಯ ಪ್ರಜಾರಾಜ್ಯೋತ್ಸವ ಸಂದರ್ಭದ ಪ್ರದರ್ಶನದಲ್ಲಿ ಒಬ್ಬನು ಸರ್ವಯತ್ನಮಾಡಿ ಅವಕಾಶ ಗಿಟ್ಟಿಸಿದರೆ ಇನ್ನೊಬ್ಬನು ಅದನ್ನು ರದ್ದು ಗೊಳಿಸಲು ಸಕಲ ಪ್ರಯತ್ನ ನಡೆಸಿರುತ್ತಾನೆ, ಎಂದು ಅವರ ಕಾರ್ಯ ವೈಖರಿ, ಕುಶಲತೆಗಳನ್ನು ವಿವರಿಸಿದರು. ಅಷ್ಟರಲ್ಲಿ ಉಪನ್ಯಾಸಕರಾದ ಶ್ರೀ ಮಾರ್ವಾ ಬಂದರು. ಪರಿಚಯ ಮಾಡಿಕೊಟ್ಟಾಗ, ಏನೋ ನೆನಪಾದವರಂತೆ, ಫೈಲಿನಿಂದ ಒಂದು ಪತ್ರವನ್ನು ಹೊರಗೆಳೆದು ಕೈಗಿತ್ತರು. ಅದು ಸಂಸ್ಥೆಯ ಸವಲತ್ತುಗಳನ್ನು ಬಳಸಲು ನೀಡಿದ ಅನುಮತಿಯ ಪತ್ರ! ಒಂದು ತಿಂಗಳ ಹಿಂದಿನ ತಾರೀಕನ್ನು ಹೊಂದಿತ್ತು! ಅಂಚೆ ಕಾಣಿಸುವವರಿಗೂ ದಿಕ್ಕಿಲ್ಲದೇ ಇಲ್ಲಿ ಬಿದ್ದಿತ್ತು. "ನೀವಿಲ್ಲಿ ಬರಲಿಕ್ಕಿಲ್ಲವೆಂದು ಕೊಂಡಿದ್ದೆವು. ಬಂದದ್ದು ಒಳ್ಳೆಯದಾಯಿತು. ನಾಳೆಯಿಂದ ಕೆಲಸ ಪ್ರಾರಂಭಿಸಬಹುದು ಅಂದರು.

ಗ್ರಂಥ ಭಂಡಾರಿಗ ವಾಡೇಕರರು ಪುಸ್ತಕಗಳ ಧೂಳನ್ನು ಜಾಡಿಸುವ ಏರ್ಪಾಡು ಕೂಡ ಮಾಡದೇ ಯುಗಗಳೇ ಕಳೆದಿದ್ದವು. ಕೇಳಿದ ಒಂದೂ ಪುಸ್ತಕ ಸ್ಥಳದಲ್ಲಿರಲಿಲ್ಲ. ಕೆಲವನ್ನು ಒಯ್ದವರು ಹಿಂದಿರುಗಿಸಲಿಲ್ಲ. ಇನ್ನೂ ಕೆಲವನ್ನು ಭೋಪಾಲಕ್ಕೆ ವರ್ಗಾಯಿಸಲಾಗಿದೆ. ಹಲವು ನಾಪತ್ತೆಯಾಗಿವೆ ಎಂದೆಲ್ಲ ಹೇಳಿದರು. ಬೇಕಾದ ಪುಸ್ತಕವನ್ನು ಪಡೆಯುವದು ಅಸಾಧ್ಯ ಎಂದು ಮನಗಂಡು, ಎದುರಿಗೆ ಕಂಡವುಗಳಲ್ಲಿಯೇ ಮೂರು ನಾಲ್ಕನ್ನು ಆರಿಸಬೇಕಾಯಿತು. ಈ ಗ್ರಂಥಗಳು ನಿಮ್ಮ ವಶದಲ್ಲೇ ಇರಲಿ, ಬೇಕಾದಂತೆ ಓದಿ, ಸಂಜೆ ಐದು ಗಂಟೆಗೆ ಹಿಂದಿರುಗಿಸಿ, ಎಂದು ವಾಚನಾಲಯಾಧಿಕಾರಿಗಳು ಕಣ್ಮರೆಯಾಗಿ ಬಿಟ್ಟರು. ಓದಲು ಕೂಡ್ರಲೆಂದು, ಖುರ್ಚಿ ಟೇಬಲ್‌ಗಳನ್ನು ಸ್ವಚ್ಛಗೊಳಿಸಿ, ದೀಪ ಹಾಕಿದರೆ, ಒಂದೂ ಬಲ್ಬು ಉರಿಯುತ್ತಿರಲಿಲ್ಲ. ಒಂದು ಮೂಲೆಯ ಗೋಡೆಗೇ ನೇತು ಹಾಕಿದ್ದು ಮಾತ್ರ ಉರಿಯುತ್ತಿತ್ತು. ಪಂಕ ತಟಸ್ಥವಾಗಿತ್ತು. ಪಕ್ಕದ ರೂಮಿನಲ್ಲಿ ಫ್ಯಾನು ತಿರುಗುತ್ತಿತ್ತು. ಹೀಗಾಗಿ ಆ ಕೋಣೆಯಲ್ಲಿ ಕುಳಿತು ಬೆಳಕಿಗೆ ಕಿಟಕಿಯನ್ನು ಸಂಪೂರ್ಣವಾಗಿ ತೆರೆದು, ಓದಿ, ಟಿಪ್ಪಣಿ ಮಾಡಿಕೊಳ್ಳಲು ಪ್ರಾರಂಭಿಸಬೇಕು, ಎನ್ನುವಷ್ಟರಲ್ಲಿ ಭವ್ಯವಾಗಿ ಮೀಸೆ ಬೆಳೆಸಿದ ಚಪರಾಸಿ ಲಖ್ಖನ್ (ಲಕ್ಷ್ಮಣದ ತದ್ಭವ)ನು ದೊಡ್ಡ ಸಲಾಮು ಹಾಕಿ, "ದೊಡ್ಡ ಸಾಹೇಬರು ತಮ್ಮನ್ನು ಕಾಣಲು ಇಚ್ಛಿಸುತ್ತಾರೆ" ಎಂದು ಅರುಹಿ ಹೋದ.

***

೬. ಪವಾಡ



ವಿರಮಿಸಲು ಮಂಚ, ಸದಾ ತಂಗಾಳಿ ಪೂರೈಸುವ ಪಂಕ, ದಿನವಿಡೀ ಪರಿಶುದ್ಧ ನೀರಿನಿಂದ ತುಂಬಿದ ನಲ್ಲಿ, ಸ್ವತಂತ್ರ ಸ್ನಾನ ಗೃಹ- ಕಕ್ಕಸು, ಚಹಾ-ಕಾಫಿ ಮಾಡಿಕೊಳ್ಳಲು ಸ್ಟೋವ್, ಓದಲು ಇಂಗ್ಲಿಷ್ ಪತ್ರಿಕೆಗಳು ಕೇಳಲು ಹಕ್ಕಿಗಳ ಇಂಚರ, ಬೇಸರ ಕಳೆಯಲು ಹೂದೋಟ, ಇವೆಲ್ಲ ಹಣ ಕೊಟ್ಟರೂ ಸಿಗದ ಛಿಂದವಾಡಾದಲ್ಲಿ ಪುಕ್ಕಟೆಯಾಗಿ ಸಿಗಬಹುದೆಂದರೆ ಇದೊಂದು ಕನಸು ಎಂದು ಅನಿಸುತ್ತಿತ್ತು. ಇದು ಕನಸಲ್ಲ, ನನಸು ಎಂದು ನಂಬುವದೇ ಕಷ್ಟವಾಯಿತು. ಕೇವಲ ಇಪ್ಪತ್ನಾಲ್ಕು ತಾಸುಗಳ ಹಿಂದೆ, ತಿಗಣೆ-ಗುಂಗಾಡು, ಜನಜಂಗುಳಿಯ ನಡುವೆ ಅರೆರಾತ್ರಿ ನಿದ್ರೆಯಿಂದ ಕಳೆದರೂ, ಕಕ್ಕಸಿಗಾಗಿ ಸಾಲು ನಿಲ್ಲಲು ಐದು ಗಂಟೆಗೇ ಎದ್ದು, ಟೀ-ಕಾಫಿ ಇಲ್ಲದೇ, ಪಂಡಿತಜಿಗೆ ಸ್ನಾನಕ್ಕೆ ನೀರು ಕೇಳಿದಾಗ ಗೊಣಗುತ್ತ ಹೂಜೆಯಲ್ಲಿದ್ದ ತಣ್ಣೀರನ್ನು ಅರ್ಧ ಬಕೆಟಿನಷ್ಟು ತಂದು ಕೊಟ್ಟಿದ್ದ. ಆದರಿಂದ ಮುಖ, ಕೈಕಾಲುಗಳನ್ನು ತೊಳೆದುಕೊಂಡು, ಊಟ ಸೇರದ್ದರಿಂದ ಅರೆ ಹೊಟ್ಟೆಯಲ್ಲಿ ವಾಚನಾಲಯಕ್ಕೆ ಹೊರಟು ಬಂದಾಗ, ನಂತರದ ಬೆಳವಣಿಗೆ, ಒಂದು ಪವಾಡವೆನಿಸದೇ ಇರಲಿಲ್ಲ.

"ನೀವು ಬಂದು ಕೆಲಸ ಪ್ರಾರಂಭಿಸಿದ್ದು, ಕುಸುಮಾಕರರಿಂದ ತಿಳಿಯಿತು......" ಎಂದು ಪ್ರಿನ್ಸಿಪಾಲ ಶರ್ಮರು ಪೀಠಿಕೆ ಪ್ರಾರಂಭಿಸಿದರು. "ಸಹ ಕುಟುಂಬವಾಗಿ ದಕ್ಷಿಣ ಭಾರತದ ಪ್ರವಾಸಕ್ಕೆ ಹೋಗಿದ್ದೆ. ಹೈದರಾಬಾದ್, ತಿರುಪತಿ, ರಾಮೇಶ್ವರ, ಕನ್ಯಾಕುಮಾರಿ, ತ್ರಿವೇಂದ್ರಮ್, ಕೋಚೀನ, ಮೈಸೂರು, ಬೆಂಗಳೂರುಗಳಿಗೆಲ್ಲ ಹೋಗಿ ಬಂದೆವು. ಸಾಧ್ಯವಾದರೆ ನಿಮ್ಮನ್ನೂ ಕಾಣಬೇಕೆಂದು

ನಿಮ್ಮ ವಿಳಾಸವನ್ನು ಒಯ್ದಿದ್ದೆವು. ವೇಳೆಯ ಅಭಾವದಿಂದ ಹಾಗೆ ಮಾಡಲಾಗಲಿಲ್ಲ." ಎಂದರು. ಅವರ ಸಂಶೋಧನಾಲಯದ ಸೌಕರ್ಯ ಪಡೆಯಲು ಅರ್ಜಿ ಮತ್ತು ನಾಲ್ಕು ನೆನಪಿನ ಪತ್ರಗಳನ್ನು ಕಳಿಸಿದರೂ ಒಂದು ಅನುಮತಿ ಪತ್ರವನ್ನು ಅಂಚೆಯಿಂದ ಕಳಿಸಲಾರದವರು, ಬೆಂಗಳೂರಿಗೇ ಬಂದು ಮಾತನಾಡಿಸುವ ವಿಚಾರ ಹೊಂದಿದ್ದು ಕೇಳಿ ತಲೆದೂಗುವಂತೆ ಆಯಿತು. ಕೊಯ್ಲು ಮಾಡಿದ ಭತ್ತದ ಗದ್ದೆಯಂತಿದ್ದ ಅವರ ತಲೆಯನ್ನು ನೋಡುವದೇ ಮೋಜೆನಿಸಿತು. "ಊಟ-ತಿಂಡಿ-ವಸತಿ ಸರಿಯಾಗದೇ ಬಹಳ ಕಷ್ಟಪಟ್ಟರೆಂದು ತಿಳಿಯಿತು. ನೀವು ನಮ್ಮ ಸನ್ಮಾನ್ಯ ಅತಿಥಿಗಳು, ಅಭ್ಯಾಸಕ್ಕೆ ಬೇಕಾಗುವ ಸವಲತ್ತುಗಳ ಜೊತೆಗೆ ಯೋಗಕ್ಷೇಮವೂ ನಮಗೇ ಸೇರಿದ್ದು. ಆದ್ದರಿಂದ ಈ ಕೂಡಲೇ ನಿಮ್ಮ ಸಾಮಾನು ಸರಂಜಾಮುಗಳನ್ನು ಕೂಡಲೇ ತನ್ನಿ ನೀವಿಲ್ಲಿ ಇರುವ ವ್ಯವಸ್ಥೆಯನ್ನು ಕೂಡಲೇ ಮಾಡಿಸುತ್ತೇನೆ" 'ಅಂದಾಗ ಅಷ್ಟು ದೂರ ಹೋಗಿ ತರುವದರಲ್ಲಿ ಅರ್ಥವಿಲ್ಲ. ನಾಳೆ ಸಾಮಾನು ತಂದು ಬಿಡುತ್ತೇನೆ ' ಅಂದರೂ ಪಟ್ಟು ಹಿಡಿದು ಕಳಿಸಿಯೇಬಿಟ್ಟರು.

ಇದೀಗ ಕೋಣೆ ಖಾಲಿ ಮಾಡುತ್ತೇನೆ, ಎಂದಾಗ ಲಾಜಿನ ಮ್ಯಾನೇಜರಿಗೆ ನಿಜವೆನಿಸಲೇ ಇಲ್ಲ. ಅದೇ ಮುಂಜಾನೆ, ಇನ್ನೊಂದು ವಾರದ ಬಾಡಿಗೆಯನ್ನು ಮುಂಗಡ ಕೊಟ್ಟು ಲಾಜಿನ ವಿಳಾಸಕ್ಕೆ ಬಂದ ಪತ್ರಗಳ ವಹಿವಾಟಿಗೆ ಅಂಚೆಯವರಿಗೆ ಭೇಟಿ ಕೊಡಬೇಕೆಂದಿದ್ದೆ. ತನ್ನ ಅಲಕ್ಷ್ಯದಿಂದ ಅತಿಥಿಯೊಬ್ಬನನ್ನು ಕಳೆದುಕೊಂಡೆನೆಂದು ಊಹಿಸಿದ ಪಂಡಿತಜಿ, ನಿನ್ನೆ ಸಾಯಂಕಾಲ ನೀರು ಬರದ್ದರಿಂದ ತೊಂದರೆಯಾಯಿತು. ನಾಳೆಯಿಂದ ಎಲ್ಲರಿಗಿಂತ ಮೊದಲು ನಿಮಗೇ ಸ್ನಾನಕ್ಕೆ ಬಿಸಿ ನೀರು ಕೊಡುತ್ತೇನೆ ಎಂದು ಅಂಗಲಾಚಿದ. ಅವನ ಸೇವೆಗೆ ಕೃತಜ್ಞತೆ ಸಲ್ಲಿಸಿ, ಭಕ್ಷಿಸು ಕೊಟ್ಟು, ಸಾಮಾನುಗಳನ್ನು ರಿಕ್ಷಾಕ್ಕೆ ಸೇರಿಸಿ ಬೀಳ್ಕೊಂಡೆ. ಒಂದು ವರ್ಷದ ವಾಸಕ್ಕೆಂದು ತಂದ ಸಾಮಾನು ಇಷ್ಟು ಕಡಿಮೆಯೇ! ಎಂದು ಪ್ರ. ಶರ್ಮಾಜಿ ಸೋಜಿಗಪಟ್ಟರು. ಇದರಲ್ಲಿ ಛಾಯಾಗ್ರಹಣಕ್ಕೆ ಬೇಕಾಗುವ ಸಾಮಗ್ರಿಗಳೇ ಇದ್ದರೆ, ಬೇಕಾದಲ್ಲಿ ಓಡಾಡಿಕೊಂಡು ಇರಬಹುದು, ಎಂದೆ. ಶರ್ಮಾರು, ತಮ್ಮ ಪತ್ನಿ ದಕ್ಷಿಣ ಭಾರತದ ಪ್ರವಾಸದಲ್ಲಿ ಕೊಂಡುಕೊಂಡ ಸಾಮಾನುಗಳೆಲ್ಲ ನಿಮ್ಮ ಹತ್ತು ವರ್ಷದ ವಾಸಕ್ಕೆ ಸಾಕಾಗುತ್ತಿತ್ತೋ ಏನೋ! ಅವನ್ನು ಹೊತ್ತು, ಹಮಾಲನಿಗೆ ದುಡ್ಡು ಸುರಿದೇ ಸಾಕಾಯಿತು ಎಂದರು.

ಹಿಂದೊಮ್ಮೆ ತರಬೇತಿಗಾಗಿ ಬಂದ ಆಡಳಿತಾಧಿಕಾರಿಗಳ ವಾಸಕ್ಕಾಗಿ ಕಟ್ಟಿಸಿದ ವಸತಿಗೃಹದಲ್ಲಿ ಉತ್ತಮವಾದ ಕೊಠಡಿಯ ಬಾಗಿಲನ್ನೆ ತೆಗೆಯಿಸಿ ದೀಪ, ಪಂಕ, ನಲ್ಲಿಗಳು ಸರಿಯಾಗಿ ಕೆಲಸ ಮಾಡುತ್ತವೆಂದು ಖಚಿತಪಡಿಸಿಕೊಂಡು ಚಪರಾಸಿಯನ್ನು ಕರೆದು ಸ್ವಚ್ಛಗೊಳಿಸಲು ಆಜ್ಞೆಯಿತ್ತರು. ಪ್ರತಿ ದಿನ ಗುಡಿಸಲು, ಹಾಲು ತಂದುಕೊಡಲು, ರಾತ್ರಿ ಪಹರೆ ಇಡಲು ಆಳಿಗೆ ಜ್ಞಾಪಿಸಿದರು. ನನಗೆ ಅಲ್ಪ-ಸ್ವಲ್ಪ ಅಡಿಗೆ ಬರುತ್ತದೆಂದು ಅರಿತು ತುಂಬ ಸೀಮೆ ಎಣ್ಣೆ ಹಾಕಿಸಿ ಸ್ಟೋವ್ ತರಿಸಿದರು. ಒಳ್ಳೆಯ ಮಾವಿನ ಹಣ್ಣು ಕೊಡಿಸಿದರು. ಹಿಂದುಸ್ತಾನ್ ಟೈಮ್ಸ್ ದಿನ ಪತ್ರಿಕೆ ಇಡಿಸಿದರು. ದೂರದ ಈ ಊರಿನಲ್ಲಿ ಅಂತಃಕರಣ ತೋರುವವರು ಇದ್ದಾರಲ್ಲ! ಎಂದು ಹೃದಯ ಉಕ್ಕಿ ಬಂದಿತು. ಏನಾದರೂ ಅಡಚಣೆಗಳು ಬಂದಲ್ಲಿ ಹೇಳಿ ಕಳಿಸಿ ತಕ್ಷಣ ಪರಿಹರಿಸಲು ಯತ್ನಿಸುತ್ತೇನೆ, ಎಂಬ ಆಶ್ವಾಸನೆ ಸಿಕ್ಕಾಗಲಂತೂ ಹೇಗೆ ಕೃತಜ್ಞತೆ ಸಲ್ಲಿಸಬೇಕೆಂದು ತಿಳಿಯದಾಯಿತು. 'ಇತವಾರಿ' (ರವಿವಾರ ಸಂತೆ ಪೇಟೆ)ಯಿಂದ ಅಡಿಗೆಗೆ ಬೇಕಾದ ಸಣ್ಣಪುಟ್ಟ ಸಲಕರಣೆಗಳು, ಬ್ರೆಡ್, ಬೆಣ್ಣೆ, ಜಾಮ್, ಉಪ್ಪಿನಕಾಯಿ ಮುಂತಾದವನ್ನು ತಂದಿದ್ದರಿಂದ ಎಲ್ಲ ಸಮಸ್ಯೆಗಳೂ ಏಕಕಾಲಕ್ಕೆ ಪರಿಹಾರವಾದವು. ಜೊತೆಗೆ, ಅಕಾಡಮಿ ಕೊಡುವ ಧನ ಸಹಾಯ ಕಡಿಮೆ ಬೀಳಬಹುದು, ಎಂಬ ಅಳುಕೂ ಮಾಯವಾಯಿತು. ರಾತ್ರೆಯಲ್ಲಿ ಕಿಡಕಿಗಳನ್ನೆಲ್ಲ ಮುಚ್ಚಿಬಿಟ್ಟರೆ, ತನ್ನಷ್ಟಕ್ಕೆ ಕೊಠಡಿ ಕತ್ತಲೆ

ಗವಿಯಾಗಿ ಮಾರ್ಪಡುವುದರಿಂದ, 'ರೂಪಾಂಕನ 'ದ ಛಾಯಾಚಿತ್ರಕಾರನಿಗೆ ಸಲಾಂ ಹಾಕುವ ಪ್ರಮೇಯವೂ ತಪ್ಪಿ ನಾನೇ ಮಾಡಬಹುದು ಎಂಬ ಆಸೆ ಚಿಗುರಿತು.

ಶರ್ಮಾರನ್ನು ನಿಕಟವಾಗಿ ಅರಿತ ಸಹೋದ್ಯೋಗಿಗಳಿಗೆ ಅವರ ಈ ಔದಾರ್ಯದ ಅರ್ಥವಾಗದೇ ತುಬ್ಬಿಬಾದರು. ಉತ್ತಮ ಪಚನಕ್ರಿಯೆಗಾಗಿ ಅವರು ನಿಯಮಿತವಾದ ಮದ್ಯ ಸೇವನೆಯನ್ನು ರೂಢಿಸಿಕೊಂಡದ್ದರಿಂದ, ಸದಾಕಾಲವೂ ಇಂದು ಯಾರನ್ನು ಅದರ ಖರ್ಚಿಗೆ ಗುರಿಮಾಡಲಿ? ಎಂಬ ಲೆಕ್ಕಾಚಾರವನ್ನು ಹಾಕುವವರು ಇಂಥ ದಾನಶೂರರು ಹೇಗಾದರು? ಎಂದು ಶೋಧಕ್ಕೆ ಆರಂಭಿಸಿದರು. ಅವರಿಗೆ ವಿದೇಶಿ 'ಔಷಧಿ'ಯ ಮೋಹ ಜಾಸ್ತಿ. ದಯವಿಟ್ಟು ಅದನ್ನು ಕೊಡಿಸಲು ಹೋಗಬೇಡಿ! ಎಂದು ಎಚ್ಚರಿಕೆಯ ಮಾತು ಹೇಳಿದಾಗ, 'ಇದು ಒಡ್ಡರ ಹತ್ತಿರ ಕುಪ್ಪಸ ಕೇಳಿದಂತೆ ! ಏನೂ ಸಿಗಲಾರದು, ಎಂದೆ. ಮಾರನೇ ದಿನ ಈ ಆತಿಥ್ಯದ ಗುಟ್ಟು ರಟ್ಟಾಯಿತು. ಕಲ್ಕತ್ತಾದಿಂದ ಕೇಂದ್ರ ಮಾನವ ಶಾಸ್ತ್ರ ಸಂಶೋಧನಾ ಸಂಸ್ಥೆಯ ಡೈರೆಕ್ಟರ್, ಹಾಗೂ ಅವರೊಂದಿಗೆ ಭೋಪಾಲದ ಆದಿವಾಸಿ ಸಂಶೋಧನಾ ಸಂಸ್ಥೆಯ ಡೈರೆಕ್ಟರ್ ಬರಲಿದ್ದರು. ಎಂದಿನಂತೆ ತಮ್ಮ ಸಹೋದ್ಯೋಗಿಗಳಿಗೆ ಈ ವಿಚಾರವನ್ನು ಶರ್ಮರು ಹೇಳಿರಲಿಲ್ಲ. ಮೇಲಾಧಿಕಾರಿಗಳ ಜೊತೆ, ನಾಗಪುರ ಶಾಖೆಯ ಅಧಿಕಾರಿಗಳೂ ಬಂದಿದ್ದರು. ಅವರೆದುರಿಗೆಲ್ಲ ತಮ್ಮ ಸಂಶೋಧನಾಲಯದ ಖ್ಯಾತಿ ಬೆಂಗಳೂರುವರೆಗೂ ತಲುಪಿ, ವಿದೇಶಿ ಡಾಕ್ಟರೇಟ್ ಪಡೆದ ಸಂಶೋಧಕರು ಹುಡುಕಿಕೊಂಡು ಬಂದಿದ್ದಾರೆ. ಅವರೆದುರು ಯಾವತ್ತೂ ಸಂಶೋಧನಾ ಸವಲತ್ತುಗಳನ್ನು ಪೂರೈಸುತ್ತಿದ್ದೇನೆ, ಎಂದು 3-4 ಬಾರಿ ಪಟಾಕಿ ಹಾರಿಸಿದರಂತೆ! ಡೈರೆಕ್ಟರು ನಂತರ ವಾಚನಾಲಯಕ್ಕೂ ಬಂದು, ಸಂಶೋಧನೆಯ ಪುಸ್ತಕಗಳನ್ನು, ಅವುಗಳಲ್ಲಿಯ ಮಾಹಿತಿಯನ್ನು ಯಥೇಚ್ಛ ಬಳಸಲು ಅನುಮತಿಯನ್ನು ನೀಡಿದರು. ವಸ್ತು ಸಂಗ್ರಹಾಲಯದ ಛಾಯಾಗ್ರಹಣಕ್ಕೆ ತಮ್ಮ ಅನುಮತಿ ದಯಪಾಲಿಸಬೇಕಲ್ಲ ! ಎಂದು ರಾಗ ಎಳೆದಾಗ ನಿಮ್ಮಂಥವರಿಗೆ ಅನುಮತಿ ನೀಡದೇ ಇನ್ನಾರಿಗೆ ಕೊಡುವದು? ಭೋಪಾಲಕ್ಕೆ ಹಿಂದಿರುಗಿದಾಕ್ಷಣ ಕಳಿಸಿ ಕೊಟ್ಟುಬಿಡುತ್ತೇನೆ" ಎಂದು ಆಶ್ವಾಸನೆಯಿತ್ತರು. ನನ್ನ ಪರವಾಗಿ ಶರ್ಮರೇ ಅರ್ಜಿ ಸಲ್ಲಿಸಿ ಅದರ ಮೇಲೆ ಹಸ್ತಾಕ್ಷರ ಹಾಕಲು ಪೆನ್ನು ಕೈಗೆ ಕೊಟ್ಟಾಗ ತಮಾಷೆಯೆನಿಸಿತು.

ಅತಿಥಿಗಳಿಗೆ ಆದಿವಾಸಿಗಳ ವೈಶಿಷ್ಟ್ಯಮಯ ಜೀವನದ ಚಲಚ್ಚಿತ್ರ ತೋರಿಸಿದಾಗ, ಅದನ್ನು ವೀಕ್ಷಿಸುವ ಅಪರೂಪದ ಅವಕಾಶ ಸಂದಿತು. ಅದನ್ನು ಛಾಯಾಚಿತ್ರಗಾರ ವರ್ಮಾ ಅವರು ಚಿತ್ರಿಸಿದ್ದರಂತೆ. ಅವರಲ್ಲಿ ಕಲೆಯಿಲ್ಲದಿದ್ದರೂ ವಿಷಯ ಸಂಗ್ರಹಣೆ ಚೆನ್ನಾಗಿತ್ತು. ಆ ಚಿತ್ರಕಾರರನ್ನು ಕಾಣುವ ಆಸೆ ವ್ಯಕ್ತಪಡಿಸಿದಾಗ ಕ್ಯುರೇಟರ್ ಕುಸುಮಾಕರರು ' ಈ ಸಂಸ್ಥೆ ತಮಾಷೆಗೆ ಹೆಸರುವಾಸಿ ಯಾಗಿದೆ. ವರ್ಮಾರು ವೈಯಕ್ತಿಕ ಕಾರಣಗಳನ್ನು ಮುಂದೆ ಮಾಡಿ ಭೋಪಾಲಕ್ಕೆ ವರ್ಗ ಮಾಡಿಸಿಕೊಂಡರು. ಅಲ್ಲಿಯೇ ಮೇಲಧಿಕಾರಿಗಳು, ಮಂತ್ರಿಗಳಿಗೆ ಬೆಣ್ಣೆ ಸವರಿ, ಉಪನಿರ್ದೇಶಕನ ಹುದ್ದೆಯನ್ನೂ ಗಿಟ್ಟಿಸಿಕೊಂಡರು. ಈಗ ಕ್ಯಾಮರಾ ಮುಟ್ಟುವದೆಂದರೆ ತನಗೆ ಅವಮಾನ, ಎನ್ನುವಂತೆ ವರ್ತಿಸುತ್ತಾರೆ. ಸರಕಾರಿ ಜೀಪಿನಲ್ಲಿ ಸದಾಕಾಲ ಓಡಾಡುತ್ತಿರುವದೇ ಅವರು ಮಾಡುವ ಮುಖ್ಯ ಕೆಲಸ' ಎಂದರು. ಆಂಧ್ರದ ರಾಮಚಂದ್ರರಾವ್ ಎನ್ನುವವರೂ ಇಲ್ಲಿದ್ದರು. ಆವರ ಚಿತ್ರಗಳನ್ನು ನೋಡಿ! ಎಂದು ತೋರಿಸಿದರು. ಅವೆಲ್ಲ ಜೀವಂತಿಕೆಯಿಂದ ತುಂಬಿ ತುಳುಕುತ್ತಿದ್ದವು. 'ಇಂಥ ಉತ್ತಮ ಕಲಾಕಾರನೆಂದೂ ಸುದ್ದಿಯಾಗಿರಲಿಲ್ಲ. ಯಾತಕ್ಕಾಗಿ ನೊಂದುಕೊಂಡರೋ. ಅವರ ವೈಯಕ್ತಿಕ ಅಡಚಣೆಗಳು ಏನಿದ್ದವೋ! ಒಂದು ದಿನ ಓಡುವ ರೈಲಿನ ಕೆಳಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡರು........... ಇದಾದ ನಂತರ ಅವರ ಕೋಣೆಗೆ ಬೀಗ ಜಡಿದು ಮೊಹರು ಮಾಡಲಾಯಿತು. ಅಲ್ಲಿ ಏನಿದೆ ಎಂದು ನೋಡುವ ತೊಂದರೆ ಯಾರೂ ತೆಗೆದುಕೊಳ್ಳಲಿಲ್ಲ. ಕ್ಯಾಮರಾಕ್ಕೆ ಎಷ್ಟು ಬೂಷ್ಟು ಹಿಡಿದಿದೆಯೋ, ಎಷ್ಟೊಂದು ನೆಗೆಟಿವ್‌ಗಳು ಹಾಳಾದವೋ!

ಎನ್ನುತ್ತಿದ್ದಂತೆ ಬಿಸಿಯುಸಿರು ಇಟ್ಟರು. ಎಂಥ ಅಪೂರ್ವ ಛಾಯಾಚಿತ್ರಕಾರನನ್ನು, ಕಾಣಲಾಗದೇ ಹೋಯಿತಲ್ಲ ಎಂದು ಚಡಪಡಿಸುವಂತೆ ಆಯಿತು.

ಈಗ ಪ್ರಿನ್ಸಿಪಾಲರ ಪವಾಡಸದೃಶ. ದಾನ ಪ್ರವೃತ್ತಿಯ ನಿದರ್ಶನಗಳು ಘಟೋತ್ಕಚ ಸೃಷ್ಟಿಯಂತೆ ಒಂದೊಂದಾಗಿ ಕುಸಿಯಲಾರಂಭಿಸಿದವು. ಹೊಟೇಲಿನಲ್ಲಿ ಎಷ್ಟು ಬಾಡಿಗೆ ಕೊಡುತ್ತಿದ್ದಿರಿ? ಎಂದು ವಿಚಾರಿಸಿ ಉಳಿತಾಯದ ಲೆಕ್ಕ ಹಾಕಲಾರಂಭಿಸಿದರು. ಜೊತೆಗೆ ಊಟ-ತಿಂಡಿಗಳ ಖರ್ಚು ಬರುತ್ತಿರಬೇಕಲ್ಲವೇ! ಎಂದು ವಿಸ್ಮಯಪಟ್ಟರು. ಕ್ಯಾಮರಾ, ಫ್ಲ್ಯಾಶ್‌ಗಳಂಥ ಭಾರಿ ಬೆಲೆ ಬಾಳುವ ಸಾಮಾನುಗಳಿಗೆ ಹೊಟೇಲುಗಳಲ್ಲಿ ಸುರಕ್ಷಿತತೆ ಎಲ್ಲಿಂದ ಬರಬೇಕು? ಎಂದು ಸೂಚ್ಯವಾಗಿ ಹೇಳಿದರು. ನಮಗೆ ಫಂಡಿನ ಅಭಾವ ತುಂಬ. ತಾವು ಉಳಿಸಿದ ಹಣದಲ್ಲಿ ನಮ್ಮ ಶಿಕ್ಷಕ ವೃಂದಕ್ಕೆ ಒಂದು ಟೀಸೆಟ್ ಕೊಡಿಸಿದರೆ, ಕ್ಲಬ್ಬಿಗೆ ತಮ್ಮ ಕೊಡುಗೆಯಾಗಿ ಉಳಿಯುವದು, ಎಂದು ಹೇಳಿದರು. ಸೂಚನೆ ಮಾನ್ಯವಾಗಿ ಆ ಕೂಡಲೆ ಆಚರಣೆಯಲ್ಲಿ ತಂದದ್ದೂ ಆಯಿತು. ಆದರೆ ಅಲ್ಲಿ ಯಾವ ಕ್ಲಬ್ಬೂ ಅಸ್ತಿತ್ವದಲ್ಲಿ ಇಲ್ಲವೆಂದೂ, ಆ ಸೆಟ್ ಇದ್ದಕ್ಕಿದ್ದಂತೆ ಪ್ರಿನ್ಸಿಪಾಲ್‌ರ ಗೃಹೋಪಕರಣಗಳಲ್ಲಿ ಸೇರ್ಪಡೆಯಾಯಿತೆಂದೂ ನಂತರ ತಿಳಿಯಿತು.

"ವಾಚನಾಲಯದಲ್ಲಿ ಸತತವಾಗಿ ಆರೇಳು ತಾಸು ಕುಳಿತು ಹಲವಾರು ಪುಸ್ತಕಗಳನ್ನು ಓದಿ ಟಿಪ್ಪಣಿ ಮಾಡುವದು ಅತಿ ಕಷ್ಟದ್ದು ಎಂದು ಅನುಭವದಿಂದ ಹೇಳಬಲ್ಲೆ. ನಿಮಗೆ ಬೇಕಾದ ಮಾಹಿತಿ ಇದ್ದ ಎರಡು ಮೂರು ಪುಸ್ತಕಗಳು ನನ್ನ ಬಳಿ ಇವೆ. ಅವುಗಳ ಪ್ರತಿಗಳು ಸಿಗುತ್ತಿಲ್ಲ. ನಾನು ಶ್ರೀಮಂತನಾಗಿದ್ದರೆ.......... ನಾನು ಅವನ್ನು ನಿಮಗೆ ಉಡುಗೊರೆಯಾಗಿ ಕೊಡುತ್ತಿದ್ದೆ. ಲಾಟರಿ ಟಿಕೇಟು ನಿಯಮಿತವಾಗಿ ಕೊಳ್ಳುತ್ತಿದ್ದರೂ, ಏನೂ ಲಾಭವಾಗಿಲ್ಲ!" ಎಂದು ದೇಶಾವರಿ ನಗೆ ನಕ್ಕರು. ಸಂಚಿತ ಧೂಳು ಝಾಡಿಸಿ ಹಳದಿ ಬಣ್ಣಕ್ಕೆ ತಿರುಗಿದ ಪುಟಗಳ ಎರಡು ಪುಟ್ಟ ಹೊತ್ತಿಗೆ ಕೈಗಿತ್ತು, ಅವುಗಳ ಬೆಲೆ ಹೇಳಿ ತಾವೇ ಪಡೆದು ಕೊಂಡರು. ಕೋಣೆಗೆ ಬಂದು ನೋಡಿದಾಗ ಒಂದೇ ಪುಸ್ತಕದ ಎರಡು ಪ್ರತಿಗಳಿದ್ದವು. ಹಳೇ ಪುಸ್ತಕಗಳ ವ್ಯಾಪಾರಿಯಂತೆ ಅವುಗಳ ಬೆಲೆಯನ್ನು ಅಳುಕಿಸಲಾಗಿತ್ತು. ತಮ್ಮ ಪರವಾಗಿ ಕೊಟ್ಟ, ಸೈಕ್ಲೊಸ್ಟೈಲ್ ಮಾಡಿದ ಟಿಪ್ಪಣಿಯ ಮೇಲಿದ್ದ ಹೆಸರನ್ನು ಬ್ಲೇಡಿನಿಂದ ಕೊಯ್ಯಲಾಗಿತ್ತು. ಇನ್ನೊಂದು ದಿನ, 'ಸ್ಟುಡಿಯೋದಲ್ಲಿ ತೆಗೆಸಿಕೊಂಡ ನಮ್ಮ ಕುಟುಂಬದ ಒಂದೂ ಛಾಯಾಚಿತ್ರ ಚೆನ್ನಾಗಿಲ್ಲವೆಂಬ ದೂರು ಸದಾಕಾಲ ಇದ್ದೇ ಇದೆ. ಆದ್ದರಿಂದ ನಿಮ್ಮಿಂದ ಕೆಲವು ಚಿತ್ರಗಳನ್ನು ತೆಗೆಸಿಕೊಳ್ಳಲು ಬಯಸುತ್ತೇವೆ' ಎಂದರು. ಇದೊಳ್ಳೆ ಕಷ್ಟಕ್ಕಿಟ್ಟುಕೊಂಡಿತೆಂದು ಸರಂಜಾಮು ಹೊತ್ತುಕೊಂಡು ಮುಖ್ಯ ಕಟ್ಟಡದ ಹಿಂದೆ ಇದ್ದ ಅವರ ನಿವಾಸಕ್ಕೆ ಹೋದಾಗ ಆಫೀಸ್‌ರೂಮನ್ನೇ ಬೈಠಕಖಾನೆಯಾಗಿ ಬಳಸುತ್ತಿದ್ದುದನ್ನು ನೋಡಿ ಆಶ್ಚರ್ಯವಾಯ್ತು. ಕಿಶೋರಾವಸ್ಥೆಯ ಹೊಸ್ತಿಲಲ್ಲಿದ್ದ ಮಗಳು ಮೀನು, ಠೊಣಪನಂತಿದ್ದ ಮಗ ಡಿಪುರನ್ನು ಛಾಯಾಗ್ರಹಣಕ್ಕೆ ಕೂಡ್ರಿಸ ಬೇಕಾದರೆ ಕಲಿತ ವಿದ್ಯೆಯೆಲ್ಲ ಬಳಸಬೇಕಾಯಿತು. "ಹಾಗೆ ನಗಬೇಡಿರೋ! ನಕ್ಕು ಮನಃ ಸ್ವಾಸ್ಥ್ಯ ಕೆಡಿಸಿಕೊಂಡರೆ ಫೋಟೊ ಚೆನ್ನಾಗಿ ಬರುವದಿಲ್ಲ"ವೆಂದು ತಾಯಿ, ನಿರ್ದೇಶಕಿಯ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದಳು. ಊಟ ಹಾಕಿಯೇ ಕಳಿಸಿದ್ದರಿಂದ ಊಟ ಹೋದಲ್ಲಿ ಕೋಟಿಲಾಭವೆಂದು ಪರಿಗಣಿಸಬೇಕಾಯಿತು. ಮರುದಿನ ಬೆಳಿಗ್ಗೆಯೇ ಫೋಟೋ ಸಿದ್ಧವಾದವೇ? ಎಂದು ವಿಚಾರಿಸಿ ಅಜ್ಞಾನ ಪ್ರಕಟಿಸಿದ್ದೂ ಆಯಿತು.

ಸೈಕ್ಲೊಸ್ಟೈಲ್ ಟಿಪ್ಪಣಿಯ ವಿವರಗಳನ್ನು ಕೇಳಿಸಿಕೊಂಡ ಕುಸುಮಾಕರರು ಛೀಕ್! ಎಂದು ನಕ್ಕಿದ್ದರಿಂದ ವೀಳ್ಯದ ಪಿಚಕು ಶರ್ಟಿನ ಮೇಲೆ ಬಿದ್ದು ಕೆಂಪು ಕಲೆ ಮೂಡಿತು. ಆ ಟಿಪ್ಪಣಿ ಸಿದ್ಧಪಡಿಸಿದವನು ತಾನೇ ಎಂದು ಹೇಳಿ ಹೆಸರಿದ್ದ ಪ್ರತಿಯೊಂದನ್ನು ಡ್ರಾಯರಿನಿಂದ ಎಳೆದು ಕೈಗೆ ಕೊಟ್ಟರು. ಶರ್ಟಿನ ಕಲೆ ತೆಗೆದು, ಬಾಯಿ ಮುಕ್ಕಳಿಸಿ ಬಂದು ಮಾತಿಗಾರಂಭಿಸಿದರು. "ಅವರು ನಿಮಗೆ

ಮಾರಿದ ಪುಸ್ತಕದ (ಕೈ ಪಿಡಿಯ) ಇತಿಹಾಸ ತುಂಬ ರೋಚಕವಾಗಿದೆ. 1964 ರಲ್ಲಿ ದಿಲ್ಲಿಯಲ್ಲಿ ಆದಿವಾಸಿಗಳ ಸಮಸ್ಯೆಗಳ ಬಗ್ಗೆ ಒಂದು ಸೆಮಿನಾರನ್ನು ಏರ್ಪಡಿಸಿದ್ದರು. ಅದರಲ್ಲಿ ವಿದೇಶಿ ಪ್ರತಿನಿಧಿಗಳೂ ಭಾಗವಹಿಸಲಿದ್ದುದರಿಂದ ಒಂದು ಸುಂದರವಾದ ಪುಸ್ತಕವನ್ನು ಸಿದ್ಧಗೊಳಿಸಲು ಮೇಲಿನಿಂದ ಆದೇಶ ಬಂದಿತು. ಅದರಲ್ಲಿ ಸೇರಿಸಿದ ಹೆಚ್ಚಿನ ಮಾಹಿತಿಯನ್ನು ನಾನೇ ಸಂಗ್ರಹಿಸಿದ್ದೆ. ಮುದ್ರಣಕ್ಕೆ ಹೋಗುವ ಮೊದಲು ನನ್ನ ಹೆಸರು ಇದ್ದರೂ, ಯಾರೋ ಅದನ್ನು ಕೈಬಿಟ್ಟಿದ್ದರು. ಅದರ ಮುಖಪುಟವನ್ನು ರುದ್ರಕುಮಾರರು ಸಿದ್ಧಪಡಿಸಿದ್ದರಿಂದ ಅವರ ಹೆಸರನ್ನು ಸೇರಿಸಲಾಗಿತ್ತು. ಮಾಹಿತಿಯ ಜೊತೆಗೆ ಸೇರಿಸಿದ ಒಂದೆರಡು ಛಾಯಾಚಿತ್ರಗಳು ಮಾತ್ರ ವರ್ಮಾ ಅವರು ತೆಗೆದವುಗಳು ಇದ್ದವು. ಇಷ್ಟಾದರೂ ತನ್ನ ಹೆಸರನ್ನು ಸೇರಿಸಿಲ್ಲವೆಂದು ವರ್ಮಾ ಅವರು ಹುಯಿಲೆಬ್ಬಿಸಿಬಿಟ್ಟರು. ಇನ್ನೂ ಅನೇಕ ಜನ, ಸಣ್ಣ ಪುಟ್ಟ ಕಾರಣಕ್ಕಾಗಿ ಆಕ್ಷೇಪಣೆಯೆತ್ತಿದ್ದರಿಂದ ಅದಕ್ಕಾಗಿ ಒಂದು ವಿಚಾರಣಾ ಸಮಿತಿಯೊಂದನ್ನು ನೇಮಿಸಿದರು. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ವಿದೇಶಿ ಆರ್ಟ್ ಕಾಗದದ ಮೇಲೆ ಮುದ್ರಿಸಿದ ಪ್ರತಿಗಳನ್ನು ಹಂಚಿದರೆ ಮಾರಾಟ ಮಾಡಿದರೆ ಅಸಂತೋಷ-ವೈಮನಸ್ಸುಗಳು ಬೆಳೆಯಬಹುದೆಂದು ಆ ಪ್ರತಿಗಳು ಯಾರ ಕೈಗೂ ಸಿಗಲೆರದಿಂದು ಸಮಿತಿಯವರು ತೀರ್ಮಾನಿಸಿದರು. ನಂತರ ಸಂಸ್ಥೆಯ ಪ್ರಕಾಶನಗಳ ಮೇಲೆ ಎಲ್ಲರ ಹೆಸರನ್ನೂ ನಮೂದಿಸಬೇಕೆಂದು ಕಡ್ಡಾಯ ತರಲಾಯಿತು. ಆ ನಂತರ ಇಪ್ಪೊಂದು ವರ್ಷಗಳು ಜಾರಿಕೊಂಡಿವೆ. ಆ ಪ್ರತಿಗಳನ್ನು ನಾಶಪಡಿಸಬೇಕೇ? ರದ್ದಿಯವರಿಗೆ ಮಾರಬೇಕೇ? ಎಂದು ನಿರ್ಧರಿಸಲಾಗದೇ ವಾಚನಾಲಯದ ಹಿಂದಿನ ಸ್ಟೋರಿನಲ್ಲಿ ಇಟ್ಟಿದ್ದಾರೆ. ಅಲ್ಲಿ ಧೂಳು, ಗೆದ್ದಿಲುಗಳಿಗೆ ಅವು ಆಹಾರವಾಗಿವೆ. ಗೋಣಿ ಚೀಲ ತುಂಬಿ ಒಯ್ಯಬಹುದು! ಅಂಥ ಎರಡು ಪ್ರತಿಯನ್ನು ನಿಮಗೆ ಮಾರಿ, ದುಡ್ಡು ಪಡೆದ ವ್ಯಾಪಾರಿ ಬುದ್ಧಿಯನ್ನು ಮೆಚ್ಚಿಕೊಳ್ಳಬೇಕಾದ್ದೇ! ಮೋಜಿನ ಮಾತೆಂದರೆ, ಆ ನಂತರ ಒಂದೂ ಇಂಥ ಕೃತಿ ಹೊರಗೆ ಬಂದೇ ಇಲ್ಲ. ಬರುವ ಸಾಧ್ಯತೆಯೂ ಇಲ್ಲ.' ಎಂದು ಬಾಯಾರಿಕೆ ನಿವಾರಿಸಿಕೊಳ್ಳಲು ನೀರು ಕುಡಿದು ಬಂದು ವೀಳ್ಯ ಮೆಲ್ಲಲಾರಂಭಿಸಿದರು.

ಧನ ಸಂಪಾದನೆಗಾಗಿಯೇ ಹೊಟೇಲ್ ತೆರೆದವರು ಗಿರಾಕಿಗಳನ್ನು ಸುಲಿದರೆ ಕ್ಷಮಿಸಬಹುದು. ಆದರೆ ಆದಿವಾಸಿಗಳ ಹಿತರಕ್ಷಣೆಯ ಹೆಸರಿನಲ್ಲಿ ನಡೆಯುವ ಸಂಶೋಧನಾ ಕೇಂದ್ರದ ಮುಖ್ಯಸ್ಥರಾಗಿ ದೂರದ ಊರಿನಿಂದ ಬಂದವನಿಗೆ ಆಶ್ರಯ ಕೊಡುವ ನೆಪದಲ್ಲಿ ಬಗೆಬಗೆಯಲ್ಲಿ ಸುಲಿದರೆ ಅದಕ್ಕೆ ಪರಿಹಾರವೇನು? ಎಂಬ ಸಮಸ್ಯೆಗೆ ಉತ್ತರ ಸುಲಭವಾಗಿ ಸಿಗಲಿಲ್ಲ. ವಿದ್ಯಾವಂತರೇ ಹೀಗಿದ್ದರೆ, ವ್ಯಾಪಾರಿಗಳು, ಏಜೆಂಟರು ಆದಿವಾಸಿಗಳನ್ನು ಶೋಷಿಸಿದರೆ ಆಶ್ಚರ್ಯವೇನು? ಎಂದೆನಿಸಿತು. ಆ ಬಳಿಕ ವಸತಿಗೃಹದಲ್ಲಿ ಮುಂದುವರಿಯಲು ಮನಸ್ಸಾಗಲಿಲ್ಲ. ಹೊಟೇಲಿನ ಅನಾರೋಗ್ಯಕರ ವಾತಾವರಣದಲ್ಲಿ ದೀರ್ಘಕಾಲದ ವಾಸವೂ ಕಠಿಣವಿತ್ತು. ಆದ್ದರಿಂದ ಚಿಕ್ಕ ಮನೆಯೊಂದನ್ನು ಬಾಡಿಗೆಗೆ ಹಿಡಿದು, ಒಂಟಿ ಸಂಸಾರ ಪ್ರಾರಂಭಿಸುವದೇ ಏಕಮೇವ ಮಾರ್ಗವೆಂದು ಕುಸುಮಾಕರ, ರುದ್ರಕುಮಾರ, ನಾರದರಿಗೆ ವಿನಂತಿಸಿಕೊಂಡಾಗ ಅವರು ಏನಾದರೂ ವ್ಯವಸ್ಥೆ ಮಾಡಿಯೇ ಮಾಡುತ್ತೇವೆ ಎಂದಾಗ ನೆಮ್ಮದಿಯ ಉಸಿರು ಬಿಡುವಂತೆ ಆಯಿತು.

***

೬ ಜಾಮುನ ಜರಿ



ಉರಿಬಿಸಿಲಿನಂತೆ, ಭಾರೀಮಳೆಗೂ ಆದಿವಾಸಿಗಳು ಅಳುಕದಿದ್ದರೂ ಅವರನ್ನು ತೀರ ಹತ್ತಿರದಿಂದ ನೋಡಲು ನಗರವಾಸಿಯು ಹೊರಟು ಮಳೆರಾಯನನ್ನು ಗೌರವಿಸದಿದ್ದರೆ ಅವನ ಪ್ರಕೋಪಕ್ಕೆ ಆಹುತಿಯಾಗುವದು ಖಂಡಿತ. ಒಂದು ವಾರದ ಜಡಿಮಳೆಯ ನಂತರ ಸೂರ್ಯದೇವನು ದರ್ಶನ ಕೊಟ್ಟದ್ದರಿಂದ ಛಿಂದವಾಡಾದ ಹತ್ತಿರವಿದ್ದ ಗೊಂಡರಹಳ್ಳಿ, ಜಾಮುನ ಜರಿಗೆ ಹೊರಡಲು ಧೈರ್ಯ ಬಂದಿತು. ಕಪ್ಪು ಅಂಟಿನ ಮಣ್ಣಿನಲ್ಲಿ ಎತ್ತುಗಳು ಎಳೆಯುವ ರಥಗಳು ಏಕ ಪ್ರಕಾರವಾಗಿ ಓಡಾಡಿದ್ದರಿಂದ ರಸ್ತೆಯಲ್ಲಿ ರಾಡಿಯಾಗಿ ಪರಿವರ್ತನಗೊಂಡಿತ್ತು. ಹಳ್ಳಿಗರು ಬಾಟಾರ ಬೂಟು ಧರಿಸುತ್ತಿಲ್ಲವಾದರೂ ಅವರಿಗೆಲ್ಲ ದಪ್ಪ ಬೂಟುಗಳನ್ನು ಕೊಡಮಾಡಿತ್ತು ಕೆಸರು. ಕೈಯಲ್ಲಿದ್ದ ದೊಣ್ಣೆಯನ್ನು ಕಂಕುಳಿಗೆ ಸೇರಿಸಿ, ಹಿಂದೆ ಜಾರಿದ ರುಮಾಲು ಮುಂದೆ ಎಳೆದುಕೊಂಡು, ನೀಗ್ರೋಗಳಿಗೆ ಶೋಭಿಸಬಹುದಾದ ಮೂಗಿನ ಹೊಳ್ಳೆಗಳನ್ನು ಇನ್ನಷ್ಟು ಹಿಗ್ಗಿಸಿ ಎದುರು ಬರುತ್ತಿದ್ದ ಗೊಂಡನು, 'ಜೈ ರಾಮಜೀಕಿ' ಎಂದು ನಮಸ್ಕರಿಸಿ 'ಇತ್ತ ಪಾದಗಳನ್ನು ಬೆಳೆಸುವ ಕಾರಣವೇನೆಂದು ಅರಿಯಬಹುದೇ?' ಎಂದು ಎದುರಿಗೇ ಬ್ರೆಕ್ ಹಾಕಿ ನಿಂತ. ನಿಮ್ಮನ್ನು, ನಿಮ್ಮ ಹಳ್ಳಿಯನ್ನು ನೋಡಲು ಬಂದಿದ್ದೇನೆ, ಎಂದಾಗ ನಕ್ಕು, 'ಇವೆರಡರಲ್ಲಿಯೂ ನೋಡುವಂತಹದಿದೆಯೇ ಬಾಬು?' ಎಂದು ಮತ್ತೆ ತನ್ನ ಕಾಲಿನ ವಾಹನ ಓಡಿಸಿದ. ದನಕಾಯುವ ಹುಡುಗರು ಆಕಳ ಬಾಲ ತಿರುವುತ್ತಲೇ ನಮಸ್ಕಾರವೆಂದರು.

ಒಳ್ಳೆಯ ಸಂಪಾದನೆ ಇರುವವನು. ಯಾವುದೋ ಪ್ರೇಮಗೀತೆ ಹಾಡುತ್ತ ಸಾಯಕಲ್ ಮೇಲೆ ಹೊರಟವನು ಹೊಸಬನನ್ನು ಕಂಡೊಡನೆ ಬ್ರೇಕ್ ಹಾಕಲು ಮರೆತು, ಕೈಕಾಲುಗಳಿಗೆ ಕೆಸರು ಮೆತ್ತಿಕೊಂಡರೂ ನಮಸ್ಕಾರ ಹೇಳುತ್ತ, ಬೆಳೆಯ ಫೋಟೊ ತೆಗೆಯಲು ಬಂದಿದ್ದಿರಾ? ಎಂದು ವಿಚಾರಿಸಿದ. "ನಿನ್ನದೂ ಒಂದು ತೆಗೆಯಲೇ?" ಎಂದು ವಿಚಾರಿಸಿದಾಗ" ಈ ಅವಸ್ಥೆಯಲ್ಲಿ ಬೇಡ. ಇನ್ನೊಂದು ದಿನ ತೆಗೆಯುವಿರಂತೆ" ಎಂದು ನಾವು ಪ್ರತಿದಿನ ಭೇಟಿಯಾಗುವವರು, ಎಂಬಂತೆ ನುಡಿದು ಮುಂದೆ ಸಾಗಿದ. ಮರದ ಆಶ್ರಯದಲ್ಲಿ ವಿರಮಿಸುತ್ತಿದ್ದ ಮುದಿಯಕೃಷಿಕನೋರ್ವನು 'ಜೈರಾಮಜೀಕಿ' ಎಂದು ಸ್ವಾಗತಿಸಿ, ನಿಮ್ಮ ಖೇತ್ (ಹೊಲ) ಗಳು ಯಾವ ಹಳ್ಳಿಯಲ್ಲಿವೆ? ಎಂದು ವಿಚಾರಿಸಿದ. ಮುದಿಯನಿಂದ ಹೊಲದ ಮಾಲಕನೆಂದು ಕರೆಸಿಕೊಂಡದ್ದಕ್ಕೆ ಖುಷಿಯೇ ಆಯಿತು. "ಹೊಲ ಕಾಣೆಯಾಗಿದೆ. ಅದನ್ನು ಹುಡುಕಲು ಹೊರಟಿದ್ದೇನೆ!" ಎಂದಾಗ ತಬ್ಬಿಬ್ಬಾಗಿ ಹೋದ. ಆಗಂತುಕನನ್ನು ಕಂಡು ಅಲ್ಲಿಗೆ ಬಂದ ತರುಣನು 'ಅವರು ಗೇಲಿ ಮಾಡುತ್ತಿದ್ದಾರೆ ತಾತ, ಅವರು ಕೃಷಿ ಮಾಡುವವರಲ್ಲ. ದೊಡ್ಡ ಸರಕಾರಿ ಅಧಿಕಾರಿಗಳು!' ಎಂದು ಅಧಿಕೃತವಾಗಿ ಸಾರಿ ನಡೆದೇ ಬಿಟ್ಟ. ಎದುರಿಗೆ ಬರುತ್ತಿದ್ದವನು ಲಖ್ಖನ್ ಇರಬೇಕಲ್ಲವೇ? ಅಂದು ಕೊಳ್ಳುತ್ತಿದ್ದಂತೆ, ಆತ ಬಂದು, 'ನಮಸ್ತೆ ಮಾಸ್ತರ ಸಾಬ್!' ಅಂದಾಗ ಜೊತೆಗಿದ್ದ ಮಕ್ಕಳೂ ನಮಿಸಿದವು. ಇತ್ತ ಹೊರಟಿರುವಿರಿ? ಎಂದು ಕೇಳಿದ. ನಿಮ್ಮನ್ನೆಲ್ಲ ನೋಡಿ ಆನಂದಿಸೋಣ ಎಂದು ಬಂದ ಉತ್ತರದಿಂದ ಅವನಿಗೆ ತೃಪ್ತಿಯಾದಂತಿರಲಿಲ್ಲ. 'ಎಲ್ಲಿಯ ಆನಂದ ಬಾಬೂಜಿ? ಈ ವರ್ಷ ಸಕಾಲದಲ್ಲಿ ಮಳೆಯಾಗದೇ ಬೆಳೆ ಎಲ್ಲ ಕಪ್ಪಾಗಿ ಬಿಟ್ಟಿದ್ದು ಕಾಣುವದಿಲ್ಲವೇ?' ಎಂದು ಸುತ್ತಲೂ ಕಣ್ಣಾಡಿಸಿ, ಮಕ್ಕಳಿಗೆ ಪೇಟೆಗೆ ಕರೆದುಕೊಂಡು ಹೊರಟಿದ್ದೇನೆಂದು, ಪಯಣ ಬೆಳೆಸಿದ.

ಹೊಲಗಳನ್ನು ದಾಟಿ, ಅಂಕುಡೊಂಕಾದ ರಸ್ತೆ ತುಳಿದ ನಂತರ, ದೂರದಲ್ಲಿ ಸಾಲಾಗಿ ನಿಂತ ಮನೆಗಳ ಹಳ್ಳಿಯನ್ನು ಪ್ರವೇಶಿಸುತ್ತಿದ್ದಂತೆ, ಒಂದೆಡೆ ಮಾಟ, ಮಂತ್ರವಿದ್ಯೆ ಮಾಡಿರುವ ಕುರುಹುಗಳು ಗೋಚರಿಸುವವು. ಎರಡು ಸಾಲುಗಳಲ್ಲಿ, ಸುಮಾರು ಒಂದಂಗುಲ ವ್ಯಾಸವುಳ್ಳ ಆರುವರ್ತುಲಗಳನ್ನು ಬೂದಿಯಿಂದ ನಿರ್ಮಿಸಿ, ಮಧ್ಯದಲ್ಲಿ ಸೆಗಣಿ ಉಂಡೆಯಲ್ಲಿ ಒಂದೊಂದು ಕುಂಬಳ ಹೂಗಳನ್ನು ನೆಟ್ಟಿದ್ದರು. ಸುತ್ತಲೂ ಅಕ್ಕಿಕಾಳು, ಅರಿಶಿಣ, ಕುಂಕುಮಗಳನ್ನು ಹರವಲು ಮರೆತಿರಲಿಲ್ಲ. ಅನತಿ ದೂರದಲ್ಲಿ ಯಮಧರ್ಮರಾಯನಿಗೆ ಆಹುತಿಯಾದ ಎಮ್ಮೆಯೊಂದು ನಾಯಿಗಳಿಗೆ ಮೃಷ್ಟಾನ್ನ ಭೋಜನವಾಗಿ ಬಿದ್ದುಕೊಂಡಿತ್ತು. ಅದು ಮೋಡಿಯಿಂದ ಸತ್ತದ್ದೇ ಅಥವಾ ಅದು ಸತ್ತದ್ದಕ್ಕೆ ಮೋಡಿಯೇ, ಎಂಬುದು ಅರ್ಥವಾಗಲಿಲ್ಲ. ಈ ಹಳ್ಳಿ, ದೊಡ್ಡ ಬೆಟ್ಟದ ಇಳಿಜಾರಿನಲ್ಲಿ ಇದ್ದದ್ದರಿಂದ ಇಲ್ಲಿ ಕರಿಮಣ್ಣಿನ ಬದಲಾಗಿ ಗೊಜ್ಜಿನ ಕೆಮ್ಮಣ್ಣು ಇತ್ತು. ಜೋಡಿ ಮನೆಯ ಎದುರಿನಲ್ಲಿದ್ದ ಹೊಲದಲ್ಲಿ ಜೋಡಿ ಹುಡಿಗೆಯರು ಐದಾರು ಆಡುಗಳನ್ನು ಮೇಯಿಸುವದರಲ್ಲಿ ಮೈ ಮರೆತಿದ್ದರು. ದೂರದಲ್ಲಿ ಗುಡ್ಡಗಳ ಸಾಲು, ಅಲ್ಲೊಂದು, ಇಲ್ಲೊಂದು ಎತ್ತರವಾಗಿ ಬೆಳೆದ ಮರಗಳು. ಅವುಗಳ ಹಿನ್ನೆಲೆಯಲ್ಲಿ ಈ ಮಣ್ಣಿನ ಮಕ್ಕಳು ಪ್ರಕೃತಿಯ ಹಾಸುಹೊಕ್ಕಾಗಿದ್ದಂತೆ ಕಂಡದ್ದರಿಂದ ಛಾಯಾಚಿತ್ರಕ್ಕೆ ಸಿದ್ಧತೆ ಮಾಡಿಕೊಳ್ಳುವದರಲ್ಲಿ ಅವರು ಮರಿ ಆಡುಗಳನ್ನು ಎತ್ತಿಕೊಂಡು ಮುಂದೆ ಮುಂದೆ ಹೋಗ ಹತ್ತಿದರು. ಆಡುಗಳು ಓಡುವಾಗ, ಕೊರಳಿನಲ್ಲಿ ತೂಗುಬಿಟ್ಟ ಚಪ್ಪಟೆ ಕೊರಡು ಗಂಟೆಗಳು ಟನಕ್ ಟನಕ್ ಎಂದು ಮಂದನಾದ ಹೊರಡಿಸಿದಾಗ ಆಕರ್ಷಣೆ ಇನ್ನೂ ಹೆಚ್ಚಿತು. ಅಂತೆಯೇ ಈ ಹಳ್ಳಿಯ ಹೆಸರೇನು? ಇನ್ನೂ ಮುಂದೆ ಹಳ್ಳಿಗಳು ಇವೆಯೇ? ಬಾಯಾರಿಕೆ ನೀಗಿಸಲು ಹತ್ತಿರದಲ್ಲಿ ನೀರಿದೆಯೇ? ಮೊದಲಾದ ಪ್ರಶ್ನೆಗಳ ಸುರಿಮಳೆಯೇ ಆದ್ದರಿಂದ ಕಿಶೋರಿಯರು ತಮಗೆ ಅರಿತಷ್ಟು ವಿವರಿಸಿದರು. ಕಣ್ಣು-ಕೈ- ಕ್ಯಾಮರಾಗಳು ಕಾರ್ಯೋನ್ಮುಖಿಯಾಗಿವೆ, ಎಂಬ ಅನುಮಾನ ಬಂದಾಗ ಕ್ಷಣದಲ್ಲಿ ನಾಗಾಲೋಟ ಹಾಕಿ ಮಾಯವಾದರು.

ಇನ್ನೊಂದು ಹೊಲದಲ್ಲಿ ಗೋಪಾಲಕರು ದನಕರುಗಳನ್ನು ಮೇಯಿಸುತ್ತಿದ್ದರು. ಹಸಿದ ಹಳ್ಳಿಗರ ಗೋವುಗಳಿಗೆ ಹೊಟ್ಟೆ ಎಲ್ಲಿಂದ ತುಂಬಬೇಕು? ಅಂತೆಯೇ ಅವುಗಳ ಮೂಳೆಗಳೆಲ್ಲ ಎದ್ದು ಕಾಣುತ್ತಿದ್ದವು. ಯಾವರೋಗವೋ, ಯಾರಶಾಪವೋ ಆದ್ದರಿಂದ ತನ್ನ ಗೋ ಸಂಪತ್ತು ಕುಗ್ಗುತ್ತಿದೆ ಎಂದು ನಂಬಿದ ಮಾಲಕನು ಮಂತ್ರವಾದಿಯ ಮೊರೆ ಹೊಕ್ಕ. ಪರಿಹಾರಕ್ಕಾಗಿ ಹಲವಾರು ಹರಕೆಗಳನ್ನು ಹೊತ್ತು ಬಿಳಿ ಕೋಳಿಯೊಂದನ್ನು ಬಲಿಕೊಟ್ಟರು. ಇನ್ನೂ ಹಾರಾಡುತ್ತಲೇ ಇದ್ದ ಕುಕ್ಕುಟವನ್ನು ಬುಟ್ಟಿಗೆ ಸೇರಿಸಿದ ಮಗಳು, ದೂರದ ದಾರಿಯಿಂದ ಗೃಹಾಭಿಮುಖಿಯಾದಳು. ಅಪರಿಚಿತನನ್ನು ಅನುಮಾನದಿಂದಲೇ ನೋಡುವ ಆದಿವಾಸಿಗಳ ಹತ್ತಿರ ಹೋಗುವವ ಸಾಹಸ ಮಾಡದೇ ದೂರದಿಂದಲೇ ಪರೀಕ್ಷಿಸಬೇಕಾಯಿತು. ಅಲ್ಲಿಯೇ ಆಡಿಕೊಂಡಿದ್ದ ಗೋಪಾಲಕ ಹುಡುಗರ ವಿಶ್ವಾಸಗಳಿಸಿ, ಇಂಥ ಮಂತ್ರೋಪಚಾರಕ್ಕೆ ಎಷ್ಟು ಖರ್ಚು ಬರುತ್ತದೆ? ಎಂದು ವಿಚಾರಿಸಿದಾಗ, ಭುಜಗಳನ್ನು ಹಾರಿಸಿ, 'ಅದಕ್ಕೇನು? ಮನೆಯಲ್ಲಿ ಸಾಕಿದ ಕೋಳಿ. ಅಡಿಗೆಯಾದ ನಂತರ ಪುರೋಹಿತನಿಗೆ ಬಡಿಸಿದರಾಯಿತು. ಮನಸ್ಸಿದ್ದರೆ ದೊನ್ನೆ ತುಂಬ ಬೆಲ್ಲ, ಎಣ್ಣೆ ಕೊಡಬಹುದು. ಇಲ್ಲ ಸ್ವಲ್ಪ ಮದ್ಯ ಕೊಟ್ಟರೂ ನಡೆಯುತ್ತದೆ.' ಎಂದು ಒಬ್ಬ ಎಳೆಯ ಹೇಳುತ್ತ ಕೈಯಲ್ಲಿದ್ದ ಕೊಡಲಿಯಿಂದ ಅಲ್ಲಿದ್ದ ಸೀತಾಫಲ ಗಿಡವನ್ನು ಕಡಿದು ಕೆಡವಿ ಹಾಕಿದ. ಹೊಲದ ಅಂಚಿನಲ್ಲಿದ್ದ ಗಿಡವನ್ನು ಕಡಿದದ್ದರಿಂದ ಅವನಿಗಾದ ಲಾಭದ ಬಗ್ಗೆ ವಿಚಾರಿಸಿದಾಗ, ಅದಕ್ಕೇನು? ಅದು ತಿರುಗಿ ಬೆಳೆಯುತ್ತದೆ. ಬೆಳೆಯದಿದ್ದರೂ ಆಗುವ ಹಾನಿ ಏನು? ಎಂದು ಮರು ಸವಾಲು ಹಾಕಿ, ದನಕರುಗಳು ಮುಂದೆ ಸಾಗಿದ್ದರಿಂದ ಓಡಿದ.

ಪರಿಸರದಿಂದಾಗಿ ಗೃಹಗಳು ಆಕರ್ಷಣೀಯವಾಗಿ ಕಂಡರೂ ವಾಸಕ್ಕೆ ಯೋಗ್ಯವಾಗಿ ಕಾಣಲಿಲ್ಲ. ಹೊಲಗಳನ್ನು ಉಳುವುದಕ್ಕಾಗಿ ನೇಗಿಲಿಗೆ ಕಟ್ಟಲು ಎತ್ತುಗಳನ್ನು ಒಯ್ದದ್ದರಿಂದ, ಚಕ್ಕಡಿಗಳು, ಬಿಕೋ ಎಂದು ನಿಂತಿದ್ದವು. ಒಂದರ ನೆರಳಿನಲ್ಲಿ ಇದ್ದ ಗೊಬ್ಬರದ ಕುಣಿಯನ್ನು ಕೆದರಿ ಕ್ರಿಮಿ-ಕೀಟಗಳನ್ನು ಭಕ್ಷಿಸುವ ಕಾರ್ಯದಲ್ಲಿ ಕುಕ್ಕುಟ ಸಂಸಾರ ತೊಡಗಿತ್ತು. ಮೂಕಿ ಮುರಿದ ಬಂಡಿಯೊಂದರಲ್ಲಿ ಮೂರು ಆಡುಗಳು ಹಾಯಾಗಿ ಮಲಗಿ ಮೆಲಕಾಡಿಸುತ್ತಿದ್ದವು. ಕೃಷಿಗೆ ಬಳಸುವ ಹಲವಾರು ಸಾಮಾನುಗಳು ಮನೆಯ ಆವಾರದಲ್ಲಿಯೇ ಹರಡಿ ಬಿದ್ದಿದ್ದವು. ಬಾಗಿಲಿನ ಎದುರಿಗಿದ್ದ ಸಣ್ಣ ಅಂಗಳವನ್ನು ಸಾರಿಸಿ ರಂಗೋಲಿ ಹಾಕಿದ್ದರು. ಮನೆಯ ಗೋಡೆಗಳನ್ನು ಮಣ್ಣಿನಿಂದಲೇ ರಚಿಸಿ, ನುಣುಪಾಗಿ ಸಾರಿಸಲಾಗಿತ್ತು. ಕಿಡಕಿ-ಬಾಗಿಲುಗಳು ತೀರ ಚಿಕ್ಕವು ಇದ್ದು, ಅದರ ಸುತ್ತಲೂ ಬಿಳಿ ಬಣ್ಣದ ರಂಗೋಲಿ ಹಾಕಿದ್ದರು. ಕೆಲವರು ಕೆಂಬಣ್ಣವನ್ನು ಸೇರಿಸಿದ್ದರು. ಕಣ್ಣೇ ಕ್ಯಾಮರಾ ಮಾಡಿ, ಎಲ್ಲ ವಿವರಗಳನ್ನು ಪರೀಕ್ಷಿಸಿ ನೋಡಿ ನೆನಪಿನಲ್ಲಿ ಇಟ್ಟುಕೊಳ್ಳಬೇಕಾಯಿತು. ವೃದ್ಧ ತಾಯಿಯ ಚಿತ್ರ ತೆಗೆಯಲೇ? ಎಂದು ವಿಚಾರಿಸಿದಾಗ,"ಮುದುಕಿಯ ಫೋಟೊ ತೆಗೆದು ಏನು ಮಾಡುತ್ತೀರಿ ಬಾಬು? ಈ ಎಳೆಯರದಾದರೂ ತೆಗೆಯಿರಿ" ಎಂದು ಮುದುಕಿ ಜಾರಿಕೊಳ್ಳಲು ಯತ್ನಿಸಿದರೂ ಮಗಳು ಪಟ್ಟು ಹಿಡಿದು ತಾಯಿಯನ್ನು ಒಪ್ಪಿಸಿದಳು. ಒಮ್ಮೆ ಕ್ಯಾಮರಾಧಾರಿ ಅವರ ವಿಶ್ವಾಸಕ್ಕೆ ಪಾತ್ರ ಅನಿಸಿಕೊಂಡ ನಂತರ, ಯಾವ ಭಾವ-ಭಂಗಿ, ಅಂಗಗಳ ಛಾಯಾಚಿತ್ರ ತೆಗೆಯುವದಕ್ಕೆ ಅವರ ಆತಂಕವಿರಲಿಲ್ಲ.

ಮನೆಯಲ್ಲಿ ಇರುವ ಹೆಚ್ಚಿನ ಪಾತ್ರೆಗಳು ಹಿತ್ತಾಳೆಯವು. ರಾಜಸ್ಥಾನಿಗಳಂತೆ ಅವು ಮಣ್ಣಿನಿಂದ ತಿಕ್ಕಿ ತಿಕ್ಕಿ ಬಂಗಾರದಂತೆ ಹೊಳೆಯುತ್ತವೆ. ಅವಲ್ಲದೇ ಮಸಿ ಬಳೆದುಕೊಂಡ ಕಪ್ಪು ಮಡಕೆಗಳೂ ಧಾರಾಳವಾಗಿವೆ. ತಿರುಳು ತೆಗೆದುಪೊಳ್ಳು ಮಾಡಿದ ಸೋರೆಕಾಯಿ, ತೆಂಗಿನ ಚಿಪ್ಪುಗಳನ್ನು ಬಡಿಸುವ ಸೌಟುಗಳನ್ನಾಗಿ ಬಳಸುವರು. ಇಡೀ ಹಳ್ಳಿಗೆ ಒಂದೋ ಎರಡೋ ಬಾವಿಗಳಿರುವದರಿಂದ ದೂರದಿಂದ ನೀರನ್ನು ಹೊತ್ತು ತರಬೇಕಾಗುತ್ತದೆ. ಯುವತಿಯೋರ್ವಳು ಭಾರವಾದ ಹಿತ್ತಾಳೆಯ ಕೊಡಗಳನ್ನು ತಲೆಯ ಮೇಲೆ ಹೊತ್ತು ಕೊಂಡು, ನಾಗನಂತೆ ಸುತ್ತಿಕೊಂಡ

ಕತ್ತದ ಹಗ್ಗವನ್ನು ಬಲಭುಜಕ್ಕೆ ಏರಿಸಿ, ಎಡಗೈಯಲ್ಲಿ ಇನ್ನೊಂದು ಬಾಲ್ದಿ ನೀರು ಹೊತ್ತು ತರುವಾಗ, ಅವುಗಳ ಭಾರದಿಂದ ಅಂಗಾಂಗಳು ಮೋಹಕ ರೂಪ ತಾಳುತ್ತಿದ್ದವು. ತುಳುಕುವ ನೀರು ಅವಳ ಕರಿ ಕೇಶರಾಶಿಯನ್ನು ತೋಯಿಸಿ, ಕುಪ್ಪಸವನ್ನು ಮೈಗಂಟುವಂತೆ ಒದ್ದೆಮಾಡಿಬಿಟ್ಟಿದ್ದವು. ಕ್ಯಾಮರಾಕ್ಕೆ ಇದಕ್ಕಿಂತ ಮೋಹಕ ಭಂಗಿ, ಎಲ್ಲಿಂದ ಸಿಗಬೇಕು? ದರ್ಶಕವನ್ನು ವಿಸ್ತರಿಸಿ, ಬೇಕಾದ ಮೊಳೆ ಜೋಡಿಸುವಷ್ಟರಲ್ಲಿ ಆ ಅಪ್ಸರೆ ಅದೃಶ್ಯವಾಗಿ ಬಿಟ್ಟಿದ್ದಳು! ಕ್ಯಾಮರಾ ಕಣ್ಣಿಗೆ ಮಣ್ಣೆರಚಿ ಕಳ್ಳರಸ್ತೆಯಿಂದಾಗಲೇ ಮನೆ ಸೇರಿ ತಾನು ಆಗಂತುಕನಿಗೆ ಮಾಡಿದ 'ಮೋಸ'ವನ್ನು ತಂಗಿಗೆ ವಿವರಿಸುತ್ತ ಅವಮಾನವಾಗುವಂತೆ ನಗತೊಡಗಿದಳು.

ಈ ದೇವಿ ಕೈಕೊಟ್ಟರೂ, ದೇವರು ಕಲ್ಲಾಗಿ ಮರದ ಆಶ್ರಯದಲ್ಲಿ ಇದ್ದರಿಂದ ಅವನ ಚಿತ್ರ ತೆಗೆದು, ಯಾವ ದೇವರು? ಎಂದು ಕೇಳಿದಾಗ ಅವನು 'ಗಾಂಗು ದೇವರು' ಎಂದು ತಿಳಿಯುವಂತಾಯಿತು. ಕವಡೆಗಳಿಂದ ಜೋಡಿಕಣ್ಣು ಮಾಡಿದ್ದರು. ನಾಲಿಗೆಯನ್ನು ಹೊರಚಾಚಿ, ಕೈ ಮುಂದೆ ಮಾಡಿ ಆಶೀರ್ವದಿಸವಂತಿದೆ ಮೂರ್ತಿ. ಮನೆಯಲ್ಲಿ ಅನಾರೋಗ್ಯ, ಕಳ್ಳತನಗಳು ಆದರೆ ಕುರಿ-ಕೋಳಿ ಬಲಿಕೊಟ್ಟು ಪೂಜೆ ಮಾಡುವ ಪದ್ಧತಿ, ಎಂದು ತಿಳಿದುಕೊಳ್ಳುತ್ತಿದ್ದಂತೆ ಇಡೀ ದಿನ ಹೊಲದಲ್ಲಿ ದುಡಿದು, ಕೈ ಕಾಲು ಕೆಸರು ಮಾಡಿಕೊಂಡ ಯಜಮಾನ ಗೃಹ ಸೇರಿದ. ಹಳ್ಳಿಗೆ ಅತಿಥಿ ಬಂದಿದ್ದಾರೆಂದು ತಿಳಿದುಕೊಂಡು ಸಂತೋಷಪಟ್ಟ. ಭಾವಚಿತ್ರ ತೆಗೆಯಲು ಅವನ ಯಾವ ಆತಂಕವೂ ಇರಲಿಲ್ಲ. ಆದರೆ ಲಂಬಾಣಿಗಳಂತೆ, ಗೊಂಡರ ಪುರುಷರು ಏನೂ ಆಕರ್ಷಕವಾಗಿ ಇರುವದಿಲ್ಲವೆಂದು ಹತ್ತಿರದಿಂದ ನೋಡಿದಾಗ ಅರಿವಾಗುತ್ತದೆ.

ಗಗನ ಮಂಡಲ ಕಾರ್ಮೋಡಗಳಿಂದ ಕವಿಯಲಾರಂಭಿಸಿದ್ದರಿಂದ ಕೂಡಲೇ ಹೊರಟುಬಿಡದೆ ಬೇರೆ ಮಾರ್ಗವೇ ಇರಲಿಲ್ಲ. ಅರ್ಧ ದಾರಿಯಲ್ಲೇ ಮೇಘರಾಜನು ಗುಡುಗುತ್ತ ಮಿಂಚುತ್ತ ಧರೆಗಿಳಿದು ಬರಲಾರಂಭಿಸಿದ. ಮಾರುತನೂ ಜೊತೆಗೊಟ್ಟ. ಕ್ಯಾಮರಾ, ಅದಕ್ಕಿಂತ ಹೆಚ್ಚಾಗಿ ಸೆರೆ ಹಿಡಿದ ಸುಂದರಿಯರು ನೆಂದರು, ಅಂದಿನ ಶ್ರಮವೆಲ್ಲ ವ್ಯರ್ಥವೆಂದು ಅವುಗಳನ್ನು ಬೆಚ್ಚಗೆ ಇಡಲು ಬನಿಯನದಡಿ ಇರಿಸಿ, ಶರ್ಟು ಹೊದ್ದಿಸಿ ತೋಳತೆಕ್ಕೆಯಲ್ಲಿ ಬಂಧಿಸಿ, ನಾಗಾಲೋಟ ಪ್ರಾರಂಭಿಸಿದ್ದಾಯಿತು. ಮಳೆರಾಯ ತನ್ನ ಆಕ್ರೋಶ ತೋರಿಸಿಯೇ ಬಿಟ್ಟದ್ದರಿಂದ ಮರದ ಆಶ್ರಯ ಪಡೆಯಬೇಕಾಯಿತು. ವಾಸಸ್ಥಾನವನ್ನು ಕೊನೆಗೊಮ್ಮೆ ಸೇರಿದಾಗ, ಗಂಟು ಬಿಚ್ಚಿದಾಗ ಎಲ್ಲವೂ ಸುಸ್ಥಿತಿಯಲ್ಲಿ ಇದ್ದದ್ದು ನೋಡಿದಾಗ ಗೆಲುವಾಯಿತು. ಅಂದಿನ ಜಾಮುನ ಜರಿ, ಇಂದಿಗೂ ಒಂದು ಕನಸಿನ ಲೋಕ ಎಂಬಂತೆ ಭಾಸವಾಗುತ್ತದೆ.

***

7 ವಿಂಗಡದ ಗುಡಿ



ಬಹುದಿನಗಳಿಂದ ಪತ್ನಿಯ ಪತ್ರ ಬಾರದಿರಲು ಕಾರಣ ಏನಿರಬಹುದು? ಎಂದು ಯೋಚಿಸುತ್ತಿದ್ದಾಗ, ಗ್ರಂಥಭಾಂಡಾರಿಗ ಖಾಡೋಸ್ಕರರು ಬಂದು, "ನಿಮ್ಮಿಂದ ಒಂದು ಸಹಾಯವಾಗಬೇಕಿದೆ. ನನಗೆ ಭೋಪಾಲಕ್ಕೆ ವರ್ಗ ಮಾಡಿದ್ದಾರೆ. ನೀವು ಈಗ ವಾಚನಾಲಯದಲ್ಲಿ ಅಭ್ಯಾಸ ಮಾಡಲು ಪ್ರಾರಂಭಿಸಿದ್ದರಿಂದ, ನಿಮಗೆ ಸಹಾಯ ಮಾಡುವದು ಇದ್ದುದರಿಂದ ಅಲ್ಲಿ ಹಾಜರಾಗಲು ಅವಕಾಶ ಕೊಡಿ, ಎಂದು ಕೇಳಿದ್ದೇನೆ. ಪ್ರಿನ್ಸಿಪಾಲರು ಕೇಳಿದರೆ, ನೀವೇ ಇದನ್ನು ಸೂಚಿಸಿದ್ದು ಎಂದು ಹೇಳುವ ಕೃಪೆ ಮಾಡಬೇಕು" ಎಂದರು. ಮನೆಯವರಿಗೆ, ಪತ್ರ ವ್ಯವಹಾರಕ್ಕೆ ಪ್ರಿನ್ಸಿಪಾಲರ ವಿಳಾಸ ಕೊಟ್ಟಿದ್ದೇನೆ. ಪತ್ರಗಳು ಬಂದರೆ ಸರಿಯಾಗಿ ಮುಟ್ಟಿಸುತ್ತಾರೆಯೇ? ಎಂಬ ಮರು ಪ್ರಶ್ನೆ ಹಾಕಿದಾಗ, ಭುಜ ಕೊಡಹಿ 'ಇಲ್ಲಿ ಏನೂ ಅಸಾಧ್ಯವಲ್ಲ. ಅವರ ಆಟಗಳೆಲ್ಲ ಲಖ್ಖನನಿಗೆ ಚೆನ್ನಾಗಿ ಗೊತ್ತು. ಅವನನ್ನು ಒಲಿಸಿಕೊಂಡರೆ ಕೆಲಸ ಸುಸೂತ್ರವಾಗಬಹುದು, ಎಂದು ಸೂಚಿಸಿದರು. ಸರಿ ಅವನ ಹತ್ತಿರ ಈ ವಿಚಾರ ತಿಳಿಸಿದಾಗ, ಆತ ಐದು ನಿಮಿಷ ಅದೃಶ್ಯನಾಗಿ ಮುದುಡಿದ ಪತ್ರದೊಂದಿಗೆ ಹಾಜರಾದ. ಅದರ ಮೇಲಿದ್ದ ಅಂಚೆಯ ಮುದ್ರೆ, ಒಂದು ವಾರದ ಹಿಂದೆಯೇ ತಾನು ಛಿಂದವಾಡಾದಲ್ಲಿದ್ದೆ ಎಂದು ಸಾರಿ ಹೇಳಿತು. ಸಂದೇಹವನ್ನು ಅರ್ಥಮಾಡಿ ಕೊಂಡವನಂತೆ ಲಖ್ಖನನು "ಓದಲು ತೆರೆದಿರಬೇಕು. ನಿಮ್ಮ ಭಾಷೆ ಅರ್ಥವಾಗದೇ ಮುದುಡಿ ಮಾಡಿ ಟೇಬಲ್ ಅಡಿಯಲ್ಲಿ ಎಸೆದಿದ್ದರು. ಇನ್ನು ಮುಂದೆ ಬಂದ ಪತ್ರಗಳನ್ನು ನೇರವಾಗಿ ನಿಮ್ಮ ಕೈಯಲ್ಲಿ ತಂದುಕೊಡುತ್ತೇನೆ"

ಎಂದು ಆಶ್ವಾಸನೆ ಕೊಟ್ಟ. ಅರ್ಧತಾಸಿನಲ್ಲಿ ನಗುಮುಖದಿಂದ ಮೂರು ಪತ್ರಗಳನ್ನು ಕೈಗಿಟ್ಟು ಹೋದ.

ಪತ್ರದ ಘಟನೆಯನ್ನು ಕುಸುಮಾಕರರಿಗೆ ಹೇಳಿದೆ. ನಿಮ್ಮ ಎಲ್ಲ ಸಮಸ್ಯೆಗಳಿಗೆ ಶೀಘ್ರವೇ ಪರಿಹಾರ ಸಿಗುವಂತಿದೆ. ನಿಮಗಾಗಿಯೇ ಹೇಳಿ ಮಾಡಿಸಿದಂಥ ಮನೆಯೊಂದಿದೆ. ನಗರದ ಮಧ್ಯ ಭಾಗದಲ್ಲಿದ್ದರೂ ಜನಜಂಗುಳಿಯಿಂದ ದೂರವಿದೆ. ಪೋಲೀಸ ಕಚೇರಿ ತೀರ ಹತ್ತಿರದಲ್ಲಿ ಇದ್ದುದರಿಂದ ಕಳ್ಳಕಾಕರ ಭಯವಿಲ್ಲ. ಅಂಚೆಕಟ್ಟೆ, ಬಸ್ ನಿಲ್ದಾಣ, ಬ್ಯಾಂಕು, ಪೇಟೆಗಳೆಲ್ಲ ಸಮೀಪದಲ್ಲೇ ಇವೆ. ನೀರಿನ ಟ್ಯಾಂಕಿ, ಫ್ಲಶ್ ಕಕ್ಕಸುಗಳಿವೆ. ಆದರೆ ಮನೆ ಮಾಲಕಳು ಮಾತ್ರ ಕಟ್ಟು-ನಿಟ್ಟಿನವಳು. ಅವಳೊಂದಿಗೆ ಹೊಂದಿಕೊಂಡರೆ, ನಿಮ್ಮ ಮಧ್ಯಪ್ರದೇಶದ ವಾಸ್ತವ್ಯ ಸ್ಮರಣೀಯ ವಾಗುದರಲ್ಲಿ ಸಂದೇಹವಿಲ್ಲ' ಎಂದರು. ಬೀಡಾದಂಗಡಿಯ ಬಳಿ ಅವರಿಗಾಗಿ ಕಾಯಲು ಹೇಳಿ, ನಂತರ ಜೊತೆಯಾಗಿಯೇ ಮನೆಯನ್ನು ನೋಡಲು ಹೋಗುವದು, ಎಂದು ತೀರ್ಮಾನವಾಯಿತು. ಕುಸುಮಾಕರರು ಒಂದು ಗಂಟೆ ತಡಮಾಡಿ ಬಂದು, ಖಾಡೋಸಕರರ ಪರವಾಗಿ ಮನಒಲಿಸಲು ವಿಳಂಬವಾಯಿತು, ಎಂದು ಕ್ಷಮೆ ಕೋರಿದರು.

ವಯೋವೃದ್ಧೆ ಮನೆಯ ಮಾಲಕಳಾದ ಶ್ರೀಮತಿ ಕೇಕ್ರೆ (ಪರಿಚಯದವರಿಗೆಲ್ಲ ಕಾಕು) ಆದರದಿಂದ ಬರಮಾಡಿಕೊಂಡರು. ಅಲ್ಲಿ ಬಂದ ಉದ್ದೇಶ, ಇತರ ವಿವರಗಳನ್ನು ತಿಳಿದುಕೊಂಡು, 'ನಿಮ್ಮ ಶ್ರೀಮತಿ ಯಾಕೆ ಜೊತೆಯಲ್ಲಿ ಬಂದಿಲ್ಲ? ಶ್ರೀ ರಾಮ ಹೋದಲ್ಲಿ ಸೀತೆಯಂತೆ ಹಿಂಬಾಲಿಸಿ ಹೋಗುವದು ಧರ್ಮವಲ್ಲವೇ? ನೀವು ಇಲ್ಲಿ ಇಷ್ಟೊಂದು ಕಷ್ಟಪಡುವಾಗ ಆಕೆ ಅಲ್ಲಿ ಸುಖವಾಗಿ ಇರುವುದು ಯಾವ ನ್ಯಾಯ? ಅವಳ ನೌಕರಿ ಅಡ್ಡ ಬರುತ್ತಿದ್ದರೆ ರಾಜೀನಾಮೆ ಕೊಡಬೇಕು!' ಎಂದು ಆವೇಶದಿಂದ ಮಾತನಾಡಿದರು. ಸುಮ್ಮನಿರಿ! ಎಂದು ಕುಸುಮಾಕರರು ಕಣ್ಣು ಮಿಟುಕಿಸದೇ ಹೋಗಿದ್ದರೆ, ಯೋಗ್ಯ ಉತ್ತರ ಕೊಡಬಹುದಾಗಿತ್ತು. ಮನೆಯ ಅವಶ್ಯಕತೆ ಇರುವವರು, ಬಾಡಿಗೆಗೆ ಹಲುಬದವಳನ್ನು ನೋಯಿಸಬಾರದು ಎಂಬ ವಿವೇಕ ಮೂಡಿತು.

ಮನೆಯ ಆವಾರ, ಕಟ್ಟಡಗಳು ಭವ್ಯವಾಗಿದ್ದರೂ ರಿಪೇರಿಗಳಿಲ್ಲದೇ ಬಿಕೋ! ಎನಿಸುತ್ತಿತ್ತು. ಮೂರು ಕೋಣೆಗಳ ಒಂದು ಭಾಗವನ್ನು ಔಷಧಿಯ ಏಜಂಟನೊಬ್ಬನಿಗೆ ಬಾಡಿಗೆಗೆ ಕೊಟ್ಟಿದ್ದರಂತೆ. ಅವನು ಬಾಡಿಗೆಯನ್ನೂ ಕೊಡದೇ, ಔಷಧಿಗಳನ್ನೂ ಒಯ್ಯದೇ ಪಲಾಯನ ಮಾಡಿದ್ದ. ನೋಡಿದ ಕಡೆಗಳಲ್ಲೆಲ್ಲ ಬಾಟ್ಲಿ, ಮಾತ್ರೆ, ಪೊಟ್ಟಣಗಳು ತಾಂಡವವಾಡುತ್ತಿದ್ದವು. ಮನೆ ಒಪ್ಪಿಗೆಯಾದರೆ, ಎರಡು ಮೂರು ದಿನಗಳಲ್ಲಿ ಎಲ್ಲ ಸ್ವಚ್ಛ ಮಾಡಿಕೊಡುತ್ತೇನೆ. ಆದರೆ ಇಲ್ಲಿ ಇರುವವರು, ಮೀನು-ಮಾಂಸ ತಿನ್ನಕೂಡದು. ಬಚ್ಚಲು-ಕಕ್ಕಸುಗಳಿಗೆ ಚಪ್ಪಲಿ ಹಾಕಿ ಹೋಗಕೂಡದು ಮತ್ತು ಕೈಕಾಲು ತೊಳೆಯದೇ ಒಳಗೆ ಬರಬಾರದು ಎಂಬ ಕರಾರುಗಳನ್ನು ಕಾಕು ಅವರು ಕಟ್ಟುನಿಟ್ಟಾಗಿ ಹೇಳಿದಾಗ ನಗು ತಡೆದುಕೊಳ್ಳುವದು ಕಷ್ಟವಾದರೂ ಅವನ್ನೆಲ್ಲ ಒಪ್ಪಿಕೊಳ್ಳಲು ಏನೇನೂ ಆತಂಕವಿರಲಿಲ್ಲ!

ಟೆಲಿಫೋನನ್ನು ತಮ್ಮ ಕೋಣೆಯ ಹೊರಗೆ ಕುಕ್ಕಿ ಕಣ್ಮರೆಯಾಗುವದು ಶರ್ಮರ ವೈಶಿಷ್ಟ್ಯ. ಅವರು ಎಲ್ಲಿ ಹೋಗುತ್ತಾರೆ. ಯಾವಾಗ ಹಿಂದಿರುಗಿ ಬರುತ್ತಾರೆ ಎಂಬುದರ ಸುಳಿವು ಯಾರಿಗೂ ಸಿಗದಂತೆ ಮುಂಜಾಗ್ರತೆ ವಹಿಸುತ್ತಾರೆ. ವಸ್ತು ಸಂಗ್ರಹಾಲಯದ ಛಾಯಾಗ್ರಹಣ ಮಾಡಲು ಭೋಪಾಲದಿಂದ ಅನುಮತಿ ಬರಬಹುದಾದ ಕಾಲದಲ್ಲಿಯೇ ಅವರು ಒಣಗಿ ಅಜ್ಞಾತವಾಸಕ್ಕೆ ಹೋಗಿದ್ದರಿಂದ ಮುಂದಿನ ಕಾರ್ಯಕ್ರಮ ನಿರ್ಧರಿಸಲು ಆತಂಕವಾಯಿತು. ಹಿಂದಿರುಗಿದ ದಿನ,"ಇನ್ನೂ ಇಲ್ಲಿಯೇ ಇದ್ದೀರಾ?" ಎಂಬ ಪ್ರಶ್ನೆ ಕೇಳಿದಾಗ ರೇಗಿದರೂ, ಸಂಯಮ

ತಂದುಕೊಂಡು ಅನುಮತಿಯಿಲ್ಲದೆ ಛಾಯಾಗ್ರಹಣ ಮಾಡಲಾಗಲಿಲ್ಲವೆಂದಾಗ, ಆದೇ ನೆವ ಮಾಡಿಕೊಂಡು ಭೋಪಾಲಕ್ಕೆ ಟ್ರಂಕ್ ಕಾಲ್ ಹಾಕಿದರು. ಛಾಯಾಗ್ರಹಣಕ್ಕೆ ಅನುಮತಿ ಬಂದು ಮೂರುದಿನಗಳು ಕಳೆದಿದ್ದವು, ಎಂದು ಆ ಸಂಜೆ ಲಚಮನ್ ತಂದು ಕೊಟ್ಟ ಕವರಿನ ಅಂಚೆ ಮುದ್ರೆ ನೋಡಿದಾಗ ತಿಳಿಯಿತು. ಸಂಶೋಧನಾಲಯದ ಕೆಲಸ ಮುಗಿಸಿ **ಏಂಗಡದ ಗುಡಿಗೆ** ಹೊರಟು ನಿಂತಾಗ, ಶರ್ಮರು 'ಅಲ್ಲಿಯಾಕೆ ಹೋಗಬೇಕು ಇಲ್ಲಿಯೇ ಸುಖವಾಗಿ ಇದ್ದಿರಬಹುದಿತ್ತಲ್ಲ!' ಎಂದು ರಾಗ ಎಳೆದಾಗ, ಮಾನವನು, ತನ್ನನ್ನು ಎಷ್ಟೊಂದು ವಂಚಿಸಿಕೊಳ್ಳಬಹುದಲ್ಲ! ಎಂದು ಸೋಜಿಗಪಡುವಂತಾಯಿತು.

ಒಂದು ದೇಶದಂತೆ ವ್ಯಕ್ತಿಯೂ ಸರ್ವಮಾನ್ಯ ಸ್ವಾತಂತ್ರ್ಯವನ್ನು ಅಪೇಕ್ಷಿಸಿದಾಗ, ಎದುರಿಸಬೇಕಾದ ಅಡಚಣೆಗಳಿಗೆ ಕೊನೆ ಮೊದಲು ಇರುವದಿಲ್ಲ. ಹೊಟೇಲಿನಲ್ಲಿ ಇರುವದು ಅನಿವಾರ್ಯವೆಂದೆನಿಸಿದ್ದರಿಂದ ಒಂಟಿ ಸಂಸಾರಕ್ಕೆ ಬೇಕಾಗುವ ಯಾವ ಸಾಮಾನನ್ನೂ ತಂದಿರಲಿಲ್ಲ. ಕೈಯಲ್ಲಿ ಇದ್ದ ನಾಲ್ಕು ಕಾಸು ಖರ್ಚು ಮಾಡಿ ಕುಳಿತರೆ, ಸಕಾಲಕ್ಕೆ ಶಿಷ್ಯವೇತನ ಬಾರದಿದ್ದರೆ? ಎಂಬ ಸಮಸ್ಯೆ ಕಾಡದೇ ಇರಲಿಲ್ಲ. ಬರಿದೋ ಬರಿದಾದ ಮನೆಯಲ್ಲಿ ವಾಸ ಮಾಡುವದು ಅತಿ ಕಠಿಣವೆನಿಸಿತು. ನೆಲಕ್ಕೆ ಹಾಸಿದ ಫರಶಿ ಕಲ್ಲುಗಳು ಅಸಮವಾಗಿ ಸವೆದು ಬೆಟ್ಟ-ಬಯಲುಗಳಾಗಿದ್ದವು. ಛಾಯಾಗ್ರಹಣಕ್ಕಾಗಿ ತಂದ ಕರಿಪರದೆಯನ್ನೆ ಹಾಸಿ, ತೋಳೇ ತಲೆದಿಂಬು ಮಾಡಿ ಮಲಗಿದಾಗ, ಎಲ್ಲೆಡೆ ಬಿದ್ದ ಔಷಧಗಳ ವಾಸನೆ, ಆರ್ದ್ರತೆ, ಸೊಳ್ಳೆಗಳು ಪ್ರೇಮಗಾನ ಮಾಡಿ, ರಕ್ತಪಾನದೊಂದಿಗೆ ಪ್ರಣಯ ನೃತ್ಯ ಪ್ರಾರಂಭಿಸಿದಾಗ, ಬಡವರ ಜೀವನದ ಸುಖ-ದುಃಖದ ಆಳ ಅರಿಯುವಂತೆ ಆಯಿತು. ಹಾಲಿಲ್ಲದ ಕಾಫಿ, ಮೈ ಕೊರೆಯುವ ಚಳಿಯಲ್ಲಿ ತಣ್ಣೀರ ಸ್ನಾನ ಮಾಡುವಾಗ ಮಧ್ಯಪ್ರದೇಶ ವಾಸದ ಮೊದಲ ಅನುಭವ ರಮ್ಯವಾಗಿಯೇ ಕಂಡಿತು!

ನಿದ್ರೆಯಿಲ್ಲದೇ ಆಕಳಿಸುತ್ತ, ತಣ್ಣೀರ ಸ್ನಾನದಿಂದ ಉಂಟಾದ ಮೈ ನಡುಕಗಳಿಂದ ಸಾವರಿಸಿಕೊಂಡು ಬಿಸಿಲು ಕಾಯಿಸುತ್ತಿದ್ದಾಗ, ಯಾರೋ ಬಾಗಿಲು ಬಡೆದರು. ತೆಗೆದಾಗ, ಕಾಕು ಅವರು ಕೈಯಲ್ಲಿ ಘಮ ಘಮಿಸುವ ಗಟ್ಟಿ ತುಪ್ಪ ಹಾಕಿದ ಎರಡು ಹೋಳಿಗೆ, ಬಿಸಿಬಿಸಿ ಪಕೋಡ, ಮೆಣಸಿನ ಕಾಯಿ ಎಳ್ಳು ಪುಡಿ ಸೇರಿಸಿದ ಉಪ್ಪಿನಕಾಯಿಯನ್ನು ಹಾಕಿದ ತಟ್ಟೆಯನ್ನು ಹಿಡಿದು ನಿಂತಿದ್ದರು. ಅವರ ಆದರ - ಆತ್ಮೀಯತೆ ಉಪಚಾರಗಳಿಂದ ಸಂಕೋಚವೆನಿಸಿದರೂ ಕೃತಜ್ಞತೆ ಸಲ್ಲಿಸಿದೆ. ವಿವರವಾಗಿ ಪ್ರಶ್ನೆಗಳನ್ನು ಕೇಳಿ, ಮಲಗುವ ವ್ಯವಸ್ಥೆ ಊಟ-ತಿಂಡಿಗಳ ಸೌಕರ್ಯದ ಬಗ್ಗೆ ತಿಳಿದುಕೊಂಡರು. ಕರಿ ಕಾಫಿ ಕುಡಿದದ್ದನ್ನು ಅರಿತು ತಾವೇ ಬಿಸಿ ಬಿಸಿ ಚಹ ತಯಾರಿಸಿ ತಂದುಕೊಟ್ಟರು. ಮಲಗಲು ತಕ್ತಾ (ಗಟ್ಟಿ ಮಂಚ) ದಪ್ಪ ಜಮಖಾನೆಯನ್ನು ಮಗನಿಂದ ತರಿಸಿ ಹಾಕಿದರು. ಓದಲು ಬರೆಯಲು ಟೇಬಲ್ ಖುರ್ಚಿಗಳನ್ನೂ ತರಿಸಿದರು. ಅಪರಿಚಿತನಿಗಾಗಿ ಕೇವಲ ಬಾಡಿಗೆದಾರನಿಗಾಗಿ, ಯಾರು, ಏನು ಎಂದು ಅರಿಯದೇ ಯಃಕಶ್ಚಿತ್ ವ್ಯಕ್ತಿಯನ್ನು ಕುರಿತು ಅವರು ತೋರಿದ ಮಾತೃವಾತ್ಸಲ್ಯದಿಂದ ಹೃದಯ ತುಂಬಿ ಬಂದಿತು. ನೆರೆಯವರಿಗೆ, ಬಡವರಿಗೆ, ಅದು-ಇದು ಕೊಡುವ ನಮ್ಮ ತಾಯಿಯವರಿಗೆ ಹಿಂದೊಮ್ಮೆ ಆ ಬಗ್ಗೆ ವಿಚಾರಿಸಿದಾಗ, "ನಮ್ಮ ಈ ಕೆಲಸ ನಮ್ಮ ಮಕ್ಕಳಿಗೆ ಎಲ್ಲೋ, ಎಂದೋ ಬೆಂಗಾವಲಾಗಿ ನಿಲ್ಲುತ್ತದೆ" ಎಂದು ಹೇಳಿದ ನೆನಪಾಯಿತು. ಅವರ ಔದಾರ್ಯ, ಕಾಕು ಅವರ ರೂಪದಲ್ಲಿ ದಾನರೂಪವಾಗಿ ಬರುತ್ತಿರಬಹುದೇ! ಎಂಬ ಯೋಚನೆಬಾರದಿರಲಿಲ್ಲ. ನಂತರದ ದಿನಗಳಲ್ಲಿಯೂ ಅವರ ಧಾರಾಳತನಕ್ಕೆ ಕೊನೆಮೊದಲಿರಲಿಲ್ಲ.

ಪಕ್ಕದ ಸಬ್ಜಿಮಂಡಿ (ಕಾಯಿಪಲ್ಯ ಮಾರುಕಟ್ಟೆ)ಗೆ ಹೋಗಲು ಅದು ಹತ್ತಿರದ ದಾರಿಯಾದ್ದರಿಂದ ಹಳ್ಳಿಗರು, ಆದಿವಾಸಿಗಳು ಮುಂಜಾನೆಯಿಂದ ಬರುವದನ್ನು ನೋಡುವುದೇ ಕಣ್ಣಿಗೆ ಹಬ್ಬ. ತಲೆಯ ಮೇಲೆ ಕಾಯಿಪಲ್ಲೆ ಹೊತ್ತ ಭಾರಕ್ಕೆ ನಡುವನ್ನು ತೂಗುತ್ತ ಕಾಲ್ಬಳೆ,

ಕಾಲುಂಗುರಗಳ ಸದ್ದು ಮಾಡುತ್ತ ಪತಿ ಹೇಳಿದ್ದಕ್ಕೆಲ್ಲಾ ಹೋ! ಎಂದು ಸಮ್ಮತಿ ಸೂಚಿಸುತ್ತ ಪತ್ನಿ ಹೊರಟಿರುತ್ತಾಳೆ. ಪತಿ ಭಾರವಾದ ಹೊರೆ ಹೊತ್ತು, ಇನ್ನೊಂದು ಕೈಲಿ ಕೋಳಿಯನ್ನೂ ಮೂಟೆಗಳನ್ನೂ ಹಿಡಿದಿರುತ್ತಾನೆ. ಸ್ಥಿತಿವಂತರು ಚಕ್ಕಡಾ (ಕಿರಿ ಚಕ್ಕಡಿ) ಗಳಲ್ಲಿ ಸಾಮಾನು ಹೇರಿ, ನಾಗಾಲೋಟದಿಂದ ಓಡಿಸುತ್ತಿರುತ್ತಾರೆ. ಪಟ್ಟು ಹಿಡಿದು ನಡೆದು ಹೋಗುವ ಪಾಲಕರನ್ನು ಹಿಂಬಾಲಿಸಿ ಬರುವ ಮಕ್ಕಳು, ಇಂದು ಅಂಗಡಿಯಲ್ಲಿ ಯಾವ ತಿಂಡಿ ಕೊಡಿಸಬಹುದು ಎಂಬ ನಿರೀಕ್ಷೆಯಲ್ಲಿಯೇ ನಾಲಿಗೆ ಚಪ್ಪರಿಸುತ್ತ, ಪಾಲಕರ ವೇಗಕ್ಕೆ ಹೊಂದಿಕೊಳ್ಳಲೆತ್ನಿಸಿ ಓಡುತ್ತಿರುತ್ತಾರೆ. ನಸು ನೀಲಿ ಸಮವಸ್ತ್ರ ಧರಿಸಿದ ಹುಡುಗರು ಹತ್ತಿರದ ಶಾಲೆಗೆ ಹೋಗುತ್ತಲೇ ಇರುತ್ತಾರೆ. ಹೊಸಬನಾರೋ ತಮ್ಮನ್ನು ನೋಡಲು ಕಿಡಕಿಯಲ್ಲಿ ಸದಾ ಪ್ರತ್ಯಕ್ಷನಿರುತ್ತಾನೆಂದು ಊಹಿಸಿದ ಗಂಡು ಬೀರಿಯೊಬ್ಬಳು ಗೇಲಿಮಾಡಲು ಯತ್ನಿಸಿದಾಗ "ಅಪರಿಚಿತನಲ್ಲಿ ಅನುರಾಗ ಉಂಟಾಯಿತೇ?" ಎಂದು ಹಿಂದಿಯಲ್ಲಿ ಪ್ರಶ್ನೆ ಬಂದಾಗ, ಬೆಚ್ಚಿ ಬಿದ್ದು ಈ ಮದ್ರಾಸಿಗೆ ತಮ್ಮ ಭಾಷೆ ಅರ್ಥವಾಗುತ್ತದಷ್ಟೇ ಅಲ್ಲ, ಮಾತನಾಡಲೂ ಬರುತ್ತದೆ! ಎಂದು ಅರಿತು ತಮ್ಮ ಪಾಡಿಗೆ ತಾವು ಹೋಗುವದನ್ನು ಬಾಲೆಯರು ರೂಢಿ ಮಾಡಿಕೊಂಡರು.

ಕೇಕ್ರೆ ಮತ್ತು ನೆರೆಮನೆಯ ವರ್ಮಾ ಅವರ ಗೃಹಗಳ ನಡುವಿನ ಕಿರಿಓಣಿ, ಪಶು-ಪಕ್ಷಿಗಳ ರಂಗಮಂದಿರದಂತೆ ಇತ್ತು. ಎರಡೂ ಕುಟುಂಬದವರು ಕಸ-ಕಡ್ಡಿಗಳನ್ನು ಅಲ್ಲಿ ಚಲ್ಲುವದು ವಾಡಿಕೆ. ನಸುಕಿನಲ್ಲಿ ಕಣ್ಣು ತೆರೆಯುತ್ತಿದ್ದಂತೆ ಕಾಕ ಪರಿವಾರವಿಡೀ ಸೇರಿ ಕರ್ಕಶ ಕಂಠದಿಂದ ಬಳಗವನ್ನೆಲ್ಲಾ ಕರೆಯುತ್ತಿರುತ್ತವೆ. ಗುಬ್ಬಿಗಳು ಬಿದ್ದಕಾಳು-ಕಡ್ಡಿಗಳನ್ನು ಹೆಕ್ಕಿ ಉದರ ಪೋಷಣೆ ಕೈಕೊಂಡವು. ಆಚೆ ಮನೆ ಗಟಾರ, ಈಚೆ ಮನೆ ಹಿತ್ತಿಲು ಓಡಾಡಿ, ಕುಕ್ಕುಟ ಸಂಸಾರ ಹೆಕ್ಕಿ ಕುಕ್ಕಿ ತಿನ್ನುವದಕ್ಕಿಂತ ಜಾಸ್ತಿ ಕಸವನ್ನು ಹರಡಿ ಮುಂದರಿದವು. ಗೋಪಾಲಕನ ಕಣ್ಣು ತಪ್ಪಿಸಿ ಬಂದ ಗೋವೊಂದು, ಗಿಡದ ಪರ್ಣಗಳನ್ನು ಭಕ್ಷಿಸಲಾರಂಭಿಸಿದಾಗ, ಪ್ರೇಮಿಯನ್ನು ಹುಡುಕುತ್ತ ಬಂದ ಸಾರ್ವಜನಿಕ ಗೂಳಿಗೆ ಅಂಜಿ ಕಾಲಿಗೆ ಬುದ್ಧಿ ಹೇಳಿತು. ಯಾರದೋ ಜಗಲಿಯಲ್ಲಿ ರಾತ್ರೆಯನ್ನು ಕಳೆದ ಆಡೊಂದು ಬಂದು ತನ್ನ ಶಾಕಾಹಾರ ಪ್ರಾರಂಭಿಸಿತು. ಹೊಟ್ಟೆಯಲ್ಲಿದ್ದ ಇನ್ನೊಂದು ಆಡಿಗೆ ಪ್ರಸವವೇದನೆ ಪ್ರಾರಂಭವಾಗಿ, ಸೂಲಗಿತ್ತಿ ಇಲ್ಲದೆಯೇ ಜೋಡಿಮರಿಗೆ ಜನ್ಮವಿತ್ತಿತು. ಈ ಕುತೂಹಲ ಪಕ್ಕದ ವಠಾರದಲ್ಲಿ ಹರಡಿದಾಗ ಕುತೂಹಲಿಗಳ ಸಭೆಯೇ ಸೇರಿತು. ಕೊನೆಗೆ ಶುಭ ಸಮಾಚಾರ ಮಾಲಕನಿಗೆ ತಲುಪಿದಾಗ, ಮರಿಗಳನ್ನು ಎತ್ತಿಕೊಂಡು ಆತ ಹೊರಟ. ಭೆsss ಎಂದು ಪ್ರೀತಿ ವ್ಯಕ್ತಪಡಿಸುತ್ತ ತಾಯಿಯೂ ಹಿಂಬಾಲಿಸಿತು. ಕೆಸರಿನಲ್ಲಿ ಹೊರಳಾಡಿ ಬಂದ ಸೂಕರರಾಜ, ಶಾಕಾಹಾರ - ಮಾಂಸಾಹಾರಗಳ ತಾರತಮ್ಯ ಮಾಡದೇ ನುಂಗಬಹುದಾದದ್ದನ್ನೆಲ್ಲಾ ಸ್ವಾಹಾ ಮಾಡಿ ಪಯಣವನ್ನು ಮುಂದರಿಸಿದ. ಕೊನೆಯಲ್ಲಿ ಪ್ರತ್ಯಕ್ಷವಾದ ಅಸಲಿ ಕತ್ತೆಯು ಅಳಿದುಳಿದ ಕಾಗದದ ಚೂರು - ರಟ್ಟುಗಳನ್ನು ಉದರಕ್ಕೆ ಇಳಿಸುತ್ತಿದ್ದಂತೆ, ಎದುರಾಳಿ ಸ್ಪರ್ಧೆಗೆ ಇಳಿದದ್ದರಿಂದ ಮುಂಗಾಲಿನ ಮೇಲೆ ನಿಂತು, ಹಿಂಗಾಲಿನಿಂದ ಒದೆಯಿತು. ಇದರಿಂದ ಪ್ರಾರಂಭವಾದ ದ್ವಂದ್ವ ಎಂದು ಮುಕ್ತಾಯವಾಗುವದೆಂದು ಹೇಳುವದು ಕಷ್ಟ. ಎಲ್ಲೆಡೆಯಂತೆ, ಇಲ್ಲಿಯ ನಗರ ಪಾಲಿಕೆಯೂ ದಕ್ಷತೆಯಿಂದ ಕೆಲಸಮಾಡದಿದ್ದರೂ ಪಶು-ಪಕ್ಷಿಗಳು ತಮ್ಮ ಉದರ ನಿರ್ವಹಣೆಯೊಂದಿಗೆ ನಗರದ ಸ್ವಚ್ಛತೆಯನ್ನೂ ಕಾಯ್ದುಕೊಂಡು ಹೋಗುವದನ್ನು ಅರಿತು ವಿಸ್ಮಯವಾಯಿತು.

ಜಂಜಡವಿಲ್ಲದ ಒಂಟಿಸಂಸಾರದ ನೆಮ್ಮದಿಯಲ್ಲಿ ಅಲ್ಲಿಯ ಆಗು ಹೋಗುಗಳನ್ನು ತೀರ ಹತ್ತಿರದಿಂದ ನೋಡುವಂತೆ ಆಯಿತು. ರವಿವಾರ ಸಂತೆಗೆ ಗೊಂಡಿತಿಯೋರ್ವಳು, ಭುಜದ ಮೇಲೆ ತಕ್ಕಡಿ ನೇತು ಹಾಕಿ, ತೂಕಕ್ಕೆ ಉಪಯೋಗಿಸುವ ವಿವಿಧ ಆಕೃತಿಯ ಕಲ್ಲುಗಳನ್ನು ಕೈಯಲ್ಲಿ ಹಿಡಿದು ಪತಿಯಿಂದ ಬೆಣ್ಣೆಯ ಗಡಿಗೆ ಹೊರಿಸಿ, ಮನೆಮನೆಗೆ ಬಂದು ಮಾರುತ್ತಾಳೆ. ಬೆಣ್ಣೆಯನ್ನು

ಕೊಳ್ಳುವಾಗ, ಬೆಲೆಯನ್ನು ನಿರ್ಧರಿಸಬೇಕಾಗಿಲ್ಲ. ಹಣ ಕೊಡಬೇಕಾಗಿಲ್ಲ. ಅಂದು ಸಂತೆಯಲ್ಲಿ ಯಾವ ಬೆಲೆ ಬರಬಹುದೆಂದು ಖಚಿತವಾದ ಮೇಲೆ ಎಲ್ಲ ಮಾರಾಟ ಮಾಡಿ ಗೃಹಾಭಿಮುಖವಾಗಿ ಹೊರಟಾಗ, ಅವಳೇ ಬಂದು ಹೇಳಿ ಹಣ ಪಡೆದು ಹೋಗುತ್ತಾಳೆ. ಅವಶ್ಯಕತೆ ಇಲ್ಲವಾದರೂ ಅವಳ ಭಾವಚಿತ್ರಕ್ಕಾಗಿ ಬೆಣ್ಣೆಕೊಳ್ಳಬೇಕಾಯಿತು. ಅವಳ ವಿವಿಧ ಭಂಗಿಗಳನ್ನು ಕ್ಯಾಮರಾದಲ್ಲಿ ತೂಗಿ ನೋಡುವಾಗ, ಅವಳು ಬೆಣ್ಣೆಯನ್ನು ತಕ್ಕಡಿಯಲ್ಲಿ ಕಡಿಮೆ ತೂಕ ಮಾಡಲು ಮರೆಯಲಿಲ್ಲ! ಬೆಣ್ಣೆ ಕರಗಿಸಿ ತುಪ್ಪ ಕಾಸಿ ಕೊಡಲೇ? ಎಂದು ವಿಚಾರಿಸಲು ಬಂದ ಕಾಕು ಅವರು ಅದಾಗಲೇ ಕಾಸಿ ತಯಾರಾದ ತುಪ್ಪವನ್ನು ನೋಡಿ, ಪರೀಕ್ಷಿಸಿ ಮೆಚ್ಚಿ ಹಿಂದಿರುಗಿದರು. ಗಟ್ಟಿ ಮೊಸರು ಎಂದು ಕೂಗುತ್ತ ಮಾರಲು ಬಂದ ಗೊಂಡಿತಿ ಮಜ್ಜಿಗೆ ಮಾರಿ ಮೊಸರ ಬೆಲೆ ಕಿತ್ತುಕೊಂಡಾಗ ಅವಳ ಬುದ್ಧಿಮತ್ತೆಗೆ ತಲೆದೂಗಬೇಕಾಯ್ತು.

ಛಿಂದವಾಡಾದಲ್ಲಿ ಕಾಯಿಪಲ್ಲೆ ಖರೀದಿಯೇ ಸಡಗರ. ಹಿಮವರ್ಣದ ಪುಟ್ಟಗಟ್ಟಿ ಹೂಕೋಸು ಮಾರುವ ಹಳ್ಳಿಗಳು "ಈವಾಗ ಹದಿನಾರು" ಎಂದು ಎತ್ತರ ಕಂಠದಲ್ಲಿ ಕೂಗುತ್ತಿದ್ದಳು. ಇಂಥ ತರಕಾರಿ ಸಿರಿವಂತರಿಗಷ್ಟೇ ಮೀಸಲು ಎಂಬ ಕಲ್ಪನೆಯಿದ್ದ ನಗರದಿಂದ ಬಂದದ್ದರಿಂದ, ಇಲ್ಲಾದರೂ ಚೆನ್ನಾಗಿ ತಿಂದು ತೇಗೋಣವೆಂದು ಉತ್ತಮವಾದವನ್ನು ಆರಿಸಿ, ಕೈ ಚೀಲಕ್ಕೆ ಸೇರಿಸಿ, ರೂಪಾಯಿಯೊಂದನ್ನು ಅವಳ ಕೈಗೆ ಹಾಕಿ ಹೊರಟಾಗ, "ಹಣ ಹೆಚ್ಚಾಗಿದೆಯೇ ಚಿಲ್ಲರೆ ಬೇಡವೇ?" ಎಂದು ಅವಳು ಕೂಗಿದ್ದು ಕೇಳಿ ಹಿಂದಿರುಗಿದಾಗ ಕೊಂಡ ಹೂಕೋಸು, ನಾಲ್ಕಾಣೆಗೆ ಹದಿನಾರು ಎಂದರೆ ನಂಬಲು ಸಾಧ್ಯವಾಗಲೇ ಇಲ್ಲ! ಹತ್ತು ಪೈಸೆಯ ಹಸಿಮೆಣಸಿನಕಾಯಿ ಕೇಳಿದಾಗ, ಕಿಲೋದಷ್ಟು ಕೊಟ್ಟು ಬಿಟ್ಟ. ಇಷ್ಟೆಲ್ಲ ಬೇಕಿಲ್ಲವೆಂದು ಐದೇ ಪೈಸೆಯದು ಸಾಕು ಎಂದಾಗ ಇರಲಿ ಬಿಡಿ ಬಾಬೂಜಿ ಎಂದು ಕಡಿಮೆ ಮಾಡದೇ ಐದು ಪೈಸೆ ಹಿಂದಿರುಗಿಸಿದ! ಆಲೂಗಡ್ಡೆಗೆ ಕೆಂಬಣ್ಣವೇಕೆ ಬಳಿದದ್ದು ಎಂದು ಯುವತಿಗೆ ಕೇಳಿದರೆ, ಕಿಲೋಗೆ ಐದು ಪೈಸೆ ಹೆಚ್ಚು ಸಿಗುವದರಿಂದ ನಾವೇ ಕೆಂಬಣ್ಣಹಾಕುತ್ತೇವೆ ಎಂದು ಗುಟ್ಟು ರಟ್ಟು ಮಾಡಿದಳು. ರೂಪಾಯಿಗೆ ಹದಿನಾರು ಬಾಳೇ ಕಾಯಿ, ಎಂದಾಗ ಎಲ್ಲವನ್ನೂ ಕೊಂಡು ವ್ಯಾಪಾರ ಮಾಡಿದರೆ ಹೇಗೆ? ಎಂಬ ವಿಚಾರ ಬಂದಿತು. ಹಸಿ ಬಟಾಣಿ ಎಂಭತ್ತು ಪೈಸೆಗೆ ಕಿಲೋ ಎಂದಾಗ ಅವುಗಳನ್ನು ಡಬ್ಬಿಯಲ್ಲಿ ತುಂಬಿ ನಗರಗಳಲ್ಲಿ ಮಾರಿದರೆ, ಹಣ ಕೊಳ್ಳೆ ಹೊಡೆಯಬಹುದಿತ್ತಲ್ಲ! ಅನಿಸಿತು. ಕೋತಂಬರಿಗಂತೂ ಕಾಸು ಕೊಡಬೇಕಾಗಿಯೇ ಇಲ್ಲ. ಇತರ ತರಕಾರಿಕೊಂಡಾಗ ಅದನ್ನು ಪುಕ್ಕಟೆಕೊಡುವ ಪರಿಪಾಠ. ಒಂದಡಿ ಉದ್ದದ ಮೂಲಂಗಿ, ತರಕಾರಿ ಸ್ಪರ್ಧೆಯಲ್ಲಿ ಇಡಲು ಅರ್ಹತೆ ಪಡೆದಿದ್ದವು. ಕಿತ್ತಳೆ ಹಣ್ಣು "ಪಂಜಿಗೆ ಎರಡು" ಎಂದು ಕೂಗುತ್ತಿದ್ದರೂ ಅವಳ ಮಾತಿನ ಸರಿಯಾದ ಅರ್ಥವಾಗದೇ ಎರಡನ್ನು ಆರಿಸಿ ರೂಪಾಯಿ ಕೈಗಿತ್ತಾಗ ಇನ್ನೆರಡನ್ನಾದರೂ ಕೊಳ್ಳಿ ಎಂದು ದುಂಬಾಲು ಬಿದ್ದಳು. ನಾಲ್ಕಕ್ಕೆ ಹತ್ತು ಪೈಸಾ ತೆಗೆದುಕೊಂಡಾಗ ಇಂಥದೊಂದು ಊರು ಇರಲು ಸಾಧ್ಯವೇ? ಕನಸು ಕಾಣುತ್ತಿಲ್ಲವಷ್ಟೇ? ಎಂದು ಖಾತರಿ ಮಾಡಿಕೊಳ್ಳಬೇಕಾಯಿತು. ಕಲ್ಲಂಗಡಿ ಹಣ್ಣುಗಳ ಮೇಲೆ ವಿವಿಧ ಪಕ್ಷಿಗಳ ಚಿತ್ರ ಕೊರೆದು ಎಂಟಾಣೆಗೆ ಒಂದರಂತೆ ಮಾರುತ್ತಿದ್ದರು. ಹಿಂದೆಂದೂ ಕಲ್ಪಿಸಿಕೊಳ್ಳಲಾಗದ ಕಲ್ಲಂಗಡಿ ಹಣ್ಣಿನ ರಸ ಕುಡಿದು ತೇಗಿದಾಗ, ಪತ್ನಿ-ಪುತ್ರರನ್ನು ಕರೆತಂದು ಇಲ್ಲಿಯೇ ಸಂಸಾರ ಹೂಡಿದರೆ ಹೇಗೆ? ಎಂದೂ ವಿಚಾರ ಬಂದಾಗ, ಇಷ್ಟು ದೂರ ಬಂದ ಉದ್ದೇಶ ನೆನಪಾಗಿ ಕಾರ್ಯೋನ್ಮುಖಿಯಾಗುವಂತೆ ಮಾಡುತ್ತಿತ್ತು.

***

ಚಾಂದಾ ಮೇಟಾ



ಛಿಂದವಾಡಾದ ಟ್ಯಾಕ್ಸಿವಾಲಾರು. 'ಚಾಂದಾಮೇಟಾ - ಪರಾಸಿಯಾ - ಒಂದೆರಡು ಸವಾರಿ' ಎಂದು ಕೂಗುವದನ್ನು ಸದಾಕಾಲ ಕೇಳುತ್ತಿದ್ದರೂ. ಹೋಗಲಾಗಿರಲಿಲ್ಲ. ಅಲ್ಲೊಂದು ಕಲಾಪ್ರದರ್ಶನವನ್ನು ಏರ್ಪಡಿಸಲಾಗಿದೆ. ಎಂದು ನಾರದರು ಸೂಚಿಸಿದಾಗ ಪ್ರವಾಸ ಕೈಗೂಡಿತು. ಎಂಟುವರೆಯ ಬಸ್ಸಿಗಾಗಿ ಎಂಟುಗಂಟೆಗೆ ಹೋಗಿ ಕುಳಿತರೆ. ಅದು ಜೀವಕಳೆ ತುಂಬಿಕೊಂಡು ಇರುವೆ ವೇಗದಿಂದ ಚಲಿಸಲಾರಂಭಿಸಿದಾಗ ಹತ್ತು ಹೊಡೆದಿತ್ತು. ಹೊರಟಿತು ಅನ್ನುವಷ್ಟರಲ್ಲಿ ಚುಂಗಿ (ಟೋಲ್) ನಾಕಾ ಸಿಕ್ಕಿದ್ದರಿಂದ ಗಕ್ಕನೆ ನಿಂತಿತು. ಊರಿನಿಂದ ಹೊರಟ ಪ್ರತಿ ಪ್ರಯಾಣಿಕನೂ ಕರ ಕೊಡಬೇಕೆಂಬುದು ಅಲ್ಲಿಯ ನಗರಪಾಲಿಕೆಯ ಕಾನೂನಂತೆ! ವಾಹನಗಳಲ್ಲಿ ಇದ್ದ 'ತಲೆ'ಗಳ ಲೆಕ್ಕಾಚಾರದಲ್ಲಿ ಚುಂಗಿವಾಲಾನಿಗೂ ಕಂಡಕ್ಟರನಿಗೂ ಭಿನ್ನಾಭಿಪ್ರಾಯ ಬಂದು ಪ್ರವಾಸಿಗಳೆಲ್ಲ ಕೆಳಗೆ ಇಳಿಯುವಂತಾಯಿತು. ಬಹುಶಃ ಕಂಡಕ್ಟರನು ತಲೆ ಇಲ್ಲದವರನ್ನು ಎಣಿಸಿರಲಿಕ್ಕಿಲ್ಲ! ಅಲ್ಲಿ ಅಂಥವರೇ ಬಹುಸಂಖ್ಯೆಯಲ್ಲಿ ಇದ್ದರು. ಇಲ್ಲದಿದ್ದರೆ ಹಣ ಪಡೆದೂ ಟಿಕೇಟು ಕೊಡದಿದ್ದರೆ ಸುಮ್ಮನಿರುತ್ತಿದ್ದರೆ? ಅಕಸ್ಮಾತ್ ತಪಾಸಣೆಗೆ ಮೇಲಧಿಕಾರಿಗಳು ಪ್ರತ್ಯಕ್ಷರಾದರೆ ಪ್ರಯಾಣಿಕರು ಇದ್ದಷ್ಟು ಟೀಕೇಟು ಹರಿಯುವದಕ್ಕೆ ಕಂಡಕ್ಟರನು ಸಿದ್ಧನಾಗಿಯೇ ಇರುವದು ಅವನ ಜಾಣ್ಮೆ. ಅಂತೂ ಬಸ್ಸು ಎರಡು ಗಂಟೆ ಓಡಿ ಕೇವಲ ಹತ್ತೊಂಬತ್ತು ಕಿಲೋಮೀಟರ ದೂರದ ಚಾಂದಾ ಮೇಟಾ ಮುಟ್ಟಿಸಿದಾಗ, ಮಧ್ಯಪ್ರದೇಶದ ಸಾರಿಗೆ ಸೌಕರ್ಯ ವ್ಯವಸ್ಥೆಗೆ ತಲೆತೂಗದೆ ಬೇರೆ ಮಾರ್ಗವಿರಲಿಲ್ಲ!

ಪರಾಸಿಯಾ, ಚಂದಾ ಮೇಟಾ, ಬಾರಾಕುಯೀ ಊರುಗಳು ಒಂದಕ್ಕೊಂದು ತೀರ ಹತ್ತಿರದಲ್ಲಿವೆ. ಸುತ್ತಮುತ್ತಲೂ ಸಾಲಾಗಿ ನಿಂತಿರುವ ಪರ್ವತಾವಳಿಗಳು, ಅವುಗಳ ಕೊಳ್ಳದಿಂದ ಹರಿಯುವ ಪಂಚನದಿ. ವಿಪುಲವಾದ ಮಳೆಯಿಂದ ದಟ್ಟವಾಗಿ ಬೆಳೆದು ನಿಂತ ಕಾಡುಗಳು ಆದಿವಾಸಿಗಳಿಗೆಲ್ಲ ಆದರ್ಶ ತಾಣ. ಶತಕಗಳಿಂದ ಗೊಂಡ, ಮುಂಡ, ಕೋಲ, ಕೊರ್ಕು ಆದಿವಾಸಿಗಳೆಲ್ಲ ಇಲ್ಲಿ ಬೀಡು ಬಿಟ್ಟಿದ್ದರು. ಆದರೆ ನದಿಯ ಪರಿಸರದಲ್ಲಿಯೇ ಕಲ್ಲಿದ್ದಲಿಯ ಖಣಿಗಳ ಶೋಧವಾದ ನಂತರ, ವರವೋ, ಶಾಪವೋ ಆಗಿ ಅವರ ಜೀವನವೇ ಕದಡಿದಂತಾಗಿದೆ. ಕಾಲುದಾರಿಗಳೇ ಹೆದ್ದಾರಿಗಳಾಗಿದ್ದಲ್ಲಿ ಇಂದು ಡಾಂಬರ ರಸ್ತೆಗಳಾಗಿವೆ. ಚಕಡಾಗಾಡಿಗಳು ಓಡಬೇಕಾದಲ್ಲಿ ಕಲ್ಲಿದ್ದಲು ತುಂಬಿದ ಟ್ರಕ್ಕುಗಳು ನಿರಂತರವಾಗಿ ಓಡಾಡುವದರಿಂದ ಅಲ್ಲಲ್ಲಿ ಕೊರಕಲುಗಳು ಹುಟ್ಟಿಕೊಂಡಿವೆ. ಅಧಿಕಾರಿಗಳ ಕಾರುಗಳು, ಶಾಲಾವಿದ್ಯಾರ್ಥಿಗಳ ಬಸ್ಸುಗಳು, ಮೋಟಾರ್ ಸಾಯಕಲ್, ಸ್ಕೂಟರ್, ಬೈಸಿಕಲ್‌ಗಳು ಏಕಪ್ರಕಾರವಾಗಿ ಹಿಂದೆ ಮುಂದೆ ಓಡುತ್ತಿರುತ್ತವೆ. ಪೆಟ್ರೋಲ್ ಬದಲಿಗೆ ಕಲ್ಲಿದ್ದಲಿ ಬಳಸಲು ಬರುವಂತೆ ಇದ್ದರೆ, ರಸ್ತೆಗಳಲ್ಲೆಲ್ಲ ಈ ಗಣಿಕಾರರ ವಾಹನಗಳೇ ತುಂಬಿ ತುಳುಕುತ್ತಿದ್ದವೊ ಏನೋ! ವಾಹನಗಳ ಓಡಾಟಕ್ಕೆ ಅಡ್ಡಿಯಾಗುವಷ್ಟು ಖಣಿ ಕಾರ್ಮಿಕರ ಉಕ್ಕಿನ ಸ್ವಾಗತದ ಕಮಾನುಗಳು. ಒಮ್ಮೆ ನ್ಯೂಟನ್ ಖಣಿ ಕಂಪನಿಯದು. ಇನ್ನೊಮ್ಮೆ ಪಶ್ಚಿಮ ಕಲ್ಲಿದ್ದಲು ಗಣಿಯವರದು. ಮಗುದೊಂದು ಸಂಯುಕ್ತ ಗಣಿ ಕಾರ್ಮಿಕರ ಸಂಘದವರದು. ಎಲ್ಲರೂ ಆಗಂತುಕರನ್ನು ಕಡ್ಡಾಯದ ಸ್ವಾಗತ ಕೋರದೇ ಬಿಡುವವರಲ್ಲ.

ನಿಸರ್ಗಮಾತೆ ಹೇರಳವಾಗಿ ಕೊಡಮಾಡಿದ ಕಲ್ಲಿದ್ದಲನ್ನು ಈ ಅಧಿಕಾರಿಗಳು ದೋಚಿ, ಖಾಸಗಿಯಾಗಿ ಮಾರಿ ಅಪಾರ ಲಾಭ ಮಾಡಿಕೊಳ್ಳುವದರಿಂದ ರಾಜಠೀವಿಯಿಂದ ಬಾಳುತ್ತಿದ್ದಾರೆ! ಮ್ಯಾನೇಜರರಿಗೆ ಕಟ್ಟಿಸಿದ 'ಕುಟೀರ'ವನ್ನು ನೋಡಿದಾಗ ಅವರ ಬಡತನದ ಕಲ್ಪನೆ ಒಮ್ಮೆಲೇ ಆಗುವಂತಿದೆ. ವಿಸ್ತಾರವಾದ ಆವಾರದಲ್ಲಿ ಕಟ್ಟಿದ ಭವ್ಯ ಬಂಗಲೆ, ಎಂಥ ಅಭಾವ ಕಾಲದಲ್ಲಿಯೂ ಇಪ್ಪತ್ನಾಲ್ಕು ಗಂಟೆಗಳ ಕಾಲ ನೀರು ಹರಿಯುವಂತೆ ಕಟ್ಟಿಸಿದ ಭಾರೀ ಹೌದು. ಕ್ಷಣ ಮಾತ್ರದಲ್ಲಿ ಓಡಲು ಸಿದ್ಧವಾಗಿ ನಿಂತ ಮೂರು ಕಾರುಗಳು, ಕಾವಲುಗಾರ, ತೋಟಗಾರ, ಅಡಿಗೆಯವನ ಸಂಬಳವನ್ನೆಲ್ಲ ಕಂಪನಿ ವಹಿಸಿಕೊಳ್ಳುತ್ತದೆ. ಇನ್ನುಳಿದ ಸಿಬ್ಬಂದಿಗೆ ಅವರವರ ದರ್ಜೆಯಂತೆ ಗೃಹ ಸೌಕರ್ಯಗಳು, ಅವರ ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮದ ವಿಶೇಷ ಸವಲತ್ತುಗಳ 'ಕಣಿವೆ-ಹೂ' ಎಂದು ಹೆಸರು ಹೊಂದಿದ ದುಬಾರಿ ಶಾಲೆಗಳು. ಸುಂದರವಾದ ಪ್ರಕೃತಿಯ ಸೆರಗನ್ನೂ ಮಡಿಲನ್ನೂ ಅಲ್ಲಲ್ಲಿ ಕಡಿದು, ಖಣಿಯ ಆಳದಲ್ಲಿ ಇಳಿಯಲು ಒಳಮಾರ್ಗಗಳು, ಒಳಗಡೆ ಹವೆಯಾಡಲು ದೆವ್ವದಂತಹ ಪಂಕಗಳನ್ನು ನಿರ್ಮಿಸಿದ್ದಾರೆ. ಸಾಗಾಟದಲ್ಲಿ ಚೆಲ್ಲಿದ ಮತ್ತು ನಿಷ್ಪ್ರಯೋಜಕವಾದ ಕಲ್ಲಿದ್ದಲು ಊರು ತುಂಬ ಹರಡಿಕೊಂಡಿರುವದರಿಂದ, ಮಳೆಯಿಂದ ಮಿಂದು ಸದಾ ಶುಭ್ರವಾಗಿರಬೇಕಾದ ಭೂಮಿ ಸ್ಮಶಾನದಂತೆ ಭಾಸವಾಗುತ್ತದೆ. ಅಧಿಕಾರಿಗಳ ಓಡಾಟದ ಅನುಕೂಲಕ್ಕಾಗಿ, ಕಲ್ಲಿದ್ದಲು ಸಾಗಾಣಿಕೆಗಾಗಿ, ದೂರದ ಭೋಪಾಲ ಮತ್ತು ಬೇತುಲಗಳೊಂದಿಗೆ ಪರಾಸಿಯದವರೆಗೆ ಬ್ರಾಡ್‌ಗೇಜ್ ಜೋಡಿಸಿದರೂ ತೀರಹತ್ತಿರದ ಛಿಂದವಾಡಾಕ್ಕೆ ಈ ರೇಲ್ವೆ ಬಾರದಿರುವದು ಸೋಜಿಗಕರ.

ಚಾಂದಾ ಮೇಟಾ - ಪರಾಶಿಯಗಳ ಅಕ್ಕಪಕ್ಕದ ಭೂಮಿಯನ್ನೆಲ್ಲ ಗಣಿ ಕಂಪನಿಯವರು ಖರೀದಿಸಿ, ಗಣಿ ಚಟುವಟಿಕೆಗಳಿಗೆ ಬೇಕಾಗುವಷ್ಟನ್ನು ಬಳಸಿ ಮಿಕ್ಕಿದ್ದನ್ನು ಸ್ಥಾನೀಯರ ಸಹಾಯದಿಂದ ಸಾಗುವಳಿ ಮಾಡುತ್ತಿದ್ದಾರೆ. ಇದಕ್ಕಾಗಿ ಬೋರ್‌ವೆಲ್‌ಗಳನ್ನು ಅಗೆಸಿ ವಿದ್ಯುತ್ ಚಾಲಿತ ಪಂಪುಗಳನ್ನು ಹೆಚ್ಚಾಗಿಯೇ ದುಡಿಸುತ್ತಾರೆ. ಇಷ್ಟೇ ಅಲ್ಲದೇ ಪರ್ವತಶ್ರೇಣಿಗಳಲ್ಲಿಯೂ ಹೌದುಗಳನ್ನು ಕಟ್ಟಿ ನೀರು

ದಾಸ್ತಾನು ಮಾಡಿಕೊಂಡಿದ್ದಾರೆ. ರಸ್ತೆಯಂಚಿನಲ್ಲಿ ಕೆಂಬಣ್ಣ ಬಳಿದುಕೊಂಡು ಭವ್ಯವಾಗಿ ನಿಂತ ಆಂಜನೇಯ, ಕಾರ್ಮಿಕರ ನಿವಾಸಸ್ಥಾನ ಬಂದಿತೆಂದು ಸಾರಿ ಹೇಳಿದ. ಅವರ ಹಣ ದೋಚಲೆಂದು ಸಾಲಾಗಿ ಸೃಷ್ಟಿಯಾದ ಬೀಡಿ, ಸಿಗರೇಟು, ಎಲೆಡಿಕೆ, ಚಹಾದ ಅಂಗಡಿಗಳು ಅಲ್ಲಿದ್ದವು. ಜನ ಜೀವನದಲ್ಲಿ ಅಶಾಂತಿ ಹುಟ್ಟಿಸಿದ ಸ್ಥಳಕ್ಕೆ 'ಶಾಂತಿಕಣಿವೆ' ಎಂದು ಹೆಸರು ಕೊಟ್ಟ ಕಣಿವರ್ಗದವರ ರಸಿಕತೆಗೆ ಯಾರಾದರೂ ತಲೆದೂಗಬೇಕು! ಇವನ್ನೆಲ್ಲ ಹಿಂದೆ ಹಾಕಿ ಮುಂದೆ ನಡೆದಾಗ, ಗೊಂಡರ ಹಳ್ಳಿಯೊಂದು ತಲೆಯೆತ್ತಿ ನಿಂತಿದ್ದು ನೋಡಿ ಆಶ್ಚರ್ಯವಾಯಿತು. ನೀರು ಇರುವಲ್ಲಿ ಗೋವಿನ ಜೋಳ, ಭತ್ತವನ್ನು ಹುಲುಸಾಗಿ ಬೆಳೆಸಿದ್ದಾರೆ. ಹೊಲದೊಳಗಿನ ಕಾಲುದಾರಿಗಳು ಪರ್ವತಾವಳಿಗಳನ್ನು ಏರುತ್ತವೆ. ಅಲ್ಲೊಂದು, ಇಲ್ಲೊಂದು ಸೇದುವ ಬಾವಿಗಳೂ ಇವೆ. ಅವುಗಳ ಕಟ್ಟೆಗಳ ಮೇಲೆಲ್ಲ ಹರಟುತ್ತ ಹೆಂಗಳೆಯರು ನೀರು ಸೇದುವದರಲ್ಲಿ, ಬಟ್ಟೆ ತೊಳೆಯುವದರಲ್ಲಿ ಸ್ನಾನಮಾಡುವದರಲ್ಲಿ ಮೈಮರೆತಿದ್ದಾರೆ. ಉತ್ಸಾಹಿ ತರುಣ ಆದಿವಾಸಿಗಳು ಢೋಲಕ್, ತಾಳ, ಕೋಲುಗಳೊಂದಿಗೆ 'ತೀಜ' ಹಬ್ಬಕ್ಕೆ ನರ್ತಿಸಲು ಊರಹಿರಿಯರಲ್ಲಿ ಹೊರಟಿದ್ದರು. ಅಲ್ಲೆಲ್ಲ ಮನದಣಿ ಹಾಡಿ, ಕುಣಿದು, ವೀಳ್ಯ, ತಂಬಾಕು, ಬೀಡಿ, ಪ್ರಸಾದಗಳನ್ನು ಸ್ವೀಕರಿಸಿ ಸೆರೆಗೆ ಕಾಸು ಪಡೆದು ಮುಂದೆ ಹೊರಡುವವರು.

ಖಣಿಗಳನ್ನು ಅಗೆಯುವ ಕಾರಖಾನೆಗಳನ್ನು ಆದಿವಾಸಿಗಳ ವಾಸಸ್ಥಾನದಲ್ಲಿ ಪ್ರಾರಂಭಿಸಿದ್ದು ಅವರ ಜೀವನ ಮಟ್ಟವನ್ನು ಏರಿಸುವದಕ್ಕಾಗಿ, ಎಂದು ಮಧ್ಯಪ್ರದೇಶ ಸರಕಾರ, ಘಂಟಾಘೋಷವಾಗಿ ಸಾರುತ್ತದೆ. ಅವರಿಗೆ ಇದರಿಂದ ಆಗುವ ಲಾಭವನ್ನು ಅಳೆದುನೋಡಲು ಚಹಾದಂಗಡಿಗಿಂತ ಉತ್ತಮ ಸ್ಥಳ ಬೇರೊಂದಿಲ್ಲವೆಂದು ಅನಿಸಿತು. ಹುರಿದು ಹೊರಬರುತ್ತಿದ್ದ ಆಲೂಬೋಂಡಾಗಳು ನಗುಮುಖದಿಂದ ಸ್ವಾಗತಿಸಿದವು. ಆಲೂಬೋಂಡವನ್ನು ರುಚಿಯಿಂದ ತಿಂದವನು, ಶಾಂತಿಕಣಿವೆಯವನಲ್ಲವೆಂದು ಅಲ್ಲಿಯ ಪರಿಚಿತರಿಗೆ ಅರಿವಾಯಿತು. ಅಲ್ಲಿ ಆರಾಮವಾಗಿ ಕುಳಿತಿದ್ದ ಹಿರಿಯನಿಗೆ ಗಣಿಯ ಕೆಲಸ ಆರಂಭವಾದಾಗಿನಿಂದ ಸ್ಥಾನೀಯರ ಜೀವನದಲ್ಲಿ ಆದ ಪರಿವರ್ತನೆಗಳ ಬಗ್ಗೆ ಪ್ರಶ್ನಿಸಿದಾಗ ಅವನು ನೋಡಿದ್ದು, ಕೇಳಿದ್ದು, ಇಲ್ಲದ್ದು ಸೇರಿಸಿ ರಾಮಾಯಣವನ್ನೆ ಬಿಚ್ಚಿದ. ಅಂಗಡಿಕಾರನು, ಬೋಂಡ ಕರಿಯುತ್ತಾ ಅವನ ಮಾತಿನಿಂದ ಅಸಂತುಷ್ಟನಾಗಿ ಅಲ್ಲಿಯ ಚರಿತ್ರೆಯನ್ನು ಸಂಕ್ಷೇಪವಾಗಿ ಹೇಳಿದ. ಅವನ ಹೇಳಿಕೆಯ ಮುಖ್ಯಾಂಶಗಳೆಂದರೆ, ಈ ಖಣಿಗಳನ್ನು ಪ್ರಾರಂಭಿಸಬೇಕಾದರೆ ಯಾವ ಸ್ಥಳೀಯ ಮುಖಂಡರ ಅಥವಾ ಆದಿವಾಸಿ ಮುಖ್ಯಸ್ಥರ ಅಭಿಪ್ರಾಯ ವಿಚಾರಿಸಿಕೊಳ್ಳಲಿಲ್ಲ. ಬಂಗಾಲ - ಬಿಹಾರಗಳಿಂದ ತಜ್ಞರನ್ನು ಆಮಂತ್ರಿಸಿದರು. ಹಣದ ಹೊಳೆ ಹರಿಯಿಸಿ, ಯಂತ್ರೋಪಕರಣಗಳನ್ನು ಹೊರಗಿನಿಂದಲೇ ತರಿಸಿದರು. ಬೇಟೆಯಾಡಿ, ಕೃಷಿಮಾಡಿ ಜೀವಿಸುತ್ತಿದ್ದ ಆದಿವಾಸಿಗಳಿಗೆ ಖಣಿಗಳಲ್ಲಿ ಕೆಲಸವೇ ಬೇಕಿರಲಿಲ್ಲ. ಶತಕಗಳಿಂದ ಒಂದೇ ಬಗೆಯ ಜೀವನಕ್ಕೆ ಹೊಂದಿಕೊಂಡ ಜನ, ಈ ಕೂಲಿ-ಹಮಾಲಿ ಕೆಲಸಕ್ಕೆ ಸೇರಲು ಒಪ್ಪಲಿಲ್ಲ. ಹೀಗಾಗಿ ಸುತ್ತಮುತ್ತಲ ಜಿಲ್ಲೆ-ರಾಜ್ಯಗಳಿಂದ ಖಣಿ ಕಾರ್ಮಿಕರನ್ನು ತಂದು ಆದಿವಾಸಿಗಳ ಪರಿಸರದಲ್ಲಿ ನೆಲೆಸುವಂತೆ ನೋಡಿಕೊಂಡರು. ಇಲ್ಲಿಯ ಜೀವನ ಕ್ರಮದಲ್ಲಿ ಅಲ್ಲೋಲ ಕಲ್ಲೋಲವುಂಟಾಯಿತು. ಸ್ಥಾನೀಯ ಆದಿವಾಸಿಗಳು ಮಾಡಬಹುದಾದ ಸರಕುಗಳಿಗೆ ಬೇಡಿಕೆ ಹೆಚ್ಚಾದರೂ ಅವುಗಳ ಬೆಲೆಯಲ್ಲಿ ಹೆಚ್ಚಳ ಆಗಲೇ ಇಲ್ಲ. ಈ ಕಡು ಬಡವರು, ನಿತ್ಯ ಬಳಸುವ ಉಪ್ಪು, ಎಣ್ಣೆ, ಕಾಳು ಕಡ್ಡಿಗಳ ಬೆಲೆ ಗಗನಕ್ಕೆ ಏರಿದ್ದರಿಂದ ಬಾಳುವೆ ನಡೆಸುವದೇ ಕಷ್ಟಕ್ಕಿಟ್ಟುಕೊಂಡಿತು. ಸಾಲದ್ದಕ್ಕೆ ಶತಕಗಳಿಂದ ಅವರು ಸಾಗುವಳಿ ಮಾಡುತ್ತಿದ್ದ ಭೂಮಿ, ಬೇಟೆ ಇತರ ಸಾಮಗ್ರಿ ಪಡೆಯುತ್ತಿದ್ದ ಅರಣ್ಯ ಪ್ರದೇಶಗಳು ಖಣಿ ಕಂಪನಿಗೆ ಸೇರಿದ್ದರಿಂದ ನಿರುದ್ಯೋಗಿಯಾದರು. ಹೊಟ್ಟೆಪಾಡಿಗೆ ಹಲವಾರು ಆದಿವಾಸಿಗಳು, ಖಣಿಗಳಲ್ಲಿ ಚಿಕ್ಕ ಪುಟ್ಟ ಕೆಲಸಗಳಿಗೆ ಸೇರಿಕೊಂಡು. ಗಿರಿ ಕಾಡುಗಳಿಂದ ಬಂದು ಕಾರ್ಮಿಕರ 'ಗೂಡು' ಗಳಲ್ಲಿ ಸೇರಿಕೊಳ್ಳುವಂತಾಯಿತು. ತಮ್ಮ ಹುಟ್ಟು ಸಂಸ್ಕೃತಿ ಮರೆತು ಕಾರ್ಮಿಕರಾಗಿ ಪರಿವರ್ತನೆ

ಹೊಂದುವದು ಸುಲಭವಾಗಿರಲಿಲ್ಲ. ಜಾತೀಪದ್ಧತಿ ಅರಿಯದವರನ್ನು ಇತರ ಕಾರ್ಮಿಕರು ಅಸ್ಪೃಶ್ಯರಂತೆ ನಡೆಸಿಕೊಳ್ಳಲಾರಂಭಿಸಿದರು. ಅಲ್ಲದೆ ಬೇರಾರೂ ಮಾಡದ ಕೆಲಸವನ್ನು ಒಪ್ಪಿಕೊಂಡದ್ದರಿಂದ ತಮ್ಮ ಕುಲದವರಿಂದಲೇ ತಿರಸ್ಕಾರಕ್ಕೆ ಒಳಪಡಬೇಕಾಯಿತು. ಇಬ್ಬಗೆಯ ಜಾತೀಯತೆ ಇದು! ಇನ್ನಿತರರ ಸರಿಸಮಾನರೆನಿಸಿಕೊಳ್ಳಲು ಅವರ ಆಹಾರ, ರೀತಿ-ನೀತಿ, ಭಾಷೆ, ಬಟ್ಟೆ-ಬರೆಗಳ ಅನುಕರಣೆ, ಜೊತೆಗೆ ಕಳ್ಳಸೆರೆ, ಜೂಜಾಟಗಳೂ ರೂಢಿಯಾದವು. ಹಣಕ್ಕಾಗಿ ದೇಹ ವಿಕ್ರಯವೆಂಬ ವಿಚಾರವನ್ನೇ ಅರಿಯದ ಮುಗ್ಧರು, ತಮ್ಮ ಹಳ್ಳಿಗಳಿಂದ ದೂರವಿರುವವರು, ವೇಶ್ಯಾವಾಟಿಕೆಗಳಿಗೆ ಹೋಗಲಾರಂಭಿಸಿದರು. ಅವರ ಗ್ರಾಮಜೀವನ ಇದರಿಂದ ಬುಡಮೇಲಾಯಿತು. ಗಳಿಕೆ ಸಾಕಾಗದಿದ್ದ ಕಾರ್ಮಿಕ, ಹೆಂಡತಿಯನ್ನು ಅಧಿಕಾರಿಗಳ ಮನೆಗೆಲಸಕ್ಕೂ ಕಳಿಸಲಾರಂಭಿಸಿದ. ಅಲ್ಲಿ ಒಡತಿಗಿಂತ ಒಡೆಯನ ಶೋಷಣೆ ಹೆಚ್ಚಾಯ್ತು. ಇಂಥ ಕಾಮುಕ ಶೋಷಣೆಗೆ ಒಳಗಾದ ಮುಗ್ಧೆಯರಿಗೆ ಅವರ ಜನಾಂಗದವರೂ ತಿರಸ್ಕರಿಸಿಬಿಡುವದರಿಂದ, ವೇಶ್ಯಾವಾಟಿಕೆಗಳು ಒಳ್ಳೆಯ ಲಾಭಮಾಡಿಕೊಳ್ಳುತ್ತಿವೆ.

ಅಂಗಡಿಕಾರ, ತಾನು ಕಂಡುಕೊಂಡ ವಿಷಯವನ್ನು ಹೇಳಿ ಮುಗಿಸುತ್ತಿದ್ದಂತೆ ತಲೆಗೆ ಉಕ್ಕಿನ ಹೆಲ್‌ಮೆಟ್, ಮುಖಕ್ಕೆ ಕಲ್ಲಿದ್ದಲಿ ಧೂಳು, ಕೊಳೆಯಾದ ಬಟ್ಟೆಬರೆ, ಕೈಯಲ್ಲಿ ಪಿಕಾಸು - ಗುದ್ದಲಿ ಹಿಡಿದ ದೃಢಕಾಯನೊಬ್ಬ ಚಹಾಪಾನಕ್ಕಾಗಿ ಒಳಗೆ ಬಂದ. 'ಬಾಬೂಜಿ, ಇವನು ನಾನು ವಿವರಿಸಿದಂಥ ಒಬ್ಬ ಗೊಂಡ ಆದಿವಾಸಿ - ಕೆಲಸಗಾರ' ಎಂದು ಅಂಗಡಿಕಾರ ಪರಿಚಯಿಸಿದ. ಕೈಯಲ್ಲಿ ಬಿಲ್ಲು - ಬಾಣ ಕೊಡಲಿಗಳನ್ನು ಹಿಡಿದು, ಸ್ವಚ್ಛಂದವಾಗಿ ಕಾಡಿನಲ್ಲಿ ಓಡಾಡಿಕೊಂಡಿದ್ದ. ಅವನ ಹಿಂದಿನ ಜೀವನ ಕಲ್ಪಿಸಿಕೊಂಡು ಮರುಗುವಂತೆ ಆಯಿತು.

ಕಲ್ಲಿದ್ದಲ ಗಣಿಗಳಿಂದಾಗಿ ಒಂದು ಮೂಲ ಸಂಸ್ಕೃತಿಯೇ ಮಣ್ಣುಪಾಲಾಗುವಂತೆ ಆಯಿತಲ್ಲ! ಎಂದು ತಿಳಿದು ಅತೀವ ಖೇದವಾಯಿತು. ಉತ್ತರ ಅಮೇರಿಕೆಯಲ್ಲಿ ರೆಡ್ ಇಂಡಿಯನ್‌ರಿಗಾದ ಅನ್ಯಾಯವನ್ನು ಹೋಗಲಾಡಿಸಲು, ಅಲ್ಲಿಯ ಸರಕಾರ, ನ್ಯಾಯಾಲಯಗಳು ಹೇಗೆ ಮುಂದೆ ಬಂದವು ಎಂದು ಸ್ಮರಿಸಿಕೊಳ್ಳುವಂತೆ ಆಯಿತು. ಯುರೋಪಿನಿಂದ ವಲಸೆ ಬಂದವರೆಲ್ಲ ಸ್ಥಾನೀಯರೊಡನೆ ಕಾದಾಡಿ, ಅವರ ಭೂಮಿ ಕಸಿದುಕೊಂಡದ್ದರಿಂದ ಅವರೆಲ್ಲ ನಿಸ್ಸಹಾಯಕರಾಗಿದ್ದರು. ಅಂತೆಯೇ ಸರಕಾರ, ಅವರಿಗಾಗಿ ದೊಡ್ಡ ದೊಡ್ಡ ಅರಣ್ಯ ಪ್ರದೇಶಗಳನ್ನು ಕಾದಿರಿಸಿತು. ಅಲ್ಲಿ ಮೂಲನಿವಾಸಿಗಳು ಸರ್ವತಂತ್ರ ಸ್ವತಂತ್ರರು. ಅವರ ನದಿಗಳಲ್ಲಿ ಮೀನು ಹಿಡಿದ ಅಪರಾಧಕ್ಕೆ ಶಿಕ್ಷೆ ಅನುಭವಿಸಿದ ಅಮೇರಿಕನ್ನರೂ ಇದ್ದಾರೆ. ಅಲ್ಲಿಯ ಓಕ್ಲಾಹೋಮಾ ರಾಜ್ಯದಲ್ಲಿ ರೆಡ್ ಇಂಡಿಯನ್ನರು ವಿಪುಲ ಸಂಖ್ಯೆಯಲ್ಲಿ ಇದ್ದುದರಿಂದ, ಅವರಿಗಾಗಿ ಕಾಯ್ದಿರಿಸಿದ ಪ್ರದೇಶದ ವಿಸ್ತಾರವೂ ಅಧಿಕವಾಗಿತ್ತು. ಆ ಸ್ಥಳದಲ್ಲಿ ಪೆಟ್ರೋಲಿನ ಪತ್ತೆಯಾದಾಗ, ಅಲ್ಲಿ ಸರಕಾರ ತಾನು ಕೊಡಮಾಡಿದ ಪ್ರದೇಶವನ್ನು ಕಸಿದುಕೊಳ್ಳದೇ, ಅವರಿಗೆ ಯೋಗ್ಯವಾದ ಪರಿಹಾರ ಧನವನ್ನು ಕೊಡಮಾಡಿತು. ಇಷ್ಟಾದರೂ ಸರಕಾರ ಕೊಡಮಾಡಿದ ಮೊತ್ತ ಕಡಿಮೆ, ಎಂದು ರೆಡ್ ಇಂಡಿಯನ್ ಮುಖಂಡರು, ಇಂದಿಗೂ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿಯೇ ಇದ್ದಾರೆ. ಪರಾಸಿಯದಲ್ಲಿ ಸಿಕ್ಕ ಕಲ್ಲಿದ್ದಲು ಪ್ರಮಾಣಕ್ಕೆ ಆದಿವಾಸಿಗಳಿಗೆ ಪರಿಹಾರ ಧನ ಕೊಡಮಾಡಿದ್ದರೆ, ಪ್ರತಿಯೊಬ್ಬನೂ ಲಕ್ಷಾಧೀಶನಾಗುವದರಲ್ಲಿ ಸಂದೇಹವಿರಲಿಲ್ಲ! ಈಗ ಬಡಕಾರ್ಮಿಕನಾಗಿ ಮಾರ್ಪಟ್ಟಿದ್ದಾನೆ. ಅಮೇರಿಕೆಯ ಮತ್ತು ನಮ್ಮಲ್ಲಿಯ ಪ್ರಜಾಪ್ರಭುತ್ವಕ್ಕೆ ಇಷ್ಟೇ ಅಂತರ.

ಇಲ್ಲಿ ಬರಲು ಕಾರಣ, ನಾರದರು ಏರ್ಪಡಿಸಿದ ಕಲಾಪ್ರದರ್ಶನವಾಗಿತ್ತು. ನಾರದರು ತಮ್ಮ ಪ್ರಸಿದ್ಧಿಗಾಗಿ, ಆಫೀಸರುಗಳಿಗೆ ಬೆಣ್ಣೆ ಹಚ್ಚಿ ಈ ಅವಕಾಶ ಗಿಟ್ಟಿಸಿದ್ದು ಸ್ಪಷ್ಟವಿತ್ತು. ಪ್ರಥಮ ನೋಟಕ್ಕೆ ಇದೊಂದು ಶಾಲಾ ಪ್ರದರ್ಶನವೆಂದು ತೋರಿತು. ಸಂಯೋಜಕರು, ಅರಳಲಿರುವ ಕಲಾಕಾರರಿಗೂ ಇಲ್ಲಿ ಅವಕಾಶವಾಗಬೇಕು, ಎಂದು ನಿರ್ಧರಿಸಿದ್ದರಿಂದ, ಭೂಮಿತಿಯ ನಕ್ಷೆಗಳೂ, ಹವ್ಯಾಸಿ

ಕಲಾವಿದರ ಅಪಕ್ವ ಕೃತಿಗಳೂ ಇದ್ದವು. ಇವುಗಳ ನಡುವೆ ಅಮೃತಾ ಶೇರ್‌ಗಿಲ್‌ಳ ಮೂರು ತೈಲಚಿತ್ರಗಳನ್ನು ನೋಡಿ ವಿಸ್ಮಯವಾಯಿತು. ಅಂಥ ಸುಪ್ರಸಿದ್ಧ ಕಲಾವಿದೆಯ ಬಾಲಿಶ ಕೃತಿಗಳು ಇಲ್ಲಿ ಹೇಗೆ ಬಂದವು? ಎಂದು ವಿಚಾರಿಸಿದೆ. ಹೆಸರು ಒಂದೇ. ಆದರೆ ಕಲಾವಿದ ಬೇರೆ! ಎಂಬ ಸ್ಪಷ್ಟನೆ ಬಂದಿತು. ವಾರಪತ್ರಿಕೆಯಲ್ಲಿ ಮಕ್ಕಳು ಪ್ರಕಟಿಸುವಂಥ ಬೆರಳಚ್ಚಿನಿಂದ ಸಿದ್ಧಪಡಿಸಿದ, ರೇಖಾಚಿತ್ರಗಳೂ ಅಲ್ಲಿದ್ದವು. ಇನ್ನೊಂದೆಡೆ ಕಲಾಕಾರನು ತಾನೆಂದೂ ನೋಡದ ಸಾಗರಗಾಮಿ ಹಡಗನ್ನು ನಿರ್ಮಿಸಿ ಇಟ್ಟಿದ್ದು ತನ್ನ ಅಜ್ಞಾನವನ್ನು ಪ್ರಕಟಿಸುವಂತೆ ಇತ್ತು. ಹೆಂಗಳೆಯರೆಲ್ಲ ತಂತಮ್ಮ ರಂಗೋಲಿಗಳಿಗೆ ಅಂತಿಮ ರೂಪು ಕೊಡುವದರಲ್ಲಿ ಮೈಮರೆತಿದ್ದರು. ಬೆಂಗಳೂರಿನಲ್ಲಿ ಪ್ರತಿದಿನ ಮನೆ-ಮನೆಯ ಮುಂದೆ ಬಿಡಿಸುವ ರಂಗೋಲಿ ಚಿತ್ರಗಳು ಇದಕ್ಕಿಂತ ಕಲಾಪೂರ್ಣವಾಗಿರುತ್ತವೆ, ಅನಿಸಿತು. ಪ್ಲಾಸ್ಟಿಕ್ ಹೂಗಳೊಂದಿಗೆ ಸ್ಪರ್ಧಿಸುವ ಕಾಗದದ ಹೂಗಳು ಅಧಿಕಸುವಾಸನೆ ಹೊತ್ತು ನಿಂತಿದ್ದವು. ಕಾಡುಗಳಲ್ಲಿ ವಿಪುಲವಾಗಿ ಸಿಗುವ ವಕ್ರವಕ್ರವಾಗಿರುವ ಕೊರಡಿನ ತುಂಡುಗಳನ್ನು ಪೀಠದ ಮೇಲೆ ಇರಿಸಿ ಕುದುರೆ, ಬಾತುಕೋಳಿ, ಜೆವೆಲಿನ್ ಒಗೆತ ಇತ್ಯಾದಿ ಶಿರೋನಾಮಗಳನ್ನು ಜೋಡಿಸಿ ಇಟ್ಟದ್ದು ನೋಡಿ ಮೋಜೆನಿಸಿತು. ಸ್ಥಳೀಯ ಸ್ಟುಡಿಯೋಗಳು ತೆಗೆದ ಫೋಟೊಗಳು.'ರೂಪಕಲಾ'ದಲ್ಲಿ ಪ್ರಕಟಿಸಬೇಕಾದ ನಟಿಯ ಚಿತ್ರ, 'ಕಾಮಕಲಾ' ಪುಸ್ತಕದಲ್ಲಿ ಬರಲು ಯೋಗ್ಯವಾದ ಚಿತ್ರಗಳೂ ಅಲ್ಲಿದ್ದವು. ಗೋಣು ಉಳುಕಿಸಿಕೊಂಡ ಬುದ್ಧನ ಚಿತ್ರವೂ ಅಲ್ಲಿತ್ತು. ಗಾಂಧಿ - ನೆಹರೂ ಅವರನ್ನೂ ಮರೆತಿರಲಿಲ್ಲ. ಅದೇ ಮಣ್ಣಿನ ಮಕ್ಕಳಾದ ಆದಿವಾಸಿಗಳ ಜೀವನದ ಕುರಿತಾದ ವಸ್ತು, ಯಾವ ಕಲಾಕಾರನನ್ನೂ ಆಕರ್ಷಿಸಲಿಲ್ಲವಲ್ಲ! ಎಂದು ಮರುಗುವಂತೆ ಆಯಿತು. ಗಣಿ ಮಾಲಕರಿಂದ ಸಹಾಯಧನ ಪಡೆದು, ಅವರನ್ನೇ ಮುಖ್ಯ ಅತಿಥಿಗಳಾಗಿ ಆಮಂತ್ರಿಸಿ, ತಮಗೆ ಬೇಕಾದವರಿಗೆಲ್ಲ ಬಹುಮಾನ ಕೊಡಿಸುವದು ಈ ಕಲಾ ಪ್ರದರ್ಶನದ ವೈಶಿಷ್ಟ್ಯವಾಗಿತ್ತು. ನಾರದರ ಈ 'ಯಶಸ್ಸಿ'ನಿಂದ ಕಾತರಗೊಂಡ ರುದ್ರಕುಮಾರರು ಪರಾಸಿಯದಲ್ಲಿ ತಮಗೆ ಬೇಕಾದವರ ಸಹಾಯದಿಂದ, ಇನ್ನೊಂದು ಕಲಾಪ್ರದರ್ಶನ ಏರ್ಪಡಿಸದೇ ಬಿಡಲಿಲ್ಲ. ಅಲ್ಲಿ ಕೂಡ ಹಾಕಿದ್ದ ಕಲಾವಸ್ತುಗಳೆಲ್ಲ ಒಬ್ಬನೇ ವ್ಯಕ್ತಿಯವು (ರುದ್ರಕುಮಾರರದು) ಎಂದು ನಾರದರು ಕೊಂಕು ಆಡದೇ ಬಿಡಲಿಲ್ಲ!

ಮಾಂಜರೇಕರ ಕುಟುಂಬದೊಂದಿಗೆ



ಮಧ್ಯಪ್ರದೇಶದ ಅಧ್ಯಯನದಲ್ಲಿ ಕುಸುಮಾಕರರು ನೀಡಿದ ನೆರವಿಗೆ ಕೊನೆ ಮೊದಲೇ ಇರಲಿಲ್ಲ. ಯಾವ ನೆರವು ಕೇಳಿದರೂ ಆಗದು, ಎಂದು ಹೇಳಿದ್ದೇ ಇಲ್ಲ. ಅವರ ಪೂರ್ಣ ಹೆಸರು ಕುಸುಮಾಕರ ಶಾಂತಾರಾಂ ಮಾಂಜರೇಕರ್. ಪೂರ್ವಜರು ಮಹಾರಾಷ್ಟ್ರದ ಸಾವಂತವಾಡಿಯವರಾದರೂ ತಂದೆಯವರು ನಾಗಪುರದಲ್ಲಿ ವಕೀಲರಾಗಿದ್ದರಂತೆ. ಆಗ ಮಧ್ಯಭಾರತ ಪ್ರಾಂತದ ಮುಖ್ಯ ಸ್ಥಳ ನಾಗಪುರವಾಗಿದ್ದರಿಂದ ಅವರು ಖಟ್ಲೆಗಳ ವಿಚಾರದಲ್ಲಿ ಛಿಂದವಾಡಾಕ್ಕೆ ಬಂದು ಹೋಗುತ್ತಿದ್ದರಂತೆ. ಇಲ್ಲಿಯ ಪ್ರಶಾಂತ ತಾಣಕ್ಕೆ ಮನಸೋತು, ದೊಡ್ಡ ತೋಟವೊಂದನ್ನು ಖರೀದಿಸಿ ಗ೯ಕಿಗರ ಹಿಂದೆಯೇ ಮನೆಯನ್ನು ಕಟ್ಟಿಸಿದರು. ನಿವೃತ್ತಿಯ ನಂತರ ಮುಂಬೈ ಮರಾಠಿಗರು ಪುಣೆಗೂ, ಪುಣೆಯವರು ಕೊಲ್ಹಾಪುರಕ್ಕೂ, ಕೊಲ್ಹಾಪುರದವರು ಬೆಳಗಾಂವಕ್ಕೂ ವಲಸೆ ಹೋಗಿ ವಿಶ್ರಾಂತಿಧಾಮಗಳನ್ನು ಕಟ್ಟಿಕೊಳ್ಳುವಂತೆ, ನಾಗಪುರದವರು ಛಿಂದವಾಡಾಕ್ಕೆ ಬರುವದು ಸಾಮಾನ್ಯವಾಗಿತ್ತಂತೆ. ಮೊದಮೊದಲು ಡಾಕ್ಟರರು, ವಕೀಲರು, ಸಾಹಿತಿಗಳು ಬಂದರು. ಆನಂತರ ಜನಸಾಮಾನ್ಯರೂ ಅವರನ್ನು ಹಿಂಬಾಲಿಸಿದರು. ಅಂತೆಯೇ ಇಂದಿಗೂ ಛಿಂದವಾಡಾದ ಜನವಸತಿಯ ಶೇಕಡಾ ಐವತ್ತರಷ್ಟು ಮರಾಠಿಗರಿದ್ದಾರಂತೆ. ಮರಾಠೀ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳನ್ನು; ವಾಚಾನಾಲಯವನ್ನು ಜೊತೆಗೆ ದೊಡ್ಡ ಸಂಘವನ್ನು

ಕಟ್ಟಿಕೊಂಡು ಹಾಯಾಗಿದ್ದಾರೆ. ಹೊಸ ತಲೆಮಾರಿನವರು ಮರಾಠಿಗಿಂತ ಹೆಚ್ಚೆಚ್ಚಾಗಿ ಹಿಂದಿಯನ್ನೆ ಬಳಸುತ್ತಾರೆ ಎಂಬುದೇ ಹಿರಿಯರ ಕೊರಗು.

ಒಂದು ರವಿವಾರ, ಭೋಪಾಲ ಆದಿವಾಸಿ ಸಂಶೋಧನಾಲಯದ ಕೊರಡು-ಕಿತ್ತನೆಯ ಪರಿಣತ ಖುಶ್ವಾರ ಜೊತೆಗೆ ಭೋಜನದಲ್ಲಿ ಪಾಲುಗೊಳ್ಳಲು ಕುಸುಮಾಕರರು ಆಮಂತ್ರಿಸಿದ್ದರು. ಛಿಂದವಾಡಾ - ನಾಗಪುರ ರಸ್ತೆಯಲ್ಲಿರುವ ಅವರ ಮನೆ ಭವ್ಯವಾಗಿದ್ದರೂ ಹಳೆಯ ಮಾದರಿಯದಾಗಿತ್ತು. ಕುಟುಂಬದ ಸದಸ್ಯರೆಲ್ಲ ತುಂಬ ಸ್ನೇಹಪರರಾಗಿ ತೋರಿದರು. ಹಿರಿಯ ಹುಡುಗಿ ಶ್ರೀಲೇಖ, ಹತ್ತೇ ವರ್ಷದವಳಾಗಿದ್ದರೂ, ತುಂಬ ಚೂಟಿಯಾಗಿ, ವಿನಯವಂತೆಯಾಗಿದ್ದಳು. ಆಗಂತುಕನನ್ನು ನಗುಮುಖದಿಂದ ವಂದಿಸಿ ಸ್ವಾಗತಿಸಿದಳು. ತಾನು ನಾಲ್ಕನೆಯ ಕ್ಲಾಸಿನಲ್ಲಿ ಓದಿತ್ತಿದ್ದು ವರ್ಗಕ್ಕೆ ಪ್ರಥಮಳಾಗಿ ಪಾಸು ಮಾಡಿದ್ದೇನೆ ಎಂದಳು. ದ್ವಿತೀಯ ಕನ್ಯೆ ಮಾಧವಿ, ಆರು ವರ್ಷದವಳಾಗಿದ್ದು ಮೊದಲ ತರಗತಿಯಲ್ಲಿ ಓದುತ್ತಿದ್ದಾಳಂತೆ. ಬೇಸಗೆಯ ಧಗೆಯಿಂದ ಅವಳ ಕಪ್ಪಾದ ದಪ್ಪ ಕೂದಲಿನಲ್ಲಿ ಬೊಕ್ಕೆಗಳು ಕಾಣಿಸಿಕೊಂಡದ್ದರಿಂದ ತಿಮ್ಮಪ್ಪನ ಹಜಾಮತಿ ಮಾಡಿಸಿದ್ದರು. ಆದರೂ ಅತ್ಯಂತ ಆಕರ್ಷಕವಾಗಿದ್ದಳು. ಅವಳ ಕೆಂದುಟಿ, ಸಂಪಗೆ ಮೊಗ್ಗಿನ ಮೂಗು, ಕಾಡಿಗೆ ತೀಡಿದಂತಿದ್ದ ಕಪ್ಪು ಕಣ್ಣು, ಸೇಬಿನ ಬಣ್ಣದ ಗಲ್ಲ, ಥೊಳೆಯುವ ಹಲ್ಲಿನ ಪಂಕ್ತಿಗಳನ್ನು ನೋಡುತ್ತಲೇ ಇರಬೇಕು ಎನ್ನುವಷ್ಟು ಸುಂದರವಾಗಿದ್ದವು. ನಾವಿಬ್ಬರೂ, ಬಾಲ್ಯ ವಿವಾಹ ರೂಢಿಸಿಕೊಂಡ ರಾಜಸ್ಥಾನಿಗಳಾಗಿದ್ದರೆ, ಸೊಸೆ ಮಾಡಿಕೊಳ್ಳುವ ವಿಚಾರವನ್ನು ಹಿಂದೆ ಮುಂದೆ ನೋಡದೇ ಪ್ರಸ್ತಾಪಿಸಬಹುದಾಗಿತ್ತು. ಮಾತನಾಡಲು ಬೇರೆ ಮುದ್ದು ಗಿಣಿಯಂತೆ, ಗೆಳೆತನ ಮಾಡಲು ಪಾರಿವಾಳದಂತೆ. ಮುಂಬೈಯಲ್ಲಿರವ ಅವಳ ಕುಂದಾಮಾವಶಿ, ಹೊಲಿಗೆಯಲ್ಲಿ, ಚಿತ್ರ ಬಿಡಿಸುವದರಲ್ಲಿ ಬಹಳ ಜಾಣೆಯಂತೆ. ಅವಳು ಮಾಡಿ ಕಳಿಸಿದ ಬಳೆಗಳನ್ನು ತಂದು ತೋರಿಸಿದಳು. ಕೃತಕ ಮುತ್ತುಗಳನ್ನು ನೂಲಿಗೆ ಪೋಣಿಸಿ, ಮಾಡಿದ ಬಳೆಗಳು ಆಕರ್ಷಕವಾಗಿ ಕಂಡವು. ನಾಲ್ಕು ವರ್ಷದ ಜಯದೀಪನು (ದೀಪು) ಮಹಾ ಕಿಲಾಡಿ. ಈ ಅತಿಥಿಯ ಮೀಸೆ ಅವನಿಗೆ ಬಲು ಆಕರ್ಷಕವಾಗಿ ಕಂಡಿರಬೇಕು. ಅಂತೆಯೇ ತೊಡೆಯನ್ನೇರಿ ಕುಳಿತು, ನಿಮಿಷಕ್ಕೊಂದು ಬಾರಿ ಮೀಸೆಯನ್ನು ತಿರುವಿದಾಗಲೇ ಅವನಿಗೆ ನೆಮ್ಮದಿ.

ಶ್ರೀಮತಿ ನಲಿನಿ ಮಾಂಜರೇಕರ್‌ಳು ಮೂಲತಃ ರತ್ನಾಗಿಯ ಕುಟುಂಬಕ್ಕೆ ಸೇರಿದವಳಾಗಿದ್ದರೂ ಬೆಳೆದದ್ದು ಮುಂಬೈಯಲ್ಲಿ. ಅರ್ಥಶಾಸ್ತ್ರದಲ್ಲಿ ಪದವೀಧರೆಯಾಗಿ, ದೂರವಾಣಿಯಲ್ಲಿ ನೌಕರಿಯನ್ನೂ ಮಾಡುತ್ತಿದ್ದಳಂತೆ. ಈಗ ಮಾತ್ರ ಪತಿ, ಪುತ್ರಿಯರು, ಪುತ್ರನ ನೆಮ್ಮದಿಗಾಗಿ, ಸಕಲ ಚಟುವಟಿಕೆಗಳನ್ನೂ ಮನೆಗೇ ಸೀಮಿತಗೊಳಿಸಿದ್ದಾಳಂತೆ. ಬಡಿಸಲು ತಾನೇ ಮುಂದಾಗಿದ್ದಳು. ಉಳಿದವರಿಗೆಲ್ಲ ಗರಿಗರಿಯಾದ ಚಪಾತಿಗಳನ್ನು ಬಡಿಸಿದರೆ, ಕರ್ನಾಟಕದವನು ಅನ್ನ ನುಂಗುವ ಧೀರನೆಂದು ನಂಬಿ ಮುದುಕರಿಗೆ ಪ್ರಿಯವಾಗುವಂತಹ ಮೆತ್ತಗಿನ ಅನ್ನವನ್ನೆ ಮಾಡಿದ್ದಳು. ಎಲ್ಲ ವ್ಯಂಜನಗಳೂ ಉತ್ತಮವಾಗಿದ್ದು, ಚಪಾತಿಗೆ ಅನುಕೂಲವಿದ್ದವು. ಚಪಾತಿ ಬೇಕೆನಿಸಿದರೂ ಹೇಳಲು ಸೌಜನ್ಯ ಅಡ್ಡಿ ಬಂದಿತು. ಹುಟ್ಟಿದ್ದು ಅನ್ನವೇ ಆಹಾರವಾಗಿದ್ದ ಪ್ರದೇಶವಾದರೂ, ಭಕ್ರಿ, ಚಪಾತಿ, ನಾನ್, ಪರಾಠಗಳು ಈ ನಾಲಿಗೆಗೆ ಹೆಚ್ಚಾಗಿಯೇ ರುಚಿಸುತ್ತವೆ ಎಂಬ ಮಾತು, ಆ ಮಮತಾಮಯಿಗೆ ಪಾಪ, ಹೇಗೆ ಹೊಳೆಯಬೇಕು? ಚಪಾತಿಗಳನ್ನು ತಪ್ಪಿಸಿಕೊಂಡರೂ, ಊಟದ ರುಚಿ ಕಡಿಮೆಯಾಗಲಿಲ್ಲ. ಹೂಕೋಸಿನ ಪಲ್ಯ, ಆಲೂಗಡ್ಡೆಯ ರಸಭಾಜಿ, ಬಾಳೇಕಾಯಿ ಫೋಡಿ, ಕರಿದ ಹಪ್ಪಳಗಳು ಉದಾರ ರೀತಿಯಲ್ಲಿ ಉದರವನ್ನು ಸೇರಿದವು. ಊಟದುದ್ದಕ್ಕೂ ನಲಿನಿಬಾಯಿ ವಿವಿಧ ವಿಷಯಗಳ ಕುರಿತು ನಗುನಗುತ್ತಾ ತನ್ನ ಅನಿಸಿಕೆಗಳನ್ನು

ಹೇಳುತ್ತಲೇ ಇದ್ದುದರಿಂದ ಪರಸ್ಪರ ಪರಿಚಯ-ಗೌರವಗಳು ಬೆಳೆಯಲು ಅನುಕೂಲವೇ ಆಯಿತು. ಕಲಿಯುವದರಲ್ಲಿ, ನೌಕರಿ ಮಾಡುವದರಲ್ಲಿ ಜೀವನದ ಅಧಿಕ ಸಮಯ ಕಳೆದದ್ದರಿಂದ ನನಗೆ ಅಡಿಗೆಯೇ ಬರುವದಿಲ್ಲವೆಂದು ಯಜಮಾನರು ಸದಾಕಾಲ ಮೂದಲಿಸುತ್ತಲೇ ಇರುತ್ತಾರೆ. ನೀವೂ ಅವರ ವಾದವನ್ನು ಸಮರ್ಥಿಸುವಂತೆ ಇದೆಯೇ? ಎಂದು ವಿಶೇಷ ಭಕ್ಷ್ಯ ಬಡಿಸುತ್ತಾ, ವೈಯ್ಯಾರದಿಂದ ಪತಿಯತ್ತ ನೋಡಿದಳು. ಹೊಗೆಸೊಪ್ಪು-ತಾಂಬೂಲ ಭಕ್ತರಿಗೆ ಇಂಥ ಉತ್ತಮ ಅಡಿಗೆಯ ಸವಿ ಹೇಗೆ ತಿಳಿದೀತು? ಎಂದು ಮೆಚ್ಚಿಗೆ ಸೂಚಿಸಿದಾಗ ಹದಿ ವಯಸ್ಸಿನವಳಂತೆ ಪಕಪಕನೆ ನಕ್ಕಳು." ಅದೆಷ್ಟೇ ಮನೆಗೆಲಸಗಳಿದ್ದರೂ ದಿನಪತ್ರಿಕೆಯನ್ನು ಓದದೇ ಇರಲಾರೆ! ನಿಮ್ಮ ರಾಜ್ಯದ ಕುರಿತು ಏನಾದರೂ ಸಮಾಚಾರ ಇದ್ದೇ ಇರುತ್ತದೆ. ಚಲಚ್ಚಿತ್ರ, ಸಾಹಿತ್ಯ, ನಾಟಕ, ವಿಜ್ಞಾನ ಕ್ಷೇತ್ರಗಳಲ್ಲಿ ಕನ್ನಡಿಗರು ಒಂದಿಲ್ಲೊಂದು ಪ್ರಶಸ್ತಿಯನ್ನು ತಮ್ಮದನ್ನಾಗಿಸಿಕೊಳ್ಳುತ್ತ ಇದ್ದಾರಲ್ಲ! ಅವರ ಯಶಸ್ಸಿನ ಗುಟ್ಟನ್ನು ಮಧ್ಯಪ್ರದೇಶದ ಧೀಮಂತರಿಗೂ ಹೇಳಿಕೊಡಬಾರದೇ" ಎಂದು ಉದ್ಗರಿಸಿದಳು. " ಕರ್ನಾಟಕಕ್ಕೆ ಸಹಸ್ರಾರು ವರ್ಷಗಳ ಸಂಸ್ಕೃತಿ-ಸಾಧನೆಯ ಪರಂಪರೆಯಿದೆ. ಯುವಜನಾಂಗ ಅವುಗಳ ಕುರಿತಾಗಿ ತಲೆಕೆಡಿಸಿಕೊಳ್ಳದಿದ್ದರೂ ಬುದ್ಧಿಜೀವಿಗಳು ಸಾಹಿತ್ಯ-ಕಲೆಗಳ ರಚನೆಯಲ್ಲಿ ತೊಡಗಿದ್ದರಿಂದ ಅವುಗಳಲ್ಲಿ ಮಿಗಿಲೆನಿಸಿಕೊಂಡಿದ್ದಾರೆ. ನಿಮ್ಮ ರಾಜ್ಯದವರಿಗೆ ಐಷಾರಾಮಗಳ ಕಡೆಗೆ ಗಮನ ಜಾಸ್ತಿ!" ಎಂದು ನಗುತ್ತಲೇ ಹೇಳಿದಾಗ ಕೂಡಲೇ ಸಮರ್ಥಿಸಿದಳು. ಈ ಮಾತಿಗೆ ಪ್ರತಿ ಆಡಲೂ ಅವಕಾಶವಾಗದಂತೆ ಋಶ್ವಾ-ಕುಸುಮಾಕರರು ಬಾಯ್ತುಂಬ ತಾಂಬೂಲ ತುಂಬಿಕೊಂಡಿದ್ದರು.!

ಕುಸುಮಾಕರರು ಆದಿವಾಸಿ ಸಂಶೋಧನಾಲಯದ ಮೇಲ್ವಿಚಾರಕರಾಗಿ ದುಡಿಯುತ್ತಿದ್ದರಿಂದ ದೇಶದ ಅನೇಕಾನೇಕ ವಸ್ತು ಸಂಗ್ರಹಾಲಯಗಳನ್ನು ನೋಡಿ ಆಳವಾಗಿ ಅಭ್ಯಸಿಸಿದ್ದಾರೆ. ಹೈದರಾಬಾದಿನ ಸಾಲಾರ್‌ಜಂಗ್ ಮ್ಯುಝಿಯಂದ ಅಪೂರ್ವ ಕಲಾಕೃತಿಗಳು ಮಾಯವಾಗಲು ಹೇಗೆ ಅಲ್ಲಿಯ ಮಾಜಿ ನಿರ್ದೇಶಕರೇ ಹೊಣೆಗಾರರಾದರು. ಎಂಬುದನ್ನು ವಿವರಿಸಿದರು. ಸಂಗ್ರಹಾಲಯವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವಾಗ, ಅಪೂರ್ವ ಕೃತಿಗಳನ್ನು ನಾಪತ್ತೆ ಮಾಡಿಸಿ, ಅವುಗಳ ಸ್ಥಳದಲ್ಲಿ ಕೃತಕ ಕೃತಿಗಳನ್ನು ಸದ್ದಿಲ್ಲದೇ ತಂದು ಇರಿಸಿದರಂತೆ. ಕಲಾಕೃತಿಗಳನ್ನು ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಿಕ್ರಯಿಸಿ ಜೇಬನ್ನು ತುಂಬಿಸಿಕೊಂಡರು. ಅವರು ನಂತರ ಹೈದರಾಬಾದಿನಲ್ಲಿ ಕೊಂಡ ಆಸ್ತಿಯ ಬೆಲೆಯೇ ಆರುಲಕ್ಷ ರೂಪಾಯಿಗಳಿಗೆ ಮಿಕ್ಕಿತ್ತಂತೆ. ಅದು ಹೇಗೋ ಮೇಲಧಿಕಾರಿಗಳು ವರ್ಗಾಯಿಸಿದಾಗ, ಅದನ್ನು ರದ್ದು ಪಡಿಸಲು, ಭೂಮಿ-ಆಕಾಶವನ್ನೆಲ್ಲ ಒಂದು ಮಾಡಿದರು. ಆಸ್ತಿ-ಪಾಸ್ತಿ ಕೊಳ್ಳಲು ಅಪ್ಪರು ಧನ ಸಹಾಯ ಮಾಡಿದ್ದಾರೆ. ವಿವಾಹ ಬಾಹ್ಯ ಸಂಬಂಧದಿಂದ ಹುಟ್ಟುದರೇನಾಯಿತು? ತನ್ನ ಪತ್ನಿ ಅಪ್ಪಟ ಭೋಸಲೆ ರಾಜಮನೆತನದವಳು. ಮರಾಠಾ ರಕ್ತ ಅವಳ ಅಂಗಾಂಗಗಳಲ್ಲಿ ಹರಿಯುತ್ತಿದೆ! ಎಂದು ಎದೆಯುಬ್ಬಿಸಿ ಸಾರಿದರಂತೆ. ನಮ್ಮ ದೇಶದಲ್ಲಿ ತಪ್ಪಿಗೆ ತಕ್ಕ ಶಿಕ್ಷೆ ಇಲ್ಲದಿರುವದೇ ಇಂಥ ಭಂಡರ ಸಂಖ್ಯೆಯಲ್ಲಿ ಹೆಚ್ಚಳವಾಗುವದಕ್ಕೆ ಕಾರಣವಾಗಿದೆ. ಎಂದು ಯಾರೂ ತಲೆಕೆಡಿಸಿಕೊಂಡಂತೆ ಇಲ್ಲ.

ಬೀಡಾದಲ್ಲಿ ಹೊಸ ಜರ್ದಾ ಸೇರಿಸಿ ಅಗಿದಾಗ ಕುಸುಮಾಕರರಿಗೆ ಮಾತನಾಡಲು ಇನ್ನಷ್ಟು ಹುರುಪು ಬಂದಿತು. ಬಡೋದೆಯಲ್ಲಿ ನಡೆದ ಘಟನೆಯನ್ನು ವಿವರಿಸಲಾರಂಭಿಸಿದರು. ಮಳೆಯ

ನೀರು ಹರಿದು ಹೋಗಲು ನಾಲೆಯೊಂದನ್ನು ಅಗೆಯುವಾಗ ಕೆಲಸಗಾರನಿಗೆ ಐದು ಪಂಚಲೋಹದ ವಿಗ್ರಹಗಳು ಸಿಕ್ಕವು. ಅವನ್ನು ಏನು ಮಾಡುವದು ಎಂದು ಲೋಕಾರಾಮ್‌ನಿಗೆ

ತಿಳಿಯದೇ ಪರಿಚಯದ ಪುರೋಹಿತನಿಗೆ ಕೇವಲ ಹದಿನೈದು ರೂಪಾಯಿಗಳಿಗೆ ಮಾರಿಬಿಟ್ಟನಂತೆ. ಮುಂಬಯಿಯ ಆಪ್ತರು ಪುರೋಹಿತರಲ್ಲಿ ಆಗಮಿಸಿದಾಗ, ಇವು ಅತ್ಯಂತ ಬೆಲೆಬಾಳುವಂಥವು ಎಂದು ತಿಳಿದದ್ದರಿಂದ ಒಂದನ್ನು ಮಾರಲು ಮುಂಬಯಿಗೆ ಕಳಿಸಿದನಂತೆ. ಅಲ್ಲಿಯ ಹಳೆಯ ವಸ್ತುಗಳ ವ್ಯಾಪಾರಿ ಮೊದಲು ಐದುನೂರು ರೂಪಾಯಿ ಕೊಡುತ್ತೇನೆ ಎಂದವನು ನಂತರ ಆ ಮೊತ್ತವನ್ನು ಒಂದು ಸಾವಿರಕ್ಕೆ ಏರಿಸಿದ್ದರಿಂದ ಇದರಲ್ಲಿ ಏನೋ ಮೋಸವಿದೆ, ಎಂದು ಮಾರಲು ನಿರಾಕರಿಸಲಾಯಿತು. ಈ ಸಮಾಚಾರ ಬಡೋದೆಯಯ ವಿಶ್ವವಿದ್ಯಾಲಯದ ಪುರಾತನ ಇತಿಹಾಸ ವಿಭಾಗದ ಮುಖ್ಯಸ್ಥರಿಗೆ ತಿಳಿದು, ಅವರು ಆ ವಿಗ್ರಹವನ್ನು ಒಂದೂವರೆ ಸಾವಿರ ರೂಪಾಯಿಗೆ ಕೊಳ್ಳುತ್ತೇನೆಂದರು. ಪುರೋಹಿತನಿಗೆ ಆಸೆಯು ಹೆಚ್ಚಾಗಿ ಐದು ಸಾವಿರಕ್ಕಿಂತ ಒಂದು ಕವಡೆ ಕಡಿಮೆಯಾದರೂ ಕೊಡಲಾರೆ, ಎಂದು ಸಾರಿದನು. ಈ ಅಸಭ್ಯ ವರ್ತನೆಯಿಂದ ಮುಖ್ಯಸ್ಥರು ರೊಚ್ಚಿಗೆದ್ದು ಪೊಲೀಸ್ ಅಧಿಕಾರಿಗೆ ದೂರು ಇತ್ತರು. ಸಮವಸ್ತ್ರಧಾರಿಗಳು ಬೂಟು ಅಪ್ಪಳಿಸುತ್ತ ಪುರೋಹಿತನ ಮನೆಗೆ ಆಗಮಿಸಿದಾಗ ಅವನ ಜಂಘಾಬಲವೇ ಉಡುಗಿ ಹೋಯಿತು. 'ಏನಯ್ಯಾ, ನಿನಗೆ ಸರಕಾರೀ ಕಾನೂನುಗಳು ತಿಳಿಯವೆ? ಭೂಮಿಯಲ್ಲಿ ಧನ-ವಿಗ್ರಹಗಳು ಸಿಕ್ಕರೆ, ಅದನ್ನು ಕೂಡಲೇ ಸರಕಾರಕ್ಕೆ ತಿಳಿಸಬೇಕು. ಅಲ್ಲದೇ ಟ್ರಝುರಿಯಲ್ಲಿ ಅದನ್ನು ಜಮಾ ಮಾಡಿಸಬೇಕು. ಹಾಗೆ ಮಾಡದಿದ್ದರೆ ಅಪಾದಿತನನ್ನು ಬಂಧಿಸುವ ಅಧಿಕಾರ ನಮಗಿದೆ, ಎಂದು ಜಬರಿಸಿದಾಗ, ಆ ಅಸಹಾಯಕ ಬ್ರಾಹ್ಮಣನು ಐದೂ ವಿಗ್ರಹಗಳನ್ನು ಬಿಡಿಗಾಸೂ ಪಡೆಯದೇ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿಬಿಟ್ಟನಂತೆ. ದೈವೇಚ್ಛೆ! ಎಂದು ನಿಟ್ಟುಸುರುಬಿಟ್ಟಿರಬೇಕು! ಅವುಗಳಲ್ಲಿ ವಿಷ್ಣುವಿನ ಒಂದೇ ಮೂರ್ತಿಯನ್ನು ಶುಭ್ರಗೊಳಿಸಿ ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಮುಂಬದಿಯಂತೆ ಹಿಂಭಾಗವನ್ನೂ ಸುಂದರವಾಗಿ ಕೊರೆದಿದ್ದರಿಂದ, ಪ್ರೇಕ್ಷಕರಿಗೆ ಅದರ ದರ್ಶನವೂ ಆಗಬೇಕೆಂದು ಬೃಹತ್ ಕನ್ನಡಿಯೊಂದನ್ನು ಹಿನ್ನೆಲೆಯಲ್ಲಿ ನಿಲ್ಲಿಸಲಾಗಿದೆಯಂತೆ. ಈ ಸುಂದರ ಮೂರ್ತಿಯೊಂದಕ್ಕೆ ಅರವತ್ತು ಸಾವಿರ ರೂಪಾಯಿಗಳ ವಿಮೆ ಇಳಿಸಲಾಗಿದೆ ಎಂದರೆ, ಆ ಐದು ಮೂರ್ತಿಗಳು ಎಷ್ಟು ಅಪೂರ್ವವಾದವುಗಳು ಎಂಬ ಕಲ್ಪನೆ ಬರುವಂತಿದೆ.

ಭೋಪಾಲಕ್ಕೆ ಹಿಂದಿರುಗುವ ಟಿಕೇಟನ್ನು ಕಾಯ್ದಿರಿಸಲು ಖುಶ್ವಾರು ಹೊರಟು ನಿಂತದ್ದರಿಂದ ಕುಸುಮಾಕರರು ಆತ್ಮೀಯತೆಯಿಂದ ಖಾಸಗಿ ವಿಚಾರಗಳನ್ನು ಹೇಳಲಾರಂಭಿಸಿದರು. ಅವರದು ಸಾಹಿತಿಗಳ ಕುಟುಂಬವಂತೆ. ಪಿತರು ಬಂಗಾಲಿಯಲ್ಲಿ ಪರಿಣತರಾಗಿ ಆ ಭಾಷೆಯ ಅದೆಷ್ಟೋ ಕೃತಿಗಳನ್ನು ಮರಾಠಿಗೆ ಭಾಷಾಂತರಿಸಿದ್ದರು. ಕುಸುಮಾಕರರ ಹಿರಿಯಣ್ಣ ಪ್ರಭಾಕರ್ ಕಥಾ ಸಾಹಿತ್ಯದಲ್ಲಿ ಎತ್ತಿದ ಕೈ. ಅವರ 'ಉಷಃಪ್ರಭಾ' ಸಂಕಲನ ಅತ್ಯಂತ ಜನಪ್ರಿಯವಾಗಿದೆ. ನಾಗಪುರ, ಮುಂಬೈ ಆಕಾಶವಾಣಿ ಕೇಂದ್ರಗಳಿಂದ ಮೇಲಿಂದ ಮೇಲೆ ಅವರ ಕತೆಗಳು ಬಿತ್ತರಗೊಳ್ಳುತ್ತವೆ. ಅಲ್ಲದೆ ಟೆನಿಸ್ ಚೆಸ್‌ಗಳಲ್ಲೂ ಪರಿಣತರು. ಪಿತರು ಬೇಗನೆ ಕಾಲವಶರಾಗಿದ್ದರಿಂದ ಮನೆಯ ಜವಾಬ್ದಾರಿಗಳೆಲ್ಲ ಅಣ್ಣನ ಮೇಲೆ ಬಿದ್ದವು. ನನ್ನ ಪಾಲಿಗಂತೂ ಅವರು ದೇವರ ಸಮಾನ. ಆದರೆ ಈ ಮಾತನ್ನು ಅತ್ತಿಗೆ ಕುರಿತು ಹೇಳಲಾರೆ. ಚಿಕ್ಕ ಚಿಕ್ಕ ಮಾತಿಗಾಗಿ ಕಲಹ. ವಾರಗಿತ್ತಿಯರಲ್ಲಿ ಮಾತು ಕೂಡ ಇಲ್ಲ. ಇದೇ ಕಟ್ಟಡದ ಇನ್ನೊಂದು ಭಾಗದಲ್ಲಿ ಅಣ್ಣನ ಸಂಸಾರ ಇದ್ದರೂ ನಾವು ಪರಕೀಯರಂತೆ ಇರುವ ಸ್ಥಿತಿ ಬಂದಿದೆ, ಎಂದು ಮರುಗಿದರು. ತಾಯಿ ಅತಿ ದಯಾಮಯಿಯಾದ್ದರಿಂದ ಕಾಡುಮನುಷ್ಯನಂತೆ ಬೆಳೆಯಲಾರಂಭಿಸಿದ್ದೆ! ಅಣ್ಣನವರ ಮಾರ್ಗದರ್ಶನ, ಮುಂದಾಲೋಚನೆಗಳಿಂದಾಗಿ ಜೀವನದಲ್ಲಿ ನಾನೂ ಒಬ್ಬ ಮನುಷ್ಯನಂತೆ ಬದುಕಲು ಸಾಧ್ಯವಾಯಿತು, ಎಂದು ನಿಟ್ಟುಸುರುಬಿಟ್ಟರು.

ನಿಮ್ಮ ಪ್ರಭಾಕರ ಅಣ್ಣನವರನ್ನು ಕಾಣಬಹುದೇ? ಎಂದು ವಿಚಾರಿಸುತ್ತಿದ್ದಂತೆ, ಅವರಿ ನಾವಿದ್ದಲ್ಲಿ ಬರಲಾರಂಭಿಸಿದ್ದರು. ಸುಮಾರು ಅರವತ್ತು ವಯಸ್ಸಿನ ಅವರ ವ್ಯಕ್ತಿತ್ವ ಭವ್ಯವಾಗಿತ್ತು. ಆಗಷ್ಟೆ ಹೈದರಾಬಾದಿನಲ್ಲಿ ಎಡಕಣ್ಣಿನ ಮೋತಿಬಿಂದುವಿನ ಆಪರೇಶನ್ ಮಾಡಿಸಿಕೊಂಡದ್ದರಿಂದ ಕಪ್ಪು ಚಶ್ಮಾ ಧರಿಸಿದ್ದರು. ಆಗಂತುಕನ ಊರು, ಭಾಷೆ, ಜಾತಿಗಳ ಬಗ್ಗೆ ಕೂಲಂಕುಷವಾಗಿ ವಿಚಾರಿಸಿದರೇ ಹೊರತು ಸಾಹಿತ್ಯದ ಕುರಿತು ಚಕಾರವೆತ್ತಲಿಲ್ಲ! ನಂತರ ಸಾರಸ್ವತ, ಗೌಡಸಾರಸ್ವತ, ಕಾರಭಾರಿಗಳಲ್ಲಿರುವ ಸೂಕ್ಷ್ಮ ಒಳಭೇದಗಳ ಕುರಿತಾಗಿ ಚರ್ಚಿಸಿದರು. ಮಾಂಜ್ರೇಕರರು ಮೂಲತಃ ಕೇಕ್ರೆಯವರಂತೆ ಗೌಡಸಾರಸ್ವತರಾಗಿದ್ದು ಅವರ ಕುಲದೇವರು ಗೋವೆಯಲ್ಲಿಯೇ ಇದ್ದುದನ್ನು ಸ್ಮರಿಸಿಕೊಳ್ಳಬಹುದು. ಎರಡೂ ಕುಟುಂಬದವರು ಕುಲದೇವತಾ ದರ್ಶನಕ್ಕೆ ಹೋಗಬೇಕೆಂದು ಅದೆಷ್ಟೋ ವರ್ಷಗಳಿಂದ ಕನಸು ಕಟ್ಟುತ್ತಲೇ ಬಂದರೂ ಅದಿನ್ನೂ ನನಸಾಗಿಲ್ಲವಂತೆ. ನಂತರ ಅಣ್ಣ-ತಮ್ಮಂದಿರಲ್ಲಿ ಕೊಳ್ಳಬೇಕಾದ ಚಾದರ ಮತ್ತು ಜಮಖಾನೆಗಳ ಬಗ್ಗೆ ಒಂದು ಗಂಟೆ ಕಾಲ ಚರ್ಚೆಯಾಯಿತು. ಪತ್ನಿಯಾಗಿ ಬರಲಿರುವವಳ ಬಗ್ಗೆಯೂ ಇಷ್ಟೊಂದು ತಲೆಕೆಡಿಸಿಕೊಂಡಿರಲಿಲ್ಲವಲ್ಲ! ಎಂದು ನೆನೆದು ನಗು ಬಂದಿತು. ಪ್ರಭಾಕರರ ಇಂಜಿನಿಯರ್ ಮಗ ಇಂದೋರಿನಲ್ಲಿ ಕೆಲಸಕ್ಕಿದ್ದ. ಅಲ್ಲಿಯ ಕನ್ಯೆಯೊಂದಿಗೆ ಅವನ ವಿವಾಹ ನಿಶ್ಚಯವಾಗಿತ್ತಂತೆ. ಮದುವೆಯ ತಯಾರಿಗಾಗಿ ಮಗನಿಗೆ ಎಷ್ಟು ಹಣ ಕಳಿಸಬೇಕು, ಎಂದು ನಿರ್ಧರಿಸಲಾಗದೇ ಪೇಚಾಡಿದರು. ನೌಕರಿಗಿದ್ದ ಮಗನ ಮದುವೆಗೆ ಹೀಗೆ ಒದ್ದಾಡಿದರೆ ಮಗಳ ಮದುವೆ ಹೇಗೆ ಮಾಡಿಯಾರು? ಎಂದೆನಿಸದೇ ಇರಲಿಲ್ಲ.

ಕುಸುಮಾಕರರ ಮಾರ್ಗದರ್ಶನದಲ್ಲಿ ಮಧ್ಯಪ್ರದೇಶದ ವಿವಿಧ ಭಾಗಗಳಲ್ಲಿ ಸಂಚರಿಸಿ ಹಿಂದಿರುಗಿದ ನಂತರ ಅವರಲ್ಲಿ ಹೋಗಿ ವಿವರವಾದ ವರದಿಯನ್ನು ಒಪ್ಪಿಸುವದು ಪರಿಪಾಠವಾಗಿ ಬೆಳೆಯಿತು. ಆಗೆಲ್ಲ ದೀಪು, ಎಲ್ಲಿದ್ದರೂ, ಏನೇ ಮಾಡುತ್ತಿದ್ದರೂ ಓಡಿಬಂದು ತೊಡೆಯೇರಿ ಕುಳಿತು ಮೀಸೆ ತಿರುವುದನ್ನು ರೂಢಿ ಮಾಡಿಕೊಂಡಿದ್ದ. ಅವನ ಈ ಕೀಟಲೆ ತಪ್ಪಿಸಿಕೊಳ್ಳುವದಕ್ಕಾಗಿ ಮನೆಯಲ್ಲಿ ಕಾಲಿಡುತ್ತಿದ್ದಂತೆ, ಮೀಸೆಗಳನ್ನು ಅವನಿಗೆ ವರ್ಗಾಯಿಸಿದಂತೆ ನಟಿಸಲಾರಂಭಿಸಿದೆ. ಇದರಿಂದ ಅವನು ಭಾರೀ ಖುಷಿಯಾಗಿ, ಕಾಲ್ಪನಿಕ ಮೀಸೆ ತಿರುವುತ್ತ ಸಂತೋಷ ಪಡುತ್ತಿದ್ದ. ಹಿಂದಿರುಗುವಾಗ ಅವನಿಂದ ತಿರುಗಿ ಮೀಸೆ ಪಡೆಯಲು ಮರೆಯುತ್ತಿರಲಿಲ್ಲ! ಶ್ರೀಲೇಖಾ, ತಾನು ಭಾಗವಹಿಸಿದ ಚರ್ಚಾಕೂಟ, ಆಟಪಾಠಗಳ ವಿವರಣೆ ಕೊಟ್ಟು, ಅವುಗಳಲ್ಲಿ ತನಗೆ ಬಂದ ಪಾರಿತೋಷಕಗಳನ್ನು ತಂದು ತೋರಿಸುವಳು. ಮಾಧವಿ ತನ್ನ ಗೆಳತಿಯರ ಕುರಿತಾದ ಮೋಜಿನ ಸಂಗತಿಗಳನ್ನು ವಿವರಿಸುವಳು. ನಲಿನಿಬಾಯಿಯವರಿಗೆ ಏನೆಲ್ಲ ಹೇಳುವ, ಕೇಳುವ ಕುತೂಹಲ. ಆದರೆ ಪರಪುರುಷನೊಂದಿಗೆ ಇಷ್ಟೊಂದು ಸಲಿಗೆ ಸಲ್ಲ ಎಂದು ಬಾಗಿಲಾಚೆ ನಿಂತೇ ನಮ್ಮೆಲ್ಲರ ಮಾತುಕತೆಗಳನ್ನು ಆಲಿಸದೇ ಇರುತ್ತಿರಲಿಲ್ಲ. ಭೀಮಬೇಡಾಕ್ಕೆ ಹೋಗಿ, ಡಾ| ವಾಕಣಕರರೊಂದಿಗೆ ಎರಡು ದಿನ ಕಳೆದದ್ದು, ಖಜುರಾಹೋಗೆ ಹೋಗಿ ಶೇಖ್ ಗುಲಾಬ್ ಅವರ ನೃತ್ಯಕೂಟ ನೋಡಿದ ವಿವರಗಳನ್ನು ಅರಿತುಕೊಂಡು, ನಾವು ಇದೇ ರಾಜ್ಯದಲ್ಲಿ ಇದ್ದುಕೊಂಡು ಪತಿಯವರು ಆದಿವಾಸಿ ಅಭಿವೃದ್ಧಿ ಖಾತೆಯಲ್ಲಿದ್ದೂ, ಇವಾವನ್ನೂ ನೋಡುವ, ಅನುಭವಿಸುವ ಭಾಗ್ಯ ಬರಲಿಲ್ಲ ಎಂದು ಮರುಗಿದಳು. ಸಂಕ್ರಾಂತಿಯ ನಂತರ ಭೇಟಿಗೆ ಹೋದಾಗ, ಮರೆಯದೇ ಕುಸುರೆಳ್ಳು ಕೊಟ್ಟು, ಬೇಸರ ಬಂದಾಗ ತಿನ್ನಲು ಎಳ್ಳುಂಡೆಗಳನ್ನು ಕಟ್ಟಿಕೊಟ್ಟಳು.

ಊರೂರು ಅಲೆಯುವಾಗ ಪತ್ರಗಳು ಕಾಣೆಯಾಗಬಾರದೆಂದು ಪತ್ನಿಗೆ ಕುಸುಮಾಕರರ ವಿಳಾಸ ಕೊಟ್ಟಿದ್ದೆ. ನಿಯತಕಾಲಕ್ಕೆ ಬರುತ್ತಿದ್ದ ಪತ್ರಗಳಿಂದ ನಳಿನಿಬಾಯಿಯ ಕುತೂಹಲ

ಕೆರಳಿರಬೇಕು. ಅಂತೆಯೇ ಬಂದ ದಪ್ಪ ಕವರು ಒಡೆದು ಓದಲು ಯತ್ನಿಸಿರಬೇಕು! ನಮ್ಮ ಪತ್ರ ಸಲ್ಲಾಪಕ್ಕೆ ಮರಾಠಿ, ಹಿಂದಿ, ಇಂಗ್ಲಿಷ್‌ಗಳಾವವೂ ಒಗ್ಗದೇ ಕನ್ನಡವನ್ನೆ ರೂಢಿಸಿಕೊಂಡದ್ದರಿಂದ ಅವಳಿಗೆ ತುಂಬ ನಿರಾಸೆಯಾಗಿರಬೇಕು. ಆ ಕವರನ್ನು ಕೈಗೆ ಕೊಡುತ್ತಿದ್ದಂತೆ ಕುಸುಮಾಕರರು, "ಪತ್ನಿ ವಿಳಾಸ ನೋಡದೇ ಒಡೆದುಬಿಟ್ಟಳು" ಎಂದು ಕ್ಷಮಾಯಾಚನೆ ಮಾಡಿದರು. ನಿಜಸಂಗತಿಯನ್ನು ಅವರು ಮರೆಮಾಚುತ್ತಾ ಇದ್ದಾರೆಂದು ಅರಿಯದೇ ಇರಲಾಗಲಿಲ್ಲ. ಪತಿ ದೂರದ ಊರಲ್ಲಿದ್ದರೆ ಪ್ರತಿದಿನವೂ ಪತ್ರ ಬರೆಯಬೇಕು ಎಂದು ಅರಿವು ಮೂಡಿ, ಪತಿ-ಪತ್ನಿಯರು ಒಂದೇ ಊರಿನಲ್ಲಿ ಇರುವದೇ ಲೇಸು! ಎಂದು ಅವಳು ತೀರ್ಮಾನಿಸಿರಬೇಕು. ತನ್ನ ಪತಿ ಆಫೀಸು ಕೆಲಸದ ಮೇಲೆ ೨೦-೨೫ ದಿನಗಳಿಗಾಗಿ ಭೋಪಾಲಕ್ಕೆ ಹೋದರೆ, ಒಂದೂ ಪತ್ರ ಬರೆಯುವ ಕೃಪೆ ಮಾಡುವದಿಲ್ಲವೆಂದು ಅವಳು ಹಿಂದೊಮ್ಮೆ ದೂರಿಕೊಂಡಿದ್ದಳು. ಆದರೆ, ಮಕ್ಕಳ ಆರೋಗ್ಯ ಕುರಿತಾಗಿ ಒಂದು ಅಂಚೆ ಕಾರ್ಡು ಕೂಡ ಬರೆದಿರಲಿಲ್ಲ, ಎಂಬ ಮಾತನ್ನು ಮಾತ್ರ ಬಚ್ಚಿಟ್ಟಿದ್ದಳು!

***

10 ನಾಗದ್ವಾರ



ನಾಗ ಪಂಚಮಿಯ ಹೊತ್ತಿಗೆ ಮಹಾರಾಷ್ಟ್ರದ ಶಿವಭಕ್ತರು ನಾಗದ್ವಾರದ ಯಾತ್ರೆಗೆ ಛಿಂದವಾಡಕ್ಕೆ ಬಸ್ಸುಗಳಲ್ಲಿ ಕಿಕ್ಕಿರಿದು ಬಂದು ಇಳಿಯ ಹತ್ತಿದರು. ಇಂಥ ದಿನಗಳಲ್ಲಿ ಚಿಕ್ಕಪುಟ್ಟ ಚಹಾ, ಟೀ, ಕಳ್ಳ ಸೆರೆಯ ರಸ್ತೆಬದಿಯ ಗೂಡಂಗಡಿಗಳು ತಮ್ಮ ಬೊಕ್ಕಸತುಂಬಿಕೊಳ್ಳುತ್ತವೆ. ಈ ಭಕ್ತರಿಗೆ ಸ್ಥಾನೀಯರು 'ಭಗತ್ ಲೋಕ್' ಬಂದು ಸಂಬೋಧಿಸುವದು ವಾಡಿಕೆ. ಎಂದು ಇಳಿದ ಬಹು ಸಂಖ್ಯಾತರು ಬಡವರು, ಕೃಷಿಕಾರರು, ನಿರಕ್ಷರಿಗಳು, ಬಿಳಿ ಟೋಪಿ, ಶರ್ಟು ಪಾಯಜಾಮ, ಇಲ್ಲವೇ ರುಮಾಲು, ಶರ್ಟು, ಧೋತರ ಉಟ್ಟು, ಹಣೆ ತುಂಬ ಕುಂಕುಮ ಸವರಿಕೊಂಡು, ಅರಳೆಯ ಹಳದಿ ಚೀಲಗಳಲ್ಲಿ ಅಕ್ಷತೆ ತುಂಬಿಕೊಂಡು, ಪ್ರವಾಸದಲ್ಲಿ ಬೇಕಾಗುವ ಆಹಾರ ಸಾಮಗ್ರಿಯನ್ನು ಹೊತ್ತುಕೊಂಡೇ ಹೋರಟಿರುತ್ತಾರೆ. ಶಂಕರನಿಗೆ ಉರಿಸಲು ಬೇಕಾಗುವ ಪುಟ್ಟ ಕಬ್ಬಿಣದ ದೀವಿಗೆ ಮತ್ತು ಎಣ್ಣೆ ಡಬ್ಬಿಗಳನ್ನು ಭುಜದಿಂದ ತೂಗ ಬಿಟ್ಟು "ಹರ ಬೋಲೊ, ಹರಹರ ಮಹಾದೇವ್" ಎನ್ನುತ್ತ ಪ್ರವಾಸಮಾಡುವರು. ಕೆಲವು ಭಗತರು ಐವತ್ತು ಕಿಲೋ ಭಾರದ ತ್ರಿಶೂಲವನ್ನು ಹೊತ್ತು ತಂದರೆ, ಇನ್ನೂ ಕೆಲವರು ಬೆಳ್ಳಿಯ ತ್ರಿಶೂಲವನ್ನು ಗಲ್ಲದಿಂದಲೋ, ನಾಲಿಗೆಯಿಂದಲೋ ಹಾಯಿಸುತ್ತಾರೆ. ಇವೆಲ್ಲ ಅವರು ಹೊತ್ತ ಹರಕೆಗಳನ್ನು ಸಲ್ಲಿಸುವ ವಿಧಾನಗಳು.

ಮಹಾದೇವ ಪರ್ವತಾವಳಿಗಳು ಕೊರ್ತುಆದಿವಾಸಿಗಳ ಬೀಡಾದ್ದರಿಂದ, ಈ ಸಮಯದಲ್ಲಿ ತುಂಬಿ ಪಚಮಡಿಗೆ ಅವರನ್ನು ನೋಡುವ ಜೊತೆಗೆ ನಾಗಾದ್ವಾರ ಜಾತ್ರೆಯೂ ಸಿಗುವದರಿಂದ, ತುಂಬಿ

ತುಳುಕುವ ಬಸ್ಸಿನಲ್ಲಿ ಪ್ರಯಾಣ ಮಾಡುವ ಸಾಹಸ ತೋರಿಸದೇ ಬೇರೆ ಮಾರ್ಗವೇ ಇರಲಿಲ್ಲ. ಕೈ ಚೀಲದಿಂದ ಶಂಖ ತೆಗೆದು ಊದಿದನೊಬ್ಬ, ತಾಳ, ಢೋಲಕ್ ತೆಗೆದು ಭಜನೆ ಆರಂಭಿಸಿದರು ಕೆಲವರು. ಹೆಂಗಳೆಯರು ರಾಮಾಯಣದ ಘಟನೆಗಳನ್ನು ಮರಾಠೀ ಲಾವಣಿಗಳಲ್ಲಿ ಹಾಡಲಾರಂಭಿಸಿದರು. ಛಿಂದವಾಡಾದಲ್ಲಿ ಮರಾಠಿಗರು ವಿಪುಲ ಸಂಖ್ಯೆಯಲ್ಲಿ ಇದ್ದರೂ ಅವರೆಲ್ಲ ಹಿಂದಿ ಕಲಿತು, ಮಧ್ಯ ಪ್ರದೇಶದವರೊಂದಿಗೆ ಒಂದಾಗಿ ಹೋಗಿದ್ದಾರೆ. ಕರ್ನಾಟಕದಲ್ಲಿ ಮಾತ್ರ ಬೆಳಗಾವಿಯ ಮರಾಠಿಗರು ತಲೆಮಾರುಗಳಿಂದ ಅಲ್ಲಿಯೇ ಹುಟ್ಟಿಬೆಳೆದರೂ ಕನ್ನಡ ಕಲಿಯುವ ಕಷ್ಟವಹಿಸಲಿಲ್ಲ. ಇಲ್ಲಿಯವರ ಮೇಲ್ಪಂಕ್ತಿಯಲ್ಲಿ ಅಲ್ಲಿಯವರು ನಡೆದಿದ್ದರೆ, ದಕ್ಷಿಣ ಮಧ್ಯ ಪ್ರದೇಶವೆಲ್ಲ ಮಹಾರಾಷ್ಟ್ರಕ್ಕೆ ಸೇರಿಸಬೇಕಾಗುತ್ತಿತ್ತು.

ಪಚಮಡಿ, ಸುಂದರವಾದ, ಎತ್ತರದಲ್ಲಿರುವ ಬೇಸಿಗೆಯ ಗಿರಿಧಾಮ. ಬ್ರಿಟಿಶರು, ಇಲ್ಲಿ ತಮ್ಮ ಸೈನ್ಯವನ್ನು ಇಡಲಾರಂಬಿಸಿದ್ದರಿಂದ, ಗವರ್ನರ-ವ್ಹಾಯ್ಸರಾಯರಿಗೆ ಬೇಸಗೆಯ ದಿನಗಳನ್ನು ಕಳೆಯಲು, ದೊಡ್ಡ ದೊಡ್ಡ ರಾಜವಾಡೆಗಳನ್ನು ಕಟ್ಟಿದ್ದಾರೆ. ಇಂದಿಗೂ ಅವು ರಾಷ್ಟ್ರದ ಉಚ್ಚ ಅಧಿಕಾರಿಗಳಿಗೆ ಮೀಸಲಾಗಿದ್ದರೂ, ಕ್ವಚಿತ್ತಾ ಉಪಯೋಗಿಸಲ್ಪಡುತ್ತವೆ. ವಿವಿಧ ಖಾತೆಯವರು, ಪ್ರವಾಸಿಗಳಿಗಾಗಿ, ವಿಶ್ರಾಂತಿಗೃಹಗಳನ್ನು ಕಟ್ಟಿಸಿದ್ದಾರೆ. ವಿರಳವಾದ ಜನವಸತಿ, ವಿಸ್ತಾರವಾದ ಊರು, ಬ್ರಿಟಿಶರು ಹಾಕಿಕೊಟ್ಟ ಮೇಲ್ಪಂಕ್ತಿಗಳಿಂದಾಗಿ ಊರು ಸ್ವಚ್ಛವಾಗಿ ಸುಂದರವಾಗಿದೆ. ಆದರೆ ಭುಗತರಿಗೆ ಸ್ವಚ್ಛತೆ-ಸೌಂದರ್ಯಗಳ ದೃಷ್ಟಿ ಎಲ್ಲಿಂದ ಬರಬೇಕು? ಅವರು ಹತ್ತಾರು ಜನ ಸೇರಿ ಒಬ್ಬನ ನಾಯಕತ್ವದಲ್ಲಿ ಬಂದಿರುತ್ತಾರೆ. ಒಂದೇ ಕೋಣೆಯನ್ನು ಖಾಸಗಿಯಾಗಿ ಹಿಡಿದು ಎಂಟೆಂಟಾಣೆ ಬಾಡಿಗೆಯನ್ನು ಹಂಚಿಕೊಳ್ಳುತ್ತಾರೆ. ಅಂಥ ದಿನಗಳಲ್ಲಿ ಊರ ಬಡವರು ಬಾಡಿಗೆಗೆ ಕೊಟ್ಟು ನಾಲ್ಕು ಕಾಸು ಸಂಪಾದಿಸುವ ಹವಣಿಕೆಯಲ್ಲಿರುತ್ತಾರೆ. ಹೆಂಗಳೆಯರು ಇಳಿದಲ್ಲಿ ಮೂರು ಕಲ್ಲು ಒಲೆ ಹೂಡಿ ಅಡಿಗೆಯನ್ನು ಪ್ರಾರಂಭಿಸಿಬಿಡುವದರಿಂದ, ಅವರಿಗೆ ಬೇಕಾಗುವ ಸೌದೆ-ತರಕಾರಿಗಳನ್ನು ಮಾರುತ್ತ ಸ್ಥಳೀಯರ ಮಕ್ಕಳು ಮನೆಯಿಂದ ಮನೆಗೆ ತಿರುಗುತ್ತಿರುತ್ತಾರೆ.

ಈ ಮಳೆಗಾಲದಲ್ಲಿ ಭಗತರು ಪಡಬೇಕಾದ ತೊಂದರೆ ಅಷ್ಟಿಷ್ಟಲ್ಲ. ನಾಗದೇವರು ಮಳೆದೇವರಾದ್ದರಿಂದ ಅಗೌರವ ತೋರಬಾರದೆಂದು ಒದ್ದೆ ಬಟ್ಟೆಯಲ್ಲಿಯೇ ಊರೆಲ್ಲ ಸುತ್ತುತ್ತಿರುತ್ತಾರೆ. ಅಂತಹ ದಿನಗಳಲ್ಲಿ ಅವರು ಹೊಟೇಲಿನ ತಿಂಡಿಗಳನ್ನು ಅವಲಂಬಿಸಬೇಕಾಗುವದರಿಂದ, ಅಂಗಡಿಕಾರರು ಭಾರೀ ಮಳೆಗಾಗಿ ಹರಕೆ ಹೊರುತ್ತಾರೋ ಏನೋ! ನೋಡಿದೆಡೆಯಲ್ಲೆಲ್ಲ ಪೂರಿಪಲ್ಯ, ಪಕೋಡ, ಚೂಡಾ, ಜಿಲೇಬಿಗಳ ಅಂಗಡಿಗಳು ತಲೆಯೆತ್ತಿ ನಿಂತಿರುತ್ತವೆ. ಧ್ವನಿವರ್ಧಕಗಳನ್ನು ಹಚ್ಚಿ "ಬನ್ನಿ ಬನ್ನಿ ಭಕ್ತರೇ, ನಿಮಗಾಗಿ ಯೋಗ್ಯಬೆಲೆಯಲ್ಲಿ ಅತಿ ಉತ್ಕೃಷ್ಟ ಸೆರೆಯನ್ನು ದಾಸ್ತಾನು ಮಾಡಿದ್ದೇವೆ. ಈ ಉತ್ತಮ ಸುಸಂಧಿಯನ್ನು ಕಳೆದು ಕೊಳ್ಳಬೇಡಿ! ಆಮೇಲೆ ಮರುಗಬೇಡಿ ಎಂದು ಕೂಗಿಸುತ್ತಾರೆ. ಜೊತೆಯಲ್ಲಿ ಝೂಮ್ ಬರಾಬರ ಝೂಮ್ ಶರಾಬಿ, ..." ಎಂದು ಹಿಂದಿ ಚಿತ್ರದ ಕುಡುಕರ ಹಾಡನ್ನೂ ಹಚ್ಚುತ್ತಿರುತ್ತಾರೆ. ಎಲ್ಲಿಯ ಮಹಾದೇವ? ಎಲ್ಲಿಯ ನಾಗದ್ವಾರಾ? ಎಲ್ಲಿಯ ಈ ಸುರಾಪಾನ? ಅನಿಸಿ ವಾಕರಿಕೆ ಬಾರದಿರಲಿಲ್ಲ. ತುರ್ತು ಸರಕಾರೀ ಅಥವಾ ಖಾಸಗಿ ಕಕ್ಕಸುಗಳು ಇಲ್ಲವೇ ಇಲ್ಲ. ಇರುವ ಕೆಲವೇ ಸಾರ್ವಜನಿಕವುಗಳಿಗೆ ವಿಪರೀತ ಜನಸಂದಣಿಯಾದ್ದರಿಂದ ನಸುಕಿನಲ್ಲೆದ್ದು ನಿಸರ್ಗದ ಆಶ್ರಯ ಪಡೆಯುವದೊಂದೇ ಮಾರ್ಗ. ಆ ಮಳೆಯಲ್ಲಿ, ತಣ್ಣಗಿನ ಮುಂಜಾವಿನಲ್ಲಿ - ಭಕ್ತಜನ ನೀರು ಸೇದಿ ಸೇದಿ ಸ್ನಾನಮಾಡುತ್ತಲೇ ಇರುತ್ತಾರೆ. ಆಗ ಅರ್ಧನಾರೀಶ್ವರನ ಭಕ್ತರು, ಸ್ತ್ರೀ ಪುರುಷರೆಂಬ ಭೇದಕಲ್ಪಿಸದಷ್ಟು ಸುಸಂಸ್ಕೃತರೆನಿಸಿಕೊಳ್ಳುತ್ತಾರೆ! ಅವರು ಮಡಿ ಬಟ್ಟೆ ಧರಿಸಿ ನಾಗದ್ವಾರಕ್ಕೆ ಹೊರಡಬೇಕು, ಎನ್ನುವಷ್ಟರಲ್ಲಿ, 'ಕೊರ್ತು, ಕೊರ್ತು ಸೇವೆ ಬೇಕೆ? ಎಂದು ವಿಚಾರಿಸುತ್ತ ಈ

ಆದಿವಾಸಿಗಳು ಊರೆಲ್ಲ ತಿರುಗುತ್ತಾರೆ. 'ಕೊರ್ತು' ಶಬ್ದಕ್ಕೆ ಕೂಲಿ ಎಂಬ ಪರ್ಯಾಯ ಅರ್ಥ ಉಂಟಂತೆ. ಪುಣ್ಯಗಳಿಸಲು ಹೊರಟ ಭಕ್ತರ ಸಾಮಾನುಗಳನ್ನು ಇವರು ಹೊತ್ತು ನಾಗದ್ವಾರಕ್ಕೆ ಹೋಗಿ ಬರುತ್ತಾರೆ. ಬರೇ ಹೋಗಲು, ಹೋಗಿ ಬರಲು, ಅಲ್ಲಿಯೇ ಪಾರ್ಟಿಯೊಂದಿಗೆ ಇದ್ದು ಬರಲು, ಬೇರೆ ಬೇರೆ ದರಗಳು ಇರುವದರಿಂದ ವ್ಯಾಪಾರ ಕುದುರಿಸಲು ಸಾಕಷ್ಟು ಅವಕಾಶವಿರುತ್ತದೆ. ಸುತ್ತಮುತ್ತಲಿನ ಹಳ್ಳಿಗಳಿಂದ ಕೂಲಿಗಳಿಸಲೆಂದೇ ಮಳೆಯಲ್ಲಿ ತಪ ತಪ ತೊಯ್ದು, ಒದ್ದೆ ಬಟ್ಟೆಯಲ್ಲಿ ನಡುಗುತ್ತ ಹಿಂದೆ ಓಡಾಡುವ ಕೊರ್ತು ಕೂಲಿಗಳನ್ನು ನೋಡಿದಾಗ ಎಂಥ ಕಲ್ಲೆದೆಯೂ ಕರಗದಿರದು. ನಾಲ್ಕಾಣೆಗೆ ನಾಲ್ಕು ತಾಸು ಚೌಕಸಿ ಮಾಡುವ ಭಗತರು ಅವರಿಗೆ ಎಷ್ಟು ತಾನೆ ಕೂಲಿ ಕೊಟ್ಟಾರು? ಆ ಕಲ್ಲು ದೇವರಿಗೆ ಪೂಜೆ-ನೈವೇದ್ಯಗಳನ್ನು ಸಲ್ಲಿಸುವ ಬದಲಿಗೆ ಈ ದೇವರ ಮಕ್ಕಳಿಗೆ ಹೊಟ್ಟೆ ತುಂಬ ಊಟವಾದರೂ ಹಾಕಿದರೆ, ಎಷ್ಟೋ ಪುಣ್ಯವನ್ನು ಸಂಚಯಿಸಬಹುದೆಂದು ಅವರಿಗೆ ತಿಳಿಹೇಳುವವರಾರು? ಭಗತರ ಬದಲಾಗಿ ಈ ಜನರ ಛಾಯಾ ಚಿತ್ರ ತೆಗೆದಾಗ ಅವರಿಗಾದ ಸಂತೋಷಕ್ಕೆ ಕೊನೆಮೊದಲಿರಲಿಲ್ಲ. ಬಹುಶಃ ಅವೇ ಅವರ ಜೀವನದ ಪ್ರಥಮ ಮತ್ತು ಅಂತಿಮ ಛಾಯಾಚಿತ್ರಗಳಾಗಿದ್ದರೆ ಆಶ್ಚರ್ಯವಿಲ್ಲ.

ಪಚಮಡಿಯಿಂದ ನಾಗದ್ವಾರ ಇಪ್ಪತ್ತೆಂಟು ಮೈಲಿ. ಪರ್ವತದ ಕೆಳಗೆ ಕೊನೆಯ ತಾಣವಾದ ಬಾರಾದರಿಯ ತನಕ ಖಾಸಗಿ ಬಸ್- ವ್ಯಾನ್‌ಗಳು ಓಡಾಡುತ್ತವೆ. ಸ್ವಂತದ ವಾಹನವಿದ್ದರೆ ಧೂಪಗಡ ತನಕ ಹೋಗಲು ಕಚ್ಚಾ ರಸ್ತೆ ಇದೆ. ಆದರೆ ಬಹು ಸಂಖ್ಯಾತ ಭಕ್ತರು ಹರಕೆ ಸಲ್ಲಿಸಲು ಬರುವವರಾದ್ದರಿಂದ, ಕಾಲುನಡಿಗೆಯಲ್ಲಿ ಹೋಗುವವರೇ ಹೆಚ್ಚು ಜನ. ಪಚಮಡಿಯ ಪರಿಸರವೆಲ್ಲ ಮಲಮೂತ್ರಗಳಿಂದ ನಾರುವದರಿಂದ ಮೂಗಿಗೆ ಕರವಸ್ತ್ರ ಹಿಡಿದೇ ಸಾಗಬೇಕು. ನಗರಪಾಲಿಕೆಯು, ಆರೋಗ್ಯವನ್ನು ಕಾಪಾಡಲು ವ್ಯವಸ್ಥೆ ಮಾಡಿದರೂ ಬಂದ ಬಹುಸಂಖ್ಯೆಯ ಭಕ್ತರು ಎಲ್ಲವನ್ನೂ ಮೀರಿಸಿಬಿಡುತ್ತಾರೆ. ಶಂಖ ಊದುತ್ತ, ತಾಳ, ಟಿಪರಿ, ಢೋಲು ಬಾರಿಸುತ್ತ ಶಿವನ ಭಜನೆ ಮಾಡುತ್ತ ಮೆರವಣಿಗೆಯಲ್ಲಿ ಹೊರಟುಬಿಡುತ್ತಾರೆ. ಹರಹರ ಮಹಾದೇವ್! ನಾದ ಎಲ್ಲೆಡೆ. ಈ ದಿನಗಳಲ್ಲಿ ಯಾವ ಕಲ್ಲು ದೇವರು, ಯಾವ ಹೊಂಡ, ತೀರ್ಥವೆಂದು ಗುರುತಿಸುವದು ಕಷ್ಟ. ಝರಿ, ಕೆರೆ, ಬಾವಿ, ಮಳೆ ನೀರಿನ ಹೊಂಡಗಳಲ್ಲಿ ಸ್ನಾನಮಾಡಿ, ಆ ಗುಹೆ, ಈ ಮೂರ್ತಿ, ಬೇರೇನೂ ಇಲ್ಲದಿದ್ದರೆ ಒಂದು ಕಲ್ಲಿಗಾದರೂ ಕುಂಕುಮ ಹಚ್ಚಿ, ಕರ್ಪುರ-ಅಗರ ಬತ್ತಿಗಳಿಂದ, ಮಂಗಳಾರತಿ ಮಾಡಿ, ಪ್ರಸಾದ ಹಂಚುವರು. ಒದ್ದೆಯಾದ ಸೀರೆ-ಧೋತರಗಳನ್ನು ಒಣಗಿಸಲು ಗಾಳಿಯಲ್ಲಿ ಪತಾಕೆಯಂತೆ ತೂರಬಿಟ್ಟು ನಡೆಯುತ್ತಲೇ ಹೋಗುವದು ಮೋಜಾಗಿ ಕಾಣುತ್ತದೆ. ಜೊತೆಯಲ್ಲಿ ತಂದ ಭಾರವಾದ ತ್ರಿಶೂಲಕ್ಕೆ ಚುಚ್ಚಿದ ಲಿಂಬೆಹಣ್ಣುಗಳನ್ನು ಬೇರೆ ಬೇರೆ ದೇವರಿಗೆ ಅರ್ಪಿಸುತ್ತ, ಕೆಂಪು ದಾರದಿಂದ ಅದನ್ನೂ ರಸ್ತೆಯ ಮೇಲೆ ಉರುಳಿಸುತ್ತ ಮುಂದುವರೆಯುವರು. ಇನ್ನೂ ಕೆಲವರು ಮಳೆ ಧಾರಾಕಾರದಲ್ಲಿ ಸುರಿಯುವಲ್ಲಿ ಮಣ್ಣಿನ ಲಿಂಗವನ್ನು ಸ್ಥಾಪಿಸಿ ಪೂಜೆ ಸಲ್ಲಿಸುವರು.

ಐದಾರು ಮೈಲಿನಡೆದು ದಣಿವಾದಾಗ, ಚಹಾ-ತಿಂಡಿ ಮಾಡಿ ಮುಂದರಿಯುವರು. ಅಡಿಗೆ-ಊಟಗಳೂ ಕಾಡಿನಲ್ಲಿ ನಡೆಯುವವು. ಕೆಲವರು ಕತ್ತಲೆಯಲ್ಲೆ ಕಾಡುದಾರಿ ತುಳಿದು ಹೊರಟರೆ ಇನ್ನೂ ಕೆಲವರು ದಾರಿಯುದ್ದಕ್ಕೂ ತಲೆಯೆತ್ತಿ ನಿಂತ ಚಹಾದಂಗಡಿ, ಧರ್ಮಶಾಲೆ, ಗುಡಿಸಲುಗಳಲ್ಲಿ, ಇಲ್ಲವೇ ಬೆಟ್ಟದಡಿ ಆಶ್ರಯಪಡೆಯುವರು. ಧೂಪಗಡದ ಮುಂದೆ ತೀರ ಇಕ್ಕಟ್ಟಾದ, ಜಾರಿಕೆಯ ಕಾಲು-ದಾರಿ ಪ್ರಾರಂಭವಾಗುತ್ತದೆ. ಆಧಾರಕ್ಕಾಗಿ ಎಲ್ಲರೂ ಕೈಯಲ್ಲೊಂದು ದೊಣ್ಣೆಯನ್ನು ಹಿಡಿದಿರುತ್ತಾರೆ. ನಾಗದ್ವಾರದಲ್ಲಿ ಸರ್ಪದ ಹೆಡೆ ಹೋಲುವ ಇಳಿಜಾರಾದ ಪರ್ವತ ಶಿಖರವಿದೆ. ಅದರ ತುತ್ತತುದಿಯಲ್ಲಿ 'ಕ್ಷಂಗದೇವ' ಇದ್ದಾನೆಂದು ಭಗತರು ನಂಬುತ್ತಾರೆ. ನಾಗ ಪಂಚಮಿಯ ದಿನ ಪೂಜಾರಿಯನ್ನು ಒಳಗೊಂಡು ಕೇವಲ ಹನ್ನೊಂದು ಜನರಿಗಷ್ಟೇ ಈ ಶಿಖರ ಏರಲು

ಬರುತ್ತದಂತೆ. ಭಗತರಿಗಾಗಿ ಪರ್ವತದ ಅಡಿಯಲ್ಲಿ ಇರುವ ಗುಹೆಗಳಲ್ಲಿ ವಿವಿಧ ದೇವರ ವಿಗ್ರಹಗಳನ್ನು ಸ್ಥಾಪಿಸಿದ್ದಾರೆ. ತಮ್ಮ ಇಷ್ಟಾರ್ಥದೇವತೆಗೆ ಪೂಜೆ ಪುರಸ್ಕಾರ ಸಲ್ಲಿಸಿ, ಭಗತರು ಹಿಂದಿರುಗುತ್ತಾರೆ. ಇಷ್ಟು ಮಾಡುವದರಲ್ಲಿ ಅವರಿಗೆ ಸಾಕು-ಬೇಕಾಗಿ ಹೋಗುವದರಿಂದ, ಹಿಂದಿರುಗುವಾಗ ಹೆಚ್ಚಿನವರು ಬಾಡಿಗೆಗೆ ಬಂದ ವಾಹನದ ಆಶ್ರಯ ಪಡೆಯುತ್ತಾರೆ. ಆದ್ದರಿಂದ ಎಷ್ಟೋ ವಾಹನಗಳು ಖಾಲಿಯಾಗಿ ಹೊರಟು, ತಿರುಗಿ ಬರುವಾಗ ಯಾತ್ರಿಕರಿಂದ ತುಂಬಿ ತುಳುಕುತ್ತವೆ. ಟಿಕೇಟಿನ ದರ ಹೋಗುವಾಗ ಎಂಟಾಣೆಯಾದರೆ ಬರುವಾಗ ಒಂದು ರೂಪಾಯಿ!

ಯಾತ್ರೆ ಮುಗಿಸಿ ಬಂದವರು, ವಿಶ್ರಾಂತಿಗಾಗಿ ಒಂದೆರಡು ದಿನಗಳನ್ನು ಪಚಮಡಿಯಲ್ಲಿ ಕಳೆಯುವದರಿಂದ ಅಲ್ಲಿ ಭಾರೀ ಜಾತ್ರೆ ಸೇರುತ್ತದೆ. ಆ ದಿನಗಳಲ್ಲಿ ಸುತ್ತಮುತ್ತಲಿನ ಊರುಗಳಿಂದ ವ್ಯಾಪಾರಿಗಳು ಘಟ್ಟದ ಮೇಲಿನ ಪಚಮಡಿಗೆ ಆಗಮಿಸುತ್ತಾರೆ. ಚುರಮುರಿ, ಪಾಪ್‌ಕಾರ್ನ, ನೆನೆಹಾಕಿದ ಕಡಲೆ, ಸೇಂಗಾಗಳನ್ನು ಮಾರುವವರಿದ್ದಂತೆ, ಚಾಕುಚೂರಿ, ಕತ್ತರಿ, ಬರ್ಚಿ ಕೊಡಲಿಗಳನ್ನು ತಂದಿರುತ್ತಾರೆ. ಲಿಂಗ ಮತ್ತು ದೇವಾಧಿದೇವತೆಗಳ ಮೂರ್ತಿಗಳ ಅಂಗಡಿಗಳಿಗಂತೂ ಲೆಕ್ಕವಿಲ್ಲ. ಹಿಂದೊಮ್ಮೆ ಶಿಲೆಯಿಂದ ಇಂಥವನ್ನು ಕಟೆದು ತಯಾರಿಸುತ್ತಿದ್ದರೆ ಈಗ, ಎಲ್ಲವನ್ನೂ ಅಂದಗೇಡಿ ಪ್ಲಾಸ್ಟಿಕ್ ಆಕ್ರಮಿಸಿ ಬಿಟ್ಟಿದೆ. ಚೇಳುಕಡಿತಕ್ಕೆ ಔಷಧ, ಹೊಟ್ಟೆ ಕಡಿತಕ್ಕೆ ಮದ್ದು ಎಂದು ಇಲ್ಲಸಲ್ಲದ ಬೇರು, ಕಾಯಿ, ಗಿಡಮೂಲಿಕೆಗಳನ್ನು ಮಾರಲು ಬರುವ ಠಕ್ಕರಿಗೂ ಕಡಿಮೆಯಿರಲಿಲ್ಲ. ಭಾರವಾದ ತ್ರಿಶೂಲ ಹೊತ್ತು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನರ್ತಿಸುತ್ತ ಹಣ ಪಡೆಯುವವರೂ ಇದ್ದರು. ಬೈಲು ಇದ್ದಲ್ಲಿ ಹಲಗೆಯ ಹಿಮ್ಮೇಳದಲ್ಲಿ ಕುಸ್ತಿ-ಪಂದ್ಯಾಟಗಳೂ ನಡೆಯುತ್ತವೆ. ಪ್ರೇಕ್ಷಕರಲ್ಲಿ ಯಾರೂ ಗೆದ್ದವನೊಂದಿಗೆ ಕುಸ್ತಿಯಾಡಬಹುದು. ಜಯಶಾಲಿಯಾದವನಿಗೆ ನೆರೆದವರೇ ಒಂದು-ಎರಡು ರೂಪಾಯಿಗಳನ್ನು ಕಾಣಿಕೆಯಾಗಿ ಕೊಡುತ್ತಾರೆ. ಆ ದಿನಗಳಲ್ಲಿ ಪಚಮಡಿಗೆ ಭೇಟಿ ಕೊಡುವದೇ ಒಂದು ಸಾಹಸ. ಎಷ್ಟೋ ಭಗತರು ತಮ್ಮ ಸೇವೆಯೇ ದೇವರ ಸೇವೆ ಎಂದು ನಂಬಿಸಿ ಅಪರಿಚಿತನಿಂದ ಛಾಯಾ ಚಿತ್ರ ತೆಗೆಸಿಕೊಂಡರು. ಎಂದೂ ನೋಡಲು ಸಿಗದ ಭಾವಚಿತ್ರಗಳನ್ನು ತೆಗೆಯಿಸಿಕೊಳ್ಳುವದರಲ್ಲಿ ಯಾವ ಸಾರ್ಥಕತೆ ಇದೆ? ಎಂದು ಅವರೇ ವಿಚಾರಿಸಬೇಕು!

ಪಂಚ (ಐದು) ಮಾಡಿ (ಮನೆ) ಮೂಲ ಶಬ್ದಗಳಿಂದ ಪಚಮಡಿ ಎಂಬ ಹೆಸರು ಪ್ರಾಪ್ತವಾಗಿದೆಯಂತೆ. ಊರ ಸಮೀಪದ ಬೆಟ್ಟಗಳಲ್ಲಿ ಪಾಂಡವರು ತಮ್ಮ ವನವಾಸದ ದಿನಗಳನ್ನು ಕಳೆದರು ಎಂದು ತಿಳಿಯಲಾದ ಐದು ಗುಹೆಗಳಿವೆ. ಸ್ಥಳೀಯರು ಅವನ್ನು 'ಪಾಂಡುಗುಫಾ' ಎಂದು ಕರೆದರೂ ಅದರಲ್ಲಿರುವ ಶಿಲ್ಪಗಳು ಅವು ಮೂಲತಃ ಬೌದ್ಧಗುಹೆಗಳೆಂದು ಸಾರುತ್ತವೆ. ಇಲ್ಲಿಂದ ಊರಿನ ವಿಹಂಗಮ ನೋಟ ಸಾಗುತ್ತದೆ. ಇಲ್ಲಿಯ ಗುಹಾ-ಚಿತ್ರಗಳೂ ಹೆಸರುವಾಸಿಯಾಗಿವೆ. ಅವು ದಟ್ಟಕಾಡಿನಲ್ಲಿ ಇರುವದರಿಂದ, ಮಾರ್ಗ ದರ್ಶಕರೊಂದಿಗೆ ಹೋಗುವದು ಒಳ್ಳೆಯದೆಂದು ಹಿತಚಿಂತಕರು ಅಭಿಪ್ರಾಯ ಪಟ್ಟರು. ಆದರೆ ಅವರು ತೋರಿಸಿಕೊಟ್ಟಾತ, ಕೆಮ್ಮು-ದಮ್ಮುಗಳಿಂದ ನರಳುತಿದ್ದುದರಿಂದ ಅವನ ಚಹಾ-ತಿಂಡಿ-ಬಿಸಿಯೂಟ-ಬೀಡಿಕಟ್ಟುಗಳನ್ನು ಪೂರೈಸುವ ಪ್ರಸಂಗ ಬಂದಿತು. ಹಳೆ ಪಚಮಡಿಯ ರಸ್ತೆ ತುಳಿದು, ಅಲ್ಲಿ ತಲುಪಿದಾಗ, ನಿರಾಶೆಯೇ ಕಾದಿತ್ತು. ಸರಕಾರಿ ಸಂರಕ್ಷಣೆ ಇಲ್ಲದ್ದರಿಂದ, ಸೈನಿಕರೂ, ಇತರ ದಾರಿಹೋಕರೂ ತಂತಮ್ಮ ಹೆಸರುಗಳನ್ನು ಬರೆದು ಸಹಸ್ರಾರು ವರ್ಷಗಳಿಂದ ಉಳಿದುಕೊಂಡು ಬಂದ ಗುಹಾಚಿತ್ರಗಳನ್ನು ಸಾರ್ವಕಾಲಿಕವಾಗಿ ನಾಶ ಮಾಡಿ ಬಿಟ್ಟಿದ್ದರು. ಅವನ್ನು ನಾಶ ಮಾಡಿದಂತೆ, ತಿರುಗಿ ಕಾಣಿಸಿಕೊಳ್ಳುತ್ತವೇ ಎಂದು ಸ್ಥಳೀಯರು ನಂಬಿದ್ದಾರಂತೆ. ಹೀಗಾಗಿ ಅವರು ಕಲ್ಲಿನಿಂದ ನಾಶಮಾಡಿದ್ದೂ ಇದೆ. ಇಂಥ ಗುಹೆಗಳು ಇನ್ನೂ ಅನೇಕ ಇವೆ, ಎಂದು ಕೈಪಿಡಿ ಹೇಳಿದರೂ, ಮಾರ್ಗದರ್ಶಿ, ದಿನಕ್ಕೆ 20 ರೂಪಾಯಿ ಗಿಟ್ಟಿಸುವ ಹೊಂಚು ಹಾಕಿ, ಅವು ದೂರ ದೂರ ಇವೆ. ಬೇರೆ ಬೇರೆಯಾಗಿ ಹೋಗಿ ನೋಡಬೇಕಾಗುತ್ತದೆ,

ಎಂದು ವಾದಿಸಿದ. ಅವನಿಗೆ ವಿಶ್ರಾಂತಿ ಪಡೆಯಲು ಹೇಳಿ, ಆ ಕಾಡಿನಲ್ಲೇ ಸಂಚರಿಸಿದಾಗ, ಇನ್ನೂ ಐದಾರು ಗುಹಾಲಯಗಳು ಸನಿಹದಲ್ಲೇ ಕಂಡವು. ಮಾರ್ಗ ದರ್ಶಕನು, ತನ್ನ, ಜಾಣತನ ತೋರಿಸಲು ಹೋಗಿ ಸಿಗುವ ನಾಲ್ಕು ಕಾಸುಗಳನ್ನೂ ಕಳೆದುಕೊಂಡ.

ಬಟ್ಲರ್ ಜಲಪಾತವನ್ನು ನೋಡಲು ತೀರ ಇಕ್ಕಟ್ಟಾದ ಕಾಲು ದಾರಿಯನ್ನು ತುಳಿಯುತ್ತ ಹೊರಟಾಗ, ಮೇಲಿನಿಂದ ಗಿಳಿ ಎರಡು ಜೆಟ್ ವಿಮಾನದಂತೆ ಹಾರಿದವು. ಕೊರ್ತುರ್ ಹೆಂಗಳೆಯರು ಹುಲ್ಲು ಕೊಯ್ದು ಮನೆಗೆ ಸಾಗಿಸುವದರಲ್ಲಿ ಇದ್ದರು. ಕಳ್ಳಸೆರೆ ತಯಾರಕರು, 'ನಿರ್ಜನ ಪ್ರದೇಶವೆಂದು, ಅಕ್ರಮ ಚಟುವಟಿಕೆಯಲ್ಲಿ ತೊಡಗಿದವರು, ಕ್ಷಣಾರ್ಧದಲ್ಲಿ ಮಾಯವಾದರೂ, ಮರಕಡಿಯುವವರೂ ತಲೆಮರಸಿಕೊಂಡರು. ಜಲಪಾತವೇನೂ ಅಂಥ ಆಕರ್ಷಕವಾಗಿರಲಿಲ್ಲವಾದರೂ ಜೀವನದಲ್ಲಿ ಜಿಗುಪ್ಸೆ ಎಂದವರಿಗೆ ಚಿರಶಾಂತಿ ಪಡೆಯಲು ಉತ್ತಮ ತಾಣವೆಂಬ ಖ್ಯಾತಿ ಪಡೆದಿದೆ. ಒಬ್ಬ ಸೈನಿಕನ ಗರ್ಭಿಣಿ ಪತ್ನಿ, ತನ್ನ ಇನ್ನೊಬ್ಬ ಮಗುವಿನೊಂದಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಳಂತೆ. ಪರಿಸರದ ಜನರನ್ನು ಭೂತರೂಪದಲ್ಲಿ ಆಗಾಗ ಕಾಡುತ್ತಲೇ ಇರುತ್ತಾಳಂತೆ. ಬೆನ್ನಟ್ಟ ಬರುತ್ತಿದ್ದಾಳೆಯೇ! ಎಂದು ಎರಡೂ ಮೂರು ಬಾರಿ ಹಿಂದಿರುಗಿ ನೋಡುವಲ್ಲಿ ಪಚಮಡಿ ಬಂದೇ ಬಿಟ್ಟಿತು.

11 ರಾಣಿ ರೂಪಮತಿಯ ಮಾಂಡು



ಶಾಲಾ ವಿದ್ಯಾರ್ಥಿಯಾಗಿದ್ದಾಗ 'ರಾಣಿ ರೂಪಮತಿ' ಚಲಚ್ಚಿತ್ರ ವೀಕ್ಷಿಸುತ್ತಿದ್ದಂತೆ ಮಾಂಡು ರಾಜ್ಯದ ಗತ ವೈಭವವನ್ನು ಕಣ್ಣಾರೆ ಕಾಣಬೇಕೆಂದು ನಿರ್ಧರಿಸಿದ್ದೆ. ಎರಡು ದಶಖಗಳ ಅನಂತರ ಇಂದೋರಿನಿಂದ ಮಾಂಡು (ಮಧ್ಯಪ್ರದೇಶ)ವಿಗೆ ಹೊರಟಾಗ, ವಧುವನ್ನು ಕಾಣಹೊರಟ ವರನಷ್ಟು ತವಕ. ಆತುರವಿದ್ದರೂ, ಪ್ರವಾಸ ನಿಧಾನವಾಗಿತ್ತು. ಬಸ್ಸು ಏದುತ್ತ, ತೇಕುತ್ತ, ಬುಸುಗುಡುತ್ತ, ಹೊಗೆ ಕಾರುತ್ತ, ಕಾಡನ್ನು ಹಿಂದೆ ಹಾಕುತ್ತ, ವಿಂಧ್ಯ ಪರ್ವತಾವಳಿಗಳನ್ನು ಸುತ್ತು ಹಾಕುತ್ತ, ಸಮುದ್ರ ಪಾತಳಿಯಿಂದ ಎರಡು ಸಹಸ್ರ ಅಡಿ ಮೇಲೇರಿದಾಗ, ಮಾಂಡುವಿನ ಕೋಟೆಯ ಎತ್ತರದ ಕಮಾನುಗಳು ಸ್ವಾಗತ ಕೋರಿದವು. ಅಲ್ಲಿಯ ಪ್ರೇಕ್ಷಣೀಯ ಸ್ಥಳಗಳು ದೂರ ದೂರದವರೆಗೆ ಹರಡಿಕೊಂಡಿರುವುದರಿಂದ, ಟೆಂಪೊದ ಮೊರೆ ಹೋಗುವದು ಅನಿವಾರ್ಯವಾಗಿ ಬಿಡುತ್ತದೆ. ಊರ ಸುತ್ತಲೂ ಅಭೇದ್ಯಗೋಡೆ ಇದ್ದು, ಐದು ಬಾಗಿಲುಗಳಿಂದ ಒಳಸೇರಬಹುದಾಗಿದೆ. ಹೆಚ್ಚಿನ ಸ್ಮಾರಕಗಳು, ದಕ್ಷಿಣೋತ್ತರವಾಗಿ ಓಡುವ ರಸ್ತೆಯಲ್ಲಿಯೇ ಇವೆ. ಹಿಂದಿನ ರಾಜವಾಡೆಗಳು ನಿರ್ಜನವಾಗಿದ್ದರೆ, ಮಾಂಡು ಹಳ್ಳಿಯ ಜನ, ದೈನಂದಿನ ಜೀವನ ನಡೆಸಿಕೊಂಡು ಇದ್ದಾರೆ. ಪ್ರವಾಸಿಗರೇ ವ್ಯಾಪಾರಿಗಳ ಪ್ರಮುಖ ಗಿರಾಕಿಗಳು. ಅಂತೆಯೇ ವಿಪರೀತ ಮಳೆ ಬೀಳುವ ದಿನಗಳಲ್ಲಿ ವ್ಯಾಪಾರಿಗಳು ಆಕಳಿಸುವುದಲ್ಲದೇ ಬೇರೆ ಏನೂ ಮಾಡಲಾಗುವುದಿಲ್ಲ.

ಇಲ್ಲಿ ಹಿಂದು-ಮಹಮ್ಮದೀಯರ ಕಲೆ, ಸಂಗೀತ, ಸಹಜೀವನಗಳ ಹಿತವಾದ ಸಮ್ಮಿಶ್ರಣವನ್ನು ಕಾಣಬಹುದು. ಹತ್ತರಿಂದ ಹದಿಮೂರು ಶತಕಗಳವರೆಗೆ ಪರಮಾರ ವಂಶಜರು

ದಕ್ಷರೀತಿಯಿಂದ ರಾಜ್ಯವಾಳಿದರು. ಹದಿಮೂರನೆಯ ಶತಮಾನದಲ್ಲಿ ಮಾಳವದ ಮಾಂಡಳಿಕನಾಗಿದ್ದ ದಿಲಾವರಖಾನನು ದಿಲ್ಲಿಯ ಸುಲ್ತಾನನಿಂದ ಸ್ವಾತಂತ್ರ್ಯವನ್ನು ಘೋಷಿಸಿ, ಹತ್ತಿರದ ಧಾರನಗರದಿಂದ ರಾಜ್ಯ ಪ್ರಾರಂಭಿಸಿ, ಮಾಂಡುವನ್ನು ನೆಚ್ಚಿನ ನಗರವಾಗಿ ಬೆಳೆಸಿದನು. ಅವನ ಮಗ ಹೋಶಂಗ್ ಶಹನು (1405 - 35) ದಕ್ಷರೀತಿಯಿಂದ ಆಡಳಿತ ನಡೆಸಿದನಲ್ಲದೇ ಮಾಂಡುವಿನ ಸರ್ವತೋಮುಖ ಅಭಿವೃದ್ಧಿಯತ್ತ ಲಕ್ಷ್ಯ ಹರಿಸಿದ. ಅನಂತರ ಬಂದ ಮಹಮ್ಮದ ಖಿಲ್ಜಿ (1436 - 69) ಮೇವಾಡದ ಮಹಾರಾಜನನ್ನು ಸೋಲಿಸಿ ವಿಜಯಿಯಾದ. ಅವನ ಮಗನಾಗ ಘಿಯಾಸುದ್ದೀನನು ಹೆಚ್ಚೇನೂ ಸಾಧಿಸದಿದ್ದರೂ ಅತ್ಯಂತ ರಸಿಕ ಅರಸನೆಂದು ಖ್ಯಾತಿ ಗಳಿಸಿದನು. ಅವನ ಎಂಬತ್ತನೇ ಹುಟ್ಟುಹಬ್ಬದಂದು ಮಗನೇ ವಿಷಪ್ರಯೋಗ ಮಾಡಿಸಿ, ಅವನ ಆಳ್ವಿಕೆಯನ್ನು ಮುಕ್ತಾಯಗೊಳಿಸಿದನು. ಕೊನೆಯ ಅರಸನಾದ ಬಾಝು ಬಹಾದುರನೊಂದಿಗೆ ಮಾಂಡುವಿನ ಕಥೆ ರಂಜಕವಾಗಿ ಹೆಣೆದುಕೊಂಡಿದೆ. ಆತ ಸಂಗೀತ ಪ್ರಿಯ, ಸುಖಲೋಲುಪ. ಹೀಗಾಗಿ ಗೊಂಡವನದ ರಾಣಿ ದುರ್ಗಾವತಿ ಅವನನ್ನು ಯುದ್ಧದಲ್ಲಿ ಸೋಲಿಸಿದಳು. 1561ರಲ್ಲಿ ಅಕಬರನ ಸೈನ್ಯ ಬಾಝು ಬಹಾದುರನನ್ನು ಸೋಲಿಸಿ ಮಾಂಡುವನ್ನು ದಿಲ್ಲಿಯ ಸುಲ್ತಾನರ ಆಳ್ವಿಕೆಗೆ ಸೇರಿಸಿತು. ಔರಂಗಜೇಬನ ಮೃತ್ಯುವಿನ ಅನಂತರ ಮರಾಠರು ಮಾಂಡುವನ್ನು ಗೆದ್ದು ಬಾಜೀರಾಯ ಪೇಶ್ವೆಯನ್ನು ಅಲ್ಲಿ ಆಡಳಿತಗಾರನಾಗಿ ನೇಮಿಸಿದರು. ಸ್ವಾತಂತ್ರ್ಯಾನಂತರ ಮಾಂಡು ಮಧ್ಯಪ್ರದೇಶದಲ್ಲಿ ವಿಲೀನವಾಗಿದೆ.

ಹೋಶಂಗ್ ಶಹನು ಕಟ್ಟಲು ಪ್ರಾರಂಭಿಸಿ, ಮುಹಮ್ಮದ ಖಿಲ್ಜಿಯು 1454ರಲ್ಲಿ ಪೂರ್ತಿಗೊಳಿಸಿದ ಜಾಮಿ ಮಸೀಬಿಯು ವಾಸ್ತು, ಡಮಾಸ್ಕಸ್‌ದಲ್ಲಿಯ ಮಸೀದಿಯನ್ನು ಪ್ರತಿನಿಧಿಸುತ್ತದೆ. ಮೂವತ್ತು ಪಾವಟಿಗೆಗಳನ್ನು ಏರಿ ಒಳಹೊಕ್ಕಾಗ, ಸಂಗಮವರಿ ಶಿಲೆಯಲ್ಲಿ ನಿರ್ಮಿತವಾದ ಕಟ್ಟಡ ಕಣ್ಣಿಗೆ ಹಬ್ಬವುಂಟುಮಾಡುತ್ತದೆ. ಅಸಂಖ್ಯಾತ ಕಂಬ, ಕಮಾನುಗಳು, ಜಾಲಂದ್ರ ಮತ್ತು ಅರವತ್ತೊಂದು ಗುಮ್ಮಟಗಳಿಂದ ವೈಶಿಷ್ಟ್ಯಪೂರ್ಣವಾಗಿದೆ. ಅದನ್ನು ನೋಡಲು ಬಂದ ಶಹಜಹಾನನ ನಾಲ್ವರು ನಿಪುಣ ಶಿಲ್ಪಿಗಳು ಆದರ ರಚನಾ ಕೌಶಲ್ಯ ಕಂಡು ಮೂಕರಾಗಿ ಹೋದರೆಂದು ಅಲ್ಲಿಯ ಶಾಸನ ಸಾರುತ್ತದೆ. ಎರಡು ಶತಕಗಳ ಅನಂತರ ಆಗ್ರಾದಲ್ಲಿ ತಾಜ್‌ಮಹಲ್ ಕಟ್ಟುವ ಕೆಲಸ ಪ್ರಾರಂಭವಾದಾಗ ಈ ಮಾದರಿಯ ಜಾಲಂದ್ರಗಳನ್ನು ಜೋಡಿಸಲಾಯಿತೆಂದು ಇಲ್ಲಿ ಸ್ಮರಿಸಿಕೊಳ್ಳಬಹುದು. ಹೋಶಂಗ್ ಶಹಾನು ತನ್ನ ಸಮಾಧಿಗಾಗಿ ಕಟ್ಟಡ ಪ್ರಾರಂಭಿಸಿದ್ದನಂತೆ, ಅನಂತರದ ಅರಸರು ಅದನ್ನು ಮುಗಿಸಿದರು. ಅಲ್ಲಿಯ ಸಾಲು ಕಂಬಗಳನ್ನು ನೋಡುತ್ತಿದ್ದಂತೆ ರಾಮೇಶ್ವರ ದೇವಾಲಯದ ಸಹಸ್ರ ಕಂಬಗಳು, ಮೂಡುಬಿದಿರೆಯ ಸಾವಿರ ಕಂಬದ ಬಸದಿ ನೆನಪಿಗೆ ಬರುತ್ತವೆ. ಅಲ್ಲಿಯ ಕಮಾನುಗಳಿಂದ ಹೊರಹೊಮ್ಮುವ ಬೆಳಕು - ಕತ್ತಲೆಗಳ ಕಣ್ಣು ಮುಚ್ಚಾಲೆ ಆಟದಿಂದ ಯಾವುದೋ ಜಾದೂನಗರಿಗೆ ಬಂದಂತೆ ಭಾಸವಾಗುತ್ತದೆ. ಶಿಖರವನ್ನು ಅಲಂಕರಿಸಿದ ಗುಮ್ಮಟಗಳು ವಿಜಾಪುರದ ಗೋಲಗುಮ್ಮಟವನ್ನು ನೆನಪಿಸುತ್ತವೆ. ಅರಸನ ಕಳೇಬರವನ್ನು ಹೊತ್ತ ಶಿಲಾಪೆಟ್ಟಿಗೆಯನ್ನು ವಿಸ್ತಾರವಾದ ಖಾನೆಯಲ್ಲಿ ಇಡಲಾಗಿದೆ. ದಿಲಾವರ್ ಖಾನ್ ಕಟ್ಟಿಸಿದ ಮಸೀದಿ ರಾಜಮನೆತನದವರಿಗಷ್ಟೇ ಮೀಸಲಾಗಿತ್ತು.

ಘಿಯಾಸುದ್ದೀನ್ (1469-1500) ಕಾಲದಲ್ಲಿ ನಿರ್ಮಿತವಾದ ಜಹಾಜ (ನೌಕಾ) ಮಹಲ್ ನೋಡುತ್ತಿದ್ದಂತೆ ಉದಯಪುರದ ಸರೋವರದ ನಟ್ಟನಡುವೆ ಕಟ್ಟಲಾದ ಅರಮನೆ ಕಣ್ಣಿಗೆ ಕಟ್ಟಿದಂತಾಗುತ್ತದೆ. ಎರಡು ಅಂತಸ್ತಿನ ಈ ಕಟ್ಟಡ ಕಪೂರ ಮತ್ತು ಮುಂಜ ಸರೋವರಗಳ ನಡುವೆ ನಿಂತಿದೆ. ತುಂಟಗಾಳಿ ಸರೋವರದಲ್ಲಿ ತೆರೆಗಳನ್ನು ಎಬ್ಬಿಸಿದಾಗ ಜಹಾಜ ಮಹಲ ಮಂದಗತಿಯಿಂದ ಚಲಿಸಿದಂತೆ ಭಾಸವಾಗುತ್ತದೆ. ಕಲಾತ್ಮಕವಾಗಿ ಕಟ್ಟಿದ ಸ್ನಾನಗೃಹ ನೋಡುತ್ತಿದ್ದಂತೆ, ಸುಂದರಾಂಗಿಯರು ಕುಲುಕುಲು ನಗುತ್ತ ಕುಚೇಷ್ಟೆ ಮಾಡಿಕೊಳ್ಳುತ್ತ ನೀರಾಟದಲ್ಲಿ ತೊಡಗಿದಂತೆ ಭಾಸವಾಯಿತು. ವೈಭವದ ದಿನಗಳಲ್ಲಿ ಈ ಕಟ್ಟಡದಲ್ಲಿ ಸುಮಾರು ಒಂದೂವರೆ ಸಾವಿರ ಸುಂದರಿಯರಿಗೆ ಹಾಡುಗಾರಿಕೆ, ಸಂಗೀತ, ನೃತ್ಯ, ಚಿತ್ರಕಲೆ, ಕಸೂತಿ, ಲೆಕ್ಕ ಬರೆಯುವುದು

ಮುಂತಾದವುಗಳಲ್ಲಿ ತರಬೇತಿ ಕೊಡಲಾಗುತ್ತಿತ್ತಂತೆ. ವಿಶೇಷ ಸಮಾರಂಭಗಳಲ್ಲಿ ತುರ್ಕಸ್ತಾನ್ ಮತ್ತು ಹಬಶಿ (ಅಬಸೀನಿಯಾ) ಸುಂದರಿಯರು ಪುರುಷರ ವೇಷಭೂಷಣ ಧರಿಸಿ, ಖಡ್ಗಗಳೊಂದಿಗೆ ಅರಸನ ಅಕ್ಕಪಕ್ಕದಲ್ಲಿ ಶಿಸ್ತಿನಿಂದ ನಿಲ್ಲುತ್ತಿದ್ದರಂತೆ. ಕೋಮಲಾಂಗಿನಿಯರಿಗೆಲ್ಲ ಸದಾಕಾಲ ಹಿತಕಾರಿ ಹವಾಮಾನವಿರುವಂತೆ ಏರ್ಪಾಡು ಮಾಡಲಾಗಿತ್ತು. ಮೊದಲನೆಯ ಅಂತಸ್ತಿನಲ್ಲಿ ಮೂರು ಬೃಹದಾಕಾರದ ಹಜಾರಗಳನ್ನು ನಿರ್ಮಿಸಿ ಸುತ್ತಲೂ ಸದಾಕಾಲ ನೀರು ಹರಿಯುವ ವ್ಯವಸ್ಥೆ ಮಾಡಲಾಗಿತ್ತು. ದ್ವಿತೀಯ ಮಹಡಿಯ ಮಾಡನ್ನು ಚಿಕ್ಕ ದೊಡ್ಡ ಗೋಲಕಗಳಿಂದ ಜೋಡಿಸಲಾಗಿತ್ತಲ್ಲದೆ ಅರಿಸಿನ, ನೀಲಿ ಹಂಚುಗಳಿಂದ ಅಲಂಕರಿಸಲಾಗಿದೆ.

ಹಿಂದೋಳ್ ಮಹಲಿಗೆ ಅಗಲವಾದ ಇಳಿಜಾರಾದ ಗೋಡೆಗಳಿರುವದರಿಂದ ಅದು ಜೋಕಾಲಿಯಂತೆ ಗಾಳಿಯಲ್ಲಿ ತೇಲುತ್ತಿರುವಂತೆ ಭಾಸವಾಗುತ್ತದೆ. ಆಳರಸರು ಇಲ್ಲಿ ದರ್ಬಾರ್ ನಡೆಸುತ್ತಿದ್ದುದರಿಂದ, ಹೆಚ್ಚಿನ ಸುರಕ್ಷಿತೆಗಾಗಿ ಈ ಮುಂಜಾಗ್ರತೆ ಇದ್ದಿರಬೇಕು. ಅಶ್ರಫಿ ಮಹಲ್, ಮೊದಲು ಪಾಠಶಾಲೆಯೆಂದು ನಿರ್ಮಿಸಿದರೂ, ಅನಂತರ ಮಹಮ್ಮದ್ ಖಿಲ್ಜಿಯ ಸ್ಮಾರಕವೆಂದು ಪರಿವರ್ತಿಸಲಾಯಿತು. ಆತನ ಸಮಾಧಿಯ ಶಿಲಾಪಟ್ಟಿಗೆಗೆ ಸುಂದರವಾದ ಕೆತ್ತನೆಯಿದೆ. ಮೇವಾಡದ ರಾಣಾನನ್ನು ಸೋಲಿಸಿದ ನೆನಪಿಗಾಗಿ ಕಟ್ಟಿಸಿದ ನೂರ ಐವತ್ತು ಅಡಿ ಎತ್ತರದ 'ವಿಜಯಸ್ತಂಭ' ತನ್ನ ಗತವೈಭವವನ್ನು ನೆನೆಯುತ್ತ ಮೂಕವಾಗಿ ನಿಂತಿದೆ. ಹಾಥಿ (ಆನೆ) ಮಹಲ್‌ದ ಕಂಬಗಳು ಆನೆಕಾಲುಗಳಂತೆ ಇದ್ದು ಹನ್ನೆರಡು ಅಡಿ ಅಗಲವಾಗಿದೆ. ಈ ಕಟ್ಟಡಕ್ಕೆ ಹನ್ನೆರಡು ಕಮಾನುಗಳ ಬಾಗಿಲು ಇದ್ದು ನೆತ್ತಿಯ ಮೇಲೆ ಗುಮ್ಮಟವೂ ಇದೆ. ದರಿಯಾ. ಖಾನನ ಕಬ್ರಸ್ತಾನ್ (ಗೋರಿ) ದಲ್ಲಿ ದ್ವಿತೀಯ ಮಹಮ್ಮದ್ ಖಾನ್ (1510-26) ಕಾಲದಲ್ಲಿ ಕಾದು ಮಡಿದ ಉಚ್ಚ ಅಧಿಕಾರಿಗಳ ದಫನ್ ಮಾಡಲಾಗಿದೆ. ಚಿಸ್ತಿಖಾನನ ಅರಮನೆಯಿಂದ ಸುತ್ತಮುತ್ತಲಿನ ಸೃಷ್ಟಿ, ಸೌಂದರ್ಯವನ್ನು ಸವಿಯಬಹುದಾದ್ದರಿಂದ, ಮಳೆಗಾಲದಲ್ಲಿ ಆಶ್ರಯ ಪಡೆಯಲು ನಿರ್ಮಿಸಲಾಗಿರಬಹುದು. ತವಲಿ ಮಹಲ್ ಅರಸರ ಅಶ್ವಗಳ ಆಸ್ಥಾನವಿದ್ದುದನ್ನು ಇಂದಿನ ಪ್ರಯಾಣಿಕರ ಆಶ್ರಯಸ್ಥಾನ ಮಾಡಲಾಗಿದೆ!

ಮಾಂಡುವಿನ ದಕ್ಷಿಣಕ್ಕೆ ರಾಣಿ ರೂಪಮತಿಯ ಅರಮನೆ ಆಯಕಟ್ಟಿನ ಸ್ಥಳದಲ್ಲಿ ನಿಂತಿದೆ. ಅಲ್ಲಿಂದ ಒಂದು ಸಹಸ್ರ ಅಡಿ ಆಳದಲ್ಲಿರುವ ರಮ್ಯವಾದ ನಿಮಾದ ಬಯಲು ಗೋಚರಿಸುವುದು. ಅಲ್ಲಲ್ಲಿ ಜುಳು ಜುಳು ಹರಿಯುವ ಝರಿ, ವಿಸ್ತಾರವಾದ ಸರೋವರಗಳು, ವೃಕ್ಷರಾಜಿ ಕಣ್ಣಿಗೆ ಹಬ್ಬವನ್ನುಂಟು ಮಾಡುವವು. ಸಂಜೆಗತ್ತಲಿನಲ್ಲಿ ಹಕ್ಕಿಗಳ ಇಂಚರ ಕೇಳಿ ಬಂದರೆ, ಕತ್ತಲಾಗುತ್ತಿದ್ದಂತೆ ನರಿ, ಚಿರತೆ, ಹುಲಿಗಳ ಗರ್ಜನೆ ಕೇಳುವಂತಾಗುತ್ತದೆ. ಎರಡಂತಸ್ತಿನ ರಾಣಿ ನಿವಾಸ ನೋಡುತ್ತಿದ್ದಂತೆ ನಾಲ್ಕು ಶತಮಾನಗಳ ಹಿಂದೆ ನಡೆದುಹೋದ ಘಟನೆಗಳು ಒಂದೊಂದಾಗಿ ಸ್ಮೃತಿ ಪಟಲದ ಮೇಲೆ ಮೂಡಿಮಾಯವಾಗತೊಡಗಿದವು. ವಸಂತ ಋತುವಿನಲ್ಲಿ ಗಿಡಮರಗಳು ಹೂ-ಕಾಯಿ ಹಣ್ಣುಗಳನ್ನು ತಳೆದು ಕಂಗೊಳಿಸುವಾಗ, ಸಂಗೀತ ಪ್ರೇಮಿ ಬಾಝು ಬಹಾದುರನು ಶಿಕಾರಿಗಾಗಿ ನರ್ಮದಾ ತೀರದಲ್ಲಿರುವ ಧರ್ಮಪುರಿ ಅರಣ್ಯಕ್ಕೆ ತೆರಳಿದ. ಹೂಗಳ ಕಂಪಿನೊಂದಿಗೆ ಹಾಡಿನ ಇಂಪೂ ತೇಲಿ ಬಂದಾಗ ದೊರೆಯ ಕಿವಿಗಳು ನಿಮಿರಿದವು. ಕುದುರೆಯನ್ನೇರಿ ಕಂಠಶ್ರೀಯ ಉಗಮ ಸ್ಥಾನವನ್ನು ಶೋಧಿಸಲು ಹೊರಟ. ನದೀತೀರದಲ್ಲಿ ಭವ್ಯವಾದ ಮರವೊಂದರ ಅಡಿ, ಬಂಡೆಗಲ್ಲಿನ ಮೇಲೆ ಆರೂಢಳಾದ ಯುವತಿ, ನೀರಿನಲ್ಲಿ ಕಾಲು ಇಳಿಬಿಟ್ಟು ಕಣ್ಣು ಮುಚ್ಚಿ ಭಾವಪೂರ್ಣವಾಗಿ ಹಾಡುವುದರಲ್ಲಿ ಮೈಮರೆತಿದ್ದಳು. ಸಂಗೀತ ಪ್ರೇಮಿ ಅರಸು ಕುದುರೆಯಿಳಿದು, ಕಳ್ಳ ಹೆಜ್ಜೆ ಹಾಕುತ್ತ ಮುಂದುವರಿದರೂ ತರಗಲೆಗಳ ಶಬ್ದ ಬಾರದಿರಲಿಲ್ಲ. ಹತ್ತಿರವೇ ಸರಸರ ಸಪ್ಪಳವಾದಾಗ ಯುವತಿ ರೂಪಮತಿ ಬೆಚ್ಚಿಬಿದ್ದು ಎದ್ದುನಿಂತು "ನೀನಾರು? ಇಲ್ಲಿ ಏಕೆ ಬಂದಿರುವಿ?" ಎಂದು ಪ್ರಶ್ನಿಸಿದಾಗ ಅವನ ರೂಪ, ಅಲಂಕಾರಗಳೇ ಉತ್ತರಿಸಿದವು. "ಹಾಡುವುದನ್ನು ಅದೇಕೆ ನಿಲ್ಲಿಸಿದಿ? ನನಗಾಗಿ ಇನ್ನೊಮ್ಮೆ ಹಾಡುವಿಯಾ?" ಎಂದು ಅರಸ ವಿನಂತಿಸಿಕೊಂಡಾಗ,

ನಮ್ರವಾಗಿ "ಇಲ್ಲ. ಆ ಪ್ರಾರ್ಥನೆ ತಾಯಿ ನರ್ಮದೆಗೆ ಮೀಸಲು" ಎನ್ನುತ್ತ ಬೇರೊಂದು ಹಾಡನ್ನು ಪ್ರಾರಂಭಿಸಿದಳು. ಅರಸು ಕಣ್ಮುಚ್ಚಿ ತನ್ಮಯನಾದ. ಹಾಡು ನಿಂತಾಗ ಕಣ್ತೆರೆದರೆ ಯುವತಿ ಕಣ್ಮರೆಯಾಗಿದ್ದಾಳೆ! ಅತ್ತಿತ್ತ ಹುಡುಕುತ್ತಿದ್ದಂತೆ ಮರದ ಅಡಿಯಿಂದ ಕುಲುಕುಲು ನಗುವಿನೊಂದಿಗೆ ಹುಲ್ಲೆಯಂತೆ ಓಡಿದ್ದು, ಗೆಜ್ಜೆಯ ಸದ್ದಿನಿಂದಲೇ ಅರಿಯುವಂತಾಯಿತು. ಪ್ರಥಮ ಪರಿಚಯ ಪ್ರಣಯದಲ್ಲಿ ಪರಿವರ್ತನೆಗೊಂಡಿತು. ತಾನು ಹಿಂದುವಾಗಿಯೇ ಮುಂದುವರಿಯಲು ಒಪ್ಪಿಕೊಂಡರೆ ದೊರೆಯನ್ನು ವರಿಸುವುದಾಗಿ ಆಕೆ ಹೇಳಿದಾಗ ಅವಳ ರೂಪ-ಲಾವಣ್ಯ, ಕಂಠ ಮಾಧುರ್ಯ, ಕ್ಯಾಶಕ್ತಿ-ಸಂಗೀತಗಳಿಗೆ ಮನಸೋತ ಅರಸು ಆಗಲೆಂದು ಒಪ್ಪಿಕೊಂಡ.

ತನ್ನ ಅರಮನೆಯ ಆವಾರದಲ್ಲಿದ್ದ ವೀಕ್ಷಣಾಗೃಹ ಅವಳ ಸಂಗೀತ ಸಾಧನೆಗೆ ಪ್ರಶಸ್ತ ತಾಣವೆಂದು ಅದನ್ನೇ ಅರಮನೆಯಾಗಿ ಪರಿವರ್ತಿಸಿದನು. ಬಾಝು ಬಹಾದುರನ ಅರಮನೆ ನಿರಾಡಂಬರದಿಂದ ಕೂಡಿದ್ದರೂ ಸುಂದರ ಪರಿಸರವನ್ನು ಹೊಂದಿದೆ. ಅವನು ಅಸಂಖ್ಯಾತ ಸುಂದರಿಯರನ್ನು ತನ್ನ ಜನಾನಾಕ್ಕೆ ಬರಮಾಡಿಕೊಂಡಿದ್ದರೂ ರೂಪಮತಿಗೆ ತನ್ನ ಸರ್ವಸ್ವವನ್ನೂ ಅರ್ಪಿಸಿಬಿಟ್ಟನು. ಹಿಂದುಗಳಿಗೆ ಪವಿತ್ರವಾದ ರೇವಾ ಕುಂಡವನ್ನು ರೂಪಮತಿ ಆಳಮಾಡಿಸಿದಳು. ಅದರ ನೀರು ಅರಮನೆ, ತೋಟಗಳಿಗೆ ಹರಿಸುವ ಏರ್ಪಾಡು ಮಾಡಿದಳು. ಹತ್ತಿರದಲ್ಲಿ ಬಿಸಿನೀರಿನ ಸೆಲೆಯೂ ಹರಿಯುತ್ತದೆ. ಈ ರಮ್ಯವಾದ ತಾಣದಲ್ಲಿ ರಾಯಪ್ರೇಮಿಗಳು ಅದೆಷ್ಟು ಅಲೆದಿದ್ದಾರೋ, ಅದೆಷ್ಟು ಹಾಡಿದರೋ! ಬೆಳದಿಂಗಳ ರಾತ್ರಿ ಹೂ ತೋಟಗಳಲ್ಲಿ ಮೈಗಂಟಿ ಕುಳಿತು ಅದೆಷ್ಟು ಗೀತಗಳನ್ನು ಗುಣಗುಣಿಸಿದರೋ, ಹೊಸ ಚೀಜ್‌ಗಳನ್ನು ಸೃಷ್ಟಿಸಿದರೋ!

ಆದರೆ ಅವರ ಈ ಸುಖಜೀವನ, ದೈವಕ್ಕೆ ಸರಿ ಬರಲಿಲ್ಲವೆಂದು ತೋರುತ್ತದೆ. ಮೊಗಲ್ ಬಾದಶಹ ಅಕಬರನ ಮಹಾಸೇನಾಪತಿ, ರೂಪಮತಿಯ ರೂಪ-ಸಂಗೀತಗಳ ವಿಚಾರಕ್ಕೆ ಮನಸೋತಿದ್ದ. 1561ರಲ್ಲಿ ದೊಡ್ಡದೊಂದು ಸೈನ್ಯದೊಂದಿಗೆ ಮಾಂಡುವಿನ ಮೇಲೆ ಆಕ್ರಮಣ ನಡೆಸಿದ. ಬಾಝು ಬಹಾದುರನನ್ನು ಸೋಲಿಸಿದ. ಸೇನಾಪತಿಯ ದುಷ್ಟ ಉದ್ದೇಶವನ್ನು ಅರಿತ ರಾಣಿ, ಆತನ ವಶವಾಗಲೊಪ್ಪದೇ ಪ್ರಾಣಾರ್ಪಣೆ ಮಾಡಿದಳು. ಬಹಾದುರನನ್ನು ಸೆರೆಹಿಡಿದು ದಿಲ್ಲಿಗೆ ಒಯ್ಯಲಾಯಿತು. ಅಲ್ಲಿ ಅಕಬರನ ಕ್ಷಮೆ ಯಾಚಿಸಿದ್ದಕ್ಕಾಗಿ ಆತನನ್ನು ಎರಡು ಸಾವಿರ ಅಶ್ವಗಳ ಮುಖ್ಯಸ್ಥ ಮನಸಬ್‌ದಾರನಾಗಿ ಮಾಡಿದ್ದಲ್ಲದೇ ಆಸ್ಥಾನ ಸಂಗೀತಕಾರನ ಗೌರವವನ್ನು ದಯಪಾಲಿಸಲಾಯಿತು. ಅಕಬರನ ದರಬಾರದಲ್ಲಿ ತಾನಸೇನನನ್ನು ಬಿಟ್ಟರೆ ಅವನನ್ನು ಸರಿಗಟ್ಟುವ ಬೇರಾವ ಸಂಗೀತಗಾರನೂ ಇರಲಿಲ್ಲವೆಂದು ಅಬ್ಬುಲ್‌ಫಸಲ್ ಸಾರುತ್ತಾನೆ.

ಮಾಂಡುವಿನ ತುತ್ತತುದಿಯಾದ ನೀಲಕಂಠದಲ್ಲಿ ಅಕಬರನಿಗಾಗಿ ಅರಮನೆಯೊಂದನ್ನು ಕಟ್ಟಿಸಲಾಯಿತಲ್ಲದೆ, ಅವನು ಅಲ್ಲಿ ವಿಹಾರಕ್ಕಾಗಿ ನಾಲ್ಕುಸಲ ತಂಗಿದ್ದನೆಂದು ಅಲ್ಲಿದ್ದ ಶಾಸನ ಸಾರುತ್ತದೆ. ಜಹಾಂಗೀರನು 1617ರ ಅಕ್ಟೋಬರ್ ನಲ್ಲಿ ಮಾಂಡುವಿಗೆ ಭೇಟಿಕೊಟ್ಟಾಗ, ಅಲ್ಲಿಯ ಸೌಂದರ್ಯ ಮತ್ತು ಆತಿಥ್ಯ ಸವಿಯುತ್ತ ಆರು ತಿಂಗಳು ಅಲ್ಲಿಯೇ ಠಾಣ್ಯ ಹಾಕಿದನು. ಆಗ ಅಲ್ಲಿ ಆಚರಿಸಿದ ಶಾಬು-ಇ-ಬರಾತ ಹಬ್ಬದ ವರ್ಣನೆಯನ್ನು ತನ್ನ ಆತ್ಮಚರಿತ್ರೆಯಲ್ಲಿ ಹೀಗೆ ಬರೆದಿಟ್ಟಿದ್ದಾನೆ: "ಸಂಜೆಗತ್ತಲಾದಂತೆ ಕಟ್ಟಡ ಮತ್ತು ಡೇರೆಗಳನ್ನು ವಿವಿಧ ಬಣ್ಣದ ಅಲಂಕಾರಿಕ ದೀಪಗಳಿಂದ ಸಜ್ಜುಗೊಳಿಸಲಾಯಿತು. ಅಂದಿನ ವಿನೋದಾವಳಿಗಳಿಗೆ ಕೊನೆಮೊದಲಿರಲಿಲ್ಲ. ಕುಡಿಯದವರಿಗೂ ಅಮಲು ಬರುವಂತಿತ್ತು, ಆ ರಾತ್ರಿ." ಅರಸಿ ನೂರಜಹಾನಳು ಪತಿಯೊಂದಿಗೆ ಬಂದಾಗ ಒಂದೇ ದಿನದಲ್ಲಿ ನಾಲ್ಕು ಹೆಬ್ಬುಲಿಗಳ ಶಿಕಾರಿ ಮಾಡಿದ್ದರಿಂದ ಅವಳಿಗೆ ಜಹಾಂಗೀರನು ಒಂದು ಲಕ್ಷ ರೂಪಾಯಿ ಬೆಲೆಬಾಳುವ ವಜ್ರ ಕಂಕಣಗಳನ್ನು ಕೊಟ್ಟಿದ್ದಲ್ಲದೇ ಅವಳ ಮೇಲೆ ಸಹಸ್ರ ಅಶ್‌ರಫಿಗಳ ಮಳೆಗರೆದನು. ಜಹಾಂಗೀರನು ಮಾಂಡುವಿನಲ್ಲಿ ಹಾಳುಬಿದ್ದ ಕಟ್ಟಡಗಳನ್ನು ದುರಸ್ತಿಮಾಡಿಸಿ ಪಟ್ಟಣವನ್ನು ಆಕರ್ಷಕವಾಗಿ ಮಾಡಿದನು. ಔರಂಗಜೇಬನ ಅಳ್ವಿಕೆ ಮಾಂಡುವಿನಿಂದಲೇ ಪ್ರಾರಂಭವಾಯಿತು.

ಇಂದೋರಿಗೆ ಹಿಂದಿರುಗುವ ಕೊನೆಯ ಬಸ್ ಹೊರಡುವುದರಲ್ಲಿದ್ದುದರಿಂದ ಅರೆಮನಸ್ಸಿನಿಂದ ಒಳ ಸೇರಿಕೊಳ್ಳಲೇಬೇಕಾಯಿತು. ಧರ್ಮ, ಜಾತಿ, ಅಂತಸ್ತು, ಸ್ಥಾನಮಾನಗಳನ್ನು ಮೆಟ್ಟಿನಿಂತ ಬಾಝು ಬಹಾದುರ ರೂಪಮತಿಯರ ಪ್ರೀತಿ-ವಿಶ್ವಾಸಗಳು ಮನಸ್ಸಿನ ಮೇಲೆ ಆಳವಾದ ಪ್ರಭಾವ ಬೀರಿದ್ದವು. ಅವರು ಜೊತೆಯಾಗಿ ಅದೆಷ್ಟೋ ಸಂಗೀತ ರಚನೆ ಮಾಡಿದ್ದು ಅವು ಇಂದಿಗೂ ಪ್ರಚಲಿತವಿದೆ. ಈ ಅಪರೂಪದ ದಂಪತಿಗಳ ಬಗ್ಗೆ ಛತ್ತೀಸಗಡದ ಅನೇಕ ಜಾನಪದ ಹಾಡುಗಳಿವೆ. ಅವರ ಅನ್ಯೋನ್ಯ ಪ್ರೇಮದ ಕುರಿತಾದ ಗೀತಗಳನ್ನು ಎಲ್ಲ ಧರ್ಮದವರೂ ಹಾಡುತ್ತಾರೆ. ಹೊರಗೆ ಹಾಲು ಚೆಲ್ಲಿದಂತಿದ್ದ ಬೆಳದಿಂಗಳಿನಲ್ಲಿ ರಸಿಕ ದಂಪತಿಗಳು ಜೋಕಾಲಿಯಲ್ಲಿ ತೂಗಿಕೊಳ್ಳುತ್ತಿದ್ದಂತೆ ಭಾಸವಾಯಿತು. ಅನೇಕಾನೇಕ ಕಲಾಕಾರರು ಸಹ ಈ ಅಪೂರ್ವ ದಂಪತಿಗಳನ್ನು ಅಜರಾಮರವಾಗಿ ಮಾಡಿದ್ದಾರೆ. ಅವುಗಳಲ್ಲಿ ಹಿಮಾಲಯದ ಗಢವಾಲ ಕಲಾಕಾರನು ನಿರ್ಮಿಸಿದ ಚಿತ್ರ ಅತಿ ಆಕರ್ಷಕವಾಗಿದೆ. ನರ್ಮದಾನದಿಯ ಕೊಳ್ಳದಲ್ಲಿ ಬೆಳದಿಂಗಳ ರಾತ್ರಿಯಲ್ಲಿ ಅರಸ-ಅರಸಿಯರು ಬೇಟೆಗಾಗಿ ಹೊರಟಿದ್ದಾರೆ. ಶ್ವೇತ ಅಶ್ವಾರೋಹಿಯಾದ ಬಾಝು ಬಹಾದುರನು ನಿಲುವಂಗಿ ತೊಟ್ಟು ಎಡಗೈಯಲ್ಲಿ ಭರ್ಜಿ ಹಿಡಿದು, ಬಿಲ್ಲನ್ನು ತೋಳಿಗೇರಿಸಿ ಸೊಂಟಕ್ಕೆ ಖಡ್ಗವನ್ನು ನೇತುಹಾಕಿ ಸುಸಜ್ಜಿತನಾಗಿದ್ದರೆ, ನಾಸಿಪುಡಿ ಬಣ್ಣದ ಕುದುರೆಯೇರಿದ ರೂಪಮತಿ, ಯಾವುದೋ ರಾಗದ ಕುರಿತಾದ ಚರ್ಚೆಯಲ್ಲಿ ಪ್ರಿಯಕರನೊಡನೆ ತೊಡಗಿದ್ದಾಳೆ. ಹತ್ತಿರದ ಸರೋವರದಲ್ಲಿ ಕಮಲಗಳು ಮರುದಿನದ ಸೂರ್ಯೋದಯಕ್ಕಾಗಿ ಹಾತೊರೆಯುತ್ತಿವೆ. ಹಿನ್ನೆಲೆಯಾಗಿ ದಟ್ಟವಾದ ಕಾಡನ್ನು ಬಳಸಲಾಗಿದೆ. ಕಲಾಕಾರನ ಕಲ್ಪನಾ ಶಕ್ತಿಗೆ ಇನ್ನೊಮ್ಮೆ ತಲೆದೂಗಿದೆ. ಸೀತೆ, ಸಾವಿತ್ರಿ, ಪದ್ಮಿನಿಯರಿಗೆ ಸರಿಸಮಾನವಾದ ಗೌರವ, ರೂಪಮತಿಗೂ ಸಂದಾಯವಾಗಬೇಕು ಎಂದು ಅನಿಸದೇ ಇರಲಿಲ್ಲ.

12 ಜಟಾ ಶಂಕರ



ಶೈವನಿರಲಿ, ವೈಷ್ಣವನಿರಲಿ, ನಾಸ್ತಿಕನಿರಲಿ, ಜಟಾಶಂಕರಕ್ಕೆ ಒಮ್ಮೆ ಭೇಟಿಕೊಟ್ಟರೆ, ಜೀವನ ಸಾರ್ಥಕವಾಯಿತು, ಎಂದು ಅನಿಸದೇ ಇರದು. ಅಂತಹ ಸುಂದರತಾಣವದು. ಪಚಮಡಿಯಿಂದ ಕೇವಲ ೧ ೧/೨ ಮೈಲು ದೂರವಿದ್ದರೂ, ಎಲ್ಲೊ ದಟ್ಟಕಾಡಿನಲ್ಲಿ ಇದ್ದ ಅನುಭವವಾಗುತ್ತದೆ. ಎತ್ತರವಾದ ಪರ್ವತಗಳ ಶ್ರೇಣಿಯ ಅಡಿಯಿಂದ ಪುಟ್ಟನದಿಯೊಂದು ಹರಿಯುತ್ತದೆ. ಈ ಕಣಿವೆ, ಮವಾಸಿಯ ಆದಿವಾಸಿಗಳ ತವರೂರು. ಇವರು ಬಹಳೇ ಸಂಕೋಚದ, ಸಾಧು ಜನಾಂಗ. ಅಂತೆಯೇ ಅಲ್ಲಿಂದ ಹಾಯ್ದು ಹೋಗುವಾಗ ಬಂಡಿಪುರ ಪ್ರಾಣಿಧಾಮದಲ್ಲಿ ಅಲೆದಾಡುವಂತೆ ಎಲ್ಲ ಜ್ಞಾನೇಂದ್ರಿಯಗಳನ್ನು ತೀಕ್ಷ್ಣಗೊಳಿಸಬೇಕಾಗುತ್ತದೆ. ಇಲ್ಲವಾದರೆ ಈ ಜನ ಹುಲ್ಲೆಯಂತೆ ಕ್ಷಣಾರ್ಧದಲ್ಲಿ ಮಾಯವಾಗಿ ಬಿಡುತ್ತಾರೆ. ಗಗನ ರಾಜನು ಭೂದೇವಿಯನ್ನು ಬಿಗಿದಪ್ಪುವ ತಾಣದಲ್ಲಿ ಹೆಂಗಳೆಯರ ತಂಡವೊಂದು ಕಾಡಿನಿಂದ ಉರುವಲ ಹೊತ್ತು ಬರಲಾರಂಭಿಸಿತ್ತು. ಶಿರದಲ್ಲಿ ಭಾರವೆನಿಸಿದಾಗ ಹೊರೆಯನ್ನು ಎರಡೂ ಕೈಗಳಿಂದ ಮೇಲಕ್ಕೆತ್ತಿಕೊಂಡು ಹೊರಟಾಗ ಕಸರತ್ತೇನಾದರೂ ನಡೆದಿದೆಯೇ ಎಂದು ಭಾಸವಾಗುತ್ತದೆ. ಅವರು ಉಟ್ಟ ತುಂಡು ಸೀರೆ, ಮೈತುಂಬ ಹಚ್ಚೆ, ಕೊರಡುಕಟ್ಟಿಗೆ ಹೊತ್ತು ಬಳಕುವ ದೇಹಗಳು ಛಾಯಾಗ್ರಹಣಕ್ಕೆ ಆಕರ್ಷಕವಾಗಿ ಕಂಡದ್ದರಿಂದ ಕ್ಯಾಮರಾ ಸಜ್ಜುಗೊಳಿಸುವಷ್ಟರಲ್ಲಿ ಅವರು ಯಾವದೋ ಕಾಡುದಾರಿ ತುಳಿದು ಫಕ್ಕೆಂದು ಅದೃಶ್ಯರಾಗಿ ಬಿಟ್ಟರು!

ಎಲ್ಲಿಂದಲೋ ಕಾಲುದಾರಿ ತುಳಿಯುತ್ತ ಮವಾಸಿಯ ಕುಟುಂಬ ಎದುರಿಗೆ ಪ್ರತ್ಯಕ್ಷವಾಯಿತು. ಬಲಗೈಯಲ್ಲೊಂದು ದೊಣ್ಣೆ, ಎಡಗೈಯಲ್ಲಿ ಸೀಮೆಯೆಣ್ಣೆ ಬಾಟ್ಲಿ, ತಲೆಯ ಮೇಲೆ ಬುಟ್ಟಿಹೊತ್ತ ತಂದೆ. ನಾಲ್ಕಾಣೆಯಲ್ಲಿ ಕೂದಲು ಹೊಡೆಸಿಕೊಂಡು ತುಂಡಂಗಿ ತೊಟ್ಟ ಕೌಪೀನಧಾರಿ ಮಗ, ಬೆಕ್ಕಿನ ಮರಿಯಂತೆ ಪಿಳಿ ಪಿಳಿ ಕಣ್ಣು ಬಿಡುವ ಪುಟ್ಟಮಗಳು, ಇದೀಗ ಹರೆಯದ ಹೊಸ್ತಿಲಲ್ಲಿ ಕಾಲಿಟ್ಟ ಹಿರಿಯಮಗಳು ಕೂಡಿ ಹೊರಟಿದ್ದರು. ಮಗಳು ಪೇಟೆಯಲ್ಲಿ ಮಾರಬೇಕಾಗಿದ್ದ ಸಾಮಾನುಗಳನ್ನೆ ಬಟ್ಟೆಯಲ್ಲಿ ಗಂಟು ಕಟ್ಟಿ ತಲೆಗೇರಿಸಿದ್ದಳು. ಕೊರಳು ಕಿವಿಗಳಿಗೆ, ವರ್ಣಮಯ ಮಣಿಗಳನ್ನು ಪೋಣಿಸಿ ತಯಾರಿಸಿದ ಆಭರಣಗಳು, ಕೈಕಾಲುಗಳಿಗೆ ಬೆಳ್ಳಿಯ ಆಭರಣಗಳು. ಕಪೋಲ, ಕೈ, ಕಂಠ ಕಾಲುಗಳ ಮೇಲೆ ಕಲಾತ್ಮಕವಾಗಿ ಹಾಕಿಸಿಕೊಂಡ ಹಚ್ಚೆ. ಎಲ್ಲಕ್ಕೂ ಹೆಚ್ಚಾಗಿ ಹಿರಿಯ ಹುಡುಗಿಯ ಚಪಲತೆಯನ್ನು ಸೆರೆ ಹಿಡಿಯಬೇಕೆಂದು ಕ್ಯಾಮರಾ ಇಷ್ಟಪಟ್ಟಿತು. ಜಟಾ ಶಂಕರಕ್ಕೆ ಹೋಗುವ ದಾರಿ ಇದೆ ಏನು? ಎಷ್ಟು ದೂರ ಇದೆ? ಎಂದು ಅವರ ಪಯಣಕ್ಕೆ ತಡೆ ಹಾಕುವ ಯತ್ನದಲ್ಲಿ ಇದ್ದಾಗಲೇ, ಕುವರಿ, ತಂದೆಗೆ ಉತ್ತರಿಸಲು ಹಚ್ಚಿ, ಕ್ಯಾಮರಾ ಕಣ್ಣಿಗೆ ಮಣ್ಣೆರಚಿ ಮಾಯವಾಗಿದ್ದಳು!

ಸಹಸ್ರಾರು ವರ್ಷಗಳ ಪೂರ್ವದಲ್ಲಿ ಮವಾಶಿಯರ ಪೂರ್ವಜರು ಹೇಗೆ ಬಾಳುತ್ತಿದ್ದಿರಬಹುದೆಂದು, ಇಂದಿನವರನ್ನು ಕಂಡರೂ ಕಲ್ಪನೆ ಬರುವಂತಿದೆ. ಅಂದು ಅವರನ್ನು ಕಾಡು ಪಶು-ಪಕ್ಷಿಗಳಿಂದ ರಕ್ಷಿಸಿದ, ಬೆಟ್ಟದಡಿಯಲ್ಲಿ ಇರುವ ಗುಹೆಗಳನ್ನು ತಮ್ಮ ನಿವಾಸಸ್ಥಳಗಳನ್ನಾಗಿ ಮಾಡಿಕೊಂಡಿದ್ದರೆ, ಇಂದಿಗೂ ಅಂಥವುಗಳೇ ಅವರಿಗೆ ಸೇರುತ್ತವೆ. ಎತ್ತರದ ಬೆಟ್ಟದ ಇಳಿಜಾರಿನಲ್ಲಿ ಆರೆಂಟು ಜೋಪಡಿಗಳನ್ನು ಕಟ್ಟಿ ಪುಟ್ಟಹಳ್ಳಿಯೊಂದನ್ನು ನಿರ್ಮಿಸಿಕೊಂಡಿದ್ದಾರೆ. ಗುಡಿಸಲುಗಳ ಎದುರಿಗೇ ಜುಳುಜುಳು ಹರಿಯುವ ಹಳ್ಳ, ನೀರು ಕೂಡುವದರ ಜೊತೆಗೆ ಎದುರಿಗಿದ್ದ ಬಯಲಿನಿಂದ ಬರಬಹುದಾದ ಗಂಡಾಂತರದಿಂದ ಸಂರಕ್ಷಿಸುತ್ತದೆ. ಎಡಬಲಗಳಲ್ಲಿ ತುಂತುರವಾಗಿ ಬೆಟ್ಟದಿಂದ ಜಾರಿ ಬೀಳುವ ನೀರ ಹನಿಗಳಿಂದಾಗಿ ಗುಡಿಸಲುಗಳಿಗೆ ರಮ್ಯತೆ ಒದಗಿದರೂ ಅದರಿಂದ ಉಂಟಾಗುವ ಆರ್ದ್ರತೆಯಿಂದ ಇವರುಗಳ ಬಾಳು ಕಷ್ಟಮಯವಾಗಿರುವದರಲ್ಲಿ ಸಂದೇಹವೇ ಇಲ್ಲ. ಬಂಡೆಗಲ್ಲಿನ ಮೇಲೆ ಕುಳಿತ ಈರ್ವರು ಯುವತಿಯರು, ಹೇನು ಆರಿಸಿಕೊಳ್ಳುವುದರಲ್ಲಿ ಮಗ್ನರಾಗಿದ್ದರು. ಒಬ್ಬ ಗೃಹಿಣಿ, ಹಸಿಕಟ್ಟಿಗೆ ಊದಿ ಉರಿಸುವ ಯತ್ನದಲ್ಲಿದ್ದಳು. ಒಬ್ಬ ಗೃಹಸ್ಥ ಜಾರಿಹೋದ ಸೂರಿನ ದುರಸ್ತಿಯಲ್ಲಿ ತೊಡಗಿದ್ದ. ನಗ್ನಮಗುವಿನ ತೊಡೆಯನ್ನೇರಿ ನಾಯಿ ಮರಿಯೊಂದು ನಿದ್ರಾಸುಖ ಅನುಭವಿಸುತ್ತಿತ್ತು. ಕುಕ್ಕುಟಗಳು ಹಳ್ಳದಂಚಿನಲ್ಲಿ ಕೆದರಿ, ಹುಳ ಹುಪ್ಪಡಿಗಳ ಶೋಧದಲ್ಲಿ ತೊಡಗಿದ್ದವು. ಅವರ ಜೀವನದ ಅವಶ್ಯಕತೆಗಳು ತೀರ ಕಡಿಮೆ ಇರುವದನ್ನು ನೋಡಿದಾಗ, "ದೇವಲೋಕದ ಸುಧೆಯನೊಲ್ಲೆನು...... ಬರಿಯ ನೆಲವಿರಲೆಮಗೆ ಮಲಗಲು...... "ಪದ್ಯದ ನೆನಪಾಯಿತು.

ಏಕಚಿತ್ತದಿಂದ ಅವರ ಜೀವನವನ್ನು ಕ್ಷಕಿರಣಗಳಿಂದ ಅಳೆದು ನೋಡುತ್ತಿದ್ದಾಗ, ಪರಕೀಯನೊಬ್ಬನು ಇಲ್ಲಿ ಸುಳಿದಾಡಿ, ದೃಷ್ಟಿ ಹಾಕುತ್ತಿದ್ದಾನೆಯೇ? ಎಂದು ವಿಸ್ಮಯಗೊಂಡು ವಿಚಾರಿಸಲು ಮುಖಂಡನು ಮುಂದೆ ಬಂದ. ಏನಾದರೂ ಮಾತನಾಡಿಸಬೇಕೆಂದು, ಮಳೆಯ ನೀರಿನಿಂದಾಗಿ ನಿಮ್ಮ ವಾಸಕ್ಕೆ ಆತಂಕ ಉಂಟಾಗುವದಲ್ಲವೇ? ಎಂದಾಗ, "ನಮಗಾದರೂ ತಲೆಯ ಮೇಲೊಂದು ಸೂರು ಇದೆ. ಕೋತಿಗೆ ಅದೂ ಇಲ್ಲವಲ್ಲ!" ಎಂದು ಕೊಟ್ಟ ಮಾರ್ಮಿಕ ಉತ್ತರದಿಂದ ಬಾಯಿ ಮೂಕವಾಯಿತು. ಹೌದು, ಅವನ ತರ್ಕದಲ್ಲಿ ಅರ್ಥವಿದೆಯೆನಿಸಿತು. ಇನ್ನಿತರ ಪಶು-ಪಕ್ಷಿಗಳಂತೆಯೇ ಮಾನವನ ನೆಮ್ಮದಿಯ ಜೀವನಕ್ಕೆ ಬೇಕಾದದ್ದು ಅತ್ಯಲ್ಪ. ಆದರೆ ಸ್ವಾರ್ಥಿಯಾದ ಮನುಷ್ಯ ಪ್ರಪಂಚ, ನಿಸರ್ಗ ಧಾರಾಳವಾಗಿ ಕೊಡ ಮಾಡಿದ್ದೆಲ್ಲವನ್ನೂ ತನ್ನದನ್ನಾಗಿ ಮಾಡಿಕೊಳ್ಳುವ

ಹಡಾಹುಡಿಯಲ್ಲಿ ಕಾಯಂ ಅಸಂತುಷ್ಟವಾಗಿಯೇ ಮುಂದರಿದಿದೆ ಅನಿಸಿತು. ಈ ಬಡಪಾಯಿಗಳಿಂದ ಜೀವನದ ಅರ್ಥವೇನು? ಎಂದು ಕಲಿತುಕೊಳ್ಳುವ ಬದಲಾಗಿ ಅವರನ್ನು ತಮ್ಮ ಪ್ರತಿರೂಪವಾಗಿ ಮಾಡಲು ಹೊರಟ ಸುಸಂಸ್ಕೃತರನ್ನು ನೆನೆಸಿ ನಗು ಬಂದಿತು. ಹಿರಿಯನನ್ನು ಸಂಭಾಷಣೆಯಲ್ಲಿ ತೊಡಗಿಸಿದಾಗ, ಇನ್ನಿತರರೂ, ಏನು ನಡೆದಿದೆಯೆಂದು ಅರಿತು ಕೊಳ್ಳಲು ಬಂದು ಸೇರಿಕೊಂಡರು. ಉಪಜೀವನಕ್ಕಾಗಿ ಏನು ಮಾಡುತ್ತಿದ್ದೀರಿ? ಎಂದು ಕೇಳಿದಾಗಲೂ ಅದೇ ವೈರಾಗ್ಯದ, ನಿರ್ಲಿಪ್ತತೆಯ ಉತ್ತರ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುವದಿಲ್ಲ. ಮಳೆಗಾಲ ಚೆನ್ನಾಗಿದ್ದಾಗ ಅಲ್ಪ ಸ್ವಲ್ಪ ಕೃಷಿ ಮಾಡುತ್ತೇವೆ. ಅದಿಲ್ಲದಾಗ ಅಲ್ಲಿ-ಇಲ್ಲಿ ಕೂಲಿ ಮಾಡುತ್ತೇವೆ. ಆಗೊಮ್ಮೆ ಈಗೊಮ್ಮೆ ಬೇಟೆಯಾಡುತ್ತೇವೆ. ಹೊಳೆಯಲ್ಲಿ ಮೀನು ಹಿಡಿಯುತ್ತೇವೆ. ಇದಕ್ಕೂ ಹೆಚ್ಚಿನದನ್ನು ಕೊಡು, ಎಂದು ದೇವರಿಗೆ ಕೇಳಲು ನಾವಾರು ಬಾಬೂಜಿ? ಎಂದು ಮರು ಪ್ರಶ್ನೆ ಹಾಕಿದ. ಛಾಯಾಚಿತ್ರ ತೆಗೆಯಬಹುದೇ? ಎಂದು ಕೇಳಿದಾಗ, ಅದೊಂದನ್ನು ಮಾತ್ರ ಕೇಳಬೇಡಿ! ಎಂದು ಅದೊಂದು ಅನೈತಿಕ ಕೆಲಸವೆಂಬಂತೆ ನುಡಿದುಬಿಟ್ಟ. ಮಾತಿನಲ್ಲಿ ತೊಡಗಿದಾಗ ಕ್ಯಾಮರಾ ಆಗಾಗ ಕ್ಲಿಕ್ ಅಂದದ್ದು ಅವನ ಅರಿವಿಗೆ ಬರಲೇ ಇಲ್ಲ. ಮತ್ತೆ ಮಳೆ ಬರುವಂತೆ ಇದ್ದುದರಿಂದ ಮಾತುಕತೆಯನ್ನು ಅಲ್ಲಿಗೇ ಮುಗಿಸಬೇಕಾಯಿತು.

ಧರ್ಮದ ಹೆಸರಿನಲ್ಲಿ ನಮ್ಮವರಲ್ಲಿ ನಡೆಯುವಷ್ಟು ಮೋಸ, ಬೇರಾವ ದೇಶದಲ್ಲಿಯೂ ನಡೆಯುತ್ತಿರಲಿಕ್ಕಿಲ್ಲ. ಜಟಾ ಶಂಕರ ಇದಕ್ಕೆ ಅಪವಾದವೇನಲ್ಲ.

ಈ ಮಹಾದೇವ ಪರ್ವತಾವಳಿಯಲ್ಲಿ ಶಿವಪಾರ್ವತಿಯರು ವಾಸ ಮಾಡುತ್ತಿದ್ದಾರೆಂದು ಭಾವುಕರ ಕಲ್ಪನೆ. ಅಂತೆಯೇ ಉಮಾ-ಮಹೇಶ್ವರರಲ್ಲಿ ಭಕ್ತಿ ಇದ್ದವರು, ವಿವಿಧ ಕಾರಣಗಳಿಗಾಗಿ ವರ್ಷವಿಡೀ ಈ ಸ್ಥಳದ ದರ್ಶನ ಪಡೆಯಲು ಬರುತ್ತಲೇ ಇರುತ್ತಾರೆ. ಮವಾಸಿಯರ ಮನೆಗಳ ಎದುರಿನಲ್ಲಿ ಹರಿಯುವ ಹಳ್ಳ ಮುಂದೆ ದೊಡ್ಡ ದೊಡ್ಡ ಬಂಡೆಗಲ್ಲ ನಡುವೆ ನುಸುಳಿ ಅದೃಶ್ಯವಾಗಿ ಬಿಟ್ಟಂತೆ ಅನಿಸುತ್ತದೆ. ಒಂದು ಮೈಲು ದೂರದ ಕೊರಕಲಿನಲ್ಲಿ ಹಳ್ಳ, ತಿರುಗಿ ಪ್ರತ್ಯಕ್ಷವಾಗುವದರಿಂದ ಅದಕ್ಕೆ ಶಿವನ ಮುಡಿಯಿಂದ ಧುಮುಕುವ ಗಂಗಾ, ಗುಪ್ತಗಂಗಾ, ದೂಧ್ ಗಂಗಾ (ಹಾಲುಗಂಗೆ) ಮೊದಲಾದ ಹೆಸರುಗಳು ಬಂದಿವೆ. ಅದರಲ್ಲಿ ಸ್ನಾನಮಾಡಿದರೆ, ಎಲ್ಲ ಪಾಪಗಳೂ ನಾಶವಾಗುವದೆಂದು ನಂಬಿದ್ದರಿಂದ ಭಕ್ತರೆಲ್ಲ ಅಲ್ಲಿಗೆ ಧಾವಿಸುತ್ತಾರೆ. ದಾರಿಯುದ್ದಕ್ಕೂ ದೇವರ ವಿಗ್ರಹಗಳಿಗೆ ಬರಗಾಲವಿಲ್ಲ. ಎಲ್ಲಕ್ಕೂ ಮೊದಲು ಸರ್ವರಿಗೂ ಸ್ವಾಗತ ಬಯಸುವವನು ಮೈಮುಖಗಳಲ್ಲಿ ಕೆಂಬಣ್ಣ ತಾಳಿದ ಮಹಾನ್ ಭಜರಂಗಬಲಿ. ಅವನಿಗೆ ನಮಿಸುವವರು ಮೊದಲು, ಬಾವಿಯಿಂದ ನೀರು ಸೇದಿ, ಕೈಕಾಲು ತೊಳೆದುಕೊಳ್ಳಬೇಕಂತೆ. ದಣಿವು, ಬಾಯಾರಿಕೆಗಳಾದಾಗ ಇದೊಂದು ವರದಾನವೆನಿಸಿತು. ಭಕ್ತರೆಲ್ಲ ತಾಳ ತಂಬೂರಿ, ಢೋಲಕ್‌ಗಳೊಂದಿಗೆ ಕಟಿನಾಯಕನ ಗುಣಗಾನ ನಡೆಸಿದ್ದರು. ಹತ್ತಾರು ಶಿವಲಿಂಗಗಳು, ಉಮಾಮಹೇಶ್ವರ ಮೂರ್ತಿಗಳನ್ನು ಹಿಂದೆ ಹಾಕಿ ಹೋದಾಗ, ಪಾತಾಳ ಲೋಕದಿಂದ ಎಂಬಂತೆ, ಹರಹರಮಹಾದೇವ ಎಂಬ ಘೋಷ ಕೇಳಿಸತೊಡಗಿತು. ಯಾವನೋ ಪುಣ್ಯಾತ್ಮನು ಕಂದರ ಒಂದರಲ್ಲಿ ಇಳಿದು ಹೋಗಲು ಪಾವಟಣಿಗೆಗಳನ್ನು ಮಾಡಿಸಿದ್ದಾನೆ. ಮೇಲಿನಿಂದ ನೋಡಿದರೆ ಕೆಳಗೆ ಗೋಚರಿಸುವದು, ರಮ್ಯದೃಶ್ಯ. ಹಾವಸೆ ತುಂಬಿದ ಬಂಡೆಗಲ್ಲಿನಿಂದ, ಅಂತರಗಾಮಿ ಗಂಗೆ ಪ್ರತ್ಯಕ್ಷಳಾಗಿದ್ದಾಳೆ! ಹರಕೆ ಹೊತ್ತವರೆಲ್ಲ ಭಾರವಾದ ತ್ರಿಶೂಲಗಳನ್ನು ಕೊನೆಗೊಮ್ಮೆ ಇಳಿಸಿ, ಶಿವನಿಗೆ ಒಪ್ಪಿಸಿ ಗಂಗೆಯಲ್ಲಿ (ಝರಿಯ ನೀರಿನಲ್ಲಿ) ಸ್ನಾನಮಾಡಿ, ಪೂಜೆ ಪುನಸ್ಕಾರ ಸಲ್ಲಿಸುತ್ತಾರೆ. ಕ್ಯಾಮರಾಧಾರಿಗೆ ತ್ರಿಶೂಲಧಾರಿ ಪೂಜಕರ ನಡುವೆ ಏನು ಕೆಲಸವೆಂದು ಯಾರಿಗೂ ಅರ್ಥವಾಗಲಿಲ್ಲ. ಪ್ರವಾಸದ ಎರಡು ದಿನ ಮೈ ನೀರನ್ನು ಕಂಡಿರಲಿಲ್ಲ. ಹೀಗಾಗಿ ಬೆವರು ಧೂಳುಗಳ ಜಿಡ್ಡನ್ನು ಕಳೆದುಕೊಳ್ಳಲು ಭಕ್ತರಿಗಿಂತ ಹೆಚ್ಚು ಮಿಂದಾಗ,

ಆದರೂ ಪೂಜೆ ಮಾಡದಿದ್ದಾಗ ಅವರಿಗೆಲ್ಲ ಅಚ್ಚರಿ. ಗಂಗೆಯ ಪ್ರಭಾವವೋ ಸ್ವಚ್ಛ ಪರಿಸರದ್ದೊ, ಹೊಸ ಹುರುಪು ಬಂದಂತಾಯಿತು. ಸ್ನಾನದ ಸುಖ ದಯ ಪಾಲಿಸಿದ್ದಕ್ಕಾಗಿ, ಶಿವಗಂಗೆಯರಿಗೆ ಕೃತಜ್ಞತೆ ಸಲ್ಲಿಸಿ, ಪರ್ವತವೇರಲು ಪ್ರಾರಂಭಿಸಿದ್ದಾಯಿತು. ಹರೆಯದ ಗೃಹಿಣಿಯೋರ್ವಳನ್ನು ಕುಟುಂಬದವರು ಒದ್ದೆ ಬಟ್ಟೆಯಲ್ಲಿ ಜಟಾಶಂಕರದಲ್ಲಿ ಮೀಯಿಸಲು ಒಯ್ಯುತ್ತಿದ್ದರು. ಅವಳಿಗೋ ದಮ್ಮಿನ ಕಾಯಿಲೆ. ಶೀತದಿಂದ ತೇಕುತ್ತ ಒಂದು ಹೆಜ್ಜೆ ಇಡುವದೂ ಪ್ರಯಾಸಕಾರಿಯಾಗಿತ್ತು. ಅವಳಿಗೆ ಮಕ್ಕಳಾಗದ್ದರಿಂದ ಹತ್ತಾರು ತೀರ್ಥಸ್ನಾನ ಮಾಡುವ ವ್ರತ ಆಚರಿಸುತ್ತಿದ್ದಾಳೆ ಎಂದು ಹತ್ತಿರದಲ್ಲಿ ಇದ್ದವನು ವಿವರಿಸಿ ಹೇಳಿದ. ಹೀಗೆ ಮಾಡುವದರಿಂದ ಮಕ್ಕಳಾಗುತ್ತಾರೋ ಇಲ್ಲವೋ ತಿಳಿಯದು. ಆದರೆ ಬೇನೆ ಬಿದ್ದು ಜೀವಚ್ಛವವಾಗಲು ಆಮಂತ್ರಣ, ಎಂದು ಹೇಳುವ ಮನಸ್ಸಾದರೂ, ಅದರಿಂದ ಆಗುವ ಲಾಭ ಅಷ್ಟರಲ್ಲಿಯೇ ಇದೆ, ಎಂದು ಸುಮ್ಮನಾಗಬೇಕಾಯಿತು. ಬಂಡೆಯೊಂದರಲ್ಲಿ ನಿಲ್ಲಿಸಿದ ಬೃಹತ್ ತ್ರಿಶೂಲಕ್ಕೆ ಒಂಟಿಕಾಲಿನಲ್ಲಿ ಆಧರಿಸಿ ನಿಂತು, "ಸಾಧ್ವಿ"ಯೊಬ್ಬಳು ಶಿವಸ್ತೋತ್ರವನ್ನು ಪಠಿಸುವದರಲ್ಲಿ ಮೈಮರೆತಿದ್ದಾಳೆ. ಇವರೆಲ್ಲ ದೂರದೂರದ ಊರಿನಿಂದ ಬಂದವರೆಂದು ಅವರ ಬಟ್ಟೆ ಬರೆಗಳೇ ಹೇಳುತ್ತಿದ್ದವು. ಭಸ್ಮಾಸುರನು ಶಿವನ ಬೆನ್ನಟ್ಟಿದಾಗ, ಅವನು ಜಟಾಶಂಕರದಲ್ಲಿ ಅವಿತಿದ್ದನೆಂದು ಭಕ್ತರು ನಂಬುತ್ತಾರೆ.

ಹಿಂದಿರುಗುತ್ತಿದ್ದಂತೆ ಅನತಿ ದೂರದ ಆಲದ ಮರದ ಆಶ್ರಯದಲ್ಲಿ ಮುಂಜಾನೆ ಕಂಡ ಮವಾಳಿಯ ಕುಟುಂಬ ವಿಶ್ರಮಿಸುತ್ತಿರುವದನ್ನು ಕಂಡಾಗ, ಅವರ ಛಾಯಾಚಿತ್ರ ತೆಗೆದೇ ತೀರಬೇಕೆಂಬ ಛಲ ಮೂಡಿತು. ವಿಕ್ರಯ ಖರೀದಿಗಳೆಲ್ಲ ಮುಗಿದವೇ? ಎಂದು ಕೇಳಿದಾಗ, ಕಿವುಡ-ಮೂಕರಂತೆ ಮಿಸುಕಾಡದೇ ಕುಳಿತಿದ್ದರು. ಹೆಸರೇನು? ಹಳ್ಳಿ ಯಾವುದು, ದೇವರು ಯಾರು ಎಂಬ ಪ್ರಶ್ನೆಗಳಿಗೆ ಮೌನವೊಂದೇ ಉತ್ತರವಾಯಿತು. ಜಟಾ-ಶಂಕರನ ವಿಭೂತಿ ಪ್ರಸಾದಗಳನ್ನು ಜೊತೆಯಲ್ಲಿ ತಂದಿದ್ದರೆ, ದೇವರ ಹೆಸರಿನಲ್ಲಿ ಮಾತನಾಡಿಸಬಹುದಾಗಿತ್ತಲ್ಲ ಅನಿಸಿತು. ಹೆಚ್ಚಿನ ಹಣದ ಅವಶ್ಯಕತೆಯೇ ಇಲ್ಲದವರಿಗೆ ಹಣದಾಸೆ ಹೇಗೆ ತೋರಿಸುವದು? ಸಹಕಾರ ನೀಡದವರ ಛಾಯಾಚಿತ್ರಗಳನ್ನು ತೆಗೆಯಬೇಕಾದಾಗ, ಎಲ್ಲತರದ ಯುಕ್ತಿಗಳನ್ನೂ ಪ್ರಯೋಗಿಸಬೇಕೆಂದು ಅನುಭವ ಹೇಳುತ್ತದೆ. ಆದ್ದರಿಂದ ಬಾಲಕನನ್ನು ಕೈಹಿಡಿದು ಎಳೆತಂದು ರಮಿಸಿ, ಅವನ ಕೊರಳಿಗೆ ಕ್ಯಾಮರಾ ತೂಗಹಾಕಿದಾಗ, ತುಂಬ ಖುಷಿಯಿಂದ ನಕ್ಕ. ಅದರ ತೋರುಗನ್ನಡಿಯಲ್ಲಿ ದೂರದ ಬೆಟ್ಟ, ಅವರಿಗೆ ಆಶ್ರಯ ಕೊಟ್ಟ ಆಲದ ಮರಗಳ ಪ್ರತಿಬಿಂಬ ತೋರಿಸಿದಾಗ, ಹೊಸಲೋಕವನ್ನು ಕಂಡು ಆನಂದಿಸಿದ ನಂತರ ಕ್ಯಾಮರಾ ತಿರುಗಿ ಪಡೆದು, ಅದರಲ್ಲಿ ಅವನ ತಂದೆಯ, ಛಾಯೆಯನ್ನು ತೋರಿಸಿ, ಅಕ್ಕನತ್ತ ಮುಖ ತಿರುಗಿಸುತ್ತಿದ್ದನಂತೆ ಅವಳು ಬೆನ್ನು ಮಾಡಿ ಕುಳಿತಳು. ಭಯಪಡುವಳಂತೆ ಗಂಟು-ಮೂಟೆಗಳನ್ನು ಕಟ್ಟಿಕೊಂಡು, ಹೊರಡೋಣವೆಂದು ತಂದೆಗೆ ಒತ್ತಾಯ ಪಡಿಸಹತ್ತಿದಳು. ಬರೇ ಅವಳ ಬೆನ್ನು ನೋಡಿದ ತಮ್ಮನಿಗೆ ಅತೃಪ್ತಿಯಾಗಿ, ಇತ್ತ ಮುಖಮಾಡಿ ನಿಲ್ಲಬಾರದೇ? ಎಂದು ಅಕ್ಕನಿಗೆ ಜೋರು ಮಾಡಿದ. ಅವಳು ಪಟ್ಟು ಬಿಡದೇ ಮುಖ ತಿರುಗಿಸಿ ಕೂತಿದ್ದಳು. ಇದು ಮದ್ದು ಗುಂಡು ಹಾರಿಸುವ ಕೋವಿಯಲ್ಲ, ಬರೇ ಛಾಯಗ್ರಹಣದ ಪೆಟ್ಟಿಗೆ ಎಂದು ಎಷ್ಟು ವಿವರಿಸಿದರೂ, ಅದನ್ನು ಅರ್ಥಮಾಡಿಕೊಳ್ಳುವ ಶಕ್ತಿ ಆ ಮುಗ್ಧರಿಗಿರಲಿಲ್ಲ. ಕೊನೆಯ ಯತ್ನವೆಂದು ಯಜಮಾನನನ್ನು ನಿಲ್ಲಿಸಿ, ಮಗನಿಗೆ ಅವನ ಬಟ್ಟೆಬರೆ ಸರಿಮಾಡುವಂತೆ ಸೂಚಿಸಿದೆ. ಕ್ಯಾಮರಾ ಕಣ್ಣು ತನ್ನ ತಂದೆಯತ್ತ ತಿರುಗಿದ್ದರಿಂದಲೋ ಪಿತನ ಪ್ರತಿಕ್ರಿಯೆ ನೋಡಲೆಂದೋ, ತಿರುಗಿ ನಿಂತಳು. ಈ ಅವಕಾಶಕ್ಕಾಗಿಯೇ ಎಂದಿನಿಂದಲೋ ಯತ್ನಿಸುತ್ತಿದ್ದರಿಂದ ಕ್ಯಾಮರಾ ಅವಳತ್ತ ತಿರುಗಿ ಕ್ಲಿಕ್ ಎಂದಿತು. ಏನೋ ತಮಾಷೆ ನಡೆದಿದೆ ಎಂದು ದಾರಿಹೋಕರು ಮರದಡಿಯಲ್ಲಿ ಸೇರಲಾರಂಭಿಸಿದರು. ಛಾಯಗ್ರಹಣಕ್ಕೆ ಈ ಕುಟುಂಬ ಒಪ್ಪಿಕೊಳ್ಳಲಿಲ್ಲವೆಂದು ಅವರಿಗೆ ದೂರಿಕೊಂಡಾಗ, ಮುಖಂಡನಂತೆ ತೋರುವ ಓರ್ವನು, ಅಧಿಕಾರಿವಾಣಿಯಿಂದ 'ನೀವೆಲ್ಲ ಮೂರ್ಖರು. ಅವರಾಗಿ ಫೋಟೊ ತೆಗೆಯುತ್ತೇನೆಂದರೆ,

ಬೇಡವೆನ್ನುತ್ತೀರಿ. ಸ್ಟುಡಿಯೋಕ್ಕೆ ಹೋದರೆ ಹತ್ತಾರು ರೂಪಾಯಿ ಕಿತ್ತುಕೊಳ್ಳುತ್ತಾರೆ ...... ' ಎಂದು ದಬಾಯಿಸುತ್ತಿದ್ದಂತೆ ಮವಾಸಿಯ ಕುಟುಂಬ ಜಾರಿಕೊಂಡಿತು. ತನ್ನ ಯತ್ನ ಹುಸಿಹೋಯಿತೆಂದು ದಾರಿಹೋಕನಿಗೆ ನಿರಾಶೆಯೇ ಆಯಿತು. ಆದರೆ ಕ್ಯಾಮರಾ ಮಾತ್ರ ಗೆಲುವಾಗಿಯೇ ಇತ್ತು. ಆ ಯುವತಿ ಎಲ್ಲಿಂದ ಬಂದಳೋ ಗೊತ್ತಿಲ್ಲ. ಎಲ್ಲಿ ಹೋದಳೋ ಅದೂ ತಿಳಿಯಲಿಲ್ಲ. ಆದರೆ ಆಕೆಯ ಆಕರ್ಷಕ ಚಿತ್ರವೊಂದನ್ನು ಕ್ಯಾಮರಾ ಸದಾಕಾಲದವರೆಗೆ ಸೆರೆಹಿಡಿದಿಟ್ಟಿತು.

13 ಭಿಲ್ಲರ ಹೋಳಿ



ಮೈಮುರಿ ದುಡಿದರೂ, ಸಾಲ-ಸೋಲ, ಶೋಷಣೆಗಳಿಂದ ಮುಕ್ತರಾಗದ ಭಿಲ್ಲರಿಗೆ ಹೋಳಿಹಬ್ಬ ಹೊಸ ಚೇತನ ನೀಡುತ್ತದೆ. ಯುವಕ-ಯುವತಿಯರು ಈ ಹಬ್ಬಕ್ಕಾಗಿ ವರ್ಷವಿಡೀ ಚಾತಕಪಕ್ಷಿಯಂತೆ ಎದುರುನೋಡುತ್ತಿರುತ್ತಾರೆ. ಹಳೆಯದೆಲ್ಲ ಹೋಳಿಯಾಡಿ, ಹೊಸ ಜೀವನಕ್ಕೆ ನಾಂದಿ ಹಾಡಲು ಅವರಿಗೆ ಅಪೂರ್ವ ಅವಕಾಶ ಸಿಗುತ್ತದೆ. ಇದ್ದಬದ್ದ ಪುಡಿಗಾಸು ಸೇರಿಸಿ, ಹಬ್ಬಕ್ಕೆ ಹೊಸ ಬಟ್ಟೆ ಹೊಲಿಸುತ್ತಾರೆ. ಅದು ಸಾಧ್ಯವಾಗದವರು ಇದ್ದವನ್ನೇ ಚೆನ್ನಾಗಿ ಒಗೆದು ಹೊಸದಾಗಿಸುತ್ತಾರೆ. ಹಳೆಯ ಹಾಡುಗಳನ್ನು ಪಠಿಸುವದರ ಜೊತೆಗೆ, ಗೆಳೆಯ-ಗೆಳತಿಯರಿಂದ ಹೊಸ ಹಾಡು ಕಲಿಯುತ್ತಾರೆ, ಕಟ್ಟುತ್ತಾರೆ. ಹುರಿ ಮೀಸೆ ಹೇಗೆ ಕಾಣುತ್ತದೆಂದು ಮಸುಕಾದ ಕನ್ನಡಿಯಲ್ಲಿ ಯುವಕನು ನೋಡಿಕೊಂಡು ಹೆಮ್ಮೆ ಪಟ್ಟರೆ, ಕಣ್ಣಿಗೆ ಕಾಡಿಗೆ ಲೇಪಿಸಿ ರಂಭೆಯಾಗಲು ಭಿಲ್ಲಯುವತಿ ಯತ್ನಿಸುತ್ತಾಳೆ. ವಯಸ್ಸಿನಿಂದ ಹಿರಿಯರಾದರೂ, ರಸಿಕತೆಯಲ್ಲಿ ಯುವಕರಾದವರು, ಈ ಅವಕಾಶವನ್ನೇ ಎದುರು ನೋಡುತ್ತಿರುತ್ತಾರೆ.

ಭಾರತದ ಆದಿವಾಸಿಗಳ, ಜಲವಸತಿಯಲ್ಲಿ ತೃತೀಯ ಸ್ಥಾನ ಆಕ್ರಮಿಸಿದ ಭಿಲ್ಲರು, ಮಧ್ಯ ಪ್ರದೇಶಗಳಲ್ಲಿ ಹರಡಿಕೊಂಡಿದ್ದಾರೆ. ಸುಮಾರು ಹದಿನೈದು ಲಕ್ಷ ಭಿಲ್ಲರು ಮಧ್ಯಪ್ರದೇಶದ ಧಾರ, ಝೂಬುವಾ ಮತ್ತು ಪಶ್ಚಿಮ ನಿಮಾರ ಜಿಲ್ಲೆಗೆ ಸೀಮಿತವಾಗಿದ್ದಾರೆ. ಹಿಂದಿನ ಕಾಲದಲ್ಲಿ ಅವರು ಸದಾಕಾಲ ಬಿಲ್ಲು-ಬಾಣದಳೊಂದಿಗೆ ಅಲೆಯುತ್ತಿದ್ದರು. ಅದರಿಂದಾಗಿ ದ್ರಾವಿಡ ಬಿಲ್ ಅಥವಾ ವಿಲ್

ಶಬ್ದದಿಂದ ಭಿಲ್ಲರೆಂದು, ಅವರಾಡುವ ಭಾಷೆಗೆ "ಭಿಲ್ಲಿ" ಎನ್ನುತ್ತಾರೆ. ಇದರಲ್ಲಿ ಗುಜರಾಥಿ, ರಾಜಸ್ಥಾನಿ, ಮರಾಠಿ ಶಬ್ದಗಳಲ್ಲದೇ ಕೆಲ ದ್ರಾವಿಡ ಶಬ್ದಗಳೂ ಸೇರಿಕೊಂಡಿವೆ. ಉದರ ನಿರ್ವಹಣೆಗೆ ಮುಖ್ಯವಾಗಿ ಕೃಷಿಯನ್ನೇ ಅವಲಂಬಿಸಿ, ನಗರದಿಂದ ದೂರದ ಹತ್ತಿಪ್ಪತ್ತು ಮನೆಗಳುಳ್ಳ ಹಳ್ಳಿಗಳಲ್ಲಿ ಬೀಡು ಬಿಡುತ್ತಾರೆ. ಪಟೇಲಿಯಾ ಬಣದವರು, ತಾವು ಇನ್ನಿತರ ಭಿಲ್ಲರಿಗಿಂತ ಶ್ರೇಷ್ಠ ಎನಿಸಿಕೊಳ್ಳುತ್ತಾರೆ. ರಾಜಸ್ಥಾನದಿಂದ ವಲಸೆ ಬಂದ ರಜಪೂತರು ಮಧ್ಯಪ್ರದೇಶದ ಭಿಲ್ಲ ನಾರಿಯರನ್ನು ವರಿಸಿ ಉಂಟಾದ ಹೊಸ ಪೀಳಿಗೆಗೆ ಭಿಲಾಲಾ ಎಂದು ಕರಿಯುವದು ವಾಡಿಕೆ. ರಾವತ್ ಎಂಬ ಕೌಟುಂಬಿಕ ಹೆಸರು ಧರಿಸುವ ಇವರು ಭಿಲ್ಲರಂತೆ ಸರಳರೂ, ವಿನೋದಪ್ರಿಯರೂ ಆಗಿರದೇ ಸಂಶಯಗ್ರಸ್ತರೂ, ಮುಂಗೋಪಿಗಳೂ ಆಗಿದ್ದಾರೆ. ಉಳಿದೆಲ್ಲ ಆಚಾರ-ವಿಚಾರಗಳು ಇಬ್ಬರಲ್ಲಿಯೂ ಏಕಪ್ರಕಾರವಾಗಿವೆ.

ಹೋಳಿ ಹಬ್ಬಕ್ಕೆ ಒಂದು ವಾರ ಇರುವಾಗಲೇ "ಬಾಗೋರಿಹಾ" ಆಚರಣೆ ಪ್ರಾರಂಭಿಸಿ ಸಂತೆ ನಡೆಯುವಲ್ಲೆಲ್ಲ ರಸಿಕರು ಸೇರುತ್ತಾರೆ. ಅಂದರೆ ಈ ಸಮೂಹದ ಆಚರಣೆ ಒಂದೇ ಸ್ಥಳಕ್ಕೆ ಸೀಮಿತವಾಗಿರದೇ ಸಂತೆ ಇರುವ ಹಳ್ಳಿಗೆ ಸ್ಥಳಾಂತರ ಹೊಂದುತ್ತದೆ. ತೇರು-ಜಾತ್ರೆಗಳಂತೆ ಈ ದೊಡ್ಡ ಮಹತ್ವದ ಸಂತೆಗೆ ಹೋಗುವದಕ್ಕಾಗಿ ಭಿಲ್ಲರ ಸಡಗರ, ಸಂಭ್ರಮ ಹೇಳತೀರದು. ಸದಾಕಾಲ ಕಿರುಬಟ್ಟೆಯಲ್ಲಿರುವ ಯುವಕರು ಅಂದು ತಲೆಗೆ ಭಾರೀ ರುಮಾಲು ಸುತ್ತಿಕೊಂಡು ಕಿವಿ-ಕೊರಳುಗಳಿಗೆ ಬೆಳ್ಳಿಯ ಆಭರಣಗಳನ್ನು ಧರಿಸಿ ಮೈಗೆ ಅಂಟುಕೊಳ್ಳುವ ಅಂಗಿಗೆ ಸರಪಳಿ ಇರುವ ಗುಂಡಿಗಳನ್ನು ಹಾಕಿಕೊಳ್ಳುವರು. ಕಿರುಪಂಚೆಯನ್ನು ಮೊಣಕಾಲು ಮೇಲೆ ಬರುವಂತೆ ಉಟ್ಟು ನೃತ್ಯ ಸಾಮಗ್ರಿಗಳನ್ನು ಕೈಚೀಲದಲ್ಲಿ ತುರುಕಿಕೊಂಡು ಹೊರಟೇ ಬಿಡುವರು.

ಹುಡುಗಿಯರ ಸಿದ್ಧತೆ ಇನ್ನೂ ಜೋರಾಗಿಯೇ ಇರುತ್ತದೆ. ಅವರು ತೊಡುವ ಆಭರಣಗಳ ಲೆಕ್ಕಾಚಾರ ಇಡುವದೇ ಭಾರೀ ಕೆಲಸ. ಬೈತಲೆ, ಕಪ್ಪೋಲ, ಕಿವಿ, ಕಂಠ, ಕೈಕಾಲುಗಳೆಲ್ಲ ಆಭರಣಗಳನ್ನು ಹೊತ್ತು ಭಾರವಾಗಿರುತ್ತವೆ. ಉದ್ದ ತೋಳಿನ, ಉದ್ದ ಪೋಲಕ ಧರಿಸಿ, ಅಪಾರ ನಿರಿಗೆಗಳುಳ್ಳ ಲಂಗವನ್ನು ತೊಡುತ್ತಾರೆ. ಜರಿ ಕೆಲಸ ಮಾಡಿದ ದಾವಣಿಯನ್ನು ತಲೆಯ ಮೇಲಿಂದ ಇಳಿಬಿಡುತ್ತಾರೆ. ಹಳದಿ, ಕೆಂಪು, ನೀಲಿ ಬಣ್ಣಗಳು ಅವರಿಗೆ ಅತೀವ ಮೆಚ್ಚಿಗೆಯಾಗುವ ಬಣ್ಣಗಳು. ಆದ್ದರಿಂದ ಅವರೆಲ್ಲ ತಂಡಕಟ್ಟಿಕೊಂಡು ಹೊರಟರೆಂದರೆ ರಸ್ತೆಗಳೆಲ್ಲ ಬಣ್ಣ ಬಣ್ಣದ ಚಿಟ್ಟೆಗಳಿಂದ ತುಂಬಿದಂತೆ ಅನಿಸುವದು. ಸೊಂಟದ ಪಟ್ಟಿಯ ಸದ್ದು, ಕಾಲಿನ ಗೆಜ್ಜೆ, ಕುಲು ಕುಲು ನಗು ಅವರ ತಂಡಗಳಿಗೆ ನೀಡುವವು.

ಸಂತೆಗಾಗಿ ಬಂದಿಳಿದ ಆಪ್ತ ಬಂಧು ಬಳಗದವರನ್ನು ಸುತ್ತುವರಿದು ಹೆಂಗಳೆಯರು, ಚುಚ್ಚು ಮಾತಿನ ರಂಗುರಂಗಾದ ಹಾಡುಗಳನ್ನು ಹಾಡುತ್ತ ಒಂದೆರಡು ರೂಪಾಯಿಗಳನ್ನು ಕಾಣಿಕೆ ಎಂದು ಕಿತ್ತುಕೊಳ್ಳದೇ ಬಿಡುವದಿಲ್ಲ, ಹಣವನ್ನೆಲ್ಲ ಸೇರಿಸಿ, ಬೆಲ್ಲ, ಬೆಂಡು, ಬತ್ತಾಸೆ ಕೊಂಡು, ಹರಟೆ ಹೊಡೆಯುತ್ತ ತಿನ್ನುತ್ತ, ಕುಲ ಕುಲ ನಗುತ್ತ, ಖುಷಿ ಪಡುವರು. ಈ ಅವಕಾಶಕ್ಕಾಗಿ ಕಾದಿದ್ದ ಯುವಕರು ದೊಡ್ಡ ದೊಡ್ಡ ಡೋಲು ಬಾರಿಸುತ್ತ, ತಾಳ ನುಡಿಸುತ್ತ ವರ್ತುಲಾಕಾರದಲ್ಲಿ ನರ್ತಿಸಲಾರಂಬಿಸುವರು. ಒಮ್ಮೆ ನಡುನೆ ನಿಂತ ವಾದ್ಯಗಾರರತ್ತ ಸರಿಯುತ್ತ ಇನ್ನೊಮ್ಮೆ ಅವರಿಂದ ದೂರ ಹೋಗುತ್ತ ಕುಣಿಯುತ್ತ ಮುಂದುವರಿಯುವರು. ತಾವು ಗಂಡು ನವಿಲುಗಳೆಂದು ಭ್ರಮಿಸಿ ಕೇಕೆ ಹಾಕಿ, ತಾಳಕ್ಕೆ ಸರಿಯಾಗಿ ನರ್ತಿಸಿದರೂ ಹೆಣ್ಣು ನವಿಲು ಹತ್ತಿರ ಸುಳಿಯದಿದ್ದಾಗ, ಅವರಿಗೆ ಅವಮಾನವಾಗದೇ ಇದ್ದೀತೆ? ದೂರದ ಮರದ ನೆರಳಿನಲ್ಲಿ ಕುಳಿತು ಕಳ್ಳ ನೋಟದಿಂದ ಕದ್ದು ನೋಡುವ ಯುವತಿಯರನ್ನು ಭುಜತಟ್ಟಿ ಕೈ ಹಿಡಿದೆಳೆದು ತಂದು ನೃತ್ಯದಲ್ಲಿ ಸೇರ್ಪಡೆ ಮಾಡುವರು. ಇದರಿಂದ ವಾದ್ಯಗಳೂ ಜೋರಾಗಿ ಮೊಳಗುವವು. ನೃತ್ಯಗಾರರೂ ವಿದ್ಯುತ್ ಸಂಚಾರವಾದಂತೆ ಹೇ

ಹೇ ಹೇ ಎಂದು ಕೇಕೇ ಹಾಕುತ್ತ ಅವಿಶ್ರಾಂತವಾಗಿ ಕುಣಿಯುವರು. ಒಂಟಿ ನೃತ್ಯ, ಸಮೂಹ ನೃತ್ಯಕ್ಕೆ ಆಹ್ವಾನಿಸುವರು. ವಾದ್ಯಗಳು ಹೆಚ್ಚಾಗಿದ್ದರೆ, "ಗುತಾಯಿ" ನೃತ್ಯ ಪ್ರಾರಂಭಿಸುವರು. ಹೆಣ್ಣು-ಗಂಡು ಜೋಡಿ ಜೋಡಿಗಳಾಗಿ ಪ್ರಾರಂಭಿಸಿದಾಗಂತೂ ಆವೇಶ ಬಂದಂತೆ ಎಡಬಿಡದೇ ಕುಣಿಯುತ್ತಾರೆ.

ಗಂಡು-ಹೆಣ್ಣುಗಳ ಸಾನ್ನಿಧ್ಯ ಅವರ ಬರಡು ಜೀವನದಲ್ಲಿ ಹೊಸ ಚೈತನ್ಯವನ್ನು ಚಿಗುರಿಸುತ್ತದೆ. ಏನೇನೋ ಕನಸು ಕಾಣುತ್ತ, ಕನವರಿಸುತ್ತ, ರಾತ್ರಿ ಕಳೆದು ಮರುದಿನ ಸಂತೆಯಲ್ಲಿ ತಿರುಗಿ ಹಾಜರ. ದಿನ ಹೋದಂತೆ ಗಂಡು ಹೆಣ್ಣಿನ ಪರಿಚಯ ಆತ್ಮೀಯತೆಯಲ್ಲಿ, ಸಲಿಗೆಯಲ್ಲಿ ನಂತರ ಪ್ರಣಯ ಚೇಷ್ಟೆಯಲ್ಲಿ ಪರಿವರ್ತನೆಯಾಗಹತ್ತುತ್ತದೆ. ಹೋಳಿ ಹಬ್ಬಕ್ಕೆ ಒಂದೆರಡು ದಿನಗಳಿರುವಾಗ, ಗುಲಾಲು ಸವರಲು ಪ್ರಾರಂಭಿಸುತ್ತಾರೆ. ಯುವಕನು ತನ್ನವಳ ಹಣೆಗೆ ಬಣ್ಣ ಸವರಿದಾಗ ಅವಳೂ ಹಿಂದೆ ಮುಂದೆ ನೋಡದೇ ಅವನ ಮೇಲೆ ಬಣ್ಣ ಸುರಿದೇ ಬಿಡುತ್ತಾಳೆ. ಈ ಬಹಿರಂಗ ಬಣ್ಣ ಸುರಿತದಿಂದ ಇಬ್ಬರ ಸ್ನೇಹ ದೃಢವಾಗಿದೆ ಎಂದು ಪರಿಗಣಿಸಲಾಗುತ್ತದೆ.

ಇದನ್ನು ಖಚಿತಪಡಿಸಲು, ಬೆಲ್ಲ-ಭಂಗಿ (ಭಾಂಗ್) ಸೇರಿಸಿ ತಯಾರಿಸಿದ ಹಸಿರು ಮಿಠಾಯಿ(ಮಾಜೂಮ್) ಯನ್ನು ತರುಣನು ತರುಣಿಗೆ ಕೊಡುತ್ತಾನೆ. ಅದನ್ನು ಅವಳು ಸ್ವೀಕರಿಸಿ, ಗೆಳತಿಯರೊಂದಿಗೆ ಸೇವಿಸಿದರೆ, ನಿಶ್ಚಯ-ತಾಂಬೂಲ (ಲಗ್ನಪತ್ರಿಕೆ) ಆದಂತೆಯೇ. ಭಿಲ್ಲರಲ್ಲಿ ಗಂಡು-ಹೆಣ್ಣುಗಳ ನಡುವೆ ಇಲ್ಲಸಲ್ಲದ ಮಡಿವಂತಿಕೆ ಇರದ್ದರಿಂದ ಹೋಳಿ ಹಬ್ಬದ ಸಂದರ್ಭದಲ್ಲಿ ಹೊಸ-ಜೋಡಿ ನಕ್ಕು-ನಲಿದು ಓಡಾಡಿಕೊಂಡು ಇರಲಾರಂಭಿಸುತ್ತಾರೆ. ಕೊರಡಿನ ಕುದುರೆಯನ್ನು ಹತ್ತಿ-ಇಳಿದು ಆನಂದಿಸುತ್ತಾರೆ. ತೊಟ್ಟಿಲುಗಳಲ್ಲಿ ಕುಳಿತು ತೂಗಿಸಿಕೊಳ್ಳುತ್ತಾರೆ. ಫುಗಾ (ಬಲೂನ್) ರಿಬ್ಬನ್, ಬತ್ತಾಸು, ಪೀಪಿ, ಅಗ್ಗದ ಪೌಡರ್ ಕೊಂಡು ಸಂತೋಷಿಸುತ್ತಾರೆ. ಭಾವೀ ಪತಿಯೊಡನೆ ಕಾಮ ಕೇಳಿಯೂ ತ್ಯಾಜ್ಯವಲ್ಲ.

ಗಂಡಿನ ಧೈರ್ಯದಿಂದ ತರುಣನು ಇನಿಯಳನ್ನು ಮನೆಗೆ ಕರೆತಂದು ಅವಳಲ್ಲಿ ತನಗೆ ಆಸಕ್ತಿ ಉಂಟಾಗಿದೆ ಎಂದು ತಂದೆ-ತಾಯಿಗಳಿಗೆ ತಿಳಿಸುತ್ತಾನೆ. ಕನ್ಯಾಪಿತೃಗಳಿಗೂ ಈ ವಿಚಾರ ತಿಳಿಸಿದಾಗ, ಅವರು ಒಪ್ಪಿಕೊಂಡರೆ, ತೆಂಗಿನಕಾಯಿಗಳನ್ನು ಅದಲು-ಬದಲು ಮಾಡಿಕೊಳ್ಳುವದರಿಂದ ಮದುವೆ ಅಧಿಕೃತವಾಗಿ ನಿಶ್ಚಯವಾಗುತ್ತದೆ. ವಧು ದಕ್ಷಿಣೆಯನ್ನು ಅಕ್ಕಿ-ಬೆಲ್ಲ, ಎಣ್ಣೆಗಳ ರೂಪದಲ್ಲಿ ಕೊಡಬೇಕಾಗುತ್ತದೆ. ಇವನ್ನೂ ಕೊಡಲಾಗದಷ್ಟು ಬಡವನಾದರೆ ಈ ಋಣ ತೀರಿಸಲು ಮಾವನ ಮನೆಯಲ್ಲಿ ಜೀತದಾಳಾಗಿ ದುಡಿಯಬೇಕು. ಸಹಗೋತ್ರದಲ್ಲಿ ವಿವಾಹ ತ್ಯಜ್ಯ. ವೈವಾಹಿಕ ಜೀವನದಲ್ಲಿಯೂ ಬೇರೊಬ್ಬನಲ್ಲಿ ಅನುರಾಗ ಉಂಟಾದರೆ, ನವಪ್ರೇಮಿ, ಮಾಜೀ ಪತಿ ಕೊಟ್ಟಷ್ಟು ವಧು ದಕ್ಷಿಣೆ ಹಿಂತಿರುಗಿಸಿ ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಬಹುದು. ವಿವಾಹಿತ ಸ್ತ್ರೀ ಗಲ್ಲ, ಕಪೋಲಗಳ ಮೇಲೆಲ್ಲ ಹಚ್ಚೆ ಹಾಕಿಸಿಕೊಳ್ಳುವಳು. ಸಂತೆಯಲ್ಲಿ ಕೊಂಡ ಬಿಳಿ, ಕೆಂಪು, ನೀಲಿ ಮಣಿಗಳನ್ನು ಪೋಣಿಸಿ ಕಂಠಾಭರಣ ಮಾಡಿಕೊಳ್ಳುವಳು. ಭಾರವಾದ ಸೊಂಟಪಟ್ಟಿ, ಮುಂಗಾಲು ಸರಪಣಿ, ಕಾಲು ಬೆರಳುಗಳಿಗೆ ಬಗೆಬಗೆಯ ಸುತ್ತುಂಗುರಗಳನ್ನು ಧರಿಸುವುದು ವಾಡಿಕೆ. ವಿವಾಹಿತರು ಹಿರಿಯರೊಂದಿಗೆ ವಾಸಿಸುವದು ಪ್ರಚಲಿತವಿದ್ದರೂ, ಕಿರಿಯರು, ಮಡದಿಯೊಂದಿಗೆ, ಹೆಚ್ಚು ಏಕಾಂತ ಬಯಸಿ ಬೇರೆಯಾಗಿ ಬಿಂಗಡದ ಗುಡಿಯನ್ನು ಕಟ್ಟಿಕೊಳ್ಳುವರು.

ಹೋಳಿಯ ದಿನ ಸಂತೆ ನಡೆಯುವಲ್ಲಿ ದೊಡ್ಡ ಜಾತ್ರೆಯೇ ಸೇರುವದು. ಅಸಾಮಾನ್ಯವಾದ ದೈಹಿಕ ಮಂತ್ರ-ತಂತ್ರಗಳ ಸಾಮರ್ಥ್ಯ ಇದೆ ಎಂದು ಪರಿಗಣಿಸಲಾದ "ರಾಜಾಪಂತ"ನನ್ನು ಪೂಜಿಸಿ ಹೋಳಿ ಆಚರಣೆ ಪ್ರಾರಂಭಿಸುವರು. ಮದ್ಯಪ್ರಿಯ ಭಿಲ್ಲರ, ಅಂದು ಮನಸ್ವೀ ಕುಡಿಯುವರು ಬಣ್ಣದ ನೀರನ್ನು ಒಬ್ಬರ ಮೇಲೆ ಇನ್ನೊಬ್ಬರು ಸಿಂಪಡಿಸುತ್ತ, ಬಣ್ಣ ಸವರುತ್ತ ಕ್ರಮೇಣ ಹಾಡುಗಾರಿಕೆ,

ವಾದ್ಯ-ನುಡಿಸುವಿಕೆ ನೃತ್ಯಗಳು ಪ್ರಾರಂಭವಾಗುತ್ತವೆ. ಅಮಲು, ಅಶ್ಲೀಲ ಹಾಡು, ಕಾಮುಕ ಅಭಿದಾನಗಳಿಗೆ ಅವಕಾಶ ಕಲ್ಪಿಸುಕೊಡುವದು. ನಶೆ ತಲೆಗೇರಿದಾಗ ದ್ವೇಷ, ತಿರಸ್ಕಾರ, ಅಸೂಯೆ, ಪ್ರತೀಕಾರಗಳಿಗೆ ಯತ್ನಿಸುವದೂ ಉಂಟು. ಅಂತೆಯೇ ಹೋಳಿಹಬ್ಬಕ್ಕೆ ಸೇರಿದವರಿಂದ, ಮುಂಜಾಗ್ರತೆಯ ಹಿರಿಯರು ಎಲ್ಲ ಬಗೆಯ ಆಯುಧಗಳನ್ನು ತೆಗೆದಿಟ್ಟುಕೊಳ್ಳುವದು ರೂಢಿ ಹೋಳಿ ಹಬ್ಬಕ್ಕಾಗಿ ಎಷ್ಟೇ ಖರ್ಚಾಗಲಿ, ಎಷ್ಟೇ ದಣಿಯಲಿ, ಎಷ್ಟೇ ಜಗಳ-ಕಾದಾಟವಾಗಲಿ, ಮುಂದಿನ ಹೋಳಿ ಹಬ್ಬಕ್ಕಾಗಿ ವರ್ಷವಿಡೀ ಭಿಲ್ಲರು ಎದುರು ನೋಡುತ್ತಲೇ ಕಾಲಕಳೆಯುತ್ತಾರೆ.

14 ಚಂದೇಲರ ಹಳ್ಳಿಯಲ್ಲಿ



ಛತರ್‌ಪುರ - ಪನ್ನಾ ಹೆದ್ದಾರಿಯಿಂದ ಕೇವಲ ಮೂವತ್ತು ಮೈಲುದೂರದ ಖಜುರಾಹೋಕ್ಕೆ ಒಯ್ಯಲು ಡ್ರಾಯವರನು ನಾಲ್ಕು ಸಲ ಚಹಾ ತಿಂಡಿಗೆ ಮತ್ತು ಹದಿನಾರು ಸಲ ಪ್ರವಾಸಿಗರನ್ನು ಹತ್ತಿಸಲು ಬಸ್ಸನ್ನು ನಿಲ್ಲಿಸಿದ. ಕೊನೆಯ ಹಂತದಲ್ಲಿ ಹೆದ್ದಾರಿಂದ ಕೇವಲ ನಾಲ್ಕು ಮೈಲಿ ಹೋಗುವದಿದ್ದರೂ 'ಬಾಮಿತಾ' ಊರಲ್ಲಿ ಅರ್ಧತಾಸು ನಿಲ್ಲಿಸಿ ತನಗೂ, ಕಂಡಕ್ಟರನಿಗೂ ಹಣವಿಲ್ಲದ ನಾಶ್ತಾಕ್ಕೆ ಅನುವು ಮಾಡಿಕೊಂಡ. ಊರಿಗೆ ಊರೇ ಧನಿಕ ಮತ್ತು ವಿದೇಶಿ ಪ್ರವಾಸಿಗಳನ್ನು ಎದುರುಗೊಳ್ಳಲು ಸದಾ ಸಿದ್ಧವಾದಂತೆ ಖಜುರಾಹೋ ಇತ್ತು. ಪಂಚತಾರಾ ಬಿರುದು ಹೊತ್ತ ಚಂದೇಲ್ ಹೊಟೇಲು, ಸಿರಿವಂತರನ್ನು ಸುಲಿಯಲು ಇನ್ನೆರಡು ಅಂತಸ್ತುಗಳನ್ನು ಕಟ್ಟಡಕ್ಕೆ ಜೋಡಿಸುವದರಲ್ಲಿ ಇತ್ತು. ಖಜುರಾಹೋ ಕಾಮಿನಿಯರ ಶಿಲ್ಪಗಳನ್ನು ನೋಡಲು ತವಕದಿಂದ ಧಾವಿಸಿಬರುತ್ತಿದ್ದ ಪ್ರವಾಸಿಗಳ ಭಾರ ತಾಳಲಾರದೇ ಖಿರಾರ ನದಿಯ ಸೇತುವೆ ಕುಸಿದಿದ್ದರಿಂದ ಬಸ್ಸು ಬೇರೊಂದು ಮಾರ್ಗವಾಗಿ ಓಡಿತು. ಪ್ರವಾಸಿಗರಿಗೆ ಹೆಚ್ಚಿನ ಸವಲತ್ತುಗಳನ್ನು ಕೂಡ ಮಾಡಲು ನಗರಪಾಲಕರು ಪ್ರತಿ ಪ್ರಯಾಣಿಕನಿಂದಲೂ ಎಂಟಾಣೆಯಂತೆ ಸುಲಿದರು. ಅಲ್ಲಿಯ ದೇವಾಲಯಗಳಿಗೆ ಹಿಡಿದ ಕನ್ನಡಿಯಂತಿದ್ದ 'ಶಿವಸಾಗರ' ಸರೋವರದಲ್ಲಿ ಊರ ಯೌವ್ವನೆಯರು ನೀರಾಟಕ್ಕೆ ಇಳಿದಿದ್ದರು. ಆಗ ಕ್ಯಾಮರಾ ಕೊರಳಿಗಿದ್ದರೆ ಜೀವಂತ ಸುಂದರಿಯರನ್ನು ಅದರಲ್ಲಿ ಬಂಧಿಸಿಡಬಹುದಾಗಿತ್ತು ಎಂದು ಮರಗುವಂತೆ ಆಯಿತು.

ವಿದೇಶೀ ಪ್ರವಾಸಿಗರು ಕಾರು, ಟ್ಯಾಕ್ಸಿ, ಬಸ್ಸುಗಳಲ್ಲಿ ಬಂದಿಳಿದಾಗ ಓಡಿ ಬರುವ ಕಿರುಕುಳ ವ್ಯಾಪಾರಿಗಳು ಈ ಹಳ್ಳಿಗರನ್ನು ಹೊತ್ತು ಬಂದ ಬಸ್ಸಿನತ್ತ ಗಮನಕೊಡದೇ ತಮ್ಮ ಹರಟೆಯನ್ನು ಮುಂದುವರೆಸಿದರು. ಎದುರಿಗಿದ್ದ ಅಂಗಡಿಗಳಲ್ಲಿಟ್ಟ ಮಾರಾಟದ ಸರಕುಗಳನ್ನು ನೋಡಿದಾಗ, ವಿಶ್ವದ ಕಾಮುಕತೆ ಮತ್ತು ಜೂಜಿನ ಕೇಂದ್ರವಾದ ಅಮೇರಿಕದ ಲಾಸವೇಗಾಸಕ್ಕೆ ಬಂದು ಮುಟ್ಟಿದಂತೆ ಭಾಸವಾಯಿತು. ಮುಕ್ತ ಮೈಥುನ ಸಲಿಂಗರತಿ ಮತ್ತು ಪ್ರಾಣಿ ಸಂಭೋಗಗಳಂಥ ವಿಕೃತ ಕಾಮವನ್ನು ಆಧಾರವಾಗಿಟ್ಟುಕೊಂಡು ರಚಿತವಾದ ಪ್ಲಾಸ್ಟಿಕ್, ಪ್ಲಾಸ್ಟರ್ ಆಫ್ ಪ್ಯಾರಿಸ್‌ದಲ್ಲಿ ತಯಾರಿಸಿದ ಉಬ್ಬು ಚಿತ್ರಗಳು, ಬಾಟಿಕ್ ಪದ್ಧತಿಯಲ್ಲಿ ರಚಿತವಾದ ಅವೇ ಬಗೆಯ ಕಲಾಕೃತಿಗಳು ಸಪ್ತವರ್ಣೀಯ ಚಿತ್ರಗಳು, ಕಾರ್ಡುಗಳು ಕೊಳ್ಳುವವರನ್ನು ಎದುರುಗೊಳ್ಳಲು ಸಿದ್ಧವಾಗಿ ನಿಂತಿದ್ದವು. ಪ್ರವಾಸಿಗಳಿಗೆ, ಇಲ್ಲಿಯ ಬಗ್ಗೆ ಹೆಚ್ಚು ಅರಿಯದವರಿಗೆ ತಪ್ಪು ಕಲ್ಪನೆ ಕೊಡಲು ಉತ್ತಮ ಉಪಾಯವೆನಿಸಿತು. ಈ ನೆನಪಿನ ವಸ್ತುಗಳನ್ನು ಮಾರುವವರು, ಚಹಾದಂಗಡಿಯವರು, ಹೊಟೇಲಿನವರು, ಸಾಯಕಲ್ ರಿಕ್ಷಾದವರು, ಮಾರ್ಗದರ್ಶಕರು, ಪ್ರವಾಸಿಗಳಿಂದ ಹಣವೆತ್ತುವ ವೃತ್ತಿಯಲ್ಲಿ ತೊಡಗಿದಂತೆ ಅನಿಸಿತು. ಹೀಗೇಕೆ? ಎಂದು ವಿಚಾರಿಸಿದಾಗ, ಎಲ್ಲ ಋತುಗಳಲ್ಲೂ ಸರಿಯಾಗಿ ಉತ್ಪನ್ನವಿರುವದಿಲ್ಲವೆಂದು ಒಬ್ಬನು ವಾದಿಸಿದರೆ, ನಗರಪಾಲಿಕೆಯವರು ಹೆಚ್ಚು ಕರ ಹೇರುತ್ತಾರೆಂದು ಇನ್ನೊಬ್ಬನೆಂದ. ಮಗುದೊಬ್ಬನು ಎಲ್ಲವನ್ನೂ ಹೊರಗಿನಿಂದಲೇ ತರಬೇಕು ಎಂದು ಸಿದ್ಧಮಾಡಲು ಹೊರಟಂತಿತ್ತು. ಅಲ್ಪಾವಧಿಯಲ್ಲಿ ಧನವಂತರಾಗುವ ಮುಖ್ಯಉದ್ದೇಶವನ್ನು ಮಾತ್ರ ಎಲ್ಲರೂ ಅರಿತಿದ್ದರು!

ಪಕ್ಕಾ ಬನಿಯಾನ 'ಗುಪ್ತಾ ಲಾಜ್' ಬಿಟ್ಟು ದಾನ ಧರ್ಮ, ದಯೆ ನೀತಿಗಳನ್ನು ಪಾಲಿಸಬಹುದೆಂದುಕೊಂಡ 'ಜೈನ್ ಲಾಜ್'ದಲ್ಲಿ ತಂಗಿದ್ದಾಯಿತು. ಮಾಲಕನು ಪತ್ನಿಯ ಆಜ್ಞಾಧಾರಕನಂತಿದ್ದ. ಮನೆತುಂಬ ಮಕ್ಕಳು, ರಸೋಯಿ (ಅಡಿಗೆ ಮನೆ) ತುಂಬ ಜೊಂಡಿಗಗಳಿದ್ದವು! ತಾಯಿಯನ್ನು ಅನುಕರಿಸಿ ಮಕ್ಕಳೂ ತಂದೆಯನ್ನು ಟೀಕಿಸಲಾರಂಭಿಸಿದಾಗ, ಅವನ ಆತ್ಮಾಭಿಮಾನ ಜಾಗೃತವಾಗಿ ಸಿಂಹದಂತೆ ಗರ್ಜಿಸಲಾರಂಭಿಸಿದ. ಬದತಮೀಜ (ನಾಲಾಯಕ್) ಮತ್ತು ಉಲ್ಲುಕೆ ಪಟ್ಟೆ (ಗೂಗೆಮರಿ), ಅವನ ಬಾಯಲ್ಲಿ ಎಡಬಿಡದೇ ಬರುವ ಶಬ್ದಗಳು. ತಾವು ಉಲ್ಲೂ ಆದರೆ, ಉಲ್ಲೂ ತಂದೆ ಯಾರು? ಎಂದು ಮಕ್ಕಳು ಹಂಗಿಸಿದವು. ಸಿಡಿಮಿಡಿಗೊಂಡ ತಂದೆ, ಬೇಳೆಯನ್ನು ತಿರುವುತ್ತಿದ್ದ ಸೌಟನ್ನೆತ್ತಿ ಮಗಳಿಗೆ ಪ್ರಹಾರ ಮಾಡಲು ಹೊರಟ. ಪತ್ನಿ ನಡುವೆ ಬಂದು, ಮಕ್ಕಳು ಮೂರ್ಖರೆಂದರೆ, ನೀವು ಅವರಿಗಿಂತ ಚಿಕ್ಕವರಾಗಿ ವರ್ತಿಸುತ್ತೀರಿ? ಎಂದು ಮೂದಲಿಸಿ ಸೌಟು ಕಿತ್ತುಕೊಂಡು, ಚಾಕುವಿನಿಂದ ತರಕಾರಿ ಹೆಚ್ಚಲಾರಂಭಿಸಿದಳು. ಇದೆಲ್ಲ ದಿನಂಪ್ರತಿಯ ನಾಟಕವೆಂದು ಎಲ್ಲರ ವರ್ತನೆಯಿಂದ ಅರಿವಾಯ್ತು. ಖೋಲಿಯೊಂದಕ್ಕೆ ದಿನಕ್ಕೆ 16 ರೂಪಾಯಿ, ಚಪಾತಿ ಪಲ್ಯಕ್ಕೆ ಐದೂವರೆ ರೂಪಾಯಿ ಚಾರ್ಜು ಮಾಡುವದರಿಂದ ಧನಿಕನಾಗಬೇಕಿತ್ತು. ಆದರೆ ಮಿತ ಸಂತಾನ, ಸುಖಕ್ಕೆ ಆಧಾರ ಎಂಬ ದಿವ್ಯಮಂತ್ರದಲ್ಲಿ ವಿಶ್ವಾಸವಿಡದ ಈ ಜೈನಗೃಹಸ್ಥನು ಎಂದಾದರೊಮ್ಮೆ ಧನಸಂಗ್ರಹವಾದರೆ ಶ್ರವಣಬೆಳ್ಗೊಳಕ್ಕೆ ಯಾತ್ರೆ ಕೈಗೊಂಡು ಗೊಮ್ಮಟನ ದರ್ಶನಲಾಭ ಪಡೆಯಬೇಕೆಂದು ಕನಸು ಕಟ್ಟಿದ್ದ! ಸ್ವಲ್ಪ ಹೊತ್ತಿಗೆ ಬಸ್ಸು ತುಂಬಿ ಧನಿಕ ಗುಜರಾಥಿಗಳು ಅವನ ಲಾಜಿಗೆ ಬಂದಿಳಿದಾಗ, ಗೆಲುವಾದ. ಆಗಂತುಕರು ಅವನು ಹೇಳಿದ ಬಾಡಿಗೆಗೆ ಒಪ್ಪಿಕೊಂಡರೂ ಐವತ್ತು ಜನರಿಗೆ ಊಟದ ವ್ಯವಸ್ಥೆ ಸುಲಭದ ಮಾತಾಗಿರಲಿಲ್ಲ. ತನ್ನ ಮಕ್ಕಳು ಕೊನೆಯಲ್ಲಿ ಊಟ ಮಾಡಬೇಕೆಂದು ಸುಗ್ರೀವಾಜ್ಞೆ ಹೊರಡಿಸಿದರೂ ಅಡಿಗೆಯ ಅಭಾವವಾಗುವದೆಂದು ಅನುಭವದಿಂದ ಕಂಡುಕೊಂಡ ಮಕ್ಕಳು ಅತಿಥಿಗಳಿಗೂ ಪೂರ್ವದಲ್ಲಿಯೇ ಉಂಡು ತೇಗಿದವು. ಬಂದವರಿಗೆ ಚಪಾತಿಗಳಿದ್ದರೆ ಪಲ್ಯವಿಲ್ಲ, ಬೇಳೆಯಿದ್ದರೆ ಅನ್ನವಿಲ್ಲ. ಏನೇನೋ ಕುಂಟ ನೆಪ ಹೇಳಿ, ಟೊಮೆಟೊ ಈರುಳ್ಳಿ, ಹೆಚ್ಚಿ ಕೊಟ್ಟು ಭರ್ತಿಮಾಡಲು ಯತ್ನಿಸಿದ. ಈಗ ಹೇಗಾದರೂ ಸುಧಾರಿಸಿಕೊಳ್ಳುತ್ತೇವೆ.

ರಾತ್ರಿಯೂಟ ಸರಿಯಾಗಿ ಆಗಬೇಕು. ಅದಕ್ಕೂ ಹೆಚ್ಚು ಮಲಗುವ ವ್ಯವಸ್ಥೆ ಚೆನ್ನಾಗಿರಬೇಕು ಎಂದು ಮುಖಂಡರು ತಾಕೀದು ಮಾಡಿ ತಂಡದವರನ್ನು ದೇವಾಲಯಕ್ಕೆ ಕರೆದುಕೊಂಡು ಹೋದ.

ಹುಡುಗರು ಹೆಂಗಳೆಯರು ಇರುವ ಐವರ ತಂಡಕ್ಕೆ ನಿದ್ರೆಯ ವ್ಯವಸ್ಥೆ ಕಷ್ಟಕ್ಕಿಟ್ಟುಕೊಂಡಿತು. ಮಕ್ಕಳನ್ನು ಜಗಲಿಗೆ ಸೇರಿಸುವುದು. ದಾಸ್ತಾನು ಖೋಲಿಯನ್ನು ಮಲಗುವ ಜಾಗಕ್ಕಾಗಿ ಖಾಲಿಮಾಡಿ ಸಾಮಾನು ಅಡಿಗೆ ಮನೆಗೆ ಸಾಗಿಸುವದು. ತಾವು ಛತ್ (ಗಚ್ಚಿ) ಮೇಲೆ ಮಲಗುವದು ಎಂದೆಲ್ಲ ಯೋಚಿಸಿಕೊಂಡರು. ಈ ಮದ್ರಾಸಿಯ ಖೋಲಿ ಖಾಲಿಮಾಡಿಸಿದರೆ. ನಾಲ್ವರಿಗೆ ಅಲ್ಲಿ ವ್ಯವಸ್ಥೆ ಮಾಡಬಹುದು ಎಂಬ ಲೆಕ್ಕಾಚಾರದಿಂದ. ಮುಂಗಡ ಕೊಟ್ಟಿದ್ದರೂ ಕೋಣೆ ಬಿಟ್ಟು ಕೊಡಬೇಕೆಂದ. ''ಏನಯ್ಯಾ. ಕಾನೂನು ನಿನಗೊಬ್ಬನಿಗೇ ಗೊತ್ತೆಂದು ತಿಳಿದಿಯಾ? ಜಗತ್ತಿನಲ್ಲಿ ಇಲ್ಲದ ಕಾನೂನು ನಿನ್ನದಾದರೆ ಅದನ್ನು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆಸಿ ಬೋರ್ಡನ್ನು ತೂಗಹಾಕು. ಪತಿ-ಪತ್ನಿಯರ ಗುಪ್ತ ಸಮಾಲೋಚನೆಯಿಂದ ಕಾನೂನು ಆಗುತ್ತವೆಂದು ತಿಳಿದಿಯಾ? ಮನಸ್ಸು ಮಾಡಿದರೆ ಇದೇ ಖೋಲಿಯಲ್ಲಿ ಒಂದು ತಿಂಗಳು ಇರುವ ಅಧಿಕಾರ ಪ್ರತಿ ಪ್ರವಾಸಿಗೂ ಇದೆ. ಈ ಮಾತಿನ ಹಿಂದಿನ ಕೆಚ್ಚು ನಿನಗೆ ತಿಳಿಯದಿದ್ದರೆ ಪೋಲಿಸರನ್ನು ಕರೆಯಿಸಬೇಕಾದೀತು'' ಎಂದು ಏಕವಚನದಲ್ಲಿ ಗಟ್ಟಿಯಾಗಿ ಹೇಳಿದಾಗ. ಅವನು ತತ್ತರಿಸಿ ಹೋದ. ಇಂದು ಮುಂಜಾನೆ ಯಾರ ಮುಖ ನೋಡಿದ್ದೆ? ಎಂದು ತಲೆ ಕೆರೆದುಕೊಂಡಾಗ. ಪತ್ನಿಯದೇ! ಎಂದು ನೆನಪಾಗಿರಬೇಕು. ಪೆಚ್ಚು ಮುಖ ಮಾಡಿ. ಕೈ ಜೋಡಿಸಿ. ಸಾಹೇಬರೇ ಈ ಗುಲಾಮನ ಮಾತುಗಳನ್ನು ಮನ್ನಿಸಬೇಕು. ಏನೋ ಅಜ್ಞಾನದಿಂದ ಮಾತನಾಡಿದೆ. ಎಂದು ಕ್ಷಮಾಪಣೆ ಕೇಳಿದಾಗ. ಟೊಳ್ಳುತನ ನೋಡಿ ನಗು ಬಂದಿತು. ದೇವಾಲಯಗಳನ್ನು ನೋಡಲು ಹೊರಟಾಗ. ''ನಿಮಗೆ ಸಿಗುವ ನಾಲ್ಕು ಕಾಸಿಗೆ ಅಡ್ಡ ಬರಲು ಮನಸ್ಸಿಲ್ಲ ಸರಿಯಾಗಿ ಐದು ಗಂಟೆಗೆ ಖಾಲಿ ಮಾಡಿ ಕೊಡುತ್ತೇನೆ'' ಎಂದಾಗ ಜೈನನಿಗೆ ತನ್ನ ಕಿವಿಗಳನ್ನೇ ನಂಬಲಾಗಲಿಲ್ಲ! ಖಜುರಾಹೋ ಸುಂದರಿಯನ್ನು ಮರೆತರೂ ಈ ಜೈನನ ವ್ಯಾಪಾರ ಮರೆಯುವಂತಿಲ್ಲ.

ಈ ಪ್ರದೇಶವನ್ನು ಆಳಿದ ಚಂದೇಲ ಅರಸರು ತಮ್ಮ ರಾಜಧಾನಿಯಲ್ಲಿ ನೂರಕ್ಕೂ ಹೆಚ್ಚು ದೇವಾಲಯಗಳನ್ನು ಹನ್ನೊಂದನೇ ಶತಮಾನದಲ್ಲಿ ಕಟ್ಟಿಸಿದರೂ. ಇಂದು ಕೆಲವು ಮಾತ್ರ ತಲೆಯೆತ್ತಿ ನಿಂತಿವೆ. ಇವು ಮೂರು ಗುಂಪುಗಳಲ್ಲಿ ದೂರದೂರ ಹರಡಿಕೊಂಡಿವೆ. ಅತಿ ಸುಂದರವಿದ್ದು ವಿಶ್ವಖ್ಯಾತಿ ಪಡೆದ ನಂದಿ. ಚಿತ್ರಗುಪ್ತ. ಜಗದಂಬಾ. ಲಕ್ಷ್ಮಣ ದೇವಾಲಯಗಳು ಪಶ್ಚಿಮಕ್ಕೆ ಇವೆ. ಜೈನರ ಪಾರ್ಶ್ವನಾಥ ಮತ್ತು ಆದಿನಾಥ ದೇವಾಲಯಗಳು ಪೂರ್ವಕ್ಕೆ ಇವೆ. ದುಲಾದೇವ ಮತ್ತು ಚತುರ್ಭುಜ ದೇವಾಲಯಗಳು ದಕ್ಷಿಣಕ್ಕೆ ಇವೆ. ಇವುಗಳೆಲ್ಲ ಹೆಚ್ಚು ಕಡಿಮೆ ಒಂದೇ ಶೈಲಿಯಲ್ಲಿದ್ದು ಎತ್ತರವಾದ ಜಗಲಿಯ ಮೇಲೆ. ನೆಳಲು - ಬೆಳಕುಗಳ ರಮ್ಯತೆಯನ್ನು ಮೂಡಿಸುವದಕ್ಕೆ ವಿಶಿಷ್ಟವಾಗಿ ರಚಿಸಿದ್ದಾರೆ. ಶಿಲ್ಪಗಳಿಂದ ತುಂಬಿ ತುಳುಕುವ ವರ್ತುಲಾಕಾರದ ಒಂದು ಕಂಬ ಬಿಸಿಲನ್ನು ಹೊಂದಿದಾಗ. ಅನಂತರ ಆಳದಲ್ಲಿದ್ದ ಕಂಬ ಕತ್ತಲೆಯಲ್ಲಿರುತ್ತದೆ. ಕಾಮಶಿಲ್ಪಗಳನ್ನು ಛಾಯಾಚಿತ್ರಗಳ ಪ್ರದರ್ಶನದಂತೆ ಒಂದರ ಹಿಂದೆ ಇನ್ನೊಂದರಂತೆ ತೂಗಹಾಕದೇ ಹೂಬಳ್ಳಿ. ಪಶುಪಕ್ಷಿ ದೇವದೇವತೆಗಳೊಂದಿಗೆ ಹಾಸುಹೊಕ್ಕಾಗುವಂತೆ ಮಾಡಿದ್ದರಿಂದ ಅವನ್ನು ಶೋಧಿಸಿ ನೋಡಲು ಸಂಯಮಬೇಕು. ಎರಡು ಕಣ್ಣುಗಳನ್ನು ಹತ್ತು ಮಾಡಬೇಕು. ಅಂತೆಯೇ ಕನಸು ಕಟ್ಟಿ ಅಲ್ಲಿಗೆ ಧಾವಿಸಿದ ಬಹು ಸಂಖ್ಯಾತ ಪ್ರವಾಸಿಗಳು ನಿರಾಶೆಗೊಂಡು ಹಿಂದಿರುಗುವದೇ ಹೆಚ್ಚು.

ಹೊಯ್ಸಳ ಶಿಲಾಬಾಲಿಕೆಯರು. ಚಂದೇಲರ ಸುರಸುಂದರಿಯರಾಗಿದ್ದಾರೆ. ಈ ಅಪ್ಸರೆಯರನ್ನು ಮಾನವರ ಎಲ್ಲ ಚಟುವಟಿಕೆಗಳಲ್ಲಿ ತೊಡಗಿದಂತೆ ರೂಪಿಸಲಾಗಿದೆ. ತಮಗಿಂತ ಭಾರವೆನಿಸುವ ಆಭರಣಗಳಿಗೆ ಇಲ್ಲಿ ಆಸ್ಪದವನ್ನೇ ಕೊಟ್ಟಿಲ್ಲ. ಅವರಲ್ಲಿ ಕೇಶಾಲಂಕಾರದಲ್ಲಿ

ತೊಡಗಿದವರು. ಮುಖಾಲಂಕಾರದವರು. ವಾದ್ಯ ನುಡಿಸುವವರು. ಮಕ್ಕಳ ಮುದ್ದಾಟದಲ್ಲಿ, ಸೀರೆ ಉಡುವದರಲ್ಲಿ, ನರ್ತನಕ್ಕೆ ಸಿದ್ಧವಾಗುವದರಲ್ಲಿ ಪ್ರಿಯಕರನನ್ನು ಎದುರು ನೋಡುತ್ತಿರುವವರು. ಕಾದು ದಣಿದವರು. ಚುಂಬಿಸುವವರು ಚಿತ್ರಿತರಾಗಿದ್ದಾರೆ. ಶಿಲ್ಪಿಗಳು ಈ ವಸ್ತುವನ್ನೇ ಮುಂದುವರಿಸಿ, ವಿವಿಧ ಕಾಮಚೇಷ್ಟೆಗಳನ್ನು ಚಿತ್ರಿಸಿದ್ದಾರೆ. ಸುರಸುಂದರಿಯರಲ್ಲಿ ಮೂಡಿಸಿದ ಸೌಂದರ್ಯವನ್ನು ಈ ಕಾಮಿನಿಯರಲ್ಲೂ ಮೂಡಿಸಲು ಮರೆತಿಲ್ಲ. ಇಂದಿನವರಿಗೆ ಅವು ಹೇಗೆ ಕಂಡಾವು! ಎಂದು ಅಂದಿನವರು ತಲೆ ಕೆಡಿಸಿಕೊಳ್ಳಲಿಲ್ಲ. ಶಿವಸಾಗರದಂಥ ಸಾರ್ವಜನಿಕ ಸ್ಥಳದ ಸರೋವರದಲ್ಲಿ ಅರೆನಗ್ನರಾಗಿ ಸ್ನಾನಮಾಡಿದ ಅಸುಂದರಿಯರಿಗೆ, ಇಲ್ಲಿ ಬಂದು ಈ ಕಾಮಿನಿಯರನ್ನು ನೋಡಲಾಗದೇ ಪತಿಯ ಬೆನ್ನ ಹಿಂದೆ ಮುಖ ಮುಚ್ಚಿಕೊಳ್ಳುವಂತೆ ಆದಾಗ ತಮಾಷೆಯೆನಿಸಿತು. ಇದು ಇತಿಹಾಸಕಾರರಿಗೆ, ಸಮಾಜಶಾಸ್ತ್ರಜ್ಞರಿಗೆ ಸಂಶೋಧನೆಗೆ, ಒಳ್ಳೇ ತಾಣ ಅನಿಸಿತು.

ಅಂದಿನ ಖಜುರಾಹೋ ಇಂದು ತೀರ ಚಿಕ್ಕಹಳ್ಳಿಯಾಗಿ 'ನಿನೋದಾತಾಲ' ಸರೋವರದ ದಂಡೆಯ ಮೇಲೆ ನಿಂತಿದೆ. ಅಸ್ತವ್ಯಸ್ತವಾಗಿ ಕಟ್ಟಿದ ಜೋಪಡಿಗಳು ಭುಜಕ್ಕೆ ಭುಜತಾಗಿಸಿ ನಿಂತಿವೆ. ಹಿಂದೊಮ್ಮೆ ಅನಾಥವಾಗಿ ಬಿದ್ದ ಸಾವಿರಾರು ಶಿಲ್ಪಗಳನ್ನು ಹಳ್ಳಿಯವರು ತಮ್ಮವನ್ನಾಗಿ ಮಾಡಿಕೊಂಡು. ಮನೆಯ ಗೋಡೆಗೆ. ತುಳಸಿ ವೃಂದಾವನ. ದೇವರವಿಗ್ರಹಗಳೆಂದು ಸಂಗ್ರಹಿಸಿದ್ದಾರೆ. ವಿದೇಶಗಳಲ್ಲಿ ಅವುಗಳ ಬೆಲೆ ಅರಿತವರು ಹೆಚ್ಚಿನ ಸಂಖ್ಯೆಯಲ್ಲಿ ಮಾರಿದ್ದಲ್ಲದೇ, ನೆಲದಲ್ಲಿಯೂ ಹೂತು ಇಟ್ಟಿದ್ದಾರೆ. ರಾಜಸ್ಥಾನದಿಂದ ಗುಳೇ ಬಂದ ಠಾಕೂರನೋರ್ವನು ಈ ಕೆಲಸದಲ್ಲಿ ನಿಸ್ಸೀಮನಂತೆ. ಇಂಥ ಅಸಂಖ್ಯಾತ ಶಿಲ್ಪಗಳನ್ನು ತನ್ನವನ್ನಾಗಿ ಮಾಡಿಕೊಂಡು ಹೊಲದಲ್ಲಿ ಹೂತಿಟ್ಟು ಖಾತ್ರಿಯ ಗಿರಾಕಿಗಳು ಬಂದಾಗ ಅಗೆದು ಮಾರುತ್ತಾನೆ. ಬಂದ ಲಾಭದಿಂದ ಬಡಜನರು ಹೊಲಗಳನ್ನು ಕೊಳ್ಳುತ್ತ ಪುಢಾರಿಯಾಗಿದ್ದಾನೆ.

ನಸುಕಿನಲ್ಲಿ ಎದ್ದ ಹಳ್ಳಿಗರು ಮಣ್ಣಿನ ಅಗಲವಾದ ಮಡಕೆಯಲ್ಲಿ ಉರಿಯುವ ಕೆಂಡಸೇರಿಸಿ. ಅದರ ಸುತ್ತಲೂ ಕುಳಿತು. ಹರಟುತ್ತ ಚಳಿ ಹೋಗಲಾಡಿಸಿಕೊಳ್ಳುತ್ತಾರೆ. ಗೃಹಿಣಿ, ದನಗಳನ್ನು ಹಿಂಡಿ. ಚಹಾಮಾಡಿಕೊಟ್ಟನಂತರ. ನೇಗಿಲು. ಎತ್ತುಗಳೊಂದಿಗೆ ಹೊಲಕ್ಕೆ ಹೊರಡುತ್ತಾರೆ. ಬೆಳೆಗೆ ನೀರುಣಿಸಲು ಇವರು ಬಳಸುವ ಆರ್ಕಿಮೆಡಿಸ್ ಚಕ್ರ ರಚಿಸುವ ವಿಧಾನ ತೀರ ಮೆಚ್ಚಿಗೆಯಾಯಿತು. ನಾರಿನ ಹಗ್ಗ ಹೊಸೆದು. ಅದಕ್ಕೆ ಅಗಲ ಬಾಯಿಯ ಮಣ್ಣಿನ ಮಡಕೆ ಸಿಕ್ಕಿಸಿ. ಜೋಡಿ ಎತ್ತಿನ ಸಹಾಯದಿಂದ ಬಾವಿಯ ಒಳಗೆ ಹೋಗಿ ಬರುವ ಏರ್ಪಾಡು ಮಾಡಿದ್ದರಿಂದ ತೀರ ಅಗ್ಗದಲ್ಲಿ ನೀರಾವರಿಯ ಯೋಜನೆಯಾಗಿದೆ. ಬೇರೆ ಕಡೆಗೆ ಅವುಗಳಿಗೆ ಉಕ್ಕಿನ ಹಗ್ಗ, ಕಬ್ಬಿಣದ ತೊಟ್ಟಿಲುಗಳನ್ನು ರಚಿಸಿದ್ದರಿಂದ ಖರ್ಚು ವಿಪರೀತ ಬರುತ್ತದೆ. ಹಳ್ಳಿಯಲ್ಲಿ ಇದ್ದ ಚಿಕ್ಕ ಪುಟ್ಟ ದೇವಾಲಯಗಳು. ದೂರದಿಂದ ಗೋಚರಿಸಿದರೂ ದನದ ಕೊಟ್ಟಿಗೆ-ಕಕ್ಕಸುಗಳಿಂದ ಹಾದು ಹೋಗಬೇಕಾಗಿದ್ದರಿಂದ ನೋಡುವದು ಸುಲಭವಲ್ಲ. ಹಳ್ಳಿಗರು ಹೊಸಬರಿಗೆ ಜೈರಾಮಜಿ. ನಮಸ್ತೆ ಹೇಳುವ ಗೋಜಿಗೆ ಹೋಗದೆ ತಮ್ಮ ಕೆಲಸದಲ್ಲಿ ತಾವು ಮೈಮರೆತಿರುತ್ತಾರೆ. ಬಹುಶಃ ಪ್ರತಿದಿನ ನೂರಾರು ಪ್ರವಾಸಿಗಳು ಬಂದು ಹೋಗುತ್ತಿರುವದರಿಂದ ಈ ಅನಾಸಕ್ತಿ ಇರಬಹುದು.

ದುಲದೇವ ಹಳ್ಳಿಯಿಂದ ಚತುರ್ಭುಜ ದೇವಾಲಯಕ್ಕೆ ಕಾಲು ಹಾದಿಯಿಂದ ಹೋಗಬೇಕಾದರೆ, ಖುರಾರಾ ಹಳ್ಳವನ್ನು ದಾಟಬೇಕಾಗುತ್ತದೆ. ಸಾವಿರಾರು ರೂಪಾಯಿ ಖರ್ಚುಮಾಡಿ ಬಂದವರು, ಕಾರು-ಟ್ಯಾಕ್ಸಿಗಳಲ್ಲಿ ಸುತ್ತುವರಿದು ಬರುವ ರಾಜಮಾರ್ಗಗಳಿಂದ ಬಂದು ಹೋಗುತ್ತಾರೆ. ಜನ ಸಾಮಾನ್ಯರು. ಈ ಒಂದು ದೇವಾಲಯ ನೋಡದಿದ್ದರೆ ಆಗುವ ಹಾನಿ ಅಷ್ಟರಲ್ಲಿಯೇ ಇದೆ. ಎಂಬ ಭಾವ ತಾಳಿರುತ್ತಾರೆ. ಕ್ಯಾಮರಾ ತೂಗಿಸಿಕೊಂಡು ಕಾಲು ಹಾದಿಯಿಂದ ಹೊರಟ ಹೊಸಬನನ್ನು ಕಂಡು. ಸ್ನಾನಕ್ಕೆ ಇಳಿದ ಹರೆಯದವಳು. ತಾನು ಸುರಸುಂದರಿಯರಿಗಿಂತ

ಹೆಚ್ಚು ಆಕರ್ಷಕಳಿರುವೆನೆಂದು ಮಾತು ಅರಿಯದೇ. 'ಎಲ್ಲಿಗೆ ಹೋಗಬೇಕಾಗಿತ್ತು?, ಎಂದು ವಿಚಾರಿಸಿದಳು. ಈ ಪ್ಯಾಂಟ ಬೂಟಧಾರಿಗೆ ಯಾರೋ ತಪ್ಪುದಾರಿ ತೋರಿಸಿದ್ದಾರೆಂದು ತಿಳಿದು. ಬಾಬುಜಿ. ಪಕ್ಕಾ ರಸ್ತೆಯಿಂದ ಬರಬೇಕಾಗಿತ್ತು. ಹಳ್ಳದಾಟುವಾಗ ಬಟ್ಟೆ, ಒದ್ದೆಯಾಗದೇ ಇದ್ದೀತೆ?, ಎಂದು ಮರುಗಿದಳು. ಅವಳ ಒದ್ದೆ ಬಟ್ಟೆಯ ಸಹಜ ಸೌಂದರ್ಯದ ಛಾಯಾಗ್ರಹಣಕ್ಕಾಗಿ ಎಂಥ ತೊಂದರೆ ತೆಗೆದುಕೊಳ್ಳುವವರೂ ಇರುತ್ತಾರೆ. ಎಂಬ ಮಾತು ಆ ಸರಳಜೀವಿಗೆ ಹೊಳೆಯಲೇ ಇಲ್ಲ. ಹಳ್ಳದ ನೀರು ಕುಡಿಯಬಹುದೇ? ಎಂದು ವಿಚಾರಿಸಿದಾಗ. ಇದರಷ್ಟು ಸ್ವಚ್ಛ ನೀರು. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಇಲ್ಲ, ಎಂದು ಎದೆಯುಬ್ಬಿಸಿ ಹೇಳಿದಳು.

ಕ್ಯಾಮರಾ. ಹಳ್ಳಿಯ ಹುಡುಗರನ್ನು ಆಕರ್ಷಿಸಿತು. ಅವರ ಕುತೂಹಲ. ಲವಲವಿಕೆಗಳಿಂದಾಗಿ. ಛಾಯಾಗ್ರಹಣ. ದೇವಾಲಯದ ಶಿಲ್ಪಗಳದ್ದಷ್ಟೇ ಆಕರ್ಷಕವೆನಿಸಿತು. ಅವರನ್ನೆಲ್ಲ ನಿಲ್ಲಿಸಿ ಫೋಟೊ ಕ್ಲಿಕ್ಕಿಸಿದಾಗ ಅವರಿಗಾದ ಆನಂದಕ್ಕೆ ಮೇರೆಯೇ ಇರಲಿಲ್ಲ. ಒಬ್ಬನು ಈ ಸಮಾಚಾರವನ್ನು ತಾಯಿಗೆ ಹೇಳಲು ನಾಗಾಲೋಟ ಹಾಕಿದರೆ. ಹುಡುಗಿಯೋರ್ವಳು ಅಕ್ಕನ ಕಿವಿಯಲ್ಲಿ ಈ ಮಾತನ್ನು ಅರುಹಿದಳು. ಹಳ್ಳಿಯ ಇನ್ನಷ್ಟು ಹುಡುಗರು ಓಡಿ ಬಂದರು. ಐದು ವರ್ಷದ ಒಬ್ಬ ಹುಡುಗನಿಗೆ ಏನು ಅನ್ನಿಸಿತೋ ಏನೋ ಹರಿದು ಚಿಂದಿಯಾದ. ತನ್ನ ಚಡ್ಡಿಯ ಜೋಬಿನಿಂದ ಬೊಗಸೆ ತುಂಬ ಬೋರೆ ಹಣ್ಣುಗಳನ್ನು ತೆಗೆದುಕೊಟ್ಟ. ಆತ ಬೇಡವೆಂದರೂ ಒತ್ತಾಯದಿಂದ ಹತ್ತು ಪೈಸೆ ಕೊಟ್ಟಿದ್ದರಿಂದ ಉಳಿದ ಹುಡುಗರೂ ಮನೆಯ ಕಡೆಗೆ ಧಾವಿಸಿ ಅಷ್ಟಷ್ಟು ಬೋರೆ ಹಣ್ಣು ತಂದು ಛಾಯಾಚಿತ್ರಗಾರನಿಗೆ ಒಪ್ಪಿಸಿದರು. ಶ್ರೀ ರಾಮನಿಗೆ ಶಬರಿ ತಂದು ಕೊಟ್ಟ ಹಣ್ಣಿನ ನೆನಪಾಗದೇ ಇದ್ದೀತೆ? ತಲಾ ಹತ್ತು ಪೈಸೆ ಬರುವಂತೆ ಅವರಿಗೆಲ್ಲ ಹಣಹಂಚಿ. ಹಣ್ಣುಗಳನ್ನೂ ತಿರುಗಿ ಒಪ್ಪಿಸಿ. ಎಲ್ಲರನ್ನೂ ನಿಲ್ಲಿಸಿ ಇನ್ನೊಂದು ಛಾಯಾಚಿತ್ರ ತೆಗೆದದ್ದರಿಂದ ಕಪಿಸೈನ್ಯ ಗೆಲುವಿನಿಂದ ಕುಣಿಯಿತು. ಪ್ರವಾಸಿಗಳ ಖಜುರಾಹೋಗೂ ಹಳ್ಳಿಗರ ಖಜುರಾಹೋಗೂ ಅಂತರವನ್ನು ನೋಡಿ ಇಂದಿಗೂ ಹಳ್ಳಿಗರ ಮುಗ್ಧತೆ ಉಳಿದು ಬಂದಿದೆಯೆಂದು ನೆಮ್ಮದಿಯೆನಿಸಿತು.

15 ಚಕಡಾ ಓಟ



ಕರಾವಳಿಯಲ್ಲಿ ಬೆಳೆದು, ದೋಣಿಗಳ ರೇಸ್ ನೋಡಲಾಗದಿದ್ದರೂ, ಹೊನ್ನಾವರದ ಸಾಯಕಲ್ ರೇಸ್ ನೋಡಲಾಗದಿದ್ದರೂ, ಬೆಂಗಳೂರಿನಲ್ಲಿದ್ದು ಕುದುರೆ ರೇಸ್ ನೋಡದಿದ್ದರೂ ಛಿಂದವಾಡಾದ 'ಚಕಡಾ ಓಟ' (ಚಿಕ್ಕ ಚಕ್ಕಡಿ) ರೇಸ್ ತಪ್ಪಿಸಿಕೊಳ್ಳಲಿಲ್ಲ. ಈ ಚಕಡಾ ಓಟ ಮಧ್ಯಪ್ರದೇಶದಲ್ಲಿಯೇ ಮಹತ್ವದ ಆಟವಾಗಿದೆ. ಮೊದಲು ಚಂದನಗಾಂವದಲ್ಲಿ ನಡೆಯುತ್ತಿದ್ದ ಸ್ಪರ್ಧೆ ಈ ವರ್ಷ ಛಿಂದವಾಡಾದಲ್ಲಿ ನಡೆಯಿತು. ಚಕಡಾಕ್ಕೆ ಜೋಡೆತ್ತು ಕಟ್ಟಿದರೂ ಅವು ನಮ್ಮಲ್ಲಿಯ ಚಕ್ಕಡಿ ಗಾಡಿಗಳಂತೆ ಬಜ್ಜೆ ಒಯ್ಯಲು ರಚಿಸಿರಲಾರದೇ, ಕೃಷಿಕರು ಅವನ್ನು ಕುದುರೆ ಗಾಡಿಗಳಂತೆ ಪ್ರಯಾಣಕ್ಕೆ ಹೆಚ್ಚಾಗಿ ಬಳಸುತ್ತಾರೆ. ಅದರ ಮೇಲೆ ಒಬ್ಬನು ಹೆಚ್ಚೆಂದರೆ ಇಬ್ಬರು ಕೂಡ್ರಬಹುದಲ್ಲದೇ ಯಾವ ಸಾಮಾನೂ ಸಾಗಿಸಲಾಗುವುದಿಲ್ಲ. ನಮ್ಮಲ್ಲಿಯ ಪಾತಿ ದೋಣಿಯಂತೆ ಬೇಕಾದಾಗ ಅದರಲ್ಲಿ ಪ್ರಯಾಣ ಮಾಡಬಹುದು. ಬೇಡದಿದ್ದಾಗ ಅದನ್ನು ಹೊತ್ತು ಗೃಹಾಭಿಮುಖವಾಗಬಹುದು! ಪ್ರತಿ ತಿಂಗಳೂ ಪೆಟ್ರೋಲು ಬೆಲೆ ಏರುತ್ತಿರುವ ಈ ದಿನಗಳಲ್ಲಿ ಅದೆಷ್ಟೋ ಪ್ರದೇಶಗಳಲ್ಲಿ 'ಚಕಡಾ' ನಮ್ಮ ಸಾಗಾಟದ ಸಮಸ್ಯೆ ಬಗೆಹರಿಸುವಂತೆ ಇದೆ.

ಎಲ್ಲ ರಸ್ತೆಗಳೂ ರೋಮ ನಗರವನ್ನೇ ಸೇರುವಂತೆ, ಯಾವ ಹಳ್ಳಿಗರ ತಂಡದ ಹಿಂದೆ ಹೊರಟರೂ ಸ್ಪರ್ಧಾಸ್ಥಾನಕ್ಕೆ ಹೋಗಿ ಸೇರುವದು ಖಂಡಿತವಾದ್ದರಿಂದ ಗೊತ್ತಿರದ ಪ್ರದೇಶದವರಿಗೂ ಏನೂ ತೊಂದರೆಯಾಗಲಿಲ್ಲ. ಹಳ್ಳಿಗರೆಲ್ಲ ಹತ್ತು-ಹದಿನೈದು ಮೈಲು

ದೂರದಿಂದ ಕಾಲು ನಡಿಗೆಯಲ್ಲೇ ಬಂದಿದ್ದರು. ಕುರುಕ್ಷೇತ್ರ ಯುದ್ಧಕ್ಕೆ ಹೊರಟ ರಥಗಳಂತೆ ಚಕಡಾಗಳು ಒಂದನೊಂದು ಹಿಂದೆ ಹಾಕಿ ಓಟದ ಸ್ಥಳದತ್ತ ಧಾವಿಸುತ್ತಿದ್ದವು. ಕಾಲೇಜಿನ ಬಯಲಲ್ಲಿ ದೊಡ್ಡ ಜನಸಮುದ್ರ ಸೇರಿತ್ತು. ಸಮೀಪದ ಎತ್ತರದ ಕಟ್ಟಡಗಳನ್ನೇರಿ 'ಕಾಗೆನೋಟ'ಕ್ಕೆ ಜನ ಕಾದಿದ್ದರು. ಹತ್ತಿರದಿಂದ ನೋಡಬಯಸಿದವರು ಮೈದಾನಿನಲ್ಲಿ ಒಟ್ಟುಗೂಡಿದ್ದರು. ಪ್ರಾರಂಭದಿಂದ ಕೊನೆಯವರೆಗೆ ಎಲ್ಲವನ್ನೂ ಸರಿಯಾಗಿ ಕಾಣಲಿಚ್ಛಿಸುವವರು ಪಕ್ಕದ ವೇರಬಾಬಾನ ಗುಡ್ಡವೇರಿದ್ದರು. ಕ್ಯಾಮರಾವನ್ನು ಕೊರಳಿಗೆ ತೂಗಿಸಿಕೊಂಡ ನನಗೆ ಎಲ್ಲಿ ಹೋದರೂ ಸ್ವಾಗತವಿತ್ತು.

ಸಾವಿರಕ್ಕೂ ಹೆಚ್ಚು ಚಕಡಾಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಬೀಡು ಬಿಟ್ಟಿದ್ದವು. ಹತ್ತಿರದ ಹಳ್ಳಿಯವರು ಎತ್ತುಗಳು ಓಟಕ್ಕೆ ಸಿದ್ಧವಾಗಲಿ ಎಂದು ಓಡಿಸಿಕೊಂಡು ಬಂದರೆ ದೂರದವರು ಅವುಗಳಿಗೆ ಶ್ರಮವಾಗದಂತೆ ಟ್ರಕ್‌ಗಳಲ್ಲಿ ತಂದಿದ್ದರು. ಒಬ್ಬನು ಚಕಡಾಕ್ಕೆ ಬಣ್ಣ ಬಳಿದರೆ, ಇನ್ನೊಬ್ಬನು ಎತ್ತುಗಳ ಕೋಡುಗಳಿಗೆ ಬಳಿದಿದ್ದ. ಮತ್ತೊಬ್ಬ ಎತ್ತುಗಳಿಗೆ ರಬ್ಬಾದ ಬಟ್ಟೆ ಹೊದಿಸಿದ್ದ. ಓಟವನ್ನು ನೋಡಲು ಬಂದವರ ಚಕ್ಕಡಿಗಳೂ ಅಲ್ಲಿ ಸೇರಿದ್ದರಿಂದ ಎಲ್ಲೆಲ್ಲೂ ಚಕಡಾ-ಚಕಡಿಗಳ ಜಾತ್ರೆಯೇ ಕಾಣಿಸುತ್ತಿತ್ತು. ಒಂದೆಡೆಗೆ ನಿಂತು ಮೆಲುಕಾಡಿಸುತ್ತಿದ್ದ ಎತ್ತುಗಳು ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತ ನಿಂತಿದ್ದವೇನೋ! ಕಳೆದ ಬಾರಿ ವಿಜಯ ಹೊಂದಿದ ಜೋಡಿ ಇತರರತ್ತ ಅಲಕ್ಷ್ಯ ಭಾವದಿಂದಿತ್ತು. ಪ್ರಾಯದ ಹೋರಿಗಳು ಮೊದಲ ಬಾರಿಗೆ ಪಂದ್ಯದ ಉತ್ಸಾಹದಲ್ಲಿದ್ದವು. ದಿನನಿತ್ಯದ ಕೆಲಸವೇ ಬೇಕಾದಷ್ಟು ಇದ್ದಾಗ ಈ ಓಟ ಯಾರಿಗೆ ಬೇಕು ಎಂದು ದುರ್ಬಲ ಜೋಡಿಯೊಂದು ಗೊಣಗಿತ್ತು. ಇಷ್ಟೊಂದು ಜನಸಮೂಹವನ್ನು ಮೊದಲ ಬಾರಿಗೆ ಕಂಡ ಎತ್ತುಗಳು ತಬ್ಬಿಬ್ಬಾಗಿ ನಿಂತವು. ಕಪ್ಪು, ಬಿಳಿ, ಹಂಡಬಂಡ ವರ್ಣಗಳ ಎತ್ತುಗಳೆಲ್ಲ ಅಲ್ಲಿದ್ದವು.

ಪಂದ್ಯದಲ್ಲಿ ಭಾಗವಹಿಸುವವರು ಎರಡು ರೂಪಾಯಿ ಕೊಟ್ಟು ಹೆಸರು ನೊಂದಾಯಿಸಬೇಕಿತ್ತು. ಬಂದ ಬಹುಸಂಖ್ಯಾತ ಜೋಡಿಗಳು ಸ್ಪರ್ಧೆಗೆ ನಿರುಪಯೋಗಿಯಾಗಿದ್ದರೂ, ಕೇವಲ ವಿನೋದಕ್ಕೆಂದು ಅವನ್ನು ದೂರದೂರದಿಂದ ಕೃಷಿಕರು ತಂದಿದ್ದರು. ಓಟಕ್ಕಾಗಿಯೇ ಬೆಳೆಸಿದ ಎತ್ತುಗಳನ್ನು ಹೂಡಿಸಿಕೊಂಡು ಧನಿಕರು ಬಂದಿದ್ದರು. ಕೆಲವನ್ನು ದೂರದಿಂದ ಟ್ರಕ್ಕಿನಲ್ಲಿ ತರಲಾಗಿತ್ತು. ಕುದುರೆಗಳಂತೆ ಎತ್ತುಗಳನ್ನು ಶಿಸ್ತಿನಿಂದ ಓಡಿಸುವುದು ಅಸಾಧ್ಯವಾದ ಮಾತಾದ್ದರಿಂದ, ಒಮ್ಮೆ ಎರಡು ಜೋಡಿಗಳಿಗಿಂತ ಹೆಚ್ಚು ಓಡಿಸಲಾಗುವುದಿಲ್ಲ. ಒಂದು ಇನ್ನೊಂದನ್ನು ಹಾಯಬಾರದು. ಅಡ್ಡಗಟ್ಟಬಾರದೆಂದು ಬಹಳ ಅಂತರದ ಮೇಲೆ ಅವನ್ನು ನಿಲ್ಲಿಸಿರುತ್ತಾರೆ. ಸೀಟಿ, ಸಿಳ್ಳು, ಸಂಜ್ಞೆಗಳಿಗೆ ಮನ್ನಣೆ ನೀಡದ ಎತ್ತುಗಳು, ಹೊರಡುವ ಸ್ಥಾನದಲ್ಲಿ ತಂದ ಕೂಡಲೇ ಓಡಲು ಪ್ರಾರಂಭಿಸುವದರಿಂದ, ಅವನ್ನು ತಡೆಹಿಡಿಯಲು ಎಳೆಂಟು ಪೈಲವಾನರು ನಿಂತಿದ್ದರು. ಪಂದ್ಯ ಅಂತ್ಯಗೊಳ್ಳುವಲ್ಲಿ ನಿಂತ ನಿರ್ಣಾಯಕರು ಹಸಿರು ಝೆಂಡಾ ತೋರಿಸಿದಾಗ, ಹೋಗಲು ಅಜ್ಞೆ ಸಿಕ್ಕು ಚಕಡಾಗಳು ನಾಗಾಲೋಟದಿಂದ ಓಡಲು ಪ್ರಾರಂಭಿಸುವುವು. ಕಟ್ಟಲೆ ಕಾನೂನುಗಳು ಪಂದ್ಯ ನಡೆಸುವವರಿಗೇ ಸರಿಯಾಗಿ ತಿಳಿಯದಿದ್ದಾಗ ಎತ್ತುಗಳಿಗೇನು ಅರಿವಿರಬೇಕು? ಹಳ್ಳಿಗಳಲ್ಲಿ ಒಂದು ಚಕಡಾ ಹಿಂಬಾಲಿಸಿ ಇನ್ನೊಂದು ಹೋಗುವುದನ್ನು ರೂಢಿ ಮಾಡಿಕೊಂಡದ್ದರಿಂದ ಎಷ್ಟು ದೂರ ದೂರ ನಿಲ್ಲಿಸಿದರೂ ಒಂದೆಡೆಗೆ ಬಂದೇ ಓಡಲಾರಂಭಿಸುತ್ತಿದ್ದವು! ನೇರ ಓಡುವ ಬದಲು ಎಡಕ್ಕೋ, ಬಲಕ್ಕೋ ತಿರುಗಿ ನಿಂತ ಪ್ರೇಕ್ಷಕರನ್ನು ಚದುರಿಸಿದವು ಹಲವು. ಕೆಲವರು ಎತ್ತುಗಳಿಂದ ತುಳಿಸಿಕೊಂಡರು. ಕೆಲವರ ಮೈಮೇಲಿಂದಲೇ ಚಕಡಾ ಹೊರಟು ಹೋಯಿತು. ಅವು ಸಾಕಷ್ಟು ಹಗುರವಾಗಿದ್ದರೂ ಒಬ್ಬ ಬಾಲಕ ಕಾಲು ಮುರಿದುಕೊಂಡ. ಇಷ್ಟಾದರೂ ಪ್ರೇಕ್ಷಕರಿಗೆ ಬುದ್ಧಿಯೇ ಇಲ್ಲ. ತೀರ ಹತ್ತಿರ ಬಂದು ನಿಲ್ಲುತ್ತಿದ್ದರು. ಎತ್ತುಗಳು ಗಾಬರಿಗೊಂಡು ಅಡ್ಡತಿಡ್ಡ ಓಡುತ್ತಿದ್ದವು. ಕೂಗುವವರು ಕೆಲವರಿದ್ದರೆ ಕಲ್ಲು ತೂರುವವರು ಹಲವರು.

ಸರ್ವಸಾಮಾನ್ಯವಾಗಿ ಎತ್ತುಗಳನ್ನು ಓಡಿಸಲು ತೆಳ್ಳಗಿನ ಬೆತ್ತ ಇಲ್ಲವೇ ಬಾರು ಕೋಲು ಬಳಸುವುದು ವಾಡಿಕೆಯಲ್ಲವೇ? ಆದರೆ ಗೊಂಡವನದ ಈ ಪ್ರಜೆಗಳು ಪೊಲೀಸರು ಉಪಯೋಗಿಸುವ ಲಾಠಿಯಂತಹದನ್ನು ನುಣುಪು ಮಾಡಿ, ಪೊಲಿಶ್ ತೆಗೆದು ಜಾರದಂತೆ ಹಗ್ಗ ಸುತ್ತಿ, ಅದರ ತುದಿಗೆ ಚೂಪಾದ ಮೊಳೆಯನ್ನು ಜೋಡಿಸಿರುತ್ತಾರೆ. ಅದರಿಂದ ಎತ್ತುಗಳಿಗೆ ಚುಚ್ಚುವುದರಿಂದ ನೂರಾರು ಛಿದ್ರಗಳಾದರೂ ಅವುಗಳ ಮೈಗೆ ಆಗುತ್ತಿರಬೇಕು! ಈ ಓಟದಲ್ಲಿ ಚಾಲಕನು 'ಹೆಯ್ ಹೆಯ್' ಎಂದು ಕೂಗುತ್ತ, ರಕ್ತ ಚಿಮ್ಮುವವರೆಗೆ ಅವನ್ನು ಚುಚ್ಚುವದರಿಂದ ಎತ್ತುಗಳು ನಾಗಾಲೋಟದಿಂದ ಓಡುತ್ತವೆ. ಕುದುರೆಗಳ ಅಂಗರಚನೆ ಓಟಕ್ಕಾಗಿಯೇ ಇರುವದರಿಂದ ಅವು ಓಡಿದಾಗ ಕಣ್ಣಿಗೆ ಹಬ್ಬವಾದರೆ, ಎತ್ತುಗಳು ಓಡಿದಾಗ ಕಟುಕರಿಂದ ತಪ್ಪಿಸಿಕೊಳ್ಳಲು ಓಡಿದ ಆಡಿನ ಚಿತ್ರ ಸ್ಮರಣೆಗೆ ಬರುತ್ತದೆ! ಧೂಳನ್ನು ಹಾರಿಸುತ್ತ ವೇಗವಾಗಿ ಬರುವ ಚಕಡಾಗಳು ಗ್ರೀಕ್, ರೋಮನ್ ರಥ ಸ್ಪರ್ಧೆಗಳನ್ನು ನೆನಪಿಗೆ ತರುತ್ತದೆ. ಕೆಲವು ಎತ್ತುಗಳು ಓಡುವುದನ್ನು ಮರೆತು ನಡೆಯಲಾರಂಭಿಸಿದರೆ ಕೆಲವು ಎಲ್ಲವನ್ನೂ ಅಲಕ್ಷಿಸಿ ಗೃಹಾಭಿಮುಖವಾಗಿ ಬಿಡುತ್ತವೆ. ಹೀಗೆಲ್ಲ ಆಗುವದರಿಂದ ಸ್ಪರ್ಧೆಗೆ, ಓಟಕ್ಕೆ ತಗಲಿದ ವೇಳೆಯನ್ನು ಗುರುತಿಸಲಾಗುತ್ತದೆ. ನಿಯಮಾವಳಿಯನ್ನು ಪಾಲಿಸಿ ಓಟ ಮುಗಿಸಿದವರ ಹೆಸರು, ನಂಬರ, ವೇಳೆಗಳನ್ನು ನಮೂದಿಸಿಕೊಂಡು ಅವರಿಗೆ ಒಂದು ತೆಂಗಿನಕಾಯಿಯನ್ನು ಗೌರವಾರ್ಥವಾಗಿ ಕೊಡಲಾಗುತ್ತದೆ. ಅವರು ಅದನ್ನು ಅಲ್ಲಿಯೇ ಒಡೆದು ಸಹಾಯಕರಿಗೆಲ್ಲ 'ಪರಸಾದ್' ಹಂಚಿ ಬಿಡುತ್ತಾರೆ. ಓಟ ಮುಗಿಸಿದಾಗ ಎತ್ತುಗಳನ್ನು ನೋಡಿದರೆ ಕನಿಕರ ಹುಟ್ಟದೇ ಇರಲಾರದು. ಚುಚ್ಚಿಸಿಕೊಂಡಲ್ಲಿ ರಕ್ತ ಹೊರಹೊಮ್ಮುತ್ತಿರುತ್ತದೆ. ಶ್ವಾಸಕ್ಕಾಗಿ ಕೆಲವು ಏದುತ್ತಿರುತ್ತವೆ. ಕೆಲವು ಮೂಗು-ಬಾಯಿಂದ ನೊರೆ ಬಿಡುತ್ತಿರುತ್ತವೆ. ಹಲ್ಲುಗಳನ್ನು ಮುರಿದುಕೊಂಡು ಬಾಯೆಲ್ಲ ರಕ್ತ ಮಾಡಿಕೊಂಡಿರುತ್ತವೆ ಹಲವು.

ಸುಮಾರು ಇನ್ನೂರು ಚಕಡಾಗಳು ಗುರಿ ಮುಟ್ಟಲೇ ಇಲ್ಲ. ಉಳಿದ ನೂರರಲ್ಲಿ ಕೊನೆಯ ನಿರ್ಣಯಕ ಸ್ಪರ್ಧೆಯಲ್ಲಿಣಾ ಭಾಗವಹಿಸಲು ಆರಿಸುವುದೂ ಸುಲಭದ ಮಾತಾಗಿರಲಿಲ್ಲ. ನೋಂದಾಯಿಸಿಕೊಂಡ ಪ್ರಕಾರ ಓಟಕ್ಕೆ ಇಪ್ಪತ್ತೆರಡರಿಂದ ಮೂವತ್ತು ಸೆಕೆಂಡು ತಗಲಿದರೂ ಇಪ್ಪತ್ತೈದು ಸೆಕೆಂಡು ತೆಗೆದುಕೊಂಡ ಚಕಡಾಗಳು ಬಹು ಸಂಖ್ಯಾತವಿದ್ದವು. ಭಾಗವಹಿಸಿದವರಲ್ಲಿ ಪ್ರಭಾವಶಾಲಿ ರೈತರು ಅನೇಕ ಜನರಿದ್ದರು. ಅವರು ನಿರ್ಣಾಯಕರಿಗೆ ಚಹಾ ಕುಡಿಸಿ 'ಪಾನ್' ತಿನ್ನಿಸುವುದರಲ್ಲಿ ಮಗ್ನರಾಗಿದ್ದರು. ಒಬ್ಬನು ಅಡ್ಡ ಓಡಿದ ತನ್ನ ಚಕಡಾ ಸೇರ್ಪಡೆಯಾಗುವಂತೆ ನೋಡಿಕೊಂಡನು. ಇದರಿಂದ ಉಳಿದವರಿಗೆ ಕಸಿವಿಸಿ ಆದರೂ, ತಮ್ಮಲ್ಲೇ ಮಾತನಾಡಿಕೊಂಡರೂ ಆದನ್ನೇ ದೊಡ್ಡದು ಮಾಡಿ ಗದ್ದಲ ಹಾಕುವದು ಅವರ ಸ್ವಭಾವವಲ್ಲದ್ದರಿಂದ ಸುಮ್ಮನಾದರು. ಎಷ್ಟೆಂದರೂ ಪಂದ್ಯಾಟದಲ್ಲಿ ಭಾಗವಹಿಸುವ ಆನಂದಕ್ಕಾಗಿ ಬಂದಿದ್ದರೇ ಹೊರತು ಬಹುಮಾನ ಗಳಿಸಲು ಬಂದಿರಲಿಲ್ಲವಲ್ಲ!

ನಾಲ್ಕು ಗಂಟೆಗೇ ನಿರ್ಣಾಯಕ ಪಂದ್ಯವೆಂದು ಸಾರಿದರೂ ರೈತರಿಗೂ ಎತ್ತುಗಳಿಗೂ ವೇಳೆಯ ಪರಿವೆಯಿಲ್ಲದ್ದರಿಂದ ಆರೂವರೆ ಗಂಟೆಗೆ ಸುರುವಾಯಿತು. ಸೂರ್ಯಾಸ್ತವಾಗಿ ತಂಗಾಳಿ ಬೀಸಲಾರಂಭಿಸಿದರೂ ಜನಸ್ತೋಮ ಕಾದು ನಿಂತಿತ್ತು. ಈ ಓಟದಲ್ಲಿ ಮಾತ್ರ ಎತ್ತುಗಳು ಕುದುರೆಯಂತೆ ಓಡಿದವು. ಕೆಲವು ಸಲ ಮೊದಲು ಓಡಿದ ಜೋಡಿ ಯಾವುದು, ಎರಡನೆಯದು ಯಾವುದು ಎಂದು ನಿರ್ಧರಿಸುವುದೂ ತೊಂದರೆಯಾಗುವಷ್ಟು ಸ್ಪರ್ಧೆ ತುರುಸಿನದಾಯಿತು. ಆ ಊರಿನ ನಾಯಕ, ಈ ಊರಿನ ಪಟೇಲರ ಚಕಡಾಗಳು ವಿಜಯಿಗಳಾದವು. ವಾದ್ಯಮೇಳದೊಂದಿಗೆ ವಿಜಯ ಸಾರುತ್ತ ಚಕಡಾಗಳು ಪೇಟೆಗೆ ಬಂದವು. ಅಲ್ಲಿ ಬಹುಮಾನ ವಿತರಣೆ ನಡೆಯಿತು.

ಮೊದಲನೇ ಸ್ಥಾನ ಪಡೆದವರಿಗೆ ಸಾಯಕಲ್, ದ್ವಿತೀಯ ಸ್ಥಾನದವರಿಗೆ ಗೋಡೆ ಗಡಿಯಾರಗಳಲ್ಲದೇ ಇನ್ನೂ ಹಲವರಿಗೆ ಅನೇಕ ಬಹುಮಾನಗಳನ್ನು ಕೊಡಲಾಯಿತು.

ಸ್ಪರ್ಧೆಯ ಏರ್ಪಾಟು ಚೆನ್ನಾಗಿಯೇ ಇತ್ತು. ಅಷ್ಟೊಂದು ಚಕಡಾ, ಜನರು ಸೇರುವಲ್ಲಿ ಎಲ್ಲ ವ್ಯವಸ್ಥೆಯನ್ನೂ ಅಚ್ಚುಕಟ್ಟಾಗಿಯೇ ಮಾಡಿದ್ದರೆನ್ನಬೇಕು. ಧ್ವನಿವಾಹಕ ಜೋಡಿಸಿದ್ದರು. ಕುಡಿಯುವ ನೀರನ್ನು ಪೂರೈಸಿದ್ದರು. ಜನರನ್ನು, ಚಕಡಾಗಳನ್ನು ನಿಯಂತ್ರಣದಲ್ಲಿಡಲು ಸ್ವಯಂಸೇವಕರಿದ್ದರು. ಇಂಥ ಅಪರೂಪದ ಸ್ಪರ್ಧೆಯನ್ನು ನೋಡಿದ ಆನಂದ ನನ್ನದಾಯಿತು.



16 ಪಿಪರಿಯಾದಲ್ಲಿ



ಮಹಾದೇವ ಬೆಟ್ಟಗಳ ಮೇಲಿದ್ದ ಪಚಮಡಿ, ಬೇಸಿಗೆಯ ವಿಶ್ರಾಂತಿಧಾಮವಿದ್ದಂತೆ ಅಲ್ಲಿಯ ಗುಹಾ-ಚಿತ್ರಗಳೂ ಜಗತ್ ಪ್ರಸಿದ್ಧವಾಗಿವೆ. ಅಂತೆಯೇ ಛಿಂದವಾಡಾದಿಂದ ಮಟಕುಲಿ ಮಾರ್ಗವಾಗಿ ಅಲ್ಲಿ ಸೇರಿದ್ದಾಯಿತು. ಅಲ್ಲಿಯ ತಗ್ಗು, ದಿನ್ನೆ, ಕೊರಕಲು, ಗುಡ್ಡಬೆಟ್ಟಗಳು, ಕೊಡಗಿನ ರಾಜಧಾನಿಯನ್ನು ನೆನಪಿಗೆ ತಂದವು. ಈ ಊರನ್ನು ಬ್ರಿಟೀಶರು ಒಂದೂವರೆ ಶತಕದ ಹಿಂದೆಯೇ ತಮ್ಮ ಸೈನ್ಯವನ್ನು ಇರಿಸಲು ಆಯ್ಕೆಮಾಡಿದ್ದು ಇಂದಿಗೂ ಅದೊಂದು ಸೈನಿಕರ ಠಾಣ್ಯವಾಗಿಯೇ ಉಸಿರು ಹಿಡಿದಿದೆ. ಸೈನಿಕರು ವ್ಯಾಪಾರಿಗಳನ್ನು ಬಿಟ್ಟು ಉಳಿದೆಲ್ಲ ಜನ ಕಡುಬಡವರು. ಜನ ವಸತಿ ಸುಮಾರು ಆರೂವರೆ ಸಾವಿರ. ಆದರೆ ಬೇಸಿಗೆಯಲ್ಲಿ ಸರಕಾರಿ ಅಧಿಕಾರಿಗಳು ಧನಿಕವರ್ಗದವರು ಬಿಸಿಲಿನ ತಾಪದಿಂದ ಸಂರಕ್ಷಿಸಿಕೊಳ್ಳಲು ಪರ್ವತಾವಳಿಗಳನ್ನು ಏರಿದಾಗ, ಜನಸಂಖ್ಯೆ ಮಿತಿಮೀರಿ ಬೆಳೆದಿರುತ್ತದೆ. ಅಲ್ಲಿ ಎಲ್ಲ ಸಾಮಗ್ರಿ ಹೊರಗಡೆಯಿಂದ ಬರಬೇಕಾದ್ದರಿಂದ ಎಲ್ಲ ವಸ್ತುಗಳ ಬೆಲೆಯನ್ನು ಆ ಸಮಯದಲ್ಲಿ ಗಗನಕ್ಕೇರಿಸಿಬಿಟ್ಟಿರುತ್ತಾರೆ ಬನಿಯರು. ಆದರೆ ಸೈನಿಕರು ಬಳಸುವ ಸಾಮಗ್ರಿಗಳು ಅತಿ ಕಡಿಮೆ ಬೆಲೆಗೆ ಲಭ್ಯವೆಂದು ತೋರುತ್ತದೆ. ಸರದಾರಜಿಯೊಬ್ಬನ ಅಂಗಡಿಯಲ್ಲಿ ಸೈನಿಕರು ಬಳಸುವ ಬಿಸಿಲುಟೋಪಿಯನ್ನು ಕೇವಲ ಮೂರು ರೂಪಾಯಿಗೆ ಕೊಂಡು ಕೊಂಡೆ. ಇದರಿಂದ ಅನೇಕರು, ಸೈನ್ಯಕ್ಕೆ ಸೇರಿದವನಿರಬೇಕೆಂದು ಸಲಾಮು ಹಾಕಲಾರಂಭಿಸಿದರು.

ಗುಹಾಚಿತ್ರಗಳು ದಟ್ಟಕಾಡಿನಲ್ಲಿ ಇದ್ದುದರಿಂದ ಸ್ಥಾನೀಯ ಮಾರ್ಗದರ್ಶಕನೊಂದಿಗೆ ಹೋಗುವದೇ ಸುರಕ್ಷಿತವೆಂದು ಹಲವರು ಸೂಚಿಸಿದ್ದರಿಂದ ದಿನಕ್ಕೆ ೧೨ ರೂಪಾಯಿ ಕೂಲಿಯ ಮೇಲೆ ಮಾರ್ಗದರ್ಶಕನೊಂದಿಗೆ ಹೊರಟೆ. ಹಳೆಯ ಪಿಪರಿಯಾ ರಸ್ತೆ ತುಳಿದು ಹೋದನಂತರ ಮಾಳಾದೇವಿ ಗುಹಾಲಯಕ್ಕೆ ಹೋಗುವ ರಸ್ತೆ ಎಂದು ಸೂಚಿಸುವ ಫಲಕದ ಹತ್ತಿರ ಬಲಗಡೆ ತಿರುಗಿ ಕಾಡಿನ ದಾರಿ ತುಳಿಯಲಾರಂಭಿಸಿದೆವು. ಎದುರುಗಡೆಯಿಂದ ಜೋಡಿ ಬೇಟೆನಾಯಿಗಳೊಂದಿಗೆ ಸೈನ್ಯದಲ್ಲಿದ್ದ ಜವಾನನು ತಾನೂ ಬರುತ್ತೇನೆಂದು ಕೂಡಿಕೊಂಡ. ಮಾರ್ಗದರ್ಶಕನು ದಮ್ಮು, ಹಸಿವು, ಬಾಯಾರಿಕೆಗಳಿಂದ ಬಳಲುತ್ತಿದ್ದರಿಂದ ಅಲ್ಲಲ್ಲಿ ವಿಶ್ರಾಂತಿ ಪಡೆದು ಮುಂದುವರೆಯಬೇಕಾಯಿತು. ಗುಡ್ಡಗಳನ್ನು ಹತ್ತಿ ಇಳಿದು ಗುಹಾಲಯ ಮುಟ್ಟಿದಾಗ ನಿರಾಸೆ ಕಾದಿತ್ತು. ಸೈನಿಕರೆಲ್ಲ ಈ ಚಿತ್ರಗಳ ಮೇಲೆ ತಮ್ಮ ಹೆಸರುಗಳನ್ನು ಗೀಚಿದ್ದರು. ಈ ಚಿತ್ರಗಳೆಲ್ಲಾ ಹಾಳುಗೆಡವಿದಂತೆ ತಿರುಗಿ ಹುಟ್ಟಿಕೊಳ್ಳುತ್ತವೆ ಎಂಬ ಭ್ರಮೆ ಸ್ಥಾನಿಕರಲ್ಲಿ ಇದ್ದುದರಿಂದ ಪೋಲಿ ಹುಡುಗರೆಲ್ಲ ಅವನ್ನು ಕಲ್ಲಿನಿಂದ ಜಜ್ಜಿ ನಾಶಮಾಡಿಬಿಟ್ಟದ್ದರು. ಹೆಚ್ಚಿನ ಚಿತ್ರಗಳು ಕೆಂಪು ಮತ್ತು ಬಿಳಿವರ್ಣಗಳಿಂದ ರಚಿತವಾದವುಗಳು. ಸ್ತ್ರೀ ಪುರುಷರು,ದಂಪತಿಗಳು, ಮದುವೆಯಲ್ಲಿ ಹಾಕುವ ಕುಂಡಲಿ, ನಕ್ಷೆಗಳನ್ನು ಕೆಂಬಣ್ಣದಲ್ಲಿ ಬಿಡಿಸಲಾಗಿದೆ. ಬೇಟೆಗಾರರು, ಕಾಡುಪ್ರಾಣಿಗಳು, ಎತ್ತು, ಹಂದಿ, ಮಂಗ ಮೊದಲಾದ ಪ್ರಾಣಿಗಳನ್ನು ಬಿಳಿ ಬಣ್ಣದಿಂದ ಬರೆಯಲಾಗಿದೆ. ಈ ಚಿತ್ರಗಳು ಸಹಸ್ರ ವರ್ಷಗಳಿಗಿಂತ ಹಿಂದಿನವಾದರೂ ಈಗಿನ ಗೊಂಡರ ಕಲಾಕೃತಿಗಳಿಗೆ ತೀರ ಹತ್ತಿರದವು ಅನಿಸುತ್ತವೆ. ಮಾರ್ಗದರ್ಶಕನು ಈ ಗುಹಾಚಿತ್ರಗಳು ದೂರದೂರ ಹರಡಿಕೊಂಡಿರುವದರಿಂದ ಅವನ್ನು ಮರುದಿನ ತೋರಿಸುತ್ತೇನೆಂದಾಗ, ಅವನ ಇಂಗಿತವರಿತು ಪ್ರಥಮ ದಿನವನ್ನೇ ಮಾರ್ಗದರ್ಶಿಯ ಕೊನೆಯ ದಿನವನ್ನಾಗಿಸಬೇಕಾಯಿತು.

ಪಂಚ (ಐದು) ಮಾಡಿ (ಮನೆ) ಶಬ್ದಗಳ ಮೂಲದಿಂದ ಪಚಮಡಿ ಹೆಸರು ಪ್ರಾಪ್ತವಾಗಿದೆಯಂತೆ. ಊರಿನ ಹತ್ತಿರದ ಗುಡ್ಡದ ಮೇಲೆ 'ಪಾಂಡುಗುಫಾ' ಎಂದು ಕರೆಯಲ್ಪಡುವ ಐದು ಗುಹೆಗಳಿವೆ. ಪಾಂಡವರು ಅಜ್ಞಾತವಾಸದಲ್ಲಿರುವಾಗ, ಇಲ್ಲಿ ವಾಸವಾಗಿದ್ದರಿಂದ ಈ ಹೆಸರು ಬಂದಿದೆ ಎಂದು ಪ್ರತೀತಿ. ನಾಸಿಕರದ ಹತ್ತಿರವಿರುವ ಗುಡ್ಡಗಳಲ್ಲಿಯ ಇಂಥ ಗುಹೆಗಳಿಗೆ 'ಪಾಂಡು ಲೇಣಿ' ಎಂದು ಗುರುತಿಸುತ್ತಾರೆ. ಇವೆಲ್ಲ ಬೌದ್ಧಕಾಲೀನ ಗುಹಾಲಯಗಳೆಂದು ಬೇರೆ ಹೇಳಬೇಕಾಗಿಲ್ಲ. ಇವುಗಳಲ್ಲಿ ಯಾವುದೇ ತರದ ಅಲಂಕಾರವಾಗಲೀ ಮೂರ್ತಿಗಳಾಗಲೀ ಇಲ್ಲ. ಅಜಂತಾ, ಸಾಂಚಿ, ಎಲ್ಲೋರಾಗಳು ಸುಸ್ಥಿತಿಯಲ್ಲಿ ಇರಬೇಕಾದರೆ ಕೆಲ ಬೌದ್ಧ ಭಿಕ್ಷುಗಳು ಪಚಮಡಿಗೆ ಬಂದು ಬೀಡು ಬಿಟ್ಟಿರಬಹುದು. ಈ ಗುಹೆಗಳನ್ನು ಹಾದು ಗುಡ್ಡದ ಶಿಖರವನ್ನೇರಿದರೆ, ಪಚಮಡಿ ಊರಿನ ವಿಹಂಗಮನೋಟ ನೋಡಲು ಸಿಗುತ್ತದೆ. ಬೇಸಿಗೆಯ ದಿನಗಳಲ್ಲಿ ಗವರ್ನರ, ರಾಷ್ಟ್ರಪತಿ, ಮಂತ್ರಿ, ರಾಜಕಾರಣಿ, ಸೈನ್ಯಾಧಿಕಾರಿಗಳು ತಂಗುವ ಕಟ್ಟಡಗಳು, ಕೆಂಪು, ಹಳದಿ ಬಣ್ಣಗಳನ್ನು ಬಳೆದುಕೊಂಡು ಮೆರೆಯುತ್ತಿದ್ದವು. ಇನ್ನೊಂದೆಡೆಗೆ ಬಡಬಗ್ಗರ, ಆದಿವಾಸಿಗಳ ಕುಟೀರ, ಜೋಪಡಿಗಳು ತಲೆ ಮರೆಮಾಡಿಕೊಂಡು ಹರಡಿದ್ದವು. ಗಗನಮಂಡಲವೆಲ್ಲ ಕಾರ್ಮೋಡಗಳಿಂದ ತುಂಬಿ ಗರ್ಜಿಸಲಾರಂಭಿಸಿದಾಗ, ಮಳೆರಾಯನಿಗೆ ಹೆದರಿ ಹಿಂದಿರುಗಬೇಕಾಯಿತು.

ಪಿಪರಿಯಾಗೆ ಹೋಗಲೆಂದು ಪಚಮಡಿ ಬಸ್ ನಿಲ್ದಾಣಕ್ಕೆ ಬಂದು ನಿಂತಾಗ, ಪ್ರವಾಸಿಗಳು ಕಿಕ್ಕಿರಿದು ತುಂಬಿದ್ದರೂ ಒಂದೂ ವಾಹನವಿರಲಿಲ್ಲ. ಧೂಳು ಹಾರಿಸುತ್ತ ಬಂದು ನಿಂತ ಒಂದು ಬಸ್ಸಿನಲ್ಲಿ ನೂಕುನುಗ್ಗಲಿನಿಂದ ಜನರೆಲ್ಲ ಕಿಕ್ಕಿರಿದು ತುಂಬಿದರು. ಅವರಲ್ಲಿ ಅರ್ಧದಷ್ಟು ಜನ ಛಿಂದವಾಡಾಕ್ಕೂ, ಉಳಿದವರು ಪಿಪರಿಯಾಕ್ಕೂ ಹೋಗುವವರಿದ್ದರು. ಅಂದರೆ ಬೆಂಗಳೂರು ಬಸ್

ನಿಲ್ದಾಣದಲ್ಲಿ ನಿಂತ ವಾಹನದಲ್ಲಿ ಅರ್ಧ ತುಮಕೂರಿಗೆ ಹೋಗುವ ಪ್ರವಾಸಿಗರು, ಉಳಿದವರು ಮೈಸೂರಿಗೆ ಪ್ರಯಾಣ ಬೆಳೆಸುವವರು ಇದ್ದಂತೆ! ನಂತರ ಛಿಂದವಾಡಾಕ್ಕೆ ಹೋಗುವವರು ಅದು ಪಿಪರಿಯಾಕ್ಕೆ ಹೋಗುತ್ತದೆಂತಲೂ, ಪಿಪರಿಯಾಕ್ಕೆ ಹೊರಟವರು ಅದು ಇನ್ನಾವ ಊರಿಗೋ ಹೊರಟು ನಿಂತಿದೆಯೆಂತಲೂ ಭ್ರಮಿಸಿ ಎಲ್ಲರೂ ಇಳಿದು ಹೋದದ್ದರಿಂದ ಮುಂದಿನ ಖಾಲಿ ಸೀಟಿನಲ್ಲಿ ಸುಖವಾಗಿ ಕುಳಿತು ಪಯಣಿಸುವ ಅವಕಾಶ ಸಿಕ್ಕಿತು. ಪಚಮಡಿ ಘಟ್ಟವೇರಿದ ನಂತರ ವಿಪುಲ ಮಳೆಯಾಗಿದ್ದರಿಂದ ಸೊರಗಿ ಹೋಗಿದ್ದ ನದಿ, ಝರಿ, ಹೊಂಡಗಳು ಮೈ ಕೈ ತುಂಬಿಕೊಂಡು ನಿಂತ ನವಯುವತಿಯಂತೆ ಕಂಡವು. ಗಿಡ ಮರಗಳೆಲ್ಲ ಸೊಕ್ಕಿನಿಂದ ಬೆಳೆಯಲಾರಂಭಿಸಿದ್ದವು. ಮಳೆಗೆ ಹಚ್ಚ ಹಸಿರು ಪರ್ಣಗಳು ಚಿಗಿತುಕೊಳ್ಳುವಂತೆ, ಇಲ್ಲಿ ಹಸಿರುಗಿಳಿಗಳ ಸಂಖ್ಯೆಯಲ್ಲಿಯೂ ಅಭಿವೃದ್ಧಿಯಾಗುತ್ತಿದೆಯೇ? ಎಂದು ಭ್ರಮೆ ಹುಟ್ಟಿಸುವಂತೆ, ಲಕ್ಷಗಟ್ಟಳೆ ಗಿಳಿಗಳು ನೂರಾರು ಹಿಂಡುಗಳಲ್ಲಿ ಗಗನ ಮಂಡಲದಲ್ಲಿ ಸ್ವಚ್ಛಂದವಾಗಿ ಹಾರಾಡುತ್ತಿದ್ದವು. ಕೆಲವು ಗಿಳಿವಿಂಡುಗಳು ನಮ್ಮ ವಾಹನದೊಂದಿಗೆ ಓಟದ ಸ್ಪರ್ಧೆಗೆ ಇಳಿದಿದ್ದವು. ಅದೆಷ್ಟೋ ದೂರದವರೆಗೆ ಅವು ಹಿಂಬಾಲಿಸಿ ಬಂದು, ಕೊನೆಗೊಮ್ಮೆ ತಮಗೇ ಗೆಲುವಾಯಿತು ಎಂಬಂತೆ ಸಿಳ್ಳುಹಾಕಿ ಮಾಯವಾಗಿ ಬಿಟ್ಟವು.

ಬಸ್ಸು ಕೇವಲ ೧೮ ಮೈಲಿ ಪ್ರಯಾಣ ಮಾಡಿ ಮಟಕುಲಿ ಸೇರುವಷ್ಟರಲ್ಲಿ ಡ್ರಾಯವರ, ಕಂಡಕ್ಟರ್ ಮತ್ತು ಮೋಟಾರಿಗೆ ಕೂಡ ವಿಶ್ರಾಂತಿ ಬೇಕಾಯಿತೆಂದು ತೋರುತ್ತದೆ. ಅಂತೆಯೇ ಚಹಾ-ಪಾಣಿಗೆಂದು ಅರ್ಧಗಂಟೆ ವಿರಾಮವನ್ನು ಕೊಡಲಾಯಿತು. ತಿರುಗಿ ಹೊರಡುವದರಲ್ಲಿ ಒಂದು ಗಂಟೆಯೇ ಜಾರಿಕೊಂಡಿರಬೇಕು. ಕೊಂಚದೂರ ಹೋದೊಡನೆ ಗಿರಾಕಿಗಳನ್ನು ಆಮಂತ್ರಿಸುವ ಸೆರೆ ಅಂಗಡಿಯ ಧ್ವನಿವರ್ಧಕಗಳು ಪಿಪರಿಯಾ ಪಟ್ಟಣ ಬಂದಿತೆಂದು ಸಾರಿದವು. ವಿಪರೀತ ಮಳೆಯಿಂದಾಗಿ ಎಲ್ಲಕಡೆಯಲ್ಲಿ ಕೊಳಚೆ ನೀರು ಹರಡಿಕೊಂಡಿತ್ತು. ತಗ್ಗುಪ್ರದೇಶದಲ್ಲಿ ಡೇರೆ ಹೂಡಿಕೊಂಡು ಬೀಡು ಬಿಟ್ಟಿದ್ದ ಮೊಗಲಾಯರು ಸುರಕ್ಷಿತ ಸ್ಥಳಕ್ಕೆ ಧಾವಿಸಿದ್ದರು. ಊರಿಂದೂರಿಗೆ ಪಯಣಿಸುವ ಈ ಮೊಗಲಾಯಿ ಸುಂದರಿಯರು, ಹಿಂದೊಮ್ಮೆ ನಮ್ಮ ಊರಿಗೆ ಬರುತ್ತಿದ್ದರು. ಈಗ ಅವರೆಲ್ಲ ಎಲ್ಲಿ ಮಾಯವಾದರೋ! ಅವರು ಬೀಡು ಬಿಟ್ಟಲ್ಲಿ ಸುಲಿಗೆ-ಕಳ್ಳತನಗಳು ಕಾಣಿಸಿಕೊಳ್ಳುತ್ತವೆ ಎಂಬುದು ಸ್ಥಳೀಯರ ನಂಬಿಕೆ. ಈ ಅವ್ಯವಹಾರಕ್ಕಾಗಿ ಅವರು ತಮ್ಮ ಹೆಂಗಳೆಯರನ್ನು ಬಳಸುತ್ತಾರೆ ಎಂಬುದು ಪ್ರತೀತಿ. ಪರಪುರುಷರಲ್ಲಿ ಅನುರಾಗ ನಟಿಸಿ, ನಂಬಿಸಿ ಏಕಾಂತದ ಸ್ಥಳಕ್ಕೆ ಕರೆದೊಯ್ದು ಅಲ್ಲಿ ಗಂಡಸರನ್ನು ಬೆದರಿಸಿ ಸುಲಿಯುತ್ತಿದ್ದರಂತೆ. ಪಿಪರಿಯಾದಲ್ಲೂ ಇಂಥ ಒಂದೆರಡು ಘಟನೆಗಳು ನಡೆದವು ಎಂದು ಹೊಟೆಲ್ ಮಾಲಿಕನೆಂದ. ದುಡ್ಡಿನ ಅಭಾವವಿದ್ದ ಗಂಡಸರು, ಹೆಂಗಳೆಯರು ಚಹದಂಗಡಿಗೆ ದಾಳಿಯಿಟ್ಟರೆ, ದುಡ್ಡಿದ್ದವರು ಸೆರೆಯಂಗಡಿಗೆ ದಾಳಿಯಿಟ್ಟರು.

ಪಿಪರಿಯಾ ಚಿಕ್ಕ ಊರು. ಮುಂಬೈ - ಹೌರಾ ಮುಖ್ಯ ರೇಲುಮಾರ್ಗ ಇಲ್ಲಿಂದ ಹಾದು ಹೋಗುವದರಿಂದ ಇಷ್ಟಾದರೂ ಮಹತ್ವ ಬಂದಿದೆ. ಅದರಂತೆ ಮದ್ರಾಸ್ - ದಿಲ್ಲಿ ರೇಲಿನಲ್ಲಿ ಪಯಣಿಸುವವರು ಇಟಾರಸಿಯಲ್ಲಿ ಇಳಿದು ಅಲ್ಪ ಸಮಯದಲ್ಲೇ ಇಲ್ಲಿಗೆ ತಲುಪಬಹುದು. ರೇಲ್ವೆ ಮಾರ್ಗ ಊರಿನ ಹೃದಯ ಸ್ಥಾನದಿಂದ ಹಾದು ಹೋಗುವದರಿಂದ ಮುಂಬಯಿಯ ದಾದರ, ಜೋಗೇಶ್ವರಿ, ಮುಲುಂಡಗಳಂತೆ ಊರು ಇಬ್ಭಾಗವಾಗಿದೆ. ವಾಹನ ನಿಲ್ದಾಣ, ಚಲಚ್ಚಿತ್ರಮಂದಿರ, ನಗರ ಪಾಲಿಕೆಗಳು ಊರಿನ ದಕ್ಷಿಣಕ್ಕೆ ಇದ್ದರೆ, ಹೆಚ್ಚಿನ ವ್ಯಾಪಾರಿ ಅಂಗಡಿಗಳು, ವಸತಿಗಳು ಉತ್ತರಕ್ಕೆ ಇವೆ. ಇಲ್ಲಿ ವ್ಯಾಪಾರಿಗಳು, ಜೈನರು ಬೀಡು ಬಿಟ್ಟಿದ್ದಾರೆ. ಅಂತೆಯೇ ಕತ್ತಲಾಗುತ್ತಿದ್ದಂತೆ ದೇವಸ್ಥಾನಕ್ಕೆ ಹೊರಟವರು ಇಲ್ಲವೇ ಹೊಳೆದಂಡೆಗೆ ಹೊರಟವರು ಕಾಣಸಿಗುತ್ತಾರೆ. ಇಲ್ಲಿ

ಹರಿಯುವ ಸಣ್ಣ ಹೊಳೆಯಲ್ಲಿ ಮಳೆಯ ನೀರು ತುಂಬಿದಾಗ, ಅದೇ ಮಹಾನದಿ ಎಂಬಂತೆ ಜನರು ಈಜಾಡುವರು. ಬಯಲು ಪ್ರದೇಶದವರಿಗೆ ಶಿವನ ಸಮುದ್ರವೇ ಮಹಾಸಾಗರ ಅನಿಸಿದಂತೆ ಹೆಚ್ಚಿನವರು ಚಾಳಿನ ಮನೆಗಳಲ್ಲಿಯೇ ವಾಸಿಸುತ್ತಾರೆ. ಅಂತೆಯೇ ಸದಾಕಾಲ ಒಣ ಜಗಳ, ವಾಗ್ಯುದ್ಧಗಳು ಎಲ್ಲೆಡೆ ಕೇಳಿ ಬರುತ್ತವೆ. ಹೆಚ್ಚಿನ ನಿವಾಸಿಗಳು ನಾರುವ ಕಕ್ಕಸುಗಳ ಬದಲಾಗಿ ಬಯಲನ್ನೇ ತಮ್ಮ ಪ್ರಾತರ್ವಿಧಿಗಾಗಿ ಬಳಸಿಕೊಳ್ಳುತ್ತಾರೆ. ಮಕ್ಕಳೆಲ್ಲ ತಮ್ಮ ತಮ್ಮ ಮನೆಗಳ ಮುಂದೆ ಜೇಡಿ ಮಣ್ಣನ್ನು ಬಳಸಿ ವಿವಿಧ ಕಲಾಕೃತಿಗಳನ್ನು ನಿರ್ಮಿಸುವದು ಈ ಊರಿನ ವೈಶಿಷ್ಟ್ಯವಾಗಿ ಕಂಡಿತು.

ಊರಿನ ಎರಡು ಮೂರು ಕಡೆಗಳಲ್ಲಿ ಬೃಹತ್ ಪ್ರಮಾಣದ ಗಣಪನ ವಿಗ್ರಹಗಳನ್ನು ರಚಿಸುವದರಲ್ಲಿ ತೊಡಗಿದ್ದರು. ರಾಕ್ಷಸನನ್ನು ಸಂಹರಿಸುವ ಗಣೇಶ, ಶಿವ - ಪಾರ್ವತಿಯರೊಡನೆ ಇದ್ದ ವಿನಾಯಕ, ದೊಡ್ಡ ಇಲಿಯ ಮೇಲೇರಿ ಕುಳಿತ ಪುಟಾಣಿ ಗಣಪ, ಮುಂತಾದವು ಆಕರ್ಷಕವಾಗಿದ್ದವು. ಇವುಗಳನ್ನೆಲ್ಲ ಕೈಯಿಂದಲೇ ಕಲಾತ್ಮಕವಾಗಿ ನಿರ್ಮಿಸಿದ್ದಲ್ಲದೇ ಒಂದರ ಹಾಗೆ ಇನ್ನೊಂದಿರಲಿಲ್ಲ. ಆದರೆ ಅವರು ವಿಗ್ರಹಗಳನ್ನು ತಯಾರಿಸುವ ರೀತಿಯನ್ನು ವೀಕ್ಷಿಸುತ್ತಿದ್ದಂತೆ ಬಂಗಾಲಿಗಳು ಲಕ್ಷ್ಮೀ, ಸರಸ್ವತಿ, ದುರ್ಗೆ, ಕಾಳಿಯರ ವಿಗ್ರಹಗಳನ್ನು ನಿರ್ಮಿಸುವ ವಿಧಾನಗಳು ನೆನಪಿಗೆ ಬಂದವು. ಒಳಗೆ ಹುಲ್ಲು ಸೇರಿಸಿ, ಮಣ್ಣಿನ ಟೊಳ್ಳು ವಿಗ್ರಹ ಮಾಡಿ ಅಂಗಾಂಗಗಳಿಗೆಲ್ಲ ರಬ್ಬಾದ ಕಾಗದ - ಬಟ್ಟೆಗಳನ್ನು ಜೋಡಿಸಿ, ಹೊರರೂಪವನ್ನು ಅತ್ಯಾಕರ್ಷಕವಾಗಿಸುವದು ಬಂಗಾಲಿಗಳ ವೈಶಿಷ್ಟ್ಯ. ಅದನ್ನು ಇವರು ಹೇಗೆ ಕರಗತ ಮಾಡಿಕೊಂಡರು? ಎಂದು ತಲೆ ಕೆರೆದುಕೊಳ್ಳುತ್ತಿರುವಾಗ, ಅವರು ತಮ್ಮತಮ್ಮಲ್ಲಿ ಬಂಗಾಲಿಯಲ್ಲಿ ಮಾತನಾಡುವದು ಕೇಳಿಸಿತು. ಅವರು ಇಲ್ಲಿ ಹೇಗೆ ಬಂದರು? ಎಂದು ವಿಚಾರಿಸಿದಾಗ ಪ್ರತಿವರ್ಷವೂ ಅವರು ಬಂಗಾಲದಿಂದ ಇಲ್ಲಿಗೆ ಬಂದು ಗಣಪನ ವಿಗ್ರಹಗಳನ್ನು ರಚಿಸಿ ಸ್ಥಾನೀಯರಿಗೆ ಮಾರುವದು ತಲೆಮಾರುಗಳಿಂದ ನಡೆದು ಬಂದ ಪದ್ಧತಿ ಎಂದು ವಿವರಿಸಿದರು. ಇದರಂತೆ ಅವರು ಇನ್ನಿತರ ವಿಗ್ರಹಗಳನ್ನೂ ಮಾಡುತ್ತಾರಂತೆ. ಸಂಜೆಯಾಯಿತೆಂದರೆ ಊರ ಹುಡುಗರು ದಾರಿಹೋಕರಿಗೆ ಮಂಗಳಾರತಿ ಬೆಳಗಿ ಅವರಿಂದ ಹತ್ತು ಪೈಸೆ ಪಡೆದು ಆನಂದಿಸುತ್ತಾರೆ. ಇಲ್ಲಿ ರಿಕ್ಷಾ, ಎತ್ತಿನ ಗಾಡಿಗಳು ಕಡಿಮೆ ಇದ್ದುದರಿಂದಲೋ ಏನೋ, ನಾಲ್ಕು ಸಾಯಕಲ್ ಗಾಲಿಗಳನ್ನು ಜೋಡಿಸಿದ ಕೈಗಾಡಿಗಳು ತುಂಬ ಪ್ರಚಾರದಲ್ಲಿವೆ. ಕಟ್ಟಿಗೆ ಒಯ್ಯುವದಿರಲಿ, ಕಲ್ಲುಗಳನ್ನು ಸಾಗಿಸುವದಿರಲಿ, ಈ ಕೈಗಾಡಿಗಳನ್ನೇ ಬಳಸುತ್ತಾರೆ.

ಮಧ್ಯಪ್ರದೇಶದ ರಸ್ತೆಸಾರಿಗೆ ವ್ಯವಸ್ಥೆ ತುಂಬ ಕಳಪೆಯಾಗಿದೆ. ಅಲ್ಲಿ ಯಾರನ್ನೂ ವಿಚಾರಿಸಬೇಕೆಂದು ತಿಳಿಯದು. ಸಾಲದ್ದಕ್ಕೆ ವಿಪರೀತ ಮಳೆಯಾಗಿದ್ದರಿಂದ ಅನೇಕ ಕಡೆ ರಸ್ತೆಗಳೇ ಮಾಯವಾಗಿ ಬಿಟ್ಟದ್ದವು! ಆದ್ದರಿಂದ ಹೋಗಬೇಕಾದ ಊರಿಗೆ ಬಸ್ಸಿಗಾಗಿ ಕಾಯುತ್ತ ನಿಲ್ಲುವದಕ್ಕಿಂತ ಬಸ್ ಸಿಕ್ಕ ಊರಿಗೆ ಹೋಗುವದೇ ಜಾಣತನ ಅನಿಸಿತು. ಅಲೆಮಾರಿಯಂತೆ ಅಲೆಯಲು ಬಂದವನಿಗೆ ಈ ಸೂತ್ರವೇ ಚೆನ್ನಾಗಿರುತ್ತದೆ ಎಂದೆನಿಸಿತು. ತಾಮಿಯಾದಿಂದ ಒಂದು ಬಸ್ಸು ಬಂದು ನಿಂತಿತು. ಅಂದು ಸಾವನ್ (ಶ್ರಾವಣ)ದ ಸಂತೆ ಸೇರಲಿದ್ದರಿಂದ ಪ್ರಯಾಣಿಕರಿಂದ ಬಸ್ಸು ಕಿಕ್ಕಿರಿದು ತುಂಬಿತು. ಉಸಿರಾಟವೂ ಕಷ್ಟಕರವಾಗಿದ್ದಾಗ, ಒಂದು ಗಂಟೆ ಕಾದರೂ ಬಸ್ಸು ಮಿಸುಕಾಡಲಿಲ್ಲ. ಕೊನೆಗೊಮ್ಮೆ ಡುರು ಡುರು ಗುಟುರು ಹಾಕುತ್ತ ಬುಸುಗುಡುತ್ತ, ತೇಕುತ್ತ ಹೊಗೆ ಕಾರುತ್ತ ಮಿಸುಕಾಡಿ ಹೊರಟು ನಿಂತಾಗ, ಯಾವುದೋ ಕಾಳಗ ಗೆದ್ದಷ್ಟು ಸಂತೋಷವಾಗಿತ್ತು. ಒಳಗೆ ಕಾಲಿಡಲೂ ಜಾಗವಿಲ್ಲದಿದ್ದರೂ, ಪ್ರತಿ ಫರ್ಲಾಂಗಿಗೆ ಸಾಮಾನಿನೊಂದಿಗೆ ಹತ್ತುವ ವ್ಯಾಪಾರಿಗಳನ್ನು

ತೆರೆದ ಕೈಗಳಿಂದ ಕಂಡಕ್ಟರನು ಸ್ವಾಗತಿಸುತ್ತಲೇ ಇದ್ದ. ತಾಮಿಯಾದಲ್ಲಿ ಬಂದು ಇಳಿಯುವಷ್ಟರಲ್ಲಿ ಉಸಿರು ಕಟ್ಟಿದಂತಾಗಿ ಹತ್ತಿರದ ಸಂತೆಯ ಹೊಟೇಲಿನಲ್ಲಿ ಸುಡುತ್ತಿದ್ದ ಪಕೋಡ ಕೊಂಡು ತಿಂದು. ಹಸಿ ಶುಂಠಿ ಸೇರಿಸಿದ ಚಹಾ ಸುರಿಯುತ್ತಿದ್ದಂತೆ ಹುರುಪು ಮರುಕಳಿಸಿತು. ಅಪರಿಚಿತನು ಯಾರು. ಯಾವ ಊರಿನವನು. ಬಂದ ಉದ್ದೇಶವೇನು ಎಂದು ತಿಳಿದುಕೊಂಡ ಹೊಟೇಲ ಮಾಲಿಕನು ಸಮೀಪದಲ್ಲೇ"ಪಾತಾಳ ಖೋಲ್" ಎಂಬ ವಿಸ್ಮಯಕಾರಿ ತಾಣವಿದೆ. ಅದನ್ನು ನೋಡಲು ವಿದೇಶಿ ಪ್ರವಾಸಿಗಳೂ ಬಂದು ಹೋಗುತ್ತಾರೆ. ವಿಶ್ವದ ಅದ್ಭುತಗಳಲ್ಲಿ ಅದೂ ಒಂದಂತೆ! ಆದ್ದರಿಂದ ನೀವು ನೋಡಿಬನ್ನಿ. ಸಾಮಾನಿನ ಜವಾಬ್ದಾರಿ ನಾನು ಹೊರುತ್ತೇನೆ ಎಂದು ಹೇಳಿದ.

ತಿಂದುಂಡು. ಕಟ್ಟುಮಸ್ತಾಗಿ ಬೆಳೆದು. ಕೊರಳಿಗೆ ಕ್ಯಾಮರಾ ತೂಗು ಹಾಕಿ ಆದಿವಾಸಿಗಳ ವಾಸಸ್ಥಾನಗಳಲ್ಲಿ ಅಲೆಯುವವನ ಬಗ್ಗೆ ಪೋಲಿಸರಿಗೆ ಗುಮಾನಿ ಬಾರದೇ ಇದ್ದೀತೆ? ಬಿಟ್ಟ ಬೀಡಾ ಜಗಿಯುತ್ತ ಪಾನ ಅಂಗಡಿಯಲ್ಲಿ ವಿರಮಿಸುತ್ತಿದ್ದ ಫೌಜದಾರನು ಈ ಪರಕೀಯನಿಂದ ವಿವರಗಳನ್ನು ಪಡೆಯಲು ತನ್ನ ಪೇದೆಯನ್ನು ಅಟ್ಟಿದ. ಆದಿವಾಸಿಗಳ ಕುರಿತಾಗಿ ಒಂದು ಗ್ರಂಥ ರಚನೆಗಾಗಿ ಕರ್ನಾಟಕ ಸರಕಾರ ಕಳುಹಿಸಿದೆ ಎಂದು ಕೊಟ್ಟ ವಿವರಣೆ. ಅಧಿಕಾರಿಗೆ ಅರ್ಥವಾಗಲಿಲ್ಲ. ಮಧ್ಯಪ್ರದೇಶದ ರಾಜಧಾನಿ. ಭೋಪಾಲ. ಎಲ್ಲಿದೆ? ಎಂದು ತಿಳಿಯದಿರುವಾಗ ಕರ್ನಾಟಕ ಎಂದರೇನು ಅರ್ಥವಾಗಬೇಕು? ಪುಸ್ತಕದ ಹೆಸರನ್ನು ಕೇಳಿಕೊಂಡು ಬರಲು ತಿರುಗಿ ಪೇದೆಯನ್ನು ಓಡಿಸಿದ. 'ಆದಿವಾಸಿ ಸಮಾಜದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ' ಎಂದಾಗ ಇದಾವ ಸಂಸ್ಕೃತ ಮಂತ್ರವೆಂದು ಹೌಹಾರಿದ ಸಿಪಾಯಿ ತನ್ನ ಅಜ್ಞಾನವನ್ನು ಪ್ರದರ್ಶಿಸಲು ಮನಸ್ಸು ಮಾಡಲಿಲ್ಲ. ಅಂತೆಯೇ ಮುಂದೆ ಯಾರಿಂದಲೂ ಯಾವ ಕಿರುಕುಳವನ್ನೂ ಅನುಭವಿಸಬೇಕಾಗಿ ಬರಲಿಲ್ಲ!

ಪಾತಾಳ ಖೋಲದಲ್ಲಿ, ಭೂಮಾತೆ ಗೋಡೆಯಂತೆ ತಲೆ ಎತ್ತಿಕೊಂಡು. ಗಗನ ಮುಟ್ಟುವ ಯತ್ನ ಮಾಡಿರಬೇಕು ಎನಿಸುವಂತೆ ಪರ್ವತಾವಳಿಗಳ ರಚನೆಯಾಗಿದೆ. ಅದರ ತಗ್ಗಿನ ನೆತ್ತಿಯ ಮೇಲೆ ಆದಿವಾಸಿಗಳು ಬೀಡು ಬಿಟ್ಟಿದ್ದಾರೆ. ಅದರ ಶಿಖರ ತಲುಪಬೇಕಾದರೆ ಪಾವಟಣಿಗೆಯಂಥ ಕಾಲುದಾರಿ ತುಳಿಯದೇ ಬೇರೆ ಮಾರ್ಗವೇ ಇಲ್ಲ. ಗಿಡಗಂಟಿ ಬೆಳೆದು ನಿಂತು. ಎಲ್ಲೆಡೆ ಕೆಸರು ತಾಂಡವವಾಡುತ್ತಿದ್ದರಿಂದ ಮೇಲೇರುವ ಸಾಹಸಕ್ಕೆ ಹೋಗಲೇ ಇಲ್ಲ. ಬದಲಿಗೆ ಸಂತೆಗೆ ಹೊರಟು ನಿಂತ ಆದಿವಾಸಿಗಳ ಛಾಯಾಗ್ರಹಣವೇ ಕ್ಷೇಮಕಾರಿಯೆನಿಸಿತು. ಸಂತೆಯ ಸ್ಥಳ ಕಾಲು ನಡಿಗೆಯಲ್ಲಿ ಸಾಕಷ್ಟು ದೂರದ ಪ್ರಯಾಣವಾದ್ದರಿಂದ ಅವರು ಮಕ್ಕಳು - ಮರಿಗಳನ್ನು ಕರೆದು ತರುವ ಗೋಜಿಗೆ ಹೋಗಲಿಲ್ಲ. ಹಸಿರು. ನೀಲಿ. ಜಾಂಬಳಿ. ಕೆಂಪು ವರ್ಣದ ರಬ್ಬುರಬ್ಬಾದ ಸೀರೆಗಳನ್ನು ಉಟ್ಟ ಸ್ತ್ರೀಯರು ದೂರದಿಂದಲೇ ಗೋಚರಿಸುತ್ತಿದ್ದುದರಿಂದ ಕ್ಯಾಮರಾ ಸಜ್ಜುಗೊಳಿಸಲು ಅನುಕೂಲವಾಗುತ್ತಿತ್ತು. ಸಂತೆಯ ಕೊಡು-ಕೊಳಿಯ ಸಲುವಾಗಿ ಅವರು ತಮ್ಮಲ್ಲಿದ್ದ ಸಾಮಗ್ರಿಗಳೊಂದಿಗೆ ಹೊರಟಿದ್ದರು. ಕುಕ್ಕುಟ. ಹೇಂಟೆ. ಮೊಟ್ಟೆಗಳು ಹೆಚ್ಚಿನವರ ಕೈಯಲ್ಲಿದ್ದವು. ಕೆಲವರು ಈಚಲ ಪರ್ಣಗಳಿಂದ ರಚಿಸಿದ ಚಾಪೆ. ಪೊರಕೆಗಳನ್ನು ಹಿಡಿದಿದ್ದರೆ. ಇನ್ನೂ ಕೆಲವರು ಬಂಗಾರದಂತೆ ಹೊಳೆಯುವ ಹಿತ್ತಾಳೆಯ ತಂಬಿಗೆಯಲ್ಲಿ ಘಮಘಮಿಸುವ ತುಪ್ಪದೊಂದಿಗೆ ಹೊರಟಿದ್ದರು. ಹೆಂಗಳೆಯರು ಗುಂಪಾಗಿ ಹೊರಟರೆ. ಒಂಟಿಗಂಡಸರು ದೊಣ್ಣೆಯೊಂದಿಗೆ ಹೊರಟಿದ್ದರು. ಹಿಂದೆ - ಮುಂದೆ ಹೋಗದೇ ನಿಂತಲ್ಲಿಯೇ ನಿಂತಿದ್ದ ಕ್ಯಾಮರಾಧಾರಿಯ ಬಗ್ಗೆ ಅವರಿಗೆಲ್ಲ ಏನೋ ಕುತೂಹಲ. ಆದರೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳದೇ ತಮ್ಮ ಪಾಲಿಗೆ ತಾವು ಹೊರಟು ಹೋಗುತ್ತಿದ್ದರು.

ಛಾಯಾಗ್ರಹಣವೂ ಆಯಿತು. ಸಂತೆಯೂ ಮುಗಿಯಿತು. ಮುಂದೆ ಎಲ್ಲಿ ಹೋಗುವದು? ಎಂಬ ಪ್ರಶ್ನೆ ಧುತ್ ಎಂದು ತಲೆ ಎತ್ತಿ ನಿಂತಿತು. ಕಾಲ್ನಡಿಗೆಯ ಆದಿವಾಸಿಗಳು ತಮ್ಮ ಮನೆಗಳನ್ನಾಗಲೇ ಸೇರಿದರೂ ಸಾರ್ವಜನಿಕ ಸಾರಿಗೆಗೆ ಕಟ್ಟು ಬಿದ್ದವರು ಬಸ್ ನಿಲ್ದಾಣದಲ್ಲಿಯೇ ಕೊಳೆಯುತ್ತಿದ್ದರು. ಕೊನೆಗೊಮ್ಮೆ ಎಲ್ಲಿಂದಲೋ ಹೊರಟು ಎಲ್ಲಿಗೋ ಹೋಗಲಿದ್ದ ಬಸ್ ಬಂದಿತು. ಅದು ಯಾವ ಊರಿಗೆ ಹೋಗುತ್ತದೆಂದು ಕೇಳುವ ಗೋಜಿಗೆ ಹೋಗದೇ ಶಕ್ತಿ ಪ್ರಯೋಗದಿಂದ ಒಳಸೇರಿದ್ದಾಯಿತು. ಕಂಡಕ್ಟರನು, ಯಾವ ಊರಿಗೆ? ಎಂದು ಕೇಳಿದಾಗ, ಕಟ್ಟಕಡೆಯ ಊರಿಗೆ ಎಂದು ಉತ್ತರಿಸಿದಾಗ ಆತನು ಛಿಂದವಾಡಾದ ಟಿಕೀಟು ಕೊಟ್ಟದ್ದರಿಂದ ನೆಮ್ಮದಿಯೇ ಆಯಿತು. ಆದರೆ ತಾಮಿಯಾದಿಂದ ಕೇವಲ ಇಪ್ಪತ್ತೆಂಟು ಮೈಲಿ ದೂರ ಇರುವ ಛಿಂದವಾಡಕ್ಕೆ ಡ್ರಾಯವರನು ನಡುರಾತ್ರೆಗೆ ತಲುಪಿಸಿದನೆಂದರೆ ಅವನ ಕಾರ್ಯದಕ್ಷತೆಯ ಅರಿವಾಗದೇ ಇರದು. ಆ ಅವೇಳೆಯಲ್ಲಿ ಎಲ್ಲಿಯೂ ಊಟ ಸಿಗುವ ಸಾಧ್ಯತೆಯಿರಲಿಲ್ಲ. ಅಲ್ಲದೇ ಬೇರಾರಿಗೂ ತೊಂದರೆ ಕೊಡುವ ಮನಸ್ಸು ಇರಲಿಲ್ಲ. ಹೀಗಾಗಿ ಧರ್ಮಶಾಲೆಯಂತಿದ್ದ ಹೊಟೇಲೊಂದರಲ್ಲಿ ಸಾರ್ವಜನಿಕರಿಗಾಗಿದ್ದ ಹಾಸಿಗೆಯನ್ನು ಬಾಡಿಗೆಗೆ ಪಡೆದು, ಗುಂಗಾಡು ತಿಗಣೆಗಳ ಕಾಟದಿಂದ ಸಂರಕ್ಷಿಸಿಕೊಂಡು, ನಿದ್ರಾದೇವಿಯನ್ನು ಬರಮಾಡಿಕೊಳ್ಳಲು ಸಾಕಷ್ಟು ಪ್ರಯತ್ನಿಸಬೇಕಾಯಿತು.

17 ಆದಿವಾಸಿಗಳಲ್ಲಿ ಹಚ್ಚೆ



ಇಂದಿಗೂ ಜೀವನದಲ್ಲಿ ಯಾವುದೇ ರೀತಿಯ ಕೃತಿಮತೆ ಇಲ್ಲದೇ ನಿಸರ್ಗದ ಮಕ್ಕಳಾಗಿ ಜೀವಿಸುವವರೆಂದರೆ ಆದಿವಾಸಿಗಳು ಮಾತ್ರ. ಮಧ್ಯ ಪ್ರದೇಶದ ಬಸ್ತರ ಜಿಲ್ಲೆಯ ಆದಿವಾಸಿಗಳಂತೂ ಆದಿಮಾನವನನ್ನು ಹೋಲುವ ಜೀವನ ನಡೆಸುತ್ತಿದ್ದಾರೆ. ಶತಮಾನಗಳಿಂದ ಅವರತ್ತ ಲಕ್ಷ್ಯ ಕೊಡದ ಸಮಾಜ, ಸರಕಾರ ಇಂದು ಸುಧಾರಕರಾಗಿ ಅವರನ್ನು ನವ ನಾಗರಿಕರನ್ನಾಗಿ ಮಾಡಲು ಹೊರಟಿದೆ. ಅವರ ಜೀವನದ ಮೌಲ್ಯಗಳು ನಮಗಿಂತ ಭಿನ್ನವಾಗಿ, ಕೆಲವು ಸಲ ತೀರ ವಿರೋಧವಾಗಿರುವಾಗ, ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ನಮ್ಮ ಪ್ರತಿಬಿಂಬ ಅವರಲ್ಲಿ ಮೂಡಿಸಲು ಹೊರಟಿದ್ದೇವೆ. ಹಣ ಕೊಟ್ಟು ಚಲನಚಿತ್ರಗಳಲ್ಲಿ, ಹೊಟೇಲುಗಳಲ್ಲಿ, ನಗ್ನತೆ - ಅರೆ ನಗ್ನತೆ ನೋಡಿ ಸಂತೋಷ ಪಡುವ ನಮಗೆ ಆದಿವಾಸಿಗಳ ಮಿತ ಬಟ್ಟೆ ಸಹಿಸದಾಗಿದೆ. ಅಂತೆಯೇ ನಿಸರ್ಗದ ಮಡಿಲಲ್ಲಿ ರೂಪುಗೊಂಡ ಅವರ ಸರ್ವಾಂಗ ಸುಂದರ ದೇಹವನ್ನು ಒರಟು ಬಟ್ಟೆಯಲ್ಲಿ ಮುಚ್ಚುವ ಯತ್ನ ನಡೆದಿದೆ. ಅವರ ಅರೆ ನಗ್ನ ದೇಹ ಕಾಮುಕತೆ ಕೆರಳಿಸುತ್ತದೆ ಎಂದು ಸುಸಂಸ್ಕೃತರಿಗೆ ಅನಿಸಿದರೂ ಅವರ ಪರಿಸರದಲ್ಲಿ ಅದಕ್ಕೂ ಹೆಚ್ಚು ಬಟ್ಟೆ ಬೇಕೇ ಆಗಿಲ್ಲ. ಆ ನಿರ್ಜನ ಕಾಡಿನಲ್ಲಿ ಇನ್ನಿತರ ಪ್ರಾಣಿಗಳಂತೆ ಮಾನವನೂ ನಗ್ನವಾಗಿ ಅಲೆದರೆ ನೋಡುವವರು ಯಾರೂ ಇಲ್ಲ. ಅಂತೆಯೇ ಕೆಲವು ಗಿರಿಜನರ ಗುಂಪುಗಳಲ್ಲಿ ಪತಿ - ಪತ್ನಿಯ ಸಂಭೋಗ ನಿಸರ್ಗದ ಆಸರೆಯಲ್ಲಿಯೇ ನಡೆಯುತ್ತದೆ.

ಇಂಥವರನ್ನು ಬಟ್ಟೆಯಲ್ಲಿ ಮುಚ್ಚಿ ಹಾಕಿದರೆ ಅವರ ಅಂಗಸೌಂದರ್ಯದ ಜೊತೆ ಕಲಾಪೂರ್ಣವಾಗಿದ್ದ ಆಭರಣಗಳು ಮತ್ತು ಹಚ್ಚೆಯ ಕೆಲಸ ಅಗೋಚರವಾಗಿಬಿಡುವುವು.

ಹುಲಿ, ಚಿಗರೆಗಳ ಆಕರ್ಷಕ ಮೈಬಣ್ಣ ನೋಡಿ ಆದಿಮಾನವನಿಗೆ ತನ್ನ ಅನಾಕರ್ಷಕ ದೇಹದ ಮೇಲೆ ಜಿಗುಪ್ಸೆ ಹುಟ್ಟಿರಬೇಕು. ಅಂತೆಯೇ ಬಣ್ಣ ಬಣ್ಣದ ಮಣ್ಣುಗಳನ್ನು ಮೈಗೆ ಮೆತ್ತಿಕೊಂಡಿರಬೇಕು. ಹೀಗೆ ಮಾಡುವುದರಿಂದ ತನಗೆ ಬೇಟೆಯಾಡುವುದರಲ್ಲಿಯು ಸಹಾಯವಾಗುತ್ತದೆ ಎಂದು ಅನುಭವಕ್ಕೆ ಬಂದಿದ್ದರಿಂದ ಬಣ್ಣಗಳನ್ನು ಕಲಾತ್ಮಕವಾಗಿ ಜೋಡಿಸುವುದನ್ನು ಕಲಿತನು. ಕ್ರಮೇಣ ತನ್ನ ಪರಿಸರದ ವಸ್ತುಗಳನ್ನು ಬಿಡಿಸಲಾರಂಭಿಸಿರಬೇಕು ನಂತರ ಇಂತಹ ಚಿತ್ರಗಳಿಲ್ಲದೇ ತನಗೆ ಬೇಟೆ ಸಿಗದು. ಕ್ರೂರ ಪ್ರಾಣಿಗಳಿಂದ ರಕ್ಷಣೆ ಸಿಗದು ಎಂದು ಅರಿತಿದ್ದರಿಂದ ಅವುಗಳನ್ನು ಶಾಶ್ವತವಾಗಿ ತನ್ನ ಶರೀರದ ಮೇಲೆ ಬಿಡಿಸಲು ಯತ್ನಿಸಿರಬೇಕು. ಮೊದಲನೆಯ ಹಚ್ಚೆ ಸಸ್ಯ ಬಣ್ಣ ಮತ್ತು ಮುಳ್ಳಿನ ಸಹಾಯದಿಂದ ನಿರ್ಮಾಣವಾಗಿರಬೇಕು ಇಂದಿಗೂ ಅಂತಹದೇ ಪದ್ಧತಿ ಬಳಕೆಯಲ್ಲಿ ಇದೆ. ಹಚ್ಚೆ ಬಿಡಿಸಿಕೊಳ್ಳುವುದು ಧಾರ್ಮಿಕವೆಂದು ಪರಿಗಣಿಸಲಾರಂಭಿಸಿದ್ದರಿಂದ ಅವನ್ನು ಹಾಕುವ ತಜ್ಞರು ಬೆಳೆದುಕೊಂಡರು. ಅವರು ಆದಿವಾಸಿ ತಂಡದ ಪರಿಪಾಠ ಮತ್ತು ಅವರ ಕಲಾ ಅಭಿರುಚಿಗನುಸಾರವಾಗಿ ಹಚ್ಚೆ ಬಿಡಿಸುತ್ತಾರೆ.

ಹಚ್ಚೆ ಧರಿಸುವವರು ಸರ್ವ ದೇಶದಲ್ಲಿ, ಸರ್ವ ಜನಾಂಗದಲ್ಲಿ ಪ್ರಚಲಿತವಿದ್ದುದರಿಂದ ನಮ್ಮ ಪೂರ್ವಜರೆಲ್ಲ ಮೈತುಂಬ ಹಚ್ಚೆ ಬಿಡಿಸಿಕೊಳ್ಳುತ್ತಿದ್ದರು ಎಂದು ಅನಿಸುತ್ತದೆ. ಹಿಂದೂಗಳು ತಮ್ಮ ಇಷ್ಟದೇವತೆ ಬಿಡಿಸಿಕೊಂಡರೆ ಕ್ರಿಶ್ಚಿಯನ್ನರು 'ಕ್ರಾಸ್' ಧರಿಸುತ್ತಾರೆ. ಪಾಶ್ಚಿಮಾತ್ಯರು ತಮ್ಮ ಹೆಸರು ಬರೆಯಿಸಿಕೊಂಡರೆ, ಆಫ್ರಿಕನ್ನರು ಮೈಯನ್ನೆಲ್ಲ ಅದರಿಂದಲೇ ತುಂಬಿಸಿಕೊಂಡಿರುತ್ತಾರೆ ಅತ್ಯಾಧುನಿಕರೆನಿಸಿಕೊಂಡವರು ಕೂಡ ಹಣೆ, ಗಲ್ಲಗಳ ಮೇಲೆ ಆಕರ್ಷಣೆಯ ಬಿಂದು ಹಾಕಿಕೊಂಡಿರುತ್ತಾರೆ. ಆದಿವಾಸಿಗಳು ಎಲ್ಲ ಹಚ್ಚೆಯನ್ನು ಏಕಕಾಲದಲ್ಲಿ ಬಿಡಿಸಿಕೊಳ್ಳದೆ ಅನುಕೂಲವಾದಾಗ ಅದನ್ನು ಜೋಡಿಸುತ್ತ ಹೋಗುತ್ತಾರೆ. ನಾಮಕರಣ ಮಾಡುವಾಗ ಋತುಮತಿಯಾದಾಗ ಹೀಗೆ ವಿವಿಧ ಕಾಲಗಳಲ್ಲಿ ಬಿಡಿಸಿಕೊಳ್ಳುವ ಹಚ್ಚೆಗಳಿವೆ. ವಾರಕ್ಕೊಮ್ಮೆ ಸೇರುವ ಸಂತೆಗಳಲ್ಲಿ ಹಜಾಮರಂತೆ ಹಚ್ಚೆಯವರೂ ಬಂದಿರುತ್ತಾರೆ. ಮರದ ನೆರಳಲ್ಲಿ ಕೂತು ತಮಗೆ ಬೇಕಾದ ಚಿತ್ರ ಬಿಡಿಸಿಕೊಳ್ಳುವುದು ಪದ್ಧತಿ. ಜಾತ್ರೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಚ್ಚೆಯ ಕೆಲಸ ನಡೆಯುತ್ತದೆ. ಹಬ್ಬ, ಹರಿದಿನ, ಮದುವೆಯ ಕಾಲದಲ್ಲಿ ಹಚ್ಚೆಯವರೇ ಹಳ್ಳಿಗೆ ಬಂದು ತಮ್ಮ ಕೆಲಸಗಳಿಗಾಗಿ ಕಾಳು-ಕಡ್ಡಿ, ಎಣ್ಣೆಗಳನ್ನು ಪಡೆಯುತ್ತಾರೆ.

ಚರ್ಮದಲ್ಲಿ ಅಡಕವಾಗಿರುವ ಬಣ್ಣದ ಕಣಗಳು ಸರ್ವ ಪ್ರಾಣಿಗಳಲ್ಲಿ ಮೈಬಣ್ಣಕ್ಕೆ ಕಾರಣ ಪಾರದರ್ಶಕ ಪ್ಲಾಸ್ಟಿಕ್ ಕೊಳವೆಯಲ್ಲಿ ವಿವಿಧ ಬಣ್ಣಗಳನ್ನು ತುಂಬಿದರೆ ಕೊಳವೆಗೂ ಅದೇ ಬಣ್ಣ ಬರುವಂತೆ ಈ ಬಣ್ಣ ಕಣಗಳು ಮೈಬಣ್ಣ ನಿರ್ಧರಿಸುತ್ತವೆ. ಕೂದಲು, ಗರಿಗಳಿಗೂ ಇದೇ ರೀತಿಯಿಂದ ಬಣ್ಣ ಬಂದಿರುತ್ತದೆ. ಕೆಲವರಲ್ಲಿ ಅನುವಂಶಿಕವಾಗಿ ರೋಗದಿಂದಾಗಿ ಈ ಬಣ್ಣ ಕಣಗಳು ಉತ್ಪನ್ನವಾಗುವುದೇ ಇಲ್ಲ. ಅಂತಹವರ ಚರ್ಮ, ಕೂದಲುಗಳೆಲ್ಲ ನಿರ್ವರ್ಣವಾಗಿರುತ್ತವೆ. ಹುಲಿ ಆಮೆ, ಕಾಗೆಗಳೆಲ್ಲ ಈ ವರ್ಣಕ್ಕೆ ಸೇರಿದವುಗಳು. ಮಾನವನಲ್ಲಿ ಬಣ್ಣ ಕಣಗಳು ಅಂತರಿಕ ಅವಯವಗಳನ್ನು ಸೂರ್ಯನ ಪ್ರಖರತೆಯಿಂದ ರಕ್ಷಿಸುತ್ತವೆ. ಅಂತೆಯೇ ಭೂಮಧ್ಯ ಪ್ರದೇಶದಲ್ಲಿ ಇರುವವರಲ್ಲಿ ಈ ಕಣಗಳು ಧ್ರುವದವರಿಗಿಂತ ಅಧಿಕ ಪ್ರಮಾಣದಲ್ಲಿ ಇರುತ್ತವೆ. ಇದೇ ಕಾರಣಕ್ಕಾಗಿ ಬಿಳಿಯರು ಸತತವಾಗಿ ಬಿಸಿಲಿನಲ್ಲಿ ಕೆಲಸ ಮಾಡಿದರೆ ಅವರೂ ಕಪ್ಪಾಗುತ್ತಾರೆ. ಅದೇ ಚರ್ಮದಲ್ಲಿ

ಬಣ್ಣದ ಕಣಗಳ ಅಭಾವವಿದ್ದವರಿಗೆ ಬಿಸಿಲಿನ ತಾಪ ಸಹಿಸಲಾಗುವುದಿಲ್ಲ. ನಿಸರ್ಗವನ್ನು ಅನುಸರಿಸಿ ಕೃತ್ರಿಮವಾಗಿ ಬಣ್ಣ ಕಣಗಳನ್ನು ಚರ್ಮದಲ್ಲಿ ಸೇರಿಸುವುದೇ ಹಚ್ಚೆ. ಸೂಜಿಯಂತಹ ಹರಿತವಾದ ಆಯುಧದಿಂದ ಚರ್ಮದಲ್ಲಿ ಛಿದ್ರಗಳನ್ನುಂಟುಮಾಡಿ ಬಣ್ಣ ಕಣಗಳನ್ನು ಒಳಗೆ ಸೇರಿಸುತ್ತಾರೆ. ನಂತರ ರೋಗಾಣುಗಳಿಂದ ಬಾಧೆಯಾಗದಂತೆ ಎಣ್ಣೆಯ ಲೇಪನ ಮಾಡುತ್ತಾರೆ. ಇಂದಿಗೂ ಸಸ್ಯಬಣ್ಣಗಳನ್ನೇ ಬಳಸುವುದರಿಂದ ಹಚ್ಚೆ ಹಸಿರು, ಇಲ್ಲವೇ ನೀಲಿ ಬಣ್ಣಕ್ಕಾಗಿರುತ್ತದೆ. ಅತ್ಯಾಧುನಿಕರು. ರಾಸಾಯನಿಕ ಬಣ್ಣ ಮತ್ತು ಯಂತ್ರಗಳನ್ನು ಹಚ್ಚೆ ಬಿಡಿಸಲು ಬಳಕೆಯಲ್ಲಿ ತಂದಿದ್ದಾರೆ. ವಂಶಪಾರಂಪರಿಕವಾಗಿ ಹಚ್ಚೆ ಹಾಕುವವರು ಹಾಡುತ್ತ ನೋವಿನ ತೀವ್ರತೆ ಕಡಿಮೆ ಮಾಡಲು ಯತ್ನಿಸಿದರೆ ಆಧುನಿಕರು ಸಂಪಾಗಿ ಹರಟೆಯಲ್ಲಿ ತೊಡಗಿರುತ್ತಾರೆ.

ಮೈಯನ್ನು ಹಚ್ಚೆಯಿಂದ ಅಲಂಕರಿಸುವ ಆದಿವಾಸಿಗಳು ತಮ್ಮ ಗುಡಿಸಿಲಿನ ಗೋಡೆಗಳನ್ನು ವಿವಿಧ ಚಿತ್ರಗಳಿಂದ ಅಲಂಕರಿಸುತ್ತಾರೆ. ಈ ಎರಡು ಕಲೆಯಲ್ಲಿ ಬಹಳ ಸ್ವಾಮ್ಯ ಕಂಡು ಬರುತ್ತದೆ. ಬಹುಶಃ ನಮ್ಮಲ್ಲಿ ರಂಗೋಲಿ ಹಾಕುವ ಪದ್ಧತಿ ಆದಿವಾಸಿಗಳ ರೂಢಿಯ ಅವಶೇಷಗಳಿರಬಹುದು. ಇದರಂತೆ ರಾಜಸ್ತಾನ ಮತ್ತು ಇನ್ನಿತರ ಕಡೆಗಳಲ್ಲಿ ಕೈ, ಕಾಲು, ಕಪೋಲಗಳನ್ನು ಮೆಂತೆಯಿಂದ ಅಲಂಕರಿಸುವದು ಹಚ್ಚೆಯ ಅವಶೇಷಗಳಿದ್ದಿರಬೇಕು. ಸೂಜಿಯ ಮೊನೆಗೆ ಹೆದರಿದವರು ಯಾರೋ ಈ ಉಪಾಯ ಹುಡುಕಿ ತೆಗೆದಿರಬೇಕು. ಆದರೆ ಇದು ಕೆಲಕಾಲ ಮಾತ್ರ ಇರುವುದರಿಂದ ಮೇಲಿಂದ ಮೇಲೆ ಮೆಂತೆ ನಕ್ಷೆ ಬಿಡಿಸುವ ತೊಂದರೆ ತೆಗೆದುಕೊಳ್ಳುತ್ತಲೇ ಇರಬೇಕಾಗುತ್ತದೆ. ಆದರೆ ಇದರಲ್ಲಿ ನಕ್ಷೆಗಳನ್ನು ಬದಲಿಸುತ್ತಿರಲು ಸಾಧ್ಯವಾಗುತ್ತದೆ.

ಕುಂಚ ಹಿಡಿದ ಕಲಾಕಾರನಂತೆ ಸೂಜಿ ಹಿಡಿದ ಹಚ್ಚೆಯವನು ಕೇವಲ ತನ್ನ ಉದರ ನಿರ್ವಹಣೆ ಮಾಡಿಕೊಳ್ಳಬಹುದು ಇಲ್ಲವೇ ಹೊಸ ಕಲೆಯನ್ನೇ ನಿರ್ಮಿಸಬಹುದು. ಇದು ಹಚ್ಚೆಯವನ ಪರಂಪರೆ. ಆಸಕ್ತಿ, ಕಲ್ಪನೆಯ ಮೇಲೆ ಅವಲಂಬಿಸಿರುತ್ತದೆ. ಪ್ರತಿಯೊಂದು ಆದಿವಾಸಿ ತಂಡದವರಿಗೆ ನಿರ್ದಿಷ್ಟವಾದ ರೀತಿಯಲ್ಲಿ ಹಚ್ಚೆ ಹಾಕುವುದರಿಂದ ಈ ಆಧಾರದ ಮೇಲೆಯೇ ಅವರು ಯಾವ ಗುಂಪಿಗೆ ಸೇರಿದವರು ಎಂದು ನಿರ್ಧರಿಸಬಹುದು. ಕೆಲವು ಸುಧಾರಕರೊಡನೆ ಸಂಪರ್ಕದಲ್ಲಿ ಬಂದ ಆದಿವಾಸಿಗಳು ಹಿಂದೂ ದೇವ ದೇವತೆಗಳ ಹಚ್ಚೆ ಹಾಕಿಕೊಳ್ಳುತ್ತಾರೆ. ಭಿಲಾಡೆವಾದ ಕಬ್ಬಿಣದ ಅದರಿನ ಖಣಿಗಳಲ್ಲಿ ಕೆಲಸ ಮಾಡುವವರು ನಾಗರಿಕರ ಸಹವಾಸದಿಂದಾಗಿ ಅಶ್ಲೀಲ ಚಿತ್ರಗಳನ್ನು ಅಭಿಮಾನದಿಂದ ಧರಿಸುತ್ತಾರೆ.

ಹಚ್ಚೆಯ ನಕ್ಷೆಗಳು ಬಿಂದು ಮತ್ತು ರೇಖೆಗಳ ಜೋಡಣೆಯಿಂದಲೇ ರಚಿಸಿರಲಾಗುತ್ತದೆ. ಬಿಂದುಗಳನ್ನು ಉದ್ದ, ಅಗಲವಾಗಿ (ಚಿತ್ರ 1) ತ್ರಿಕೋನ, ಚೌಕೋನ, ವರ್ತುಲದಲ್ಲಿ ಬಳಸಿಕೊಳ್ಳಲಾಗುತ್ತದೆ. ರೇಖೆಗಳನ್ನೂ ಉದ್ದ, ಅಗಲವಾಗಿ (ಚಿತ್ರ 2) ಜೋಡಿಸಿಕೊಳ್ಳುವುದಲ್ಲದೆ, ಖಾತಿ, ಜಾಲ, ತಿರುಮುರುಗಳಾಗುವಂತೆ ಮಾಡಿರುತ್ತಾರೆ. ಬಿಂದು ಮತ್ತು ರೇಖೆಗಳನ್ನು ಬಿಡಿಸಿದ ಆಕೃತಿಗಳು ರಂಗೋಲಿಗಳನ್ನು ಬಹಳವಾಗಿ ಹೋಲುತ್ತವೆ (ಚಿತ್ರ 3). ಭೂಮಿತಿಯ ಜ್ಞಾನ ಅಷ್ಟೊಂದಾಗಿ ಇಲ್ಲದವರೂ ಇಷ್ಟೊಂದು ಉತ್ತಮವಾಗಿ ಭೂಮಿತಿ ಬಳಸಿಕೊಳ್ಳುವುದು ಆಶ್ಚರ್ಯದ ಮಾತು. ತ್ರಿಕೋನ, ಕಾಟಕೋನ, ಕಾಟಕೋನ ಚೌಕೋನ, ಚಚ್ಚೌಕೋನಗಳನ್ನು ಸುಲಭವಾಗಿ ಗುರುತಿಸುವಂತಿರುತ್ತವೆ. ಪರಿಸರದ ಸಸ್ಯಜಗತ್ತಿಗೆ ಪ್ರಧಾನ ಪಾತ್ರವಿದೆ (ಚಿತ್ರ 4). ಕೇವಲ ಸರಳರೇಖೆಗೆ ಮೂರು ಬಿಂದು ಜೋಡಿಸಿದರೂ ಅದೊಂದು ಟೊಂಗೆ ಎಂದು ಚಿಕ್ಕ ಮಗುವಿಗೂ ಹೇಳಲು ಬರುವಷ್ಟು ನೈಜವಾಗಿರುತ್ತವೆ. ಲತೆ, ಕಳ್ಳಿಗಳೂ ಅಷ್ಟೇ ಶಕ್ತಿಯುತವಾಗಿರುತ್ತವೆ. ಹೂವು

ರಚಿಸುವಾಗ ಪಕಳೆ, ಪರಾಗ, ಪುಂಕೇಶ ಎಂದು ತಲೆ ಹಾಳುಮಾಡಿಕೊಳ್ಳದೇ ಬಿಂದುಗಳಿಂದಲೇ ಒಂದು ಹೂವು ಇನ್ನೊಂದರಿಂದ ವಿಂಗಡಿಸಲು ಬರುವಂತೆ ಮಾಡಿರುತ್ತಾರೆ. ವಿಶೇಷ ಹಬ್ಬಗಳಲ್ಲಿ ಆದಿವಾಸಿಗಳು ಸಸಿಗಳನ್ನು ಪರ್ಣ-ರೋಣಿಗಳಲ್ಲಿ ಬೆಳೆಸುವುದರಿಂದ ಅಂತಹವುಗಳು ಹಚ್ಚೆಯಲ್ಲಿ ಕಾಣಸಿಗುತ್ತವೆ. ಗಿಡ, ಮರಗಳನ್ನೂ ಅವರು ಮರೆತಿಲ್ಲ.

ಮಾನವಾಕೃತಿ ಬಿಡಿಸುವುದು ಎಷ್ಟು ಕಷ್ಟದ ಕೆಲಸ ಎಂದು ಯತ್ನಿಸಿದವರೇ ಬಲ್ಲರು. ಆದರೆ ಹಚ್ಚೆ ಹಾಕುವವರಿಗೆ ಯಾವುದೂ ತೊಂದರೆದಾಯಕವೇ ಅಲ್ಲ. ಕೇವಲ ಒಂದು ವರ್ತುಲ ಮತ್ತು ಮೂರು ರೇಖೆಗಳಿಂದ ಮಾನವನನ್ನು ಚಿತ್ರಿಸಬಲ್ಲ ಕಲಾವಿದರು (ಚಿತ್ರ 5). ಇದೇ ರೀತಿಯನ್ನು ಬಳಸಿ ಅವರು ಹಾಡುವವರು, ನರ್ತಿಸುವವರು, ವಾದ್ಯ ನುಡಿಸುವವರನ್ನು ರೂಪಿಸುತ್ತಾರೆ. ಆದಿವಾಸಿಗಳಿಗೆ ಹಕ್ಕಿಗಳೆಂದರೆ ವಿಶೇಷ ಆಕರ್ಷಣೆ. ತ್ರಿಕೋನಕ್ಕೆ ವರ್ತುಲ ಜೋಡಿಸಿದರೆ ಹಕ್ಕಿ ಸಿದ್ಧ (ಚಿತ್ರ 6). ಮಿತವಾದ ರೇಖೆಗಳನ್ನು ಬಳಸಿ ಹಂಸ, ಕುಕ್ಕುಟ, ನವಿಲುಗಳನ್ನು ಬಿಡಿಸುವದರಲ್ಲಿ ಅವರದು ಎತ್ತಿದ ಕೈ. ಈ ವಿವಿಧ ಚಿತ್ರಗಳನ್ನು ಜೋಡಿಸಿ ವಿಶಾಲ ನಕ್ಷೆಗಳನ್ನು ರಚಿಸುವುದರಲ್ಲಿ ಹೆಚ್ಚು ಚಾಣಾಕ್ಷತೆಬೇಕು. ಒಂದು ಸಾಲಿನಲ್ಲಿ ಮರಗಳನ್ನು, ಇನ್ನೊಂದರಲ್ಲಿ ನೃತ್ಯಕಾರರನ್ನು ಮಗದೊಂದರಲ್ಲಿ ಹಾಡುಗಾರರನ್ನು ಹೀಗೆ ಸ್ತರಗಳಲ್ಲಿ ರಚಿಸಿ ಸುಂದರವಾದ ಹಚ್ಚೆ ಬಿಡಿಸಲಾಗುತ್ತದೆ (ಚಿತ್ರ 7). ಕಾಡಿನಿಂದ ಆವರಿಸಿದ ಬೆಟ್ಟಗಳ ನಡುವೆ ಉದಯಿಸುತ್ತಿರುವ ಸೂರ್ಯ, ಕಾದಾಟದಲ್ಲಿ ತೊಡಗಿದ ಕುಕ್ಕುಟಗಳು, ಮರವೇರಿ ಕುಳಿತ ನವಿಲುಗಳು ಕಾಣಸಿಗುತ್ತವೆ.

ಎಷ್ಟು ಹಚ್ಚೆ ಹಾಕಿಕೊಳ್ಳಬೇಕೆಂಬುದು ನಿರ್ಧರಿಸುವುದು ವೈಯಕ್ತಿಕ ಅಭಿರುಚಿಯನ್ನು ಅವಲಂಬಿಸಿದೆಯಾದರೂ, ಸರ್ವಸಾಧಾರಣ ಎಲ್ಲ ಆದಿವಾಸಿಗಳೂ ಕೈಗಳನ್ನು ಅಲಂಕರಿಸುತ್ತಾರೆ. ದೋಲಾನ ಆದಿವಾಸಿಗಳು ಹಣೆ, ಕಪೋಲ, ಗಲ್ಲಗಳನ್ನೆಲ್ಲ ಹಚ್ಚೆಯಿಂದ ಸಿಂಗರಿಸಿರುತ್ತಾರೆ. ಗೊಂಡರು ಪಾದ, ಮೊಣಕಾಲುಗಳ ಮೇಲೆಯೂ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಅವರಲ್ಲಿ ಸ್ತ್ರೀಯರು ಫಲವತ್ತೆಯರಾಗಬೇಕೆಂದು ಬಾಳೆ, ತೆಂಗುಗಳನ್ನು ಬಿಡಿಸುವ ಪದ್ಧತಿಯೂ ಇದೆ. ಆದಿವಾಸಿಗಳಲ್ಲಿ ಅತೀ ಹೆಚ್ಚು ಬಟ್ಟೆ ಧರಿಸುವ ಭಿಲ್ಲರು ಹಚ್ಚೆಯನ್ನು ಕೈಗಳಿಗೆ ಸೀಮಿತ ಮಾಡಿಕೊಂಡಿರುತ್ತಾರೆ. ಉರವರು ಒಂದಿಷ್ಟು ಸ್ಥಳವೂ ಬಿಡದೇ ಹಚ್ಚೆ ಹಾಕಿಕೊಳ್ಳುವುದರಲ್ಲಿ ಹೆಸರುವಾಸಿಗಳು. ಬೈಗಾರು ಶರೀರದ ಹೆಚ್ಚಿನ ಭಾಗವನ್ನು ಬಟ್ಟೆಗಳಿಗಿಂತ ಹಚ್ಚೆಯಿಂದ ಮುಚ್ಚಿಕೊಂಡಿರುತ್ತಾರೆ.

ಆದಿವಾಸಿ ಹೆಂಗಳೆಯರು ಅಲಂಕಾರ ಪ್ರಿಯರು. ಅಲಂಕಾರ ಸೌಂದರ್ಯದ ಸಾಧನವಾದಂತೆ, ಸಿರಿವಂತಿಕೆಯ ಸಂಕೇತವೂ ಹೌದು. ಅಂತೆಯೇ ಸ್ತ್ರೀಯರು ತಮ್ಮ ಆಭರಣ, ಹಚ್ಚೆಗಳನ್ನು ಹೆಚ್ಚಿಸುವ ಕನಸು ಕಾಣುತ್ತಿರುತ್ತಾರೆ. ಸಂತೆಗೂ, ಜಾತ್ರೆಗೂ ಹೊರಟ ಆದಿವಾಸಿ ನಾರಿ ಮದುಮಗಳಿಗಿಂತ ಹೆಚ್ಚು ಆಕರ್ಷಕವಾಗಿ ಅಲಂಕರಿಸಿಕೊಳ್ಳುತ್ತಾಳೆಂದರೆ ಅತಿಶಯೋಕ್ತಿ ಆಗಲಾರದು. ಕೂದಲುಗಳನ್ನು ಮಾಟವಾಗಿ ಮುಡಿಕಟ್ಟಿ ಹೂವುಗಳನ್ನು ಮುಡಿದು, ಹಕ್ಕಿಯ ಪುಚ್ಛ ಒಂದನ್ನು ಸಿಕ್ಕಿಸಿಕೊಳ್ಳುವಳು. ಹತ್ತಾರು ಬಾಚಣಿಕೆ, ಕ್ಲಿಪ್‌ಗಳು ಕೂದಲುಗಳನ್ನು ಅಲಂಕರಿಸಿರಬೇಕು. ಕಾಲಿಗೆ ನಾಲ್ಕೈದು ಆಭರಣಗಳು ತೊಡುವಂತೆ ಮೂಗುತಿಯೂ ಬೇಕು ಅವಳಿಗೆ. ಕೊರಳಿಗೆ ನಾಣ್ಯಗಳ ಸರ, ಗೋಪು, ವಿವಿಧ ಬಣ್ಣಗಳ ಸರ ಇದ್ದಿರಬೇಕು. ವಂಕಿ, ಬಳೆ, ಉಂಗುರಗಳು ಕೈಗೆ ಇದ್ದಂತೆ, ಕಡಗ, ಗೆಜ್ಜೆಗಳು ಕಾಲಿಗೆ ಇದ್ದಿರಬೇಕು. ಆಭರಣಗಳಿಲ್ಲದೆಡೆಯಲ್ಲಿ ದಟ್ಟವಾದ ಹಚ್ಚೆ, ಇವುಗಳೆಲ್ಲ ಇದ್ದದ್ದರಿಂದ ಅವಳು ತೀರ ಕಡಿಮೆ ಬಟ್ಟೆ ಧರಿಸಿದ್ದಾಳೆಂದು ಅನಿಸುವುದೇ ಇಲ್ಲ. ಆಧುನಿಕರು ಆಕರ್ಷಕ ಬಟ್ಟೆ ತೊಡುವಂತೆ, ಆದಿವಾಸಿಗಳು ಶರೀರವನ್ನೇ ಆಕರ್ಷಕವಾಗಿ ಅಲಂಕರಿಸಿದರೆ

ತಪ್ಪೇನು? ಒಂದು ದೃಷ್ಟಿಯಿಂದ ನೋಡಿದರೆ ಮೈಯನ್ನು ಹಚ್ಚೆಯಿಂದ ತುಂಬಿಸಿಕೊಂಡ ಆದಿವಾಸಿಗಳಿಗಿಂತ ಪಾರದರ್ಶಕ ಬಟ್ಟೆ ತೊಟ್ಟ ಆಧುನಿಕ ನಾರಿ ಹೆಚ್ಚು ನಗ್ನವಾಗಿ ಕಾಣುತ್ತಾಳೆ. ಕಾಮ ಕೆರಳಿಸುತ್ತಾಳೆ. ಇಷ್ಟೊಂದು ಕಲೆಯಿಂದ ತುಂಬಿ ತುಳುಕುವ ಆದಿವಾಸಿಯ ಅಂಗಾಂಗಗಳನ್ನು ಬಟ್ಟೆಯಿಂದ ಮುಚ್ಚಿಬಿಡುವ ಸುಧಾರಕನ ಯತ್ನ ಸರಿಯಾಗಿದೆಯೋ ಎಂದು ಕಲಾ ಪ್ರೇಮಿಗಳು ಉತ್ತರಿಸಬೇಕು. ಆದಿವಾಸಿಗಳು ಕಡುಬಡವರಾದ್ದರಿಂದ ಅವರು ಕಡಿಮೆ ಬಟ್ಟೆ ಧರಿಸುತ್ತಾರೆ ಎಂಬ ವಾದ ಸರಿಯಲ್ಲ. ಕೆಲವು ಆದಿವಾಸಿಗಳಿಗಾಗಿಯೇ ಹೆಣೆಯುವ ತುಂಡು ಸೀರೆಗಳು ಆಧುನಿಕರ ಬಟ್ಟೆಯಷ್ಟೇ ಬೆಲೆಬಾಳುವಂಥಾದ್ದು. ಅವರನ್ನು ನಮ್ಮ ಪ್ರತಿಬಿಂಬದಂತೆ ಮಾಡುವುದರಲ್ಲಿ ಸರಕಾರ, ಸಮಾಜ, ಯಶಸ್ವಿಯಾದರೆ, ನಮ್ಮ ಕಣ್ಣ ಮುಂದೆಯೇ ಬಹುರೂಪ ತಾಳಿ, ಶತಮಾನಗಳಿಂದ ಬೆಳೆದು ಬಂದ ಹಚ್ಚೆ ಕಲೆಯ ನಾಶವಾಗುವುದರಲ್ಲಿ ಸಂಶಯವಿಲ್ಲ.

ಘರೇವಾ ಕಲೆ



ಮಧ್ಯಪ್ರದೇಶದ ಬಸ್ತರ ಜಿಲ್ಲೆಯ ಆದಿವಾಸಿಗಳಿಗೆ ಅತ್ಯವಶ್ಯವಿದ್ದ ಹಿತ್ತಾಳೆಯ ವಿಗ್ರಹಗಳನ್ನು ಮಾಡಿಕೊಡುವ ಘರೇವಾರು. ಜಗದಲಪುರದ ಬೈಲಡಾಂಗಾದಲ್ಲಿ ಅನಾದಿ ಕಾಲದಿಂದಲೂ ಬೀಡು ಬಿಟ್ಟಿದ್ದಾರೆ. ಮಾತನಾಡಿಸಿ ಅವರ ಕಲೆಯ ವೈಖರಿಯನ್ನು ಅರಿಯುವ ಇಚ್ಛೆಯನ್ನು ವ್ಯಕ್ತಪಡಿಸಿದಾಗ, ಸ್ಥಾನೀಯರು, ಅವರ ಪರಿಸರದಲ್ಲಿ ಅಸಭ್ಯರು ಬೀಡು ಬಿಟ್ಟಿದ್ದರಿಂದ ಅಲ್ಲಿಗೆ ಹೋಗದಿರುವದೇ ಮೇಲು ಎಂದರು. ಕ್ಷೀಣಿಸುತ್ತಿರುವ ಈ ಕಲೆಯ ಉತ್ಪತ್ತಿಯನ್ನು ಕಣ್ಣಾರೆ ಕಾಣಬೇಕೆಂಬ ಛಲದಿಂದಾಗಿ ಹೋಗದೇ ಇರಲಾಗಲಿಲ್ಲ. ನಗರದ ಹೊರಗಿನ ಭಾಗದಲ್ಲಿ ಗುಡಿಸಲುಗಳ ಕಿರುವಸತಿ ಗೋಚರಿಸಿತು. ಮುರುಕಲು ಗುಡಿಸಲ ಎದುರಿಗೆ ಇದ್ದ ಕಿರಿಯ ಚಪ್ಪರವೇ ಅವರ ಕಮ್ಮಟ. ಕೃಶಕಾಯ, ಗುಳಿಬಿದ್ದ ಕಣ್ಣುಗಳು ಅವರೆಲ್ಲ ಕಡು ಬಡವರೆಂದು ಸಾರಿದವು. ಆದರೆ ಅವರ ಪ್ರಾಣಿ - ಪ್ರೇಮಕ್ಕೆ ಏನೇನೂ ಕೊರತೆ ಇರಲಿಲ್ಲ. ಕೆಲವರು ಗಿಳಿ ಸಾಕಿದರೆ, ಇನ್ನೂ ಕೆಲವರು ಕೆಂಪು ಮೂತಿಯ ಕೋತಿ ಸಾಕಿದ್ದರು. ನಾಯಿಯು ಸಾಮಾನ್ಯವಾಗಿದ್ದರೆ ಅಪರೂಪಕ್ಕೆ ಮೈನಾವನ್ನೂ ಸಾಕಿದ್ದರು.

ದೂರದ ಊರಿನಿಂದ 'ಬಾಬು' ಒಬ್ಬರು ಬಂದಿದ್ದಾರೆಂಬ ಸಮಾಚಾರ ದೊರೆತಾಕ್ಷಣ, ಕಲಾಕಾರರು ಒಬ್ಬೊಬ್ಬರಾಗಿ ಬರಲಾರಂಭಿಸಿದರು. ತಮ್ಮ ಉದರ ನಿರ್ವಹಣೆ ಅತ್ಯಂತ

ಕಷ್ಟದಾಯಕವಾದ್ದರಿಂದ ಸಿದ್ಧಪಡಿಸಿದ ವಿಗ್ರಹಗಳನ್ನು ಕೂಡಲೇ ಮಾರಬೇಕಾಗುವದು; ತೋರಿಸಲು ಯಾವ ಮಾದರಿಯೂ ಇಲ್ಲವೆಂದು ಕೆಲವರು ಹೇಳಿದರೆ, ಒಬ್ಬಿಬ್ಬರು ತಮ್ಮ ಕೃತಿಗಳನ್ನು ಬನಿಯರ ಹತ್ತಿರ ಒತ್ತೆ ಇಟ್ಟಿದ್ದರಿಂದ 'ಹಣ ಕೊಟ್ಟರೆ ಬಿಡಿಸಿ ತಂದು ತೋರಿಸುತ್ತೇವೆ, ಒಪ್ಪಿಗೆಯಾದರೆ ಕೊಳ್ಳಿ' ಎಂದು ಸೂಚಿಸಿದರು. ತಂದು ತೋರಿಸಿದ ಕೆಲವೇ ಕೃತಿಗಳು ಸೌಂದರ್ಯಭರಿತವಾಗಿದ್ದವು. ಬೆಲೆಯನ್ನು ಹೇಳಿದಾಗ ನಂಬಲಾರದೇ ಹೋದೆವು. ಯಾವವೂ ಐದು ಹತ್ತು ರೂಪಾಯಿಗೆ ಮಿಕ್ಕಿರಲಿಲ್ಲ. "ಇಷ್ಟೊಂದು ಕಡಿಮೆ ಬೆಲೆಯಲ್ಲಿ ಮಾರಲು ಹೇಗೆ ಸಾಧ್ಯ?" ಎಂದು ವಿಚಾರಿಸಿದಾಗ, "ಕಚ್ಚಾ ಸಾಮಗ್ರಿಯ ಬೆಲೆಯ ಜೊತೆಗೆ ತಮ್ಮ ದಿನಗೂಲಿ ಕೈ ಸೇರುವಂತೆ ಆದರೆ ತಾವು ಪೂರ್ಣ ತೃಪ್ತರು" ಎಂದು ವಿವರಿಸಿದಾಗ, ನಾವು ಕಲೆಗೆ ಕೊಡುವ ಬೆಲೆ ಇಷ್ಟೇನೆ! ಎಂದು ಮುಜುಗುರವಾಯಿತು.

ಅವರ ಕಲಾವಿಧಾನ ಅಭ್ಯಸಿಸಿ ಛಾಯಾಗ್ರಹಣ ಮಾಡಬಹುದೆ? ಎಂದು ವಿಚಾರಿಸಿದಾಗ, ಉತ್ಸಾಹಿಗಳಾದರು. ಮುಂಗಡ ಹಣ ಪಡೆದು ಮೇಣ, ಹಿತ್ತಾಳೆ ಕೊಂಡು ತಂದರು. ಮೇಣವನ್ನು ಹದವಾಗಿ ಮಿದ್ದಿ ಉದ್ದ ನೂಲಿನಾಕಾರದಲ್ಲಿ ಹಿಗ್ಗಿಸಿದರು. ನಂತರ ಅವನ್ನು ವಿವಿಧ ಅಳತೆಗಳಲ್ಲಿ ಕತ್ತರಿಸಿ, ಜೋಡಿಸಿ, ನೋಡ ನೋಡುತ್ತಿದ್ದಂತೆ ಜಿಂಕೆ, ಆನೆ, ಎತ್ತು, ಮೀನುಗಳ ರೂಪವನ್ನು ಕೊಟ್ಟರು. ಹುಡಿ ಮಣ್ಣನ್ನು ನೀರಿನಲ್ಲಿ ಕಲಸಿ, ಅದರ ಹೊರಮೈಗೆ ಲೇಪಿಸಿದರು. ಹಿತ್ತಾಳೆಯ ಎರಕ ಹೊಯ್ಯಲು ಕಿರಿದ್ವಾರವನ್ನು ಇರಿಸಿದರು. ಸಿದ್ಧವಾದ ಮೇಣದ ಅಚ್ಚುಗಳನ್ನು ಬಿಸಿಲಲ್ಲಿ ಒಣಗಿಸಲು ಇಟ್ಟರು. ಇಟ್ಟಿಗೆ ಜೋಡಿಸಿ, ಒಲೆ ನಿರ್ಮಿಸಿ ಅದಕ್ಕೆ ಇದ್ದಿಲು ಸುರುವಿದರು. ಕೊಂಡು ತಂದ ಕಚ್ಚಾ ಹಿತ್ತಾಳೆಯನ್ನು ಉಷ್ಣತೆಗೆ ಕರಗದ ಪಾತ್ರೆಗೆ ಸೇರಿಸಿ ಬೆಂಕಿಯನ್ನು ನಟ್ಟ ನಡುವೆ ಇಡಲಾಯಿತು. ಕೆಂಡಗಳನ್ನು ಅತ್ತಿತ್ತ ಸರಿಸಲು ಉದ್ದವಾದ ಇಕ್ಕಳ ಸದಾ ಸಿದ್ಧವಿತ್ತು. ಸೂರ್ಯನು ತೇಜೋಹೀನನಾದಾಗ ಉರಿಯುವ ರಬ್ಬರ್ ಟಾಯರ್ ದೀವಟಿಗೆಯಾಯಿತು. ಕೆಂಡ ಕಾರುವ ಪಾತ್ರೆಯನ್ನು ಇಕ್ಕಳದಿಂದ ಹೊರಗೆಳೆದು, ದ್ರವ್ಯವಾದ ಹಿತ್ತಾಳೆಯನ್ನು ಮೇಣದ ಅಚ್ಚಿನ ಮೇಲೆ ಸುರಿದಾಗಲೇ ಸುಖಾರಾಮನು ಉಸ್ಸೆಂದು ಬೆವರು ಒರಸಿಕೊಳ್ಳಲು ಬಿಡುವಾದದ್ದು. ಆರೆ ಆರಿದ ನಂತರ ನೀರಿನಿಂದ ತಣ್ಣಗೆ ಮಾಡಿ, ಮಣ್ಣನ್ನು ಝಾಡಿಸಿ, ಬೇರ್ಪಡಿಸಿದಾಗ, ಸುಂದರವಾದ ಜಿಂಕೆಯ ಕಲಾಕೃತಿ ಪ್ರತ್ಯಕ್ಷವಾಯಿತು. ಮೇಣವೆಲ್ಲ ಕರಗಿ ಅದರ ಸ್ಥಳವನ್ನು ಹಿತ್ತಾಳೆ ಆಕ್ರಮಿಸುವದರಿಂದ ಇದಕ್ಕೆ 'ಮೇಣದ ಅಚ್ಚಿನ ಕಲೆ" ಎಂಬ ಅನ್ವರ್ಥನಾಮವೂ ಪ್ರಾಪ್ತವಾಗಿದೆ.

ಆಕೃತಿಗಳ ನಿರ್ಮಾಣಕ್ಕಾಗಿ ಬಳಸುವ ಹಿತ್ತಾಳೆ, ಅತ್ಯಲ್ಪವಾದರೂ ಅವುಗಳ ಹೊಟ್ಟೆಯಲ್ಲಿ ಸುಟ್ಟ ಸೂಸುಮಣ್ಣು ಇರುವದರಿಂದ ಅವು ಭಾರವಾಗಿರುತ್ತವೆ. ಭಟ್ಟಿಯಿಂದ ಹೊರಗೆಳೆದಂತೆ ಬಳಸಿದರೆ ಅವನ್ನು ಕಾಗದದ ತೂಕದಂತೆ ಬಳಸಬಹುದು. ಇಲ್ಲವೇ ಅವನ್ನು ಬ್ರಾಸೊ ಪಾಲಿಶ್ ಮಾಡಿ ತಿಕ್ಕಿ ಹೊನ್ನಿನ ಹೊಳಪು ಬರುವಂತೆ ಮಾಡಿದರೆ, ಗೃಹಾಲಂಕಾರ ಮಾಡಲು ಆಕರ್ಷಕವಾಗಿರುತ್ತವೆ. ವಿವಿಧ ಬಣ್ಣಗಳಿಂದಲೂ ಅವನ್ನು ವರ್ಣರಂಜಿತವಾಗಿ ಮಾಡಬಹುದು. ಇಂಥವುಗಳನ್ನು ಪುಷ್ಪ ಪಾತ್ರಗಳೊಂದಿಗೆ ದಿವಾಣಖಾನೆಯಲ್ಲಿ ಜೋಡಿಸಿಟ್ಟರೆ, ಆಹ್ಲಾದಕರವಾದ ವಾತಾವರಣ ನಿರ್ಮಾಣವಾಗುವದು. ಗೋಡೆಗಳನ್ನು ಅಲಂಕರಿಸುವ ಸಲುವಾಗಿ ಘರೇವರು ವಿಸ್ತಾರವಾದ ಕೊಂಬುಗಳುಳ್ಳ ಜೋಡಿ ಚಿಗರೆಗಳನ್ನು ರಚಿಸುತ್ತಾರೆ. ಅವನ್ನು ಚಿಕ್ಕಪುಟ್ಟ ಸಾಮಾನುಗಳನ್ನು ತೂಗಹಾಕುವ ಮೊಳೆಗಳಂತೆ ಬಳಸಬಹುದು.

ಬೆಲೆಯ ಬಗ್ಗೆ ಯಾವ ಚೌಕಾಸಿಯನ್ನೂ ಮಾಡದ, ತಾವು ತಯಾರಿಸಿದ ಎಲ್ಲ ಮೂರ್ತಿಗಳನ್ನೂ ಕೊಂಡ 'ಬಾಬು' ಬಗ್ಗೆ ಕಲಾಕಾರರಿಗೆ ಗೌರವ ಮೂಡದೇ ಇದ್ದೀತೆ? ಅಂತೆಯೇ ಮೈತರಾಮ, ಭಾಲುರಾಮ, ಗಣೇಶರಾಮ ಮೊದಲಾದವರೆಲ್ಲ ಕೊಂಚ ದೂರದ ತನಕ ಕಳಿಸಲು ಬಂದರು. ತಮ್ಮ ಕಲೆಯ ಬಗ್ಗೆ ಹೆಚ್ಚಿನ ಪರಿಚಯಬೇಕಿದ್ದರೆ, ಜಗದಲಪುರ ಅರಮನೆಗೆ ಹೋಗುವ ರಸ್ತೆಯ ಮೇಲೆ ಇರುವ ಬಂಗಾರಿ ಅಂಗಡಿಗೆ ಭೇಟಿ ಕೊಡಲು ಸೂಚಿಸಿ ಬೀಳ್ಕೊಂಡರು. ಕಲಕತ್ತೆಯಿಂದ ಜಗದಲಪುರಕ್ಕೆ ಬಂದ ಬಂಗಾಲಿ ವ್ಯಾಪಾರಿ ಗುಹಾ ಎನ್ನುವರೊಬ್ಬರು "ಡ್ಯಾನ್ಸಿಂಗ್ ಕ್ಯಾಕ್ಟಸ್" ಎಂಬ ಕಲಾಕೃತಿಗಳ ಅಂಗಡಿಯೊಂದನ್ನು ನಡೆಸುತ್ತಿದ್ದಾರೆ. ಅವರ ಕಾರ್ಯ ವಿಧಾನ ಅತ್ಯಂತ ಸುಲಭ. ಘರೇವಾ ಕಲಾಕಾರರಿಗೆ ಕಚ್ಚಾಸಾಮಗ್ರಿ, ಪೂರೈಸಿ ಅವರು ತಯಾರಿಸಿದ ವಿವಿಧ ಶಿಲ್ಪಗಳಿಗೆ ದಿನಗೂಲಿ ಜೋಡಿಸಿ ಕೊಂಡುಕೊಳ್ಳುತ್ತಾರೆ. ನಂತರ ಬರುವ ಪ್ರವಾಸಿಗಳಿಗೆ ಮಾರಾಟ ಮಾಡಿದ ಲಾಭದ ಕೊಳ್ಳೆ ಅವರದೇ! ಬಂಗಾಲದಿಂದ ಕೊರಡು ಕೊರೆಯುವವರನ್ನು ಬರಮಾಡಿಕೊಂಡು ಬಸ್ತರದಲ್ಲಿ ವಿಪುಲವಾಗಿ ಲಭ್ಯವಿರುವ ತೇಗು, ಕರಿಮರಗಳಲ್ಲಿ ಉಬ್ಬು ಚಿತ್ರಗಳನ್ನು ಕೊರೆಯಿಸುತ್ತಾರೆ. ಇವುಗಳೆಲ್ಲ ತಮ್ಮವೇ ಕೃತಿ ಎಂಬಂತೆ ಭೋಪಾಲ್, ದಿಲ್ಲಿಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸುತ್ತಾರೆ, ಮಾರುತ್ತಾರೆ. ಅವರಿಗೆ ಬಂದ ಪಾರಿತೋಷಕಗಳಿಗೆ ಕೊನೆ ಮೊದಲಿಲ್ಲ. ಅಂತಾರಾಷ್ಟ್ರೀಯ ಮಟ್ಟದ ಜಾನಪದ ಕಲೆಯ ಪ್ರದರ್ಶನದಲ್ಲಿ ಭಾಗವಹಿಸುವವರೂ ಇಂದವರೇ!

ಮಾರಿಯ ಮತ್ತು ಮುರಿಯ ಆದಿವಾಸಿಗಳು ಬೀಡುಬಿಟ್ಟ ಅಬುಜ್‌ಮಾಡದಲ್ಲಿ ಅಲೆದಾಗ, ಘರೇವಾರ ಅನೇಕ ಅಪೂರ್ವ ಕಲಾಕೃತಿಗಳ ದರ್ಶನ ಪಡೆಯುವಂತೆ ಆಯಿತು. ಅವರಲ್ಲಿದ್ದ ಅತ್ಯಲ್ಪ ಸಾಮಗ್ರಿಗಳಲ್ಲಿ ಇವು ಮಹತ್ವದ್ದಾಗಿದ್ದರಿಂದ ಅವನ್ನು ಹಣಕ್ಕಾಗಿ ಕೇಳಲು ಬಾಯಿಬರದೇ ಕೇವಲ ಛಾಯಾಗ್ರಹಣ ಮಾಡಿ ತೃಪ್ತಿ ಪಡೆಯಬೇಕಾಯಿತು. ಧನೋರಾದ ಕುಟುಂಬ ಒಂದರ ಹತ್ತಿರ ದಂತೇಶ್ವರಿಮಾತೆಯ ಪೂಜಾ ಪೆಟ್ಟಿಗೆ ಇದೆ. ಅದರ ಸುತ್ತಲೂ ಕಿರಿಗಂಟೆಗಳನ್ನು ಜೋಡಿಸಲಾಗಿದೆ. ಪೆಟ್ಟಿಗೆ ತೆರೆದಾಗ ಜೋಕಾಲಿಯಲ್ಲಿ ವಿರಮಿಸಿದ ಮಾತೆಯ ದರ್ಶನವಾಗುತ್ತದೆ. ಈ ಏರ್ಪಾಡು ನೋಡಿದಾಗ, ಹಿಂದಿನಕಾಲದ ಹೆಂಗಳೆಯರು ಅಲಂಕಾರಕ್ಕೆ ಬಳಸುತ್ತಿದ್ದ ಕನ್ನಡಿ ಪೆಟ್ಟಿಗೆ ನೆನಪಿಗೆ ಬಾರದಿರದು. ಮುಂಡಾಟಿಕ್ರಾ ಹಳ್ಳಿಯ ಕುಟುಂಬ ಒಂದರ ಹತ್ತಿರ ಆನೆ ಹೊತ್ತ ಅಂಬಾರಿಯಲ್ಲಿ ದೇವಿಯ ವಿಗ್ರಹ ಜೋಡಿಸಲಾಗಿದೆ. ದೌಡಾಯಿಯಲ್ಲಿ ಕಾಡುಕೋಣದ ಕೋಡುಗಳಿಂದ ಶಿರವನ್ನು ಅಲಂಕರಿಸಿಕೊಂಡು ಮೃದಂಗ ನುಡಿಸುವ ಶಿಲ್ಪವೊಂದು ಕಾಣ ಸಿಕ್ಕಿತು. ಆಮದಯಿಯಲ್ಲಿ ಪೂಜೆ ಮಾಡುವಾಗ ಕುಳಿತುಕೊಳ್ಳಲು ಬಳಸುವ ಕಾಲುಮಣೆ ಒಂದಿತ್ತು. ಬೇಡವಾದಾಗ ಮಾಡಿನ ಬಿದಿರಿಗೆ ತೂಗ ಹಾಕಲು ಬರುವಂತೆ ಹಗ್ಗವನ್ನು ಜೋಡಿಸಲಾಗಿತ್ತು. ಬೆಳೆಗಳ ಮೇಲೆ ಹಲ್ಲೆ ನಡೆಸುವ ಕಾಡು ಹಂದಿಯನ್ನು ಓಡಿಸಲು ಬಳಸುವ ತುತ್ತೂರಿ, ನೀರು ಕುಡಿಯಲು ಬಳಸುವ ಚುಂಚಿನ ತಂಬಿಗೆಗಳೂ ನೋಡಲು ದೊರೆತವು.

ಬಸ್ತರ ಜಿಲ್ಲೆಯ ಆದಿವಾಸಿಗಳ ಅಭ್ಯುದಯಕ್ಕಾಗಿ ರಾಜ್ಯ ಮತ್ತು ಕೇಂದ್ರ ಸರಕಾರಗಳು ಹಣದ ಹೊಳೆಯನ್ನೆ ಹರಿಸುತ್ತವೆ. ಅಲ್ಲದೇ ಅವರು ಸ್ಥಾಯಿಯಾಗಿ ಒಂದೆಡೆಗೆ ನಿಲ್ಲುವಂತೆ ಮಾಡಲು ಪ್ರತಿ ಕುಟುಂಬಕ್ಕೆ ಒಂದು ಎಕರೆ ಅರಣ್ಯಭೂಮಿಯನ್ನು ಕೊಡಲಾಗುತ್ತದೆ. ಈ ಪ್ರದೇಶದಲ್ಲಿ ಇದ್ದ ಗಿಡಮರಗಳೆಲ್ಲ ಅವರಿಗೇ ಮೀಸಲು. ಅಲ್ಲದೇ ಉರವಲಿಗಾಗಿ ಕಾಡಿನಿಂದ ಕಟ್ಟಿಗೆ ಶೇಖರಿಸಬಹುದು. ಸ್ವಂತ ಬಳಕೆಗಾಗಿ ಮದ್ಯವನ್ನು ಸಿದ್ಧಮಾಡಿಕೊಳ್ಳಬಹುದು. ಆದರೆ ಇವುಗಳಲ್ಲಿ ಯಾವ ಸವಲತ್ತೂ ಘರೇವಾರಿಗೆ ಲಭ್ಯವಿಲ್ಲ. ಏಕೆಂದರೆ ಅವರು ಆದಿವಾಸಿಗಳಲ್ಲ! ಕಲೆ, ಕಲಾಕಾರರು ಮುಂತಾದವರಿಗೆ

ಉತ್ತೇಜನ ಕೊಡಲೂ ಮೀಸಲಿದ್ದ ಸವಲತ್ತುಗಳು, ಧನಸಹಾಯ, ಪಾರಿತೋಷಕಗಳನ್ನು ಕೊಳ್ಳೆ ಹೊಡೆಯುವವರು ಗುಹಾರಂತಹ ಕಲಾವ್ಯಾಪಾರಿಗಳು. ಆದ್ದರಿಂದ ಘುರೇವಾ ಜನಾಂಗ, ಶತಕಗಳಿಂದ ನಡೆಸಿಕೊಂಡು ಬಂದ ತಮ್ಮ ಅಪೂರ್ವ ಕಲೆಗೆ ತಿಲಾಂಜಲಿ ಕೊಡದೇ ಬೇರೆ ಮಾರ್ಗವೇ ಇಲ್ಲ, ಅವರು ಪಕ್ಕದ ಭಿಲಾಡಾಂಗಾದ ಗಣಿಗಳಲ್ಲಿ ಕೂಲಿಗಳೆಂದು ಕೆಲಸ ಮಾಡಿದರೆ ಗಳಿಕೆ ನೂರು ಪಟ್ಟು ಹೆಚ್ಚಾಗುವದರಲ್ಲಿ ಸಂದೇಹವೇ ಇಲ್ಲ. ಕಲಾಕಾರರಿಗಿಂತ ಕೂಲಿಗಳು ನೆಮ್ಮದಿಯಾಗಿ ಬಾಳಬಹುದೆಂದು ಅರಿವಾದಾಗ, ಕಲಾಕಾರರಿಗೆ ನಾವು ಕೊಡುವ ಬೆಲೆ ಇಷ್ಟು ಎಂದು ಮಿಡುಕುವಂತೆ ಆಯಿತು.

19 ಆದಿವಾಸಿಗಳ ಕಲೆ



ಮಧ್ಯಪ್ರದೇಶದ ಆದಿವಾಸಿಗಳ ಕಲೆಯನ್ನು ಹುಡುಕುತ್ತ ಭೋಪಾಲದ ದಕ್ಷಿಣಕ್ಕೆ ನಲವತ್ತು ಕಿಲೋ ಮೀಟರ್ ದೂರದಲ್ಲಿರುವ ಭೀಮ ಬೆಟಕಾ ತಲುಪಿದಾಗ ಆದಿಮಾನವನ ಕಲೆಯ ಆಗರವೇ ಕಣ್ಣೆದುರು ನಿಂತಂತೆ ಆಯಿತು. ಈ ಮೂಲಪುರುಷರು ತಮ್ಮ ಕಾರ್ಯಕಲಾಪಗಳಿಗೆ ಆಯ್ಕೆ ಮಾಡಿದ ತಾಣ ಮೆಚ್ಚುವಂಥಾದ್ದು. ಸುತ್ತಮುತ್ತಲೆಲ್ಲ ಹಚ್ಚ ಹಸಿರು ಕಾಡು. ಪರಿಸರದ ಬೈಲುಪ್ರದೇಶದಿಂದ ವಿಂಧ್ಯ ಪರ್ವತಾವಳಿಯ ಸಣ್ಣ ಬೆಟ್ಟಗಳು-ಸುಮಾರು ಐವತ್ತು-ಅರವತ್ತು, ತಲೆಯೆತ್ತಿಕೊಂಡು ನಿಂತಿವೆ. ಕ್ರಿ.ಶ. ಪೂರ್ವ ಐದು ಲಕ್ಷ ವರ್ಷದಿಂದ ಐತಿಹಾಸಿಕ ಕಾಲದವರೆಗೆ ಈ ಸ್ಥಳವು ಅಸಂಖ್ಯ ತಲೆ ಮಾರಿವನರಿಗೆ ಕಲಾಕ್ಷೇತ್ರವಾಗಿತ್ತೆಂದು ಅಲ್ಲಿರುವ ಕುರುಹಗಳು ಸಾಕ್ಷಿ ಹೇಳುತ್ತವೆ. ಬೌದ್ಧ ಧರ್ಮದವರೂ ಕೆಲಕಾಲ ಬೀಡು ಬಿಟ್ಟಿದ್ದರಿಂದ ಅತಿ ಪ್ರಾಚೀನವೆಂದು ಪರಿಗಣಿಸಲಾದ ಬ್ರಾಹ್ಮಿಲಿಪಿಯ ಮೂಲ ರೂಪ ಮತ್ತು ಕಿರಿಸ್ತೂಪಗಳೂ ಇಲ್ಲಿವೆ. ಅನಂತರ ಭೋಜರಾಜನಿಗೂ ಈ ಪರಿಸರ ಮೆಚ್ಚುಗೆಯಾಗಿ ಬೃಹತ್ ಕೆರೆಯೊಂದನ್ನೂ ಅದರ ದಡದಲ್ಲಿ ಅದಕ್ಕೊಪ್ಪುವ ಭವ್ಯ ಶಿವಾಲಯವನ್ನೂ ಕಟ್ಟಿಸಲಾರಂಭಿಸಿದ. ಆದರೆ ಅದೇಕೋ ಇಂದಿಗೂ ಅವೆರಡೂ ಅಪೂರ್ಣ ಸ್ಥಿತಿಯಲ್ಲೇ ಇವೆ. ಕೆರೆ ಉತ್ತಮ ಕೃಷಿಗೆ ಆಶ್ರಯ ಕೊಟ್ಟರೆ ಭೋಜಪುರ ಹಳ್ಳಿಯ ಶಿವಾಲಯ ದೂರದೂರದ ಭಕ್ತರನ್ನು ಆಕರ್ಷಿಸುತ್ತದೆ.

ಲೇನಗಂಗಾ ನದಿಯ ಕೊಳ್ಳದಲ್ಲಿರುವ ಭೀಮ ಬೆಟಕಾ ಬೆಟ್ಟಗಳು ಮರಳು ಕಲ್ಲಿನವು. ಕಣಿವೆಯಿಂದ ಸಾಕಷ್ಟು ಎತ್ತರದಲ್ಲಿ ಇದ್ದುದರಿಂದ ಸುರಕ್ಷತತೆಯ ದೃಷ್ಟಿಯಿಂದ ಆದಿಮಾನವನ ಆಶ್ರಯಕ್ಕಾಗಿ ಹೇಳಿ ಮಾಡಿಸಿದಂತಿವೆ. ಕೆಲವು ಗುಹೆಗಳಿವೆ. ಹೆಚ್ಚಿನವು ಕೇವಲ ಶಿಲಾಶ್ರಯಗಳಾಗಿವೆ. ಆಡಿಗೂ ಹತ್ತಲಾಗದ ತಾಣದಲ್ಲಿ ಮಾನವನು ಹೇಗೆ ಜೀವಿಸುತ್ತಿದ್ದಿರಬಹುದೆಂದು ಊಹಿಸುವದೂ ಕಷ್ಟ. ಮೆಳೆ-ಮುಳ್ಳುಗಳನ್ನು ಬಳಸುತ್ತಿದ್ದಿರಬೇಕು. ಈ ತಾತ್ಪೂರ್ತಿಕ ಏರ್ಪಾಡು ಅವನೊಂದಿಗೆ ನಾಶವಾಗಿ ಹೋಗಿರಬೇಕು. ಈ ಶಿಲಾಶ್ರಯಗಳನ್ನು ನೋಡಿದಾಗ ಅವು ಒಂಟಿ ವಾಸಸ್ಥಾನಗಳಾಗಿರದೇ ಅಜಂತಾ-ಎಲ್ಲೋರಾಗಳಂತೆ ಸಾಂಘಿಕ ಜೀವನದ ಭಾಗಗಳಾಗಿದ್ದಂತೆ ತೋರುತ್ತದೆ. ಆಳವಾದ ಕೊರಕಲಿನ ಸುತ್ತಲೂ ಇದ್ದ ಆಶ್ರಯಗಳಿಂದ ಅದೊಂದು ಸಭಾಗೃಹ ಅಥವಾ ನೃತ್ಯ ರಂಗದ ತಾಣವಾಗಿದ್ದಂತೆ ತೋರುತ್ತದೆ. ಗ್ರೀಕ-ರೋಮನ್ನರ ಹೊರಾಂಗಣ ರಂಗದಂತೆ ಪ್ರೇಕ್ಷಕರು ಸುತ್ತಲೂ ಕುಳಿತಾಗ ನಟರು ನಟ್ಟ ನಡುವೆ ನಿಂತು ತಮ್ಮ ಕಲಾಪ್ರದರ್ಶನ ಮಾಡಿದರೆ ಯಾವ ಆತಂಕವಿಲ್ಲದೇ ಸರ್ವರೂ ಏಕಕಾಲಕ್ಕೆ ನೃತ್ಯ ಪ್ರದರ್ಶನ ನೋಡಬಹುದು. ಕೇಳಬಹುದು. ಅದೆಂತಹ ಅಪೂರ್ವ ವ್ಯವಸ್ಥೆ! ಇದರಂತೆ ಕಿರಿದು. ಹಿರಿದು ರಂಗಮಂಟಪಗಳು. ಆದಿಮಾನವನ ಗೋಶಾಲೆ ಮುಂತಾದವನ್ನು ಗುರುತಿಸಬಹುದು. ಮಾನವನ ವಿಕಾಸದ ಹಂತಗಳ ಬಗ್ಗೆ ಸಾಕ್ಷಿ ಹೇಳುವ ಚಾರಿತ್ರಿಕ ಪುರಾವೆಗಳಿಂದ ಭೀಮ ಬೆಟಕಾ ತುಂಬಿ ತುಳುಕುತ್ತಿದೆ. ಶಿಲಾಯುಧಗಳು. ಉಪಕರಣಗಳು. ನಕ್ಷೆಗಳಿದ್ದ ಮಡಕೆಯ ಚೂರುಗಳು. ನೆಲದಲ್ಲಿ ಹೂಳಿದ ಅಸ್ಥಿಪಂಜರಗಳು. ಎಲ್ಲಕ್ಕೂ ಹೆಚ್ಚಾಗಿ ಕಲಾತ್ಮಕತೆಯ ಕುರುಹಾಗಿ ಬಿಟ್ಟು ಹೋದ ಶಿಲಾಚಿತ್ರಗಳು ಇಂದಿನವರಿಗೆ ಹಿಂದಿನವರು ಬಿಟ್ಟು ಹೋದ ಮಹತ್ವ ಪೂರ್ಣ ಆಸ್ತಿ.

ಕೋಟೆ-ಕೊತ್ತಳ ಹತ್ತುವವರಂತೆ. ಪರ್ವತಾರೋಹಣ ಮಾಡುವವರಂತೆ ಈ ಶಿಲಾಚಿತ್ರ-ಅಭ್ಯಾಸೇಚ್ಛುಗಳೂ ಸಾಹಸಿಗಳಾಗಿರಬೇಕು. ಸಹಸ್ರಾರು ವರ್ಷಗಳಿಂದ ನಿಸರ್ಗ ಮತ್ತು ಮಾನವನ ಕ್ರೌರ್ಯದಿಂದ ಈ ಕಲಾನಿಧಿಗಳ ಜಾಲಮುರಿದು. ಮೇಲಕ್ಕೆ ಹತ್ತುವುದು ಸುಲಭ ಸಾಧ್ಯವಿಲ್ಲ. ಈ ಆಶ್ರಯಗಳಲ್ಲಿ ನವಿಲು. ಕಣ್ಣು ಕಪ್ಪಡಿಗಳು ಬೀಡು ಬಿಡುವದು ಸಾಮಾನ್ಯವಾದರೆ ಕೆಲವೊಂದರಲ್ಲಾದರೂ ಕರಡಿ. ಕಾಡುಹಂದಿ. ವಿಷಸರ್ಪಗಳು ಇರುವ ಸಾಧ್ಯತೆಯೂ ಇದ್ದುದರಿಂದ ಪ್ರತಿ ಹೆಜ್ಜೆ ಮುಂದಿಡುವಾಗ ಎಚ್ಚರಿಕೆ ವಹಿಸಲೇ ಬೇಕಾಗುತ್ತದೆ. ಗವಿಗಳಂತೆ ಇದ್ದ ಶಿಲಾಶ್ರಯಗಳಲ್ಲಿ ಸದಾಕಾಲ ಕಗ್ಗತ್ತಲು ತಾಂಡವವಾಡುತ್ತಿರುವದು ಅತ್ಯವಶ್ಯ. ಚಿತ್ರಗಳು ಇಂಥಲ್ಲಿಯೇ ಇರುವವೆಂದು ಹೇಳಲಾಗದ್ದರಿಂದ ನವಿಲಿನಂತೆ ಮೈತುಂಬ ಕಣ್ಣು ಮಾಡಿಕೊಂಡು ಹೋದಾಗ ಪಟ್ಟ ಶ್ರಮಕ್ಕೆ ಹೆಚ್ಚಿನ ಪ್ರತಿ ಫಲ ಸಿಗುವುದು ಖಂಡಿತ. ಕೆಲಕಡೆ ಆಶ್ರಯದ ಹೆಬ್ಬಾಗಿಲ ಮೇಲ್ಗಡೆಯೇ ಚಿತ್ರಗಳಿದ್ದರೆ. ಮಳೆ ನೀರು. ಬಿಸಿಲು ಸೇರದಕಡೆಗೆ ಇರುವದು ಹೆಚ್ಚು. ಸಾಹಸಿ ಚಿತ್ರಕಾರರು ಮಾಡನ್ನು ಬಳಸಿದರೆ. ಕೆಲವರು ಸಂದಿ. ಬಿರುಕುಗಳಲ್ಲಿಯೂ ತಮ್ಮ ಚಿತ್ರಗಳನ್ನು ಬಿಡಿಸಿದ್ದರಿಂದ ಅಂಬೆಗಾಲಿಕ್ಕಿ. ಅಂಗಾತ ಮಲಗಿ ಅವನ್ನು ಅಭ್ಯಸಿಸಿ ಛಾಯಾಚಿತ್ರಗಳನ್ನು ತೆಗೆಯಬೇಕಾಯಿತು.

ಚಿತ್ರಗಳ ಹಿನ್ನೆಲೆ ಹರಕುಬರಕಾಗಿ ಸ್ಫುಟವಾಗಿರದ್ದರಿಂದ ಅವುಗಳ ಛಾಯಾಗ್ರಹಣ ತೀರ ತೊಡಕಿನದು. ಅಲ್ಲದೇ ಸಹಸ್ರಾರು ವರ್ಷಗಳಲ್ಲಿ ಮಳೆಗಾಳಿ. ಧೂಳು. ಆರ್ದ್ರತೆಗಳ ಪ್ರಕೋಪಕ್ಕೆ ಅವು ಆಹುತಿಯಾಗಿದ್ದರಿಂದ ಹೆಚ್ಚಿನವು ಕಾಂತಿಹೀನವಾಗಿವೆ. ಕೆಲವಂತೂ ಅಸ್ಪಷ್ಟವಾಗಿ ಮಸುಕಾಗಿವೆ. ವಿಶಿಷ್ಟ ಫಿಲ್ಮ್ ಮತ್ತು ಫಿಲ್ಟರ್‌ಗಳನ್ನು ಬಳಸಿದಾಗ ಚಿತ್ರಗಳನ್ನು ಶಿಲ್ಪದಿಂದ ಸ್ವಲ್ಪಬೇರೆಯಾಗಿ ಕಾಣುವಂತೆ ಮಾಡಬಹುದು. ಅವುಗಳ ಮೇಲೆ ನೀರು ಸಿಂಪಡಿಸಿದರೆ ವಿವರಗಳು ಸ್ಫುಟವಾಗಿ ಕಾಣುವುವು. ಆದರೆ ನೀರು ಒಣಗಿದ ನಂತರ ಕ್ಷಾರಗಳು ಅವುಗಳ ಮೇಲೆ ಸಂಚಯವಾಗಿ

ಮೊದಲಿನಕ್ಕಿಂತ ಮಸಕಾಗುವುವು. ಆದ್ದರಿಂದ ರಾಸಾಯನಿಕಗಳಿಂದ ಪರಿಶುದ್ಧ ಮಾಡದೇ ಬೇರೆ ಮಾರ್ಗವಿಲ್ಲ. ಆದರೆ ಹಾಗೆ ನೀರು, ರಾಸಾಯನಿಕಗಳನ್ನು ಎಷ್ಟು ತಾನೇ ಒಬ್ಬ ವ್ಯಕ್ತಿ ಜೊತೆಗೆ ಒಯ್ಯಲು ಸಾಧ್ಯ? ಇವೆಲ್ಲ ಕಷ್ಟಪರಂಪರೆ ತಪ್ಪಿಸಲು ನೇರವಾಗಿ ಛಾಯಾಗ್ರಹಣ ಮಾಡಿ ಅವನ್ನು ಮುದ್ರಣಕ್ಕೆ ಅನುಕೂಲವಾಗುವಂತೆ ರಾಸಾಯನಿಕವಾಗಿ ಸ್ಫುಟಗೊಳಿಸಲಾಗಿದೆ. ಮೂಲಚಿತ್ರಕ್ಕೆ ಹೋಲಿಸಿದಾಗ ಸಂಪೂರ್ಣ ವಿವರಗಳನ್ನು ಇವು ಹೊಂದಿಕೊಳ್ಳದೆ ಕೃತ್ರಿಮವಾಗಿ ಕಂಡರೂ ಆದಿಮಾನವನು ಬಿಡಿಸಿದಾಗ ಇವು ಹೇಗೆ ಇರುತ್ತಿದ್ದವು ಎಂದು ಕಲ್ಪಿಸಲು ಸಹಾಯವಾಗುತ್ತದೆ.

ಈ ಚಿತ್ರಗಳೆಲ್ಲ ಗುಹಾ - ಗೃಹಗಳನ್ನು ಅಲಂಕರಿಸುವದಕ್ಕಾಗಿ ಆಗಲಿ, ಕಲಾಭಿರುಚಿಯಿಂದಾಗಲಿ, ವಿರಾಮದ ಸದುಪಯೋಗಕ್ಕಾಗಲಿ ಬಿಡಿಸಿದವಲ್ಲ. ಭಾವುಕತೆ, ಭೀತಿ, ನಂಬಿಕೆ, ಕಷ್ಟ-ಕುತ್ತುಗಳಿಂದ ಪಾರಾಗುವ ಹವಣಿಕೆಗಳಿಗಾಗಿ ಆದಿಮಾನವನು ಹೂಡಿದ ತಂತ್ರಗಳಿಂದಾಗಿ ಇವು ನಿರ್ಮಾಣವಾದವು. ಅಂತೆಯೇ ಹೆಚ್ಚಿನವು ಮುಂದಾಲೋಚನೆ ಮಾಡಿ ಸುವ್ಯವಸ್ಥಿತವಾಗಿ ಬಿಡಿಸಿದವಲ್ಲ. ಅಂತೆಯೇ ತಮ್ಮ ಹಿಂದಿನವರು ಬಿಡಿಸಿದವನ್ನು ಅಳಿಸುವ ತೊಂದರೆ ಕೂಡ ತೆಗೆದುಕೊಳ್ಳದೇ ಒಂದರ ಮೇಲೆ ಇನ್ನೊಂದನ್ನು ಬರೆಯಲಾಗಿದೆ. ಕೆಲವು ಕಡೆಯಂತೂ ನಾಲ್ಕೈದು ಚಿತ್ರಗಳು ಒಂದೇ ಸ್ಥಳ ಆಕ್ರಮಿಸಿಕೊಂಡು ಬಿಟ್ಟಿದ್ದರಿಂದ ಅವುಗಳ ಬಾಹ್ಯರೇಖೆಗಳನ್ನು ಅವಲಂಬಿಸಿಯೇ ವಿಂಗಡಿಸಬೇಕು. ಇವುಗಳಲ್ಲಿ ಬಳಸಿದ ಬಣ್ಣ ಮತ್ತು ಶೈಲಿಗಳು ಭಿನ್ನವಾಗಿದ್ದರಿಂದ ತಜ್ಞರಿಗೆ ಅವನ್ನು ಕಾಲಾನುಸಾರವಾಗಿ ಬೇರ್ಪಡಿಸಲು ಅನುಕೂಲವಾಗಿದೆ. ಪ್ರಾಚೀನ ಶಿಲಾಯುಗದಲ್ಲಿ ಹಸಿರು, ಅನಂತರ ಕೆಂಪು ಮತ್ತು ಬಿಳಿಬಣ್ಣಗಳನ್ನು ಬಳಸಲಾಗಿದೆ ಎಂದು ಪರಿಣತರ ಅಭಿಪ್ರಾಯ. ಆದರೆ ಈ ಸೂತ್ರಕ್ಕೆ ಅಪವಾದಗಳೇ ಹೆಚ್ಚು. ಕೆಲವೆಡೆಗೆ ಹಸಿರಿನೊಡನೆ ಕೆಂಬಣ್ಣ ಸೇರಿಸಿದರೆ, ಬೇರೆಡೆ ಕೆಂಪಿನೊಡನೆ ಬಿಳಿಬಣ್ಣವನ್ನು ಜೋಡಿಸಲಾಗಿದೆ. ಅಲ್ಲದೇ ಕೆಲವು ಚಿತ್ರಗಳಾದರೂ ಹಳದಿ, ಕಪ್ಪು ಬಣ್ಣಗಳಿಂದ ರಚಿತವಾಗಿವೆ. ಒಂದೇ ಬಣ್ಣದಲ್ಲಿಯೂ ವೈವಿಧ್ಯ ವಿಪರೀತ. ಕೆಂಪಿನಲ್ಲಿ ನಾಶಿಪುಡಿಯಿಂದ ಜಾಂಬಳಿಗೆ ಹೋಲುವವರೆಗೆ ಎಲ್ಲ ಪ್ರಕಾರಗಳೂ ಇವೆ. ಪರಿಸರದಲ್ಲಿ ಸಿಗುವ ಕಲ್ಲುಗಳಿಂದಲೇ ಬಣ್ಣ ತಯಾರಿಸಿ ಉಪಯೋಗಿಸಿದ್ದಾರೆ. ಹಸಿರಿಗಾಗಿ ಪಚ್ಚೆಕಲ್ಲು, ಕೆಂಪಿಗಾಗಿ ಕಬ್ಬಿಣದ ಅದಿರು, ಶ್ವೇತವರ್ಣಕ್ಕೆ ಶೇಡಿಕಲ್ಲುಗಳು ಆಶ್ರಯಗಳ ಆವಾರದಲ್ಲಿ ಲಭ್ಯವಿವೆ. ಶವಗಳನ್ನು ಅಲಂಕರಿಸಲು ಇದೇ ಬಣ್ಣಗಳನ್ನು ಬಳಸಿದ್ದರಿಂದ ಇಂತಹ ಕಲ್ಲುಗಳು ಸತ್ತವರನ್ನು ಹೂಳಿದಲ್ಲಿಯೂ ಸಿಗುತ್ತವೆ. ಮೊಟ್ಟಮೊದಲು ಬೆರಳುಗಳನ್ನೇ ಕುಂಚವಾಗಿ ಬಳಸಿದರೂ, ನಂತರ ಹಕ್ಕಿಯ ಪುಕ್ಕಗಳನ್ನು, ಮರದ ಚಿಕ್ಕಪುಟ್ಟ ಕಡ್ಡಿ, ಟೊಂಗೆಯನ್ನು ಸೂಕ್ಷ್ಮರೇಖೆಗಳು ಬೇಕಾದಾಗ ಮುಳ್ಳು ಹಂದಿಯ ಮುಳ್ಳುಗಳನ್ನು ಬಳಸಿರಬೇಕು.

ಈ ಆದಿಮಾನವನು ಯಾವುದೇ ಸೂತ್ರಕ್ಕೆ ಕಟ್ಟುಬೀಳದೇ ಉಸಿರಾಡಿದಷ್ಟು ಸುಲಭವಾಗಿ ಚಿತ್ರಗಳನ್ನು ಬಿಡಿಸಿದ್ದರಿಂದ ಅವು ಎಷ್ಟು ಸುಲಭವೆನಿಸಿದರೂ ಜೀವ ತುಂಬಿಕೊಂಡು ಥಕ ಥೈ ಎಂದು ಕುಣಿಯುತ್ತವೆ. ಕೇವಲ ಎರಡು ಮೂರು ರೇಖೆಗಳಿಂದಲೇ ನೋಡಿದ ಪಶು ಪಕ್ಷಿಗಳನ್ನು ಭಾವಪೂರಿತವಾಗಿ ರೂಪಿಸುವದರಲ್ಲಿ ನಿಸ್ಸೀಮನವನು. ಈ ಕಡ್ಡಿ ಆಕೃತಿಗಳಲ್ಲಿ ಚಿನ್ಹೆ - ಸಂಜ್ಞೆಗಳನ್ನು ಧಾರಾಳವಾಗಿ ಬಳಸಿಕೊಂಡಿದ್ದಾನೆ. ಸೊಂಡಿಲು ಆನೆಯನ್ನೂ, ಅಲಂಕಾರದ ಕೋಡು ಚಿಗರೆಯನ್ನೂ, ಉದ್ದಗರಿ ನವಿಲನ್ನು ಪ್ರತಿನಿಧಿಸುತ್ತದೆ. ಇದೇ ರೀತಿಯಾಗಿ ಗಂಡುಚಿಗರೆಯನ್ನು ಹೆಣ್ಣಿನಿಂದ ತಕ್ಷಣ ಗುರುತಿಸುವಂತೆ ಎಚ್ಚರವಹಿಸಿದ್ದಾನೆ. ತ್ರಿಕೋನಗಳನ್ನು ವಿವಿಧ ರೀತಿಯಲ್ಲಿ ಜೋಡಿಸಿ, ಪಶು - ಪಕ್ಷಿ ಮಾನವಾಕಾರಗಳನ್ನು ನಿರ್ಮಿಸುವುದು ಅವನ ಸಾಧನೆ. ಇದಕ್ಕಾಗಿ ಎರಡು ಮೂರು ಇಲ್ಲವೇ ಇನ್ನೂ ಹೆಚ್ಚು ತ್ರಿಕೋನಗಳನ್ನು ಬಳಸಿಕೊಂಡಿದ್ದಾನೆ. ಕೈ - ಕಾಲುಗಳ ಜೊತೆಗೆ ಯೋನಿ ಜೋಡಿಸಿದರೆ ಹೆಣ್ಣಾಕೃತಿಯಾಗಿ ಬಿಡುತ್ತದೆ! ಕೆಲವು ಚಿತ್ರಗಳನ್ನು ಏಕವರ್ಣದ ದಪ್ಪವಾದ ಗೆರೆಯಿಂದ ಬಿಡಿಸಿದರೆ,

ಎರಡು ಬಣ್ಣದ ಜೋಡಿ ರೇಖಾಚಿತ್ರಗಳು. ಅಲ್ಲೊಂದು ಇಲ್ಲೊಂದು ಕಾಣಸಿಗುತ್ತವೆ. ಹಲವೆಡೆಯಲ್ಲಿ ರೇಖೆಯ ಒಳಭಾಗದಲ್ಲಿ ತಿಳಿಬಣ್ಣ ಸವರಿ ಉಬ್ಬು ಚಿತ್ರದ ಭಾಸ ಬರುವಂತೆ ಯತ್ನಿಸಲಾಗಿದೆ. ಕೆಲವು ಸಲ ಕೆಂಪು - ಬಿಳಿ, ಕೆಂಪು - ಕಪ್ಪು - ವರ್ಣ ಸಂಯೋಜನೆಯಿಂದಾಗಿ ಚಿತ್ರಗಳ ಆಕರ್ಷಣೆ ಹೆಚ್ಚಿಸಲಾಗಿದೆ. ಕೆಲವು ಚಿತ್ರಗಳನ್ನು ಒಂದೇ ತಿಳಿ ಬಣ್ಣದಿಂದ ರೂಪಿಸಲಾದ್ದರಿಂದ ಅವೆಲ್ಲಾ ನೆರಳು ಚಿತ್ರಗಳಂತೆ ತೋರುತ್ತವೆ.

ಎಲ್ಲಾ ಶಿಲಾಶ್ರಯಗಳಲ್ಲಿ ಪಶು - ಪಕ್ಷಿಗಳಿಗೆ ಅಗ್ರಸ್ಥಾನ ಕೊಡಲಾಗಿದೆ. ಆದಿ ಸಭಾಗೃಹದ ಹತ್ತಿರದ ಗುಹಾ ಗೃಹದ ಮಾಡಿನಲ್ಲಿ ಪ್ರಾಣಿಗಳಸಂತೆ ಸೇರಿದಂತೆ ಒಂದಂಗುಲ ಸ್ಥಳವನ್ನು ಬಿಡದೆ ಚಿತ್ರಿಸಿದ್ದಾರೆ. ಹೆಚ್ಚಿನ ಪ್ರಾಣಿಗಳು ನೆರಳು-ಚಿತ್ರಗಳಾದರೂ ಅವುಗಳ ವೈವಿಧ್ಯ ಎದ್ದುಕಾಣಿಸುವಂಥಾದ್ದು. ಕೆಲವು ಚಿತ್ರಗಳ ಅಂತರ ಭಾಗವನ್ನು ಬರಿದು ಬಿಟ್ಟರೆ ಇನ್ನೂ ಕೆಲವುಗಳಲ್ಲಿ ನಕ್ಷೆಗಳನ್ನು ತುಂಬಲಾಗಿದೆ. ಇವು ಉದ್ದಕ್ಕೆ ಎಳೆದ ರೇಖೆಗಳಿರಬಹುದು. ಇಲ್ಲವೆ ಟಿಸಿಲು ಒಡೆದ ಟೊಂಗೆಗಳಂತಿರಬಹುದು. ಇಲ್ಲವೆ ಜಾಳಿಗೆ, ಕಾಟಕೋನ, ತ್ರಿಕೋನ, ಚೌಕೋನ, ತಿರುವಿನ ವರ್ತುಲ, ಜೇನುಗೂಡುಸಮಾಂತರ ತೆರೆಗಳಂತಹ ಭೂಮಿತಿ - ಆಕಾರಗಳನ್ನೂ ಬಳಸಲಾಗಿದೆ. ಕೆಲವು ಚಿತ್ರಗಳಲ್ಲಿ ಪ್ರಾಣಿಗಳು ಪಾರದರ್ಶಕವೆಂಬಂತೆ ಅವುಗಳ ಉದರದಲ್ಲಿರುವ ಜಠರ - ಮಾಂಸಖಂಡಗಳನ್ನು ತೋರಿಸಲಾಗಿದೆ. ತಜ್ಞರು ಇದೆಲ್ಲಾ ಶುದ್ಧ ತಪ್ಪೆಂದು ಅಭಿಪ್ರಾಯ ಪಟ್ಟರೂ ಆದಿಮಾನವನು ತನ್ನ ಉದರ ಪೋಷಣೆಯಷ್ಟೇ ಜೀವನದ ಪರಮಾತ್ರ ಧೋರಣೆಯಾಗಿಸದೇ ಕಣ್ತೆರೆದು ಸುತ್ತಮುತ್ತಲಿನ ವಸ್ತುಗಳನ್ನು ಚಿಕಿತ್ಸಕ ಬುದ್ಧಿಯಿಂದ ನೋಡುತ್ತಿದ್ದ ಎಂಬುದಕ್ಕೆ ಇವೆಲ್ಲ ಸಾಕ್ಷಿಯಾಗಿವೆ. ಅವನಲ್ಲಿ ಆದಾಗಲೇ ವಿನೋದ ಪ್ರವೃತ್ತಿ ನೆಲೆಗೊಂಡಿತ್ತು. ಅಂತೆಯೇ ಒಂದು ಪ್ರಾಣಿಯ ಉದರದಲ್ಲಿ ಇನ್ನೊಂದು ಪ್ರಾಣಿಯ ಕಲ್ಪನಾವಿನ್ಯಾಸ ಬಿಡಿಸಿದ್ದಾರೆ. ಶುದ್ಧ ಸಸ್ಯಹಾರಿ ಚಿಗರೆಯ ಉದರದಲ್ಲಿ ಆನೆಮರಿಯೊಂದು ಇರುವುದು ಅವನಿಗೆ ತಿಳಿಯದಷ್ಟು ಮೂರ್ಖನಾಗಿರಲಿಕ್ಕಿಲ್ಲ ಎನಿಸುತ್ತದೆ! ಕಾಡಿನಲ್ಲಿ ಸುಖವಾಗಿ ಜೀಯುಬಿಟ್ಟ ಪಶು ಪಕ್ಷಿಗಳಲ್ಲಿ ಮಾನವನ ಹಸ್ತಕ್ಷೇಪದಿಂದಾಗುವ ಅಲ್ಲೋಲ ಕಲ್ಲೋಲವನ್ನು ಚಿತ್ರಿಸಲಾಗಿದೆ. ಪ್ರೇಮಿಯೋರ್ವಳನ್ನು ಕಂಡರೂ ಹೇಗೆ ಮುಂದುವರಿಯಬೇಕೆಂದು ಅರಿಯದೇ ಮಂಕಾಗಿ ನಿಂತ ಕಾಡುಕೋಣ, ವೈರಿಯನ್ನು ಕಂಡು ಕಾಲಿಗೆ ಬುದ್ಧಿ ಹೇಳಿದ ಜಿಂಕೆ, ಜೀವ ರಕ್ಷಿಸಿಕೊಳ್ಳಲು ವೇಗದಿಂದ ಓಡುವ ಗೂಳಿ, ಇದರಂತೆ ಓಡುತ್ತಿರುವ ಸಾರಂಗ, ಕಾಡುಹಂದಿ, ಖಡ್ಗಮೃಗಗಳೂ ನೋಡಸಿಗುತ್ತವೆ. ನಾಲ್ಕೂ ದಿಕ್ಕಿನಿಂದ ಬೆನ್ನಟ್ಟಿಬಂದ ಬೇಟೆಗಾರರಿಂದ ತಪ್ಪಿಸಿಕೊಳ್ಳಲಾಗದೇ ಬೊಬ್ಬಿಡುವ ಮೃಗಗಳ ಕರುಣಾಜನಕ ಚಿತ್ರಗಳೂ ಇವೆ. ಮರದ ಟೊಂಗೆಯ ಮೇಲಿದ್ದ ಗಂಡು ನವಿಲೊಂದು ನಲ್ಲೆಯನ್ನು ಬರಮಾಡಿಕೊಳ್ಳುವದಕ್ಕಾಗಿ ಗರಿಬಿಚ್ಚಿ ಕೇಕೆ ಹಾಕುತ್ತ ನರ್ತಿಸುತ್ತಿದ್ದಾಗ ಕಳ್ಳಹೆಜ್ಜೆಯಿಂದ ಬಂದ ಬೇಟೆಗಾರನನ್ನು ಗಮನಿಸದೇ ಮೋಸಹೋಗುವ ಚಿತ್ರ ಮನ ಕರಗಿಸುವಂತಿದೆ. ತಾನು ಅಂಜುವ ಕ್ರೂರ ಮೃಗಗಳ ಶಕ್ತಿ - ಸಾಮರ್ಥ್ಯಗಳನ್ನು ನಿರೂಪಿಸಲು ಅವನ್ನು ಬೃಹದಾಕಾರದಲ್ಲಿ ಚಿತ್ರಿಸುತ್ತಿದ್ದ. ಕಾಡು ಹಂದಿಗೆ ಬೆದರಿ ನಾಗಾಲೋಟ ಹಾಕುವ ಮಾನವರನ್ನು 'ಲಿಲಿಪುಟ್' ಆಕಾರದಲ್ಲಿ ರೂಪಿಸಿದ್ದು ರೋಚಕವಾಗಿದೆ.

ಈ ಹಳಬರು ವಿವರಗಳಿಗಾಗಿ ತಲೆ ಕೆಡಿಸಿಕೊಂಡವರಲ್ಲ. ಅತ್ಯಾಧುನಿಕ ಕಲಾಕಾರರಂತೆ ಕೇವಲ ಭಾವಸೂಚಿಸುವುದು ಇವರ ಮುಖ್ಯ ಉದ್ದೇಶವಿದ್ದಿರಬೇಕು. ಕಣ್ಣು - ಕಿವಿ - ಕೇಶಗಳ ವಿವರಗಳಿಲ್ಲದೇ ಶಿರೋಲಂಕಾರ ತೋರಿಸುವದರಲ್ಲಿ ಅವರದು ಎತ್ತಿದ ಕೈ. ಬೇಟೆಗೆ ತಾನು ಬರುತ್ತಿರುವ ಸುಳಿವು ಸಿಗಬಾರದೆಂದು ಇಲ್ಲವೇ ತನ್ನ ಸಾಮರ್ಥ್ಯದ ಬಗ್ಗೆ ತಪ್ಪು ಕಲ್ಪನೆಯಾಗಬೇಕು ಎಂದು ಮುಖವಾಡವಿದ್ದ ಶಿರೋಭೂಷಣ ಧರಿಸುತ್ತಿದ್ದರಬೇಕು. ವರ್ತುಲ ಇಲ್ಲವೇ ತ್ರಿಕೋನಕ್ಕೆ ಎರಡು -

ಮೂರು ಗೆರೆ ಜೋಡಿಸಿದರೆ ಮಾನವನ ಮುಖ ಎಂಬ ಭಾವನೆಯುಂಟುಮಾಡುವ ಚಮತ್ಕಾರ ಅವನ ಕುಂಚಕ್ಕೆ ಇತ್ತು. ಅವನ ಸಾಂಘಿಕ ಚಟುವಟಿಕೆಗಳು ಹೆಚ್ಚಾದಂತೆ, ಸೌಂದರ್ಯಕ್ಕಾಗಿ ಹೆಣ್ಣನ್ನು ಆಕರ್ಷಿಸುವುದಕ್ಕಾಗಿ, ಹಂದಿಯ ಕೋರೆ, ಕೋಣನ ಕೋಡು, ಹಕ್ಕಿಯ ಪುಕ್ಕಗಳನ್ನು ಅಲಂಕಾರ ಸಾಧನವಾಗಿ ಬಳಸಿದ್ದನ್ನು ಚಿತ್ರಿಸಲಾಗಿದೆ. ಮಾಟ - ಮೋಡಿಗಳನ್ನು ಮಾಡುವ ಮಂತ್ರವಾದಿಗಳು ಇಂತಹ ಅಲಂಕಾರಗಳಿಗೆ ಮಾರು ಹೋದರು. ಇದರಂತೆ ಬೇಟೆಯಾಡಿ ತಿಂದು ತೇಗಿದ ಪ್ರಾಣಿಗಳ ಎಲುಬುಗಳ ಮಣಿಗಳನ್ನು ಸುಂದರವಾಗಿ ಪೋಣಿಸಿ, ಕಂಠಮಾಲೆ, ತೋಳಬಂದಿ, ಬಾಜೂಬಂದ, ಕಂಕಣ - ಕಡಗಗಳನ್ನು ಮಾಡಿ ಬಳಸಲಾರಂಭಿಸಿದ್ದು ಈ ಚಿತ್ರಗಳಿಂದಲೇ ಅರಿತುಕೊಳ್ಳಬಹುದು.

ತನ್ನ ಶಿಲಾ ಆಸರೆಯಲ್ಲಿ ಮೊಲ, ಏಡಿಗಳಂತಹ ಕಿರಿದಾದ ಪ್ರಾಣಿಗಳನ್ನು ಮೂಡಿಸಲು ಮರೆಯದ ಆದಿಮಾನವ, ಸಕಲ ಸ್ತ್ರೀ ಜಾತಿಗೆ ಮಾತ್ರ ಪಕ್ಷಪಾತ ಮಾಡಿದ್ದಾನೆ. ಸಾವಿರಾರು ಚಿತ್ರಗಳಲ್ಲಿ ಹತ್ತಾರು ಕೂಡ ಸ್ತ್ರೀಗೆ ಮೀಸಲಿಲ್ಲ! ಅಂದಿನ ಮಹಿಳಾ ಸಮಾಜ ಈ ಅನ್ಯಾಯದ ವಿರುದ್ಧ ಬಂಡೆದ್ದು ಸಮತಾವಾದದ ತಳಹದಿಯ ಮೇಲೆ ಸಮಪಾಲು-ಸಮಬಾಳು ಪಡೆದಿದ್ದರೆ ಇಂದಿನ ಲಲನಾಮಣಿಗಳಿಗೆ, ಹೋರಾಟಗಾರ್ತಿಯರಿಗೆ ಇಷ್ಟೆಲ್ಲಾ ತಲೆನೋವು ಇರುತ್ತಿರಲಿಲ್ಲ. ಬಹುಶಃ ಮಾನವನು ತನ್ನ ವಿಕಾಸದ ಪ್ರಾರಂಭಘಟ್ಟದಲ್ಲಿರುವಾಗ, ಪ್ರತಿಕ್ಷಣಕ್ಕೂ ಕಷ್ಟ ನಷ್ಟ, ಸಾವು - ನೋವುಗಳನ್ನು ಎದುರಿಸುವುದು ಅನಿವಾರ್ಯವಾದ್ದರಿಂದ ಹೆಂಗಸರಿಗೆ ಮಕ್ಕಳಿಗೆ ಸುರಕ್ಷತೆ ಒದಗಿಸಿ ಪುರುಷರೇ ತಮ್ಮ ಶಾರೀರಿಕ ಮತ್ತು ಮಾನಸಿಕ ಬಲದಿಂದ ಹೋರಾಡಿ ಜಯಶಾಲಿಗಳಾಗಿದ್ದಿರಬೇಕು. ಅಂತೆಯೇ ಹೆಂಗಸರೇ ಗಂಡಸು ವೀರನೆಂದು ಒಪ್ಪಿಕೊಂಡು ಗೌರವಿಸಿರಬೇಕು. ಈ ಪರಂಪರೆಯನ್ನು ಬದಲಿಸಲು ವಿವಿಧ ತಲೆಮಾರಿನ ನಾರಿಯರು ತಲೆಕೆಡಿಸಿಕೊಳ್ಳದ್ದರಿಂದ ಇಂದಿನ ಪ್ರಬುದ್ಧ ಹೆಂಗಳೆಯರು ಅಬಲೆಯರೆಂದೆನಿಸಿಕೊಳ್ಳಬೇಕಾಗಿದೆ! ಇಂದಿನವರಾದರೂ ಈ ಸಂಕೀರ್ಣತೆಯ ಸಂಕೋಲೆಯನ್ನು ಕತ್ತರಿಸಿ ಹಾಕಿದರೆ ಮುಂದಿನ ಪೀಳಿಗೆಯವರಾದರೂ ಗಂಡು-ಹೆಣ್ಣು ಎಂದು ಭೇದ-ಭಾವವಿಲ್ಲದೇ ಬಾಳಿಯಾರು. ಭೀಮ ಬೆಟಕಾ ಮತ್ತು ಸ್ಪೇನಿನ ಗುಹಾಚಿತ್ರಗಳು ಸಮಕಾಲೀನವಾದರೂ ಇವೆರಡರಲ್ಲಿ ಮುಖ್ಯ ಅಂತರವಿದೆ. ಅಲ್ಲಿಯವರು ಸಂತತಿ ಅಭಿವೃದ್ಧಿಯನ್ನು ಕೋರಿ ಚಿತ್ರಗಳನ್ನು ಬಿಡಿಸಿದ್ದರಿಂದ ಲಿಂಗಕ್ಕೆ ಅತಿ ಹೆಚ್ಚಿನ ಪ್ರಾಧಾನ್ಯ ನೀಡಲಾಗಿದೆ. ಇಲ್ಲಿಯ ಹೆಚ್ಚಿನ ಚಿತ್ರಗಳು ಜನನೇಂದ್ರಿಯ ತೋರಿಸಿಲ್ಲ. ಹೆಣ್ಣನ್ನು ಗುರ್ತಿಸಲು ಚಿಕ್ಕ ಯೋನಿಯನ್ನು ತೋರಿಸಲಾಗಿದೆಯೇ ಹೊರತು ಸ್ತನಗಳನ್ನು ಕೈಬಿಡಲಾಗಿದೆ. ಕೆಲವು ಕಡೆಯಲ್ಲಿ ಸ್ತ್ರೀಯರಿಗೆ ಮಾತೆ ಮತ್ತು ದೇವಿಯರ ಸ್ಥಾನಕ್ಕೆ ಏರಿಸಿದ್ದರಿಂದ ಭಕ್ತರ ರಕ್ಷಣೆಗಾಗಿ ತುಂಬಿದೆದೆಗಳಿಂದ ಹಾಲು ಚಿಮ್ಮುವಂತೆ ಪ್ರತಿನಿಧಿಸಲಾಗಿದೆ.

ಶಿಲಾಚಿತ್ರಗಳು ಆದಿಮಾನವನ ಕಲೆಯ ಉದರ ಮತ್ತು ಅಭಿವೃದ್ಧಿಗಳ ಸಾಕ್ಷಿ ಚಿತ್ರಗಳು ಇದ್ದಂತೆ. ಅವನ ಅವಿಶ್ರಾಂತ ಹೋರಾಟವನ್ನು ನಿರೂಪಿಸುತ್ತವೆ. ಶಿಲಾಯುಧ, ಬಿಲ್ಲು - ಬಾಣ, ಖಡ್ಗ - ಭರ್ಜಿ ಸಿದ್ಧಮಾಡಿ ತನ್ನ ವೈರಿಗಳನ್ನು ಸದೆಬಡಿದು, ಪರಿಸರನಿಯಂತ್ರಿಸಲಾರಂಭಿಸಿದಾಗ ವಿರಾಮವಾಗಿ ಇನ್ನಿತರ ಚಟುವಟಿಕೆಗಳತ್ತ ಲಕ್ಷ್ಯ ಹರಿಸಲು ಅನುಕೂಲವಾಯಿತು. ಬಿದುರು, ತೊಗಟೆಗಳನ್ನು ಬಳಸಿ ಬುಟ್ಟಿ ಹೆಣೆಯಲಾರಂಭಿಸಿದ. ಬಿದ್ದ ಹಣ್ಣು - ಹಂಪಲುಗಳ ಬದಲಾಗಿ ಮರವೇರಿ, ಬೇಕಾದ ಕಾಯಿ ತೆಗೆದು ಹಣ್ಣು ಮಾಡಲಾರಂಭಿಸಿದ. ದೊಣ್ಣೆಯೊಂದಕ್ಕೆ ಜೋಡಿ ಬುಟ್ಟಿಗಳನ್ನು ಜೋಡಿಸಿ ಹಣ್ಣು ತರುವ ಚಿತ್ರ ತುಂಬ ನೈಜವಾಗಿದೆ. ತಾಳೆಗರಿಗಳನ್ನು ಹೆಣೆದು ತನ್ನ ಶಿಲಾಗೃಹಕ್ಕೆ ಹೆಚ್ಚಿನ ಸಂರಕ್ಷಣೆ ಕಲ್ಪಿಸಿಕೊಂಡಿರಬೇಕು. ತೊಗಟೆಗಳಿಗೆ ಹುರಿ ಹಾಕಿ ಹಗ್ಗ ಮಾಡಲು ಕಲಿತಂತೆ, ನಾರು ಹೆಣೆದು ಬಟ್ಟೆಗಳನ್ನು ಪ್ರಾರಂಭಿಸಿದ. ಸೂಜಿಯ ಅವಶ್ಯಕತೆ ಇದ್ದಾಗ ಮೀನು - ಮುಳ್ಳು, ಬಳಸಿರಬೇಕು. ಕೊಡಲಿಯನ್ನು ಹೆಗಲಿಗೇರಿಸಿ ಮರ ಕಡಿಯಲು ಹೊರಟವರನ್ನು ಕಲಾಕಾರ

ಮರೆಯಲಿಲ್ಲ. ತಾನು ಕಷ್ಟಪಟ್ಟು ಸಂಗ್ರಹಿಸಿದ ಕೆಲವೇ ಸಾಮಾನುಗಳಿಗೆ ಕಾವಲಿರಲು. ಬೇಟೆಯಲ್ಲಿ ಸಹಾಯ ಮಾಡಲು. ನಿಷ್ಠ ಪ್ರಾಣಿ ನಾಯಿಯನ್ನು ಪಳಗಿಸಲಾರಂಭಿಸಿದ. ಸುಮಾರು ಇದೇ ಸಮಯದಲ್ಲಿ ಕುಕ್ಕುಟಪಾಲನೆ ಅಸ್ತಿತ್ವದಲ್ಲಿ ಬಂದಿರಬೇಕು. ಕಾಡುಕೋಳಿಯೊಂದು ಅಶ್ವಾರೋಹಿಯನ್ನು ಬೆದರಿದ ಚಿತ್ರವೊಂದು ಭೀಮ ಬೆಟಕಾದಲ್ಲಿದೆ.

ಜನವಸತಿ ಬೆಳೆದಂತೆ ಜೀವನಾವಶ್ಯಕತೆಗಳೂ ಬೆಳೆದು ಬಣಬಣಗಳ ಮತ್ಸರದಿಂದ ಕಾದಾಟ-ಬಡಿದಾಟ-ಹೋರಾಟಗಳಿಗೆ ಎಡೆಮಾಡಿಕೊಟ್ಟಿತು. ನಿರಾಯುಧರು ಮಲ್ಲಯುದ್ಧದಲ್ಲಿ ತೊಡಗಿದರೆ ಖಡ್ಗ- ಢಾಲು-ಧಾರಿಗಳಲ್ಲಿ ಭೀಕರ ದ್ವಂದ್ವ ಕಾಳಗ ನಡಯುತ್ತಿತ್ತು. ವಿವಿಧ ಆಯುಧಗಳೊಡನೆ ವೈರಿಯನ್ನು ಸದೆಬಡಿಯಲು ಹೊರಟ ತಂಡದ ಚಿತ್ರಗಳು ಹೇರಳವಾಗಿವೆ. ಭೀಮ ಬೆಟಕಾದ ಪರಿಸರದಲ್ಲಿ ಕಾಡುಕುದುರೆ ಜೀವಿಸಿದ್ದ ಕುರುಹುಗಳು ಇಲ್ಲದ್ದರಿಂದ ಇವುಗಳನ್ನು ದೂರದಿಂದ ಬಂದ ತಂಡದವರಿಂದ ಗೆದ್ದುಕೊಂಡಿರಬೇಕು. ಅನಂತರ ತಾವು ಅಶ್ವಪಾಲನೆ ಕೈಗೊಂಡಿರಬೇಕು. ಇಲ್ಲವೇ ಮೊದಲಿಗೆ ಹೊರಗಿನಿಂದ ಕುದುರೆಗಳನ್ನು ಕೊಂಡು ತಂದಿರಬೇಕು. ಕುದುರೆ ಸವಾರರು ಸರದಾರರಂತೆ ಠೀವಿಯಿಂದ ಕೂಡ್ರದೇ ವೈರಿಯ ಯಾವ ದಿಕ್ಕಿನಿಂದ ಆಕ್ರಮಣ ಮಾಡಿದರೂ ಹಿಂದೆ ಮುಂದೆ ನೋಡಲು ಬರುವಂತೆ. ತಮ್ಮ ಮುಖವನ್ನು ಕುದುರೆಯ ಎಡಬದಿಗೆ ಬರುವಂತೆ ಕುಳಿತುಕೊಳ್ಳುತ್ತಿದ್ದರು. ಇದರಿಂದ ಕ್ಷಣಾರ್ಧದಲ್ಲಿ ವೈರಿಯು ಮೇಲೆ ಜಿಗಿಯಲು ಇಲ್ಲವೆ ನೆಲಕ್ಕಿಳಿದು ಅವಿತು ಕೊಳ್ಳಲು ಸುಲಭವಾಗುತ್ತಿದ್ದಿರಬೇಕು. ಅದಾಗಲೇ ಲೋಹಗಳಿಂದ ಆಯುಧಗಳನ್ನು ತಯಾರಿಸುವ ತಂತ್ರವನ್ನು ಅವರು ಕರಗತಮಾಡಿಕೊಂಡಿದ್ದರೆಂದು ಅಶ್ವಾರೋಹಿಯೋರ್ವನು ಹಿಡಿದ ಖಡ್ಗದಿಂದ ಅರಿಯಬಹುದು. ಈ ಎಲ್ಲಾ ಸರಂಜಾಮು. ಸಲಕರಣೆಗಳನ್ನು ಬಳಸಿ ವೈರಿಯನ್ನು ಸದೆಬಡಿಯಬಲ್ಲವನು ನಾಯಕನೆಂದು ಬಣದವರೆಲ್ಲ ಒಪ್ಪಿಕೊಳ್ಳುತ್ತಿದ್ದರು. ಅಂಥವನು ಕುದುರೆಯ ಮೇಲೆ ಹೊರಟಾಗ. ಕಾಲಾಳು. ಹಕ್ಕಿಗರಿಗಳ ಕೊಡೆಯನ್ನು ಹಿಡಿಯುವ ಪರಿಪಾಠಕ್ಕೆ ಎಡೆಯಾಯಿತು. ಆದರೆ ಕಾಲಾಳು ಕುದುರೆಯ ವೇಗದಿಂದ ಓಡಬೇಕಾಗಿತ್ತೇ ಇಲ್ಲವೇ ಕುದುರೆ ಕಾಲಾಳಿನ ವೇಗಕ್ಕೆ ಅನುಗುಣವಾಗಿ ಮಂದಗತಿಯಿಂದ ಚಲಿಸುತ್ತಿತ್ತೇ ಎಂದು ಹೇಳುವುದು ಕಷ್ಟ!

ದೈನಂದಿನ ಅವಶ್ಯಕತೆಗಳು ಸುಲಭವಾಗಿ ಈಡೇರ ಹತ್ತಿದಾಗ. ಆದಿಮಾನವನು. ನೃತ್ಯ. ಸಂಗೀತಗಳತ್ತ ಲಕ್ಷಹರಿಸಿದ. ಇವು ವಿನೋದಕ್ಕಿಂತ ಮುಖ್ಯವಾಗಿ ಧಾರ್ಮಿಕ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮೀಸಲಾಗಿದ್ದಿರಬೇಕು-ಲಿಂಗಭೇದವಿಲ್ಲದೇ ಇಪ್ಪತ್ತು-ಮೂವತ್ತು ಜನರು ಸಾಲಾಗಿ ನಿಂತು ನರ್ತಿಸುತ್ತಿದ್ದರು. ಕೆಲವರು ಮುಖವಾಡ ಧರಿಸಿದರೆ. ಕೆಲವರು ಕೈಯಲ್ಲಿ ಕೋಲು ಹಿಡಿಯುತ್ತಿದ್ದರು. ನರ್ತಕರ ವಿವಿಧ ಭಂಗಿಗಳನ್ನು ಕೆಲವೇ ರೇಖೆಗಳಲ್ಲಿ ನಿರೂಪಿಸುವ ಜಾಣ್ಮೆ ಶ್ಲಾಘನೀಯ. ಆದಿಮಾನವರು ನಗ್ನರಾಗಿರುತ್ತಿದ್ದರೆಂದು ಜನಸಾಮಾನ್ಯರ ಕಲ್ಪನೆಯಾಗಿದ್ದರೂ ಎಲ್ಲ ಚಿತ್ರಗಳಲ್ಲಿ ಸೊಂಟದ ಬಟ್ಟೆಯನ್ನು ಚಿತ್ರಿಸಲು ಕಲಾಕಾರನು ಮರೆತಿಲ್ಲ. ಲಿಂಗಭೇದ ವಿಲ್ಲದೇ ಲಂಗೋಟಿಯೊಂದೇ ಅವರ ಏಕವಸ್ತ್ರವಾಗಿದ್ದಿರಬೇಕು. ಇನ್ನಿತರ ಚಟುವಟಿಕೆಗಳಲ್ಲಿ ಈ ಬಟ್ಟೆಯನ್ನು ಕಚ್ಚೆ ಹಾಕಿ ಉಟ್ಟರೂ ನೃತ್ಯಸಮಯದಲ್ಲಿ ಧೋತರದ ನಿರಿಗೆಗಳಂತೆ ಇಳಿ ಬಿಡುತ್ತಿದ್ದರು. ಜೋಕಾಲಿಯಾಟ - ನೌಕಾವಿಹಾರಗಳೂ ರೂಢಿಯಲ್ಲಿದ್ದವೆಂದು ಚಿತ್ರಗಳು ಹೇಳುತ್ತವೆ. ಬೌದ್ಧಧರ್ಮದ ವರ್ಚಸ್ಸಿಗೆ ಒಳಗಾಗದವರು ತಮ್ಮ ಹಸ್ತಾಕ್ಷರಗಳನ್ನು ಬ್ರಾಹ್ಮಿಲಿಪಿಯಲ್ಲಿ ಮೂಡಿಸಿದ್ದಾರೆ. ನಿರಕ್ಷರಿಗಳು ತಮ್ಮ ಹಸ್ತ ಮುದ್ರಿಕೆಯನ್ನು ನಂತರದ ತಲೆಮಾರಿನವರಿಗೆ ಬಿಡಲು ಮರೆಯಲಿಲ್ಲ!

ಆದಿವಾಸಿಗಳ ಮತ್ತು ಆದಿಮಾನವರ ಕಲೆಗಳಲ್ಲಿ ಸಾಮ್ಯ ಹುಡುಕಲು ಹೋದವನಿಗೆ ಅವನ ಜೀವನದಲ್ಲಿರುವ ಸಾಮ್ಯ ಕಂಡು ದಿಗ್ಭ್ರಮೆಯಾಯಿತು. ಸಹಸ್ರಾರು ವರ್ಷಗಳಿಂದ ಮಧ್ಯಪ್ರದೇಶದ ಆದಿವಾಸಿಗಳು ಏಕ ಪ್ರಕಾರವಾದ ಜೀವನ ನಡೆಸುತ್ತ ಬಂದಿದ್ದಾರೆ. ಇಂದಿನವರೂ ಬೇಟೆಯ

ಯಶಸ್ಸಿಗಾಗಿ ಗೋಡೆಗಳ ಮೇಲೆ ತ್ರಿಕೋನ ವರ್ತುಲಗಳನ್ನು ಬಳಸಿ ಪಶು-ಪಕ್ಷಿ, ಮಾನವನ ಚಿತ್ರ ಬಿಡಿಸುತ್ತಾರೆ. ಮುಖವಾಡಗಳನ್ನು ಧರಿಸುತ್ತಾರೆ. ಕಾಡುಕೋಣನ ಕೋಡು, ಕಾಡುಹಂದಿಯ ಕೋರೆಹಲ್ಲು, ಹಕ್ಕಿಗಳ ಗರಿಗಳನ್ನು ಶಿರೋಭೂಷಣಗಳಲ್ಲಿ ಧರಿಸುತ್ತಾರೆ. ಅಬುಜಮಾಡದಂತಹ ಒಳ ಪ್ರದೇಶದಲ್ಲಿ ಗಂಡು ಹೆಣ್ಣು ಲಂಗೋಟಿ-ತುಂಡುಸೀರೆಗಳನ್ನು ಬಳಸುತ್ತಾರೆ. ಬಿಲ್ಲು-ಬಾಣಗಳಿಂದ ಬೇಟೆಯಾಡುತ್ತಾರೆ. ಗಂಡು ಹೆಣ್ಣು ಜೊತೆಯಾಗಿ ನರ್ತಿಸುತ್ತಾರೆ. ತಮ್ಮ ಹತ್ತಿರ ಕುದುರೆಗಳಿಲ್ಲದಿದ್ದರೂ ವೀರನ ಕುದುರೆ ಸವಾರಿ ತೋರಿಸುತ್ತಾರೆ. ಅಂದು ಇಂದಿನದರ ಈ ಬಣಗಳ ತೌಲನಿಕ ಅಭ್ಯಾಸ ಮಾಡಿದರೆ ಮಾನವನು ತುಳಿದು ಬಂದ ದಾರಿಯ ಬಗ್ಗೆ ಹೆಚ್ಚಿನ ಜ್ಞಾನ ಸಿಗುವಂತಾಗಬಹುದು.

೨೦ ~~೧೮.~~ ಗೊಂಡಾರಣ್ಯದ ಗೊಂಡರು



ಮಧ್ಯಪ್ರದೇಶದ ಉದ್ದಗಲಕ್ಕೂ ಗೊಂಡ ಆದಿವಾಸಿಗಳು ದುಡಿಮೆಗಾರರಾಗಿದ್ದಾರೆ. ಸ್ಥಾನೀಯರು ಅವರನ್ನು 'ಗೂಂಡ್' ಎಂದೇ ಸಂಬೋಧಿಸುತ್ತಾರೆ. ಅವರು ಇಲ್ಲದ ಊರು ಇಲ್ಲ. ಮಾಡದ ಕೆಲಸವಿಲ್ಲ. ಹೊಲಗಳಲ್ಲಿ, ಹೊಟೇಲ್‌ಗಳಲ್ಲಿ, ಪೌರಕೆಲಸಕ್ಕೆ, ಕಟ್ಟಿಗೆ ಒಡೆಯಲು, ಕೈಗಾಡಿ ದೂಡಲು, ಅವರನ್ನೇ ನೇಮಿಸಿಕೊಳ್ಳುತ್ತಾರೆ. ಇದಲ್ಲದೇ ತರಕಾರಿ, ಹಣ್ಣು ಹಂಪಲು, ಕಟ್ಟಿಗೆ, ಹುಲ್ಲು ಹೊರೆಗಳನ್ನು ಮಾರಿ ಉದರ ಪೋಷಣೆ ಮಾಡಿಕೊಳ್ಳುತ್ತಾರೆ. ಪಟ್ಟಣದ ಸುತ್ತಮುತ್ತಲಿನ ಸಣ್ಣ - ಪುಟ್ಟ ಹಳ್ಳಿಗಳಲ್ಲಿ ಅವರ ವಾಸ. ಇನ್ನೂ ಕತ್ತಲಿರುವಾಗಲೇ ಪಟ್ಟಣಕ್ಕೆ ಬಂದು ದಿನವಿಡೀ ಕತ್ತೆಯಂತೆ ದುಡಿದು, ಸಾಯಂಕಾಲ ಕೈಗೆ ಹಾಕಿದ ಅಲ್ಪ ಸಂಬಳದಲ್ಲಿಯೇ ಉಪ್ಪು, ಬೆಲ್ಲ, ಎಣ್ಣೆ, ಖಾರಗಳ ಜೊತೆಗೆ ಮಕ್ಕಳಿಗೆ ಅಗ್ಗದ ಮಿಠಾಯಿ ಕೊಂಡು ಗೃಹಾಭಿಮುಖಿಗಳಾದರೆಂದರೆ ಅದೊಂದು ಯಶಸ್ವಿ ದಿನವೆಂದು ಪರಿಗಣಿಸಬೇಕು. ಗೊಂಡತಿಯರನ್ನು ನೋಡುವದೇ ಕಣ್ಣಿಗೊಂದು ಹಬ್ಬ. ನಾಲ್ಕೈದು ಜನರ ಗುಂಪಿನಲ್ಲಿಯೇ ಅಲೆಯುವದು ಅವರ ವಾಡಿಕೆ. ಕೆಂಪು, ನೀಲಿ, ಜಾಂಬಳಿ, ಹಸಿರು ಬಣ್ಣದ ಒಂಬತ್ತು ಗಜದ ಸೀರೆಗಳನ್ನು ಹಿಂಗಚ್ಚೆ ಹಾಕಿಯೇ ಉಡುತ್ತಾರೆ. ಒಂದೂವರೆ ಗಜದ ಬಟ್ಟೆಯ ಉದ್ದತೋಳಿನ ವಿಶಾಲವಾದ ರವಕೆಗಳೂ ಅವರ ದೇಹದ ಮಾಟವಾದ ಉಬ್ಬು - ತಗ್ಗುಗಳನ್ನು ಹಾದಿಹೋಕರಿಂದ ಮುಚ್ಚಿಡಲು ಅಸಮರ್ಥವೆನಿಸುತ್ತವೆ. ಅವರನ್ನು ಹತ್ತಿರದಿಂದ ಕಂಡಾಗ ಬಿದರಿ ಲೋಹದ ವಿಗ್ರಹಗಳು ಕಣ್ಣಿಗೆ ಕಟ್ಟಿದಂತಾಗುತ್ತದೆ. ಕೃಷ್ಣ ವರ್ಣದವರಾದರೂ ನಿಸರ್ಗದತ್ತ ಹೊಳಪಿನಿಂದ ಮಿನುಗುತ್ತಿರುತ್ತಾರೆ. ತೋಳು, ಮುಂಗೈಗಳಿಗೆ ತೊಟ್ಟ ಬೆಳ್ಳಿಯ ವಂಕಿ, ಬಳೆಗಳು,

ಸೊಂಟಕ್ಕೆ ಅಗಲವಾದ ಡಾಬು. ಪುಷ್ಟವಾದ ಮಾಂಸಖಂಡಗಳನ್ನು ಮುಚ್ಚಲು ಅಸಮರ್ಥವಾದ ಸೀರೆಯ ನೀರಿಗೆಗಳನ್ನು ವೀಕ್ಷಿಸುತ್ತಿದ್ದಂತೆ. ಶಿಲಾಬಾಲಿಕೆಯರು ಕಣ್ಣಿಗೆ ಕಟ್ಟಿದಂತಾಗುತ್ತಾರೆ.

ಗೊಂಡರ ಗೃಹಜೀವನವನ್ನು ಅಭ್ಯಸಿಸುವದಕ್ಕಾಗಿಯೇ ಇದಾಗಲೇ ಪರಿಚಯವಾಗಿದ್ದ ಲಖ್ಖನ್ ('ಲಕ್ಷ್ಮಣ'ದ ಅಪಭ್ರಂಶ)ನ ಡಿಮ್‌ರಾ ಥಾನಾ ಹಳ್ಳಿಗೆ ಭೇಟಿ ಕೊಟ್ಟಾಗ. ಹಿತ್ತಲಿನ ಬಾವಿಯಿಂದ ನೀರು ಸೇದಿ ಸ್ನಾನ ಮಾಡುತ್ತಿದ್ದ ಅರೆ ನಗ್ನ. ಹರೆಯದ ಹುಡುಗಿ ಮುಜುಗರದಿಂದ ಒಳಗೆ ಓಡಿ ಅಪರಿಚಿತನ ಆಗಮನವನ್ನು ಸಾರಿದಳು. ನಾಡ ಹಂಚು ಹೊದಿಸಿದ ಗುಡಿಸಲು ಚಿಕ್ಕದಾದರೂ ಚೊಕ್ಕಟವಾಗಿತ್ತು. ಅಂಗಳ - ಗೋಡೆಗಳನ್ನು ಶುಭ್ರವಾಗಿ ಸಾರಿಸಿ ಅದರ ಮೇಲೆ ಸುಂದರವಾದ ರಂಗೋಲಿ ('ಹಾತಾ') ಹಾಕಿದ್ದರು. ಅಲ್ಲದೇ ಅಲ್ಲಲ್ಲಿ ಉಬ್ಬು ಚಿತ್ರಗಳನ್ನು ರಚಿಸಲಾಗಿತ್ತು. ರಚನೆ ತೀರ ಸಾದಾ ಇದ್ದರೂ ಅವು ಯಾವ ಪಶು - ಪಕ್ಷಿಗಳನ್ನು ಪ್ರತಿನಿಧಿಸುತ್ತವೆ. ಎಂದು ಸುಲಭವಾಗಿ ಹೇಳಬಹುದಿತ್ತು. ವರ್ತುಲ ಒಂದಕ್ಕೆ ಜೋಡಿ ರೆಕ್ಕೆ ಜೋಡಿಸಿದಾಗ. ಅದು ಹಾರುವ ಹಕ್ಕಿಯಾಗಿ ಬಿಡುತ್ತದೆ. ನಾಲ್ಕು ಕಂಬದಂಥ ಕಾಲುಗಳಿಗೆ ಮುಂದೆ ಸೊಂಡಿಲು. ಹಿಂದೆ ಬಾಲ ಇದ್ದರೆ ಆನೆಯಂತೆ ಕಾಣುತ್ತದೆ. ಇದರಂತೆ ಹುಲಿ. ಕರಡಿ. ನಾಯಿ. ಬೆಕ್ಕುಗಳೆಲ್ಲ ಗೋಡೆಯ ಮೇಲೆ ವಿರಾಜಿಸುತ್ತಿದ್ದವು. ಒಂದು ಮೂಲೆಯಲ್ಲಿ ಜೇಡಿ ಮಣ್ಣಿನಿಂದ ರಚಿಸಿದ ಬಾನಿ ನಿಂತಿತ್ತು. ಅದನ್ನು ಚೌಕೋನಾಕಾರದಲ್ಲಿ ರಚಿಸಿ ಉಬ್ಬು ಚಿತ್ರ ಇತರೇ ಚಿತ್ರಗಳಿಂದ ಅಲಂಕಿಸಲಾಗಿತ್ತು. ಬೇಕೆನಿಸಿದಾಗ ಧಾನ್ಯವನ್ನು ಬುಡದಲ್ಲಿ ಇದ್ದ ಕಿರಿದಾದ ಬಿಲದಿಂದ ಹೇಗೆ ಪಡೆಯಬಹುದು.? ಎಂದು ಯಜಮಾನ ವಿವರಣೆ ನೀಡಿದ. ಅನಂತರ ಬತ್ತವನ್ನು ಕುಟ್ಟುವ ಒನಕೆ. ಬೀಸುವ ಕಲ್ಲು. ಗೆರಸೆ. ಕುರ್ಚಿಗಳನ್ನು ಒಂದೊಂದಾಗಿ ತಂದು ತೋರಿಸಿದ. ಹಿಂದೊಮ್ಮೆ ಇಂಥ ಗೃಹಸಲಕರಣೆಗಳು ನಮ್ಮೂರಿನಲ್ಲಿಯೂ ಬಳಕೆಯಲ್ಲಿ ಇದ್ದವು. ಇಂದು ಅವೆಲ್ಲ ವಿವಿಧ ವಸ್ತು ಸಂಗ್ರಹಾಲಯಗಳನ್ನು ಸೇರಿ. ವಿವಿಧ ಮಶೀನುಗಳು ಮನೆ ಸೇರಿವೆ ಎಂದು ನೆನೆದು ಕಳವಳವಾಯಿತು.

ಹುಲ್ಲಿನ ಮಾಡಿನ ಆಶ್ರಯದಲ್ಲಿ ಎರಡು ಚಕ್ರದ ತೀರ ಚಿಕ್ಕದಾದ ಚಕ್ಕಡಿಯೊಂದು ನಿಂತಿತ್ತು. ಅದು ಮಕ್ಕಳ ಆಟಕ್ಕೆ ಮೀಸಲೇ? ಎಂದು ಪ್ರಶ್ನಿಸಿದಾಗ. "ಬಾಬೂ. ಅದು 'ಚಕಡಾ'. ನಮ್ಮ ಹತ್ತಿರ ಇರುವ ಒಂದೇ ಒಂದು ಸಂಚಾರ ಸಾಧನ. ಅದನ್ನು ಸ್ಥಳೀಯ ಕಂಬಾರನಿಂದ ಮಾಡಿಸಿದ್ದೇವೆ. ತೀರ ಹಗುರವಾಗಿರುವದೇ ಅದರ ವೈಶಿಷ್ಟ್ಯ. ಆದರೆ ಅದಕ್ಕೆ ಜೋಡಿ ಎತ್ತು ಕಟ್ಟುವದರಿಂದ ಪ್ರಬಲವಾದ ಇಂಜಿನ್ ಇದ್ದ ಭೋಪಾಲ್ ನವಾಬನ ರೋಲ್ಸರಾಯ್ಸ ಕಾರಿನಂತೆ ಓಡುತ್ತದೆ. ಮಹಾಭಾರತ ಯುದ್ಧದಲ್ಲಿ ಶ್ರೀ ಕೃಷ್ಣ ಪರಮಾತ್ಮನು ಓಡಿಸಿದ ರಥಕ್ಕೂ ಇಂಥ ವೇಗ ಇತ್ತೊ ಇಲ್ಲವೋ ಹೇಳುವದು ಕಷ್ಟ! ಇದು ಕಾಣಲು ತೀರ ಬಡಕಲು ಅನಿಸಿದರೂ ಅತ್ಯಂತ ಶಕ್ತಿಯುತವಾಗಿದೆ. ಮೂರು - ನಾಲ್ಕು ಸವಾರರು ಸುಖವಾಗಿ ಪಯಣಿಸಬಹುದು. ಇಲ್ಲವೇ ಒಂದು ಕ್ವಿಂಟಲ್ ಭಾರದ ಮೂಟೆ ಮತ್ತು ಈರ್ವರು ಪಯಣಿಸಬಹುದು. ಹೇಗಾದರೂ ನಮಗೆ ಎತ್ತುಗಳು ಹೊಲದ ಸಾಗುವಳಿಗೆ ಬೇಕೇ ಬೇಕು. ನಾವು ಉತ್ಪಾದಿಸಿದ ಸಾಮಾನುಗಳನ್ನು ಸಂತೆಯಲ್ಲಿ ಮಾರಲು ಮತ್ತು ಕೊಂಡ ಸರಕನ್ನು ಮನೆಗೆ ಸಾಗಿಸಲು ಇದನ್ನು ಬಳಸುತ್ತೇವೆ. ಎತ್ತುಗಳು ಹೊಲಕ್ಕೆ ಹೋಗಿವೆ. ಇಲ್ಲದಿದ್ದರೆ ಚಕಡಾ ಸವಾರಿ ಮಾಡಿಸಿಯೇ ಬಿಡುತ್ತಿದ್ದೆ" ಎಂದು ಅಭಿಮಾನದಿಂದ ನಕ್ಕ. ಆಮೇಲೆ ಮನೆಯ ರಚನೆ ತೋರಿಸಲು ಒಳಗೆ ಕರೆದೊಯ್ದ. ಒಂದು ಮೂಲೆಯಲ್ಲಿ ಮಾಡಿನಿಂದ ನೇತಾಡುತ್ತಿದ್ದ ಬೆತ್ತದ ತೊಟ್ಟಿಲಲ್ಲಿ ನಿದ್ರಿಸುತ್ತಿದ್ದ ಮಗುವನ್ನು ತೋರಿಸುತ್ತ. ಸೊಸೆ ಹಡೆದಿದ್ದಾಳೆ ಎಂದು ವಿವರಿಸಿದ. ಒಲೆ ಉರಿಯುತ್ತಿತ್ತು. ನಾಲ್ಕಾರು ಮಣ್ಣಿನ. ಅಲ್ಯುಮಿನಿಯಂ ಪಾತ್ರೆಗಳಿರುವ ಸ್ಥಳವೇ ಅಡಿಗೆ ಮನೆ ಎಂದ.

ಹೆಂಗಳೆಯರನ್ನು ತೀರ ಹತ್ತಿರದಿಂದ ನೋಡುವದಕ್ಕಾಗಿ ಛಾಯಾಗ್ರಹಣ ಪ್ರಾರಂಭಿಸಬೇಕಾಯಿತು. ನಡು ವಯಸ್ಸಿನ ಗೃಹಿಣಿ, "ನಾವೇನು .... ನಗರವಾಸಿಗಳಂತೆ ಚೆಲುವರಲ್ಲ. ನಮ್ಮ ಫೋಟೋ ತೆಗೆದು ಏನು ಮಾಡುವಿರಿ ಬಾಬೂಜಿ!' ಎಂದು ವಕ್ರದಂತ ಪಂಕ್ತಿ ಪ್ರದರ್ಶಿಸುತ್ತ ನಕ್ಕಳು. "ನಿಮ್ಮ ಅಲಂಕಾರ, ಆಭರಣ, ಹಚ್ಚೆಗಳನ್ನು ನಮ್ಮವರಿಗೆ ತೋರಿಸುವದು ಬೇಡವೇ?" ಎಂದು ವಿಚಾರಿಸಿದಾಗ ಅಭಿಮಾನ ಪಟ್ಟಳು. ಆಹಾರದಲ್ಲಿ ಆಯೊಡಿನ್ ಕೊರತೆಯಿಂದಾಗಿ ಅವಳ ಕೊರಳು ಉಬ್ಬಿಕೊಂಡಿದ್ದರೂ ಮುಖ ಆಕರ್ಷಕವಾಗಿಯೇ ಇತ್ತು. ಅಗಲವಾದ ಹಣೆಗೆ ಅಗಲವಾದ ಕುಂಕುಮದ ಬೊಟ್ಟು ಇಟ್ಟುಕೊಂಡು ಕಿವಿಗಳಿಂದ ದೊಡ್ಡವು ಅನಿಸುವ ಲೋಲಾಕುಗಳನ್ನು ಇಳಿ ಬಿಟ್ಟಿದ್ದಳು. ಉಬ್ಬಿದ ಕೊರಳಿಗೆ ಬೆಳ್ಳಿಯ ಆಭರಣಗಳನ್ನು ತೊಡಿಸಿ ಇನ್ನಷ್ಟು ಭಾರ ಮಾಡಿಕೊಂಡಿದ್ದಳು. ಮುಂಗೈಯಲ್ಲಿ ನಾಲ್ಕಾರು ಬಗೆಯ ಬಳೆಗಳನ್ನು ತೊಟ್ಟರೆ ಕಾಲಿಗೆ ಭಾರವಾದ ಕಡಗಗಳನ್ನು ಧರಿಸಿದ್ದಳು. ಅಂಗಾಂಗಗಳನ್ನು ಅಲಂಕರಿಸಿದ ಹಚ್ಚೆಯ ಪ್ರಕಾರಗಳು ಹೆಚ್ಚು ಆಕರ್ಷಕವೆನಿಸಿದವು. ಅವುಗಳಲ್ಲಿ ಕಾದಾಡುವ ಕುಕ್ಕುಟಗಳು, ಅರಳುತ್ತಿರುವ ಮೊಗ್ಗುಗಳು, ಹುಲುಸಾಗಿ ಬೆಳೆದ ಹುಲ್ಲು, ತೆನೆಗಳು, ಉದಯಿಸುತ್ತಿರುವ ಸೂರ್ಯ ಎಂದೆಲ್ಲ ಸುಲಭವಾಗಿ ಗುರುತಿಸಬಹುದಾಗಿತ್ತು. ತೋಳು, ಮೊಣಕೈ, ಕಾಲುಗಳ ಮೇಲಿರುವ ಹಚ್ಚೆಯ ಛಾಯಾಚಿತ್ರಗಳನ್ನು ತೆಗೆದದ್ದರಿಂದ ಅವಳ ಮೈಚಳಿ ಬಿಟ್ಟು ಹೋಯಿತು! ಅಂತೆಯೇ ಕೊರಳ ಸುತ್ತಲೂ ಇದ್ದ ಹಚ್ಚೆಯನ್ನೂ ಅಳುಕು ಇಲ್ಲದೇ ಪ್ರದರ್ಶಿಸಿದಳು. ಕ್ಯಾಮರಾ ಕಣ್ಣು ಜೊತೆಯಲ್ಲಿ ಅವಳ ಉಬ್ಬೆದೆಯನ್ನೂ ಎಗ್ಗಿಲ್ಲದೇ ಪ್ರದರ್ಶಿಸಿದಾಗ ಮುಜುಗರವೆನಿಸಿತು.

ಆಮಂತ್ರಿಸದೇ ಅಲಂಕರಿಸಿಕೊಂಡು ಬಂದ ಮಗಳನ್ನು ಕಂಡು ಸಂತೋಷವಾಯಿತು. ಹುಡುಕುತ್ತಿರುವ ಬಳ್ಳಿ ಕಾಲನ್ನು ಬಳಸಿದಂತಾಯ್ತು! ಹೊಸ ಫಿಲ್ಮನ್ನು ಕ್ಯಾಮರಾಕ್ಕೆ ಸೇರಿಸಿದ್ದರಿಂದ ಧಾರಾಳವಾಗಿ ಛಾಯಾಗ್ರಹಣ ಮಾಡಲು ಹುಮ್ಮಸು ಬಂದಿತು. "ಇಷ್ಟೆಲ್ಲ ಬೆಳ್ಳಿಯ ಆಭರಣಗಳನ್ನು ಮನೆಯಲ್ಲಿ ಇಟ್ಟುಕೊಂಡ ನೀವು ಶ್ರೀಮಂತರೇ ಇರಬೇಕು" ಎಂದಾಗ "ಹಾಗಲ್ಲ ಬಾಬೂಜಿ, ಈ ಹುಡುಗಿಗೆ ಬಹಳ ದಿನಗಳಿಂದ ತನ್ನದೊಂದು ಛಾಯಾಚಿತ್ರ ತೆಗೆಸುವ ಆಸೆಯಿತ್ತು. ಚಕಡಾದಲ್ಲಿ ಛಿಂದವಾಡಾಕ್ಕೆ ಕರೆದೊಯ್ದು ಸ್ಟುಡಿಯೋದಲ್ಲಿ ಫೋಟೊ ತೆಗೆಸುವದು ತುಂಬ ಖರ್ಚಿನದೆಂದು ಮುಂದೆ ಹಾಕುತ್ತಲೇ ಇದ್ದೆ. ಇಂದು ನೀವಾಗಿ ಕ್ಯಾಮರಾವನ್ನು ಕೊರಳಿಗೆ ನೇತು ಹಾಕಿಕೊಂಡು ನಮ್ಮ ಮನೆತನಕ ಬಂದಾಗ, ಅವಳ ಬಹಳ ದಿನದ ಆಸೆ ಚಿಗುರಿ ನೆರೆಮನೆಯ ಮುಕಾದಮ್‌ನ ಮಗಳ ಆಭರಣಗಳನ್ನು ಎರವಲಾಗಿ ಪಡೆದು ಧರಿಸಿದ್ದಾಳೆ." ಎಂದು ವಿವರಿಸಿದ. ತೀರ ಸ್ವಾಭಾವಿಕ ಭಂಗಿಗಳನ್ನು ಸೆರೆ ಹಿಡಿಯುವದಕ್ಕಾಗಿ, "ಈ ಆಭರಣಗಳ ಹೆಸರುಗಳನ್ನು ವಿವರಿಸಿ ಹೇಳಮ್ಮಾ!' ಎಂದು ಮಾತಿಗೆ ತೊಡಗಿಸಿ, ಕ್ಯಾಮರಾ ಕ್ಲಿಕ್ಕಿಸ ತೊಡಗಿದೆ. "ಹಣೆಯಿಂದ ಕೇಶರಾಶಿ ಅಲಂಕರಿಸುವ ನಾಲ್ಕು ಎಳೆಗಳ ಸರಪಳಿ, 'ಫೇರಾ' ಕಮಲದ ಆಕಾರದ ಬೆಂಡೋಲೆಗೆ 'ಕರಣ ಫೂಲ', ಮೂಗುತಿಗೆ 'ಲೊಂಗ' ಎನ್ನುತ್ತೇವೆ. ಈ ಬೆಳ್ಳಿಯ ವಂಕಿ 'ಬಾಕಡಾ', ಈ ಹತ್ತಾರು ಬಳೆಗಳಲ್ಲಿ ಧವರಿ, ಛನಿ, ಬೇವಟಿ, ವಿಮಾಲಿಯಾ, ಗಜಾರ, ಆಯಲ್, ತರಿಯಾ ಮುಂತಾದವನ್ನು ಗುರುತಿಸಬಹುದು. ಕೊರಳಲ್ಲಿ ಇದೆಯಲ್ಲ? ಈ ನಾಣ್ಯದ ಸರ ಕೆಹರಕಿ, ಇದನ್ನೇ ಬೆಳ್ಳಿಯ ಸರಪಣಿಯಲ್ಲಿ ಪೋಣಿಸಿದರೆ 'ಹಮೀಟಿ' ಎನ್ನುತ್ತೇವೆ. ಈ ಗೋಟಿನ ಸರ 'ಅಸಲ್', ಈ ತಂತಿಗೆ 'ಗಂಜಾಮ್ ಅಸಲ್' ಎಂದು ಹೆಸರು, ಬೆಳ್ಳಿಯ ನಾಣ್ಯ ಜೋಡಿಸಿದ ಕೈಯುಂಗರ, 'ಮುಶಾ' ಸೊಂಟಕ್ಕೆ ಹೆಚ್ಚಿನ ಸಾಮರ್ಥ್ಯ ನೀಡುವ ಸೊಂಟಪಟ್ಟಿ 'ಕಡ್ದುರಾ' ಗೆಜ್ಜೆ ಜೋಡಿಸಿದ ಕಾಲ್‌ಕಡಗ 'ಪಾಜಜೇಬ', ಕಾಲುಂಗುರಕ್ಕೆ 'ಬಿಚುವಾ' ಎಂದು ಹೆಸರು......... ಬಾಬುಜಿ ನೀವು ತೆಗೆದ ಎಲ್ಲ ಭಾವಚಿತ್ರಗಳ ಪ್ರತಿಗಳನ್ನು ಪಿತರ ಹತ್ತಿರ ಆದಷ್ಟು ಬೇಗ ಕಳಿಸಿ ಕೊಡಲೇಬೇಕು. ಕೊಡದಿದ್ದರೆ ನನ್ನಾಣೆ!......." ಎಂದು ಆಭರಣಗಳನ್ನು

ಹಿಂದಿರುಗಿಸಲು ಓಡಿದಳು. ಸಂಭಾಷಣೆ ಕೇಳಿಸಿಕೊಳ್ಳುತ್ತಿದ್ದ ಲಖ್ಮಿನ್‌ನು ಹುಚ್ಚು ಹುಡುಗಿ ಎಂದು ಅಭಿಮಾನ ಪಟ್ಟ. ಬಾಣಂತಿ ಸೊಸೆಗೂ ಛಾಯಾಚಿತ್ರ ತೆಗೆಸಿಕೊಳ್ಳುವ ಆಸೆಯಾಗಿ, ಉಟ್ಟ ಸೀರೆ ಬದಲಿಸಲಾರಂಭಿಸಿದ್ದಳು. ಅಷ್ಟರಲ್ಲಿ ಎಚ್ಚೆತ್ತ ಮಗು ಹಸಿವಿನಿಂದ ಚೀರಲಾರಂಭಿಸಿದ್ದರಿಂದ, ತನ್ನ ಆಸೆ ಹತ್ತಿಕ್ಕಿ ಮಗುವಿಗೆ ಹಾಲೂಡಿಸಲು ಪ್ರಾರಂಭಿಸಿದಳು. ಲಖ್ಮಿನನ ಕಿರಿಯ ಮಕ್ಕಳೆಲ್ಲ ತಮ್ಮನ್ನು ಕ್ಲಿಕ್ಕಿಸಿಕೊಂಡರು.

ಏನೋ ನೆನಪಿಸಿಕೊಂಡು ಯಜಮಾನ ಮಾತಿಗೆ ಮೊದಲು ಮಾಡಿದ. "ಮಗಳು ಋತುಮತಿಯಾಗುವದಕ್ಕೇ ಮೊದಲು ವಿವಾಹ ನೆರವೇರಿಸಬೇಕೆಂದು ಸಕಲ ಪ್ರಯತ್ನ ನಡೆಸಿದರೂ ಕೈಗೂಡಿ ಬರುತ್ತಿಲ್ಲ......" ಎಂದು ನಿಟ್ಟುಸಿರು ಬಿಟ್ಟ. ಅಂತಹ ಕಡ್ಡಾಯಗಳೇನಾದರೂ ಇವೆಯೇ? ಎಂದು ಕೇಳಿದಾಗ "ಹಾಗೇನಿಲ್ಲ..... ಆದರೆ ವಯಸ್ಸಿಗೆ ಬಂದ ಹುಡುಗಿಯರು ಯಾರೊಡನೆಯೋ ಓಡಿಹೋಗುವ ಇಲ್ಲವೇ ವಿವಾಹ ಪೂರ್ವದಲ್ಲಿಯೇ ತಾಯಿಯಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ" ಎಂದು ವಿವರಣೆ ನೀಡಿದ. "ನಿಮ್ಮ ಸಮಾಜದಲ್ಲಿ ವಧುದಕ್ಷಿಣೆ (ತೆರ) ಕೊಟ್ಟು ವರಿಸುವ ಪದ್ಧತಿ ಪ್ರಚಲಿತವಿತ್ತಲ್ಲವೇ?" ಎಂದು ಕೆಣಕಿದಾಗ, "ಆ ಕಾಲ ಎಂದೋ ಮುಗಿದು ಹೋಯಿತು ಬಾಬುಜಿ. ನಮ್ಮನ್ನು ಸುತ್ತುವರಿದ ಹಿಂದು ಜಾತಿಗಳ ಎಲ್ಲ ಕೆಟ್ಟ ಚಾಳಿಗಳನ್ನು ನಮ್ಮವನ್ನಾಗಿ ಮಾಡಿಕೊಂಡಿದ್ದೇವೆ. ಎಂಥ ನಾಲಾಯಕ್ ವರನಿದ್ದರೂ ಅವನ ಬೇಡಿಕೆಗಳನ್ನು ಪೂರೈಸಲೇಬೇಕಾಗುತ್ತದೆ. ಒಂದು ಸಾಯಕಲ್, ಒಂದು ರೇಡಿಯೋ ಎಂದರೆ ಕಡಿಮೆ ಖರ್ಚು ಬರುತ್ತದೆಯೇ?" ಎಂದು ಮರುಗಿದ. 'ಮಗಳು, ಮೈನೆರೆದಾಗ, ವಿಶೇಷ ಸಮಾರಂಭವನ್ನು ಏರ್ಪಡಿಸುತ್ತೀರಾ?' ಎಂದು ಸವಾಲು ಹಾಕಿದಾಗ, ಪತಿ ಗೃಹದಲ್ಲಿ ಪತ್ನಿ ಋತುಮತಿಯಾದರೆ, ಭೋಜನಕೂಟ, ಮದ್ಯದ ಸರಬರಾಯಿ ಮಾಡಬೇಕಾಗುತ್ತಿತ್ತು. ಇಂದಿನ ದಿನಗಳಲ್ಲಿ ಹೆಚ್ಚಿನವರು ತವರಿನಲ್ಲಿ ಇದ್ದಾಗಲೇ ಮೈನೆರೆಯುವದರಿಂದ, ಹೆಚ್ಚಿನ ಜಾಹೀರಾತು ಸಿಗದಂತೆ ಎಚ್ಚರಿಕೆ ವಹಿಸುತ್ತೇವೆ. ಅಂತೆಯೇ ಆಪ್ತರು ಮಾತ್ರ ಇದನ್ನು ಅರಿತಿರುತ್ತಾರೆ. ಅಂಥ ದಿನಗಳಲ್ಲಿ ಅವಳು ಅಡಿಗೆ ಮಾಡುವುದು, ನೀರಿಗೆ ಹೋಗುವದು, ಹೊಲದಲ್ಲಿ ದುಡಿಯುವದು ತ್ಯಾಜ್ಯ. ಅಲ್ಲದೇ ಮನೆಯ ಒಳಗೂ ಬಾರದೇ ಏಕಾಂತ ಜೀವನ ನಡೆಸಬೇಕಾಗುವದು. ಮೂರು ದಿನಗಳ ನಂತರ ಮಿಂದಾದ ಮೇಲೆ ಶುದ್ಧಳೆನಿಸಿಕೊಳ್ಳುತ್ತಾಳೆ ಎಂದ. ಅವರ ವಿವಾಹ ಪದ್ಧತಿಯ ಕುರಿತು ವಿಚಾರಿಸಿದಾಗ, ಸಹಗೋತ್ರಿಗಳಲ್ಲಿ ವಿವಾಹ ಸಂಬಂಧ ವರ್ಜ್ಯ. ವಧು - ವರರ ಪಕ್ಷದವರು ವಿವರವಾದ ವಿಚಾರ ವಿಮರ್ಶೆಯ ನಂತರ ನಿಶ್ಚಯ ತಾಂಬೂಲ ನಡೆಸಬೇಕು. ಆಗ ಊಟ ಮತ್ತು ಸುರಾಪಾನದ ವ್ಯವಸ್ಥೆ ಆಗಲೇಬೇಕು. ವಿವಾಹದ ದಿನ ವರನಾದವನು ರಕ್ತವರ್ಣದ ನಿಲುವಂಗಿ ತೊಟ್ಟು, ಅದೇ ಬಣ್ಣದ ರುಮಾಲು ಧರಿಸಿರಬೇಕು. ಕನ್ನಡಿ ಜೋಡಿಸಿದ ತಾಳೆಗರಿ ಬಾಸಿಂಗ ಅವನ ಶಿರವನ್ನು ಅಲಂಕರಿಸಿರುತ್ತದೆ. ಅಲ್ಲದೇ ತಾಳೆಗರಿಗಳಿಂದ ಮಾಡಿದ ಮಾಲೆಗಳು, ರುಮಾಲಿನಿಂದ ಇಳಿ ಬಿಟ್ಟು, ಅವು ನೆಲ ಮುಟ್ಟುವಂತಿರಬೇಕು. ಮದುಮಗಳು ಕೇಸರಿ ಸೀರೆಯುಟ್ಟು ಸೆರಗಿನಿಂದ ಮುಖ ಮುಚ್ಚಿಕೊಂಡಿರಬೇಕು. ತಾಳೆಗರಿಯಿಂದ ಸಿದ್ಧವಾದ ತ್ರಿಕೋನಿ ಬಾಸಿಂಗ ಅವಳ ತಲೆಯನ್ನು ಅಲಂಕರಿಸಿರುತ್ತದೆ. ಅತಿಥಿಗಳು ಗರ್ನಾಲು ಹಾರಿಸುವರಲ್ಲದೇ ನವವಿವಾಹಿತರ ಮೇಲೆ ಮಂಡಕ್ಕಿ ತೂರುತ್ತಾರೆ. ಕೊರಡಿನ ವಿವಾಹ ಸ್ತಂಭ ನಿಲ್ಲಿಸಿ ಅದಕ್ಕೆ ನವ ವಿವಾಹಿತರು ಪ್ರದಕ್ಷಿಣೆ ಹಾಕುತ್ತಾರೆ. ಬಾವಿಯಿಂದ ನೀರು ಸೇದಿ ತುಂಬಿ ತರುವ ವಿಧಿಯೂ ಇದೆ. ಹೆಂಗಳೆಯರು ಹಾಡುತ್ತ ಕುಣಿಯುತ್ತಾರೆ. ಮದ್ಯಸೇವನೆಯಿಂದ ಮೆತ್ತಗಾದ ಅತಿಥಿಗಳೂ ಉತ್ಸಾಹದಲ್ಲಿ ಅವರೊಂದಿಗೆ ಸೇರಿಕೊಳ್ಳುತ್ತಾರೆ" ಎನ್ನುತ್ತಿದ್ದಾಗ ತನ್ನ ವಿವಾಹದ ದಿನಗಳನ್ನು ನೆನೆಸಿಕೊಂಡಿರಬೇಕು! ಗೃಹಿಣಿ ತಂದುಕೊಟ್ಟ ಬೆಲ್ಲದ ಚಹ ಸೇವಿಸಿ ಬೀಳ್ಕೊಟ್ಟಾಗ. 'ನಿಮ್ಮಂಥ ವಿದ್ಯಾ ಬುದ್ಧಿ ಇದ್ದವರು ಬಂದಾಗ ಅದೆಷ್ಟೊ ನೆಮ್ಮದಿ ಅನಿಸುತ್ತದೆ. ಇನ್ನೊಮ್ಮೆ ಖಂಡಿತ ಬನ್ನಿ' ಎಂದು ಮನಃ ಪೂರ್ವಕವಾಗಿಯೇ ಹೇಳಿದ.

ತಾಮಿಯಾ ಮತ್ತು ಸುತ್ತಲಿನ ಹಳ್ಳಿಗಳಲ್ಲಿ ಗೊಂಡರು ಮೇಘನಾಥ ಹಬ್ಬವನ್ನು ಬಲು ಸಂಭ್ರಮದಿಂದ ಆಚರಿಸುತ್ತಾರೆಂದು ಅರಿತು ಅಲ್ಲಿಗೆ ಧಾವಿಸಿದರೆ, ಅದು ನಿರ್ದಿಷ್ಟ ದಿನದಂದು ಆಚರಿಸುವಂಥ ಹಬ್ಬವಲ್ಲ ಎಂದು ತಿಳಿದು ನಿರಾಸೆಯಾಯಿತು. ಹೋಳಿ ಹಬ್ಬ ಮುಗಿದ ನಂತರ ತಮಗೆ ಅನುಕೂಲವಾದ ದಿನ ನಿರ್ಧರಿಸಿ ಕಾರ್ಯೋನ್ಮುಖರಾಗುತ್ತಾರಂತೆ. ಪುಣ್ಯಕ್ಕೆ ಪಕ್ಕದ ಹಳ್ಳಿಯಲ್ಲಿ ಅದೇ ದಿನ ಹಬ್ಬವನ್ನು ಆಚರಿಸಲಿದ್ದರು. ಊರ ಮಧ್ಯದ ಪ್ರಶಸ್ತವಾದ ಸ್ಥಳದಲ್ಲಿ ನಲವತ್ತೈದು ಅಡಿಯ ಕೊರಡು ಖಂಬ (ಖಾಂಡೇಕಾ) ಹುಗಿದು ಅದರ ಸುತ್ತಲೂ ಕಾಟಕೋನಾಕಾರದ ಕಟ್ಟಿಗೆಯ ಮಂಚಲು ನಿಲ್ಲಿಸಿದ್ದರು. ಅಲ್ಲಿ ಶಕ್ತಿ - ಸಾಮರ್ಥ್ಯಗಳಿಗೆ ಹೆಸರುವಾಸಿಯಾದ ಮೇಘನಾಥ ದೇವರ ವಿಗ್ರಹ ಒಂದನ್ನು ಪ್ರತಿಷ್ಠಾಪಿಸಲಾಗಿತ್ತು. ಮುಖ್ಯ ಸ್ತಂಭಕ್ಕೆ ತಿರುಗಿಸಲು ಬರುವಂತೆ ಅಡ್ಡಕಂಬಕಟ್ಟಿ, ಅದರಿಂದ ನೆಲದವರೆಗೆ ಹಗ್ಗ ಇಳಿ ಬಿಟ್ಟಿದ್ದರು. ಮೇಲೇರಿ ಹೋಗಲು ಪಾವಟಣಿಗೆಗಳನ್ನು ಜೋಡಿಸಲಾಗಿತ್ತು ಅವಿವಾಹಿತ ತರುಣಿಯರು ಹೊಳೆಯುವ ಹಿತ್ತಾಳೆ ಬಟ್ಟಲುಗಳಲ್ಲಿ ನೀರು, ವೀಳ್ಯದೆಲೆ, ಇನ್ನಿತರ ಪೂಜಾ ಸಾಮಗ್ರಿಗಳೊಂದಿಗೆ ಆಗಮಿಸಿದರು. ಲಿಂಬೆಹಣ್ಣು, ತೆಂಗಿನಕಾಯಿಗಳ ಜೊತೆಗೆ ಕೋಳಿ, ಆಡುಗಳನ್ನು ದೇವರಿಗೆ ತೃಪ್ತಿ ಪಡಿಸಲು ಅರ್ಪಿಸಲಾಯಿತು. ದುಃಖ ತಾಪತ್ರಯಗಳಿಂದ ಜರ್ಜರಿತರಾದಾಗ, ಪರಿಹಾರಕ್ಕಾಗಿ ಪ್ರಾರ್ಥಿಸಿ ಈ ದೇವರಿಗೆ ಹರಕೆ ಸಲ್ಲಿಸುವದಾಗಿ ಬೇಡಿಕೊಂಡಿರುತ್ತಾರೆ. ಬಂದವರಲ್ಲಿ ಹೆಂಗಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಡೋಲುಗಳು ಜೋರಾಗಿ ಮೊಳಗಿದಾಗ, ಭಕ್ತರು ಪಾವಟಣಿಗೆಗಳನ್ನು ಏರಲಾರಂಭಿಸಿದರು. ಬಹು ಸಂಖ್ಯಾತರಿಗೆ ಐದಾರು ಪಾವಟಣಿಗೆಗಳನ್ನು ಏರಲು ಬಿಡಲಿಲ್ಲ. ಮೈ ಮೇಲೆ ಮೇಘನಾಥನು ಪ್ರತ್ಯಕ್ಷನಾಗಿ ಆವೇಶದಿಂದ ಬೀರ್ (ವೀರರು) ರು ಅಷ್ಟೇ ಮೆಟ್ಟಿಲುಗಳನ್ನು ಹತ್ತಿ ಅಡ್ಡ ಕಂಬಕ್ಕೆ ಜೋತುಬಿದ್ದಾಗ, ಕೆಳಗಿನವರು ಹಗ್ಗದ ಬಲದಿಂದ ಅವರು ಪ್ರದಕ್ಷಿಣೆ ಹಾಕುವಂತೆ ವರ್ತುಲಾಕಾರದಲ್ಲಿ ತಿರುಪುತ್ತಾರೆ. ಈ ಪದ್ಧತಿ ಕರ್ನಾಟಕದ ಬಯಲು ಪ್ರದೇಶದಲ್ಲಿ ಪ್ರಚಲಿತವಿದ್ದ ಹಬ್ಬಕ್ಕೆ ಬಹಳವಾಗಿ ಹೋಲುತ್ತದೆ.

ಕೃಷಿಕ ಗೊಂಡರು 'ಬಿರ್ರಿ' ಹಬ್ಬವನ್ನು ಅತಿ ಸಡಗರದಿಂದ ಆಚರಿಸುವರು. ಇದನ್ನು ಎಂದು ಆಚರಿಸಬೇಕು ಎಂಬುದನ್ನು ಅವರ ಪ್ರಧಾನರು ಮತ್ತು ಊರ ಮುಖಂಡರು ಸೇರಿ ನಿರ್ಧರಿಸುವರು. ಸಾಮಾನ್ಯವಾಗಿ ಹವಾಮಾನವನ್ನು ಅವಲಂಬಿಸಿ, ಬೀಜ ಬಿತ್ತುವ ಪೂರ್ವದಲ್ಲಿ, ಊರ ಮಧ್ಯಸ್ಥ (ಭೂಮಕಾ) ತನ್ನ ತುತ್ತೂರಿ (ಧೂರಿ) ಊದುತ್ತ ಓಣಿ ಓಣಿಗಳಲ್ಲಿ ಅಲೆದು ಹಿರಿಯರ ನಿರ್ಧಾರವನ್ನು ಊರವರಿಗೆ ಸಾರುತ್ತ ಬೀಜಗಳನ್ನು ಮನೆ ಮನೆಯಿಂದ ಸಂಗ್ರಹಿಸುವನು. ಹಬ್ಬದ ದಿನ ತಂತಮ್ಮ ಸ್ನಾನಗೃಹದ ಪೂಜೆಯನ್ನು ನೆರವೇರಿಸಿ, ನಂತರ ಊರಿನ 'ಭೀಮಸೇನ' ಮಂದಿರದಲ್ಲಿ ಹಿರಿಯರೂ, ಕಿರಿಯರೂ ಸೇರುವರು. ಯುವಜನರು ಭೂತ - ಪಿಶಾಚಿ, ರಾಕ್ಷಸರ ಹುಲ್ಲು ಗೊಂಬೆಗಳನ್ನು ರಚಿಸಿ ಸುಡುವರು. ಊರವರಿಂದ ಒಟ್ಟು ಮಾಡಿದ ಕಾಳು, ಕಡಿಯಿಂದ ಅಡಿಗೆ ಮಾಡಿ, ಸಕಲರೂ ಸಾಮೂಹಿಕವಾಗಿ ಊಟ ಮಾಡುವರು. ಅನಂತರ ಹತ್ತಿರದ ಹೊಲಗಳಿಗೆ ಹೋಗಿ, ಮಣ್ಣು ಅಗೆದು ಮಡಿಗಳನ್ನು ಸುಟ್ಟು ಅಲ್ಲಿ ಬೀಜ ನೆಡುತ್ತಾರೆ. ಮಿಕ್ಕುಳಿದ ಬೀಜಗಳನ್ನು ಹಳ್ಳಿಗರಿಗೆ ಹಂಚುತ್ತಾರೆ. ಅವರು ಅದನ್ನು ಪ್ರಸಾದವೆಂದು ಗ್ರಹಿಸಿ, ತಮ್ಮ ಇತರ ಬೀಜಗಳೊಂದಿಗೆ ಸೇರಿಸಿ ಬಿಡುತ್ತಾರೆ. ಹೀಗೆ ಮಾಡಿದಾಗಲೇ ಒಳ್ಳೇ ಫಸಲು ಬರುವದೆಂದು ಅವರ ನಂಬಿಕೆ. ಆದರೆ ಮಣ್ಣನ್ನು ಸುಡುವದರಿಂದ ಅದರಲ್ಲಿ ಹುದುಗಿಕೊಂಡ ಕ್ರಿಮಿ ಕೀಟಗಳು ನಾಶ ಹೊಂದಿ ಹುಲುಸಾದ ಬೆಳೆ ಬರಲು ಸಾಧ್ಯತೆಗಳೇ ಹೆಚ್ಚು!

ಹಿಂದೊಮ್ಮೆ ಗೊಂಡರ ರಾಜ್ಯವನ್ನು ಸಮರ್ಥವಾಗಿ ಆಳಿದ ರಾಣಿಯರ ಸ್ಮರಣಾರ್ಥ 'ಸ್ತ್ರೀ ರಾಜ್ಯ' ಎಂಬ ಹಬ್ಬವನ್ನೂ ಹೆಂಗಳೆಯರು ಆಚರಿಸುತ್ತಾರೆ. ಸ್ತ್ರೀಯರು ಸೈನಿಕರಂತೆ ನಟಿಸುತ್ತ ಕೈಗೆ

ಸಿಕ್ಕ ಕುಡುಗೋಲು, ಬಿಲ್ಲು ಬಾಣಗಳಂಥ, ಆಯುಧಗಳನ್ನು ವಶಪಡಿಸಿಕೊಳ್ಳುವ ನಟನೆ ಮಾಡುತ್ತ ಹಳ್ಳಿಯಿಂದ ಹಳ್ಳಿಗೆ ಸಂಚರಿಸುವರು. ಒಂದು ಹಳ್ಳಿಯ ಕುರಿಯ ತಲೆಯನ್ನು ಇನ್ನೊಂದು ಹಳ್ಳಿಯವರಿಗೆ ಕೊಟ್ಟಾಗ, ಅಲ್ಲಿಯವರು ಸ್ತ್ರೀ ರಾಜ್ಯದಲ್ಲಿ ಸೇರ್ಪಡೆಯಾದರೆಂದು ಪರಿಗಣಿಸಲಾಗುತ್ತದೆ. ಕೆಲ ಹೆಂಗಳೆಯರಿಗೆ ಈ ವೇಳೆ ಮೈಭಾರ ಬಂದು, ಕೂದಲುಗಳನ್ನು ಹರವಿಕೊಂಡು, ಕೂಗುತ್ತ ಚೀರುತ್ತ ನಿಜಕ್ಕೂ ತಮ್ಮದೊಂದು ರಾಜ್ಯ ಸ್ಥಾಪಿಸುವ ಭ್ರಮೆಯಲ್ಲಿರುತ್ತಾರೆ! ಈ ಸ್ತ್ರೀ ಸಾಮ್ರಾಜ್ಯದ ಗಲಾಟೆ ಒಂದೆರಡು ತಿಂಗಳವರೆಗೂ ನಡೆಯುವದುಂಟು. ಸುದೈವದಿಂದ ಇದು ಪ್ರತಿ ವರ್ಷಬರುವ ಹಬ್ಬವಾಗದೇ ಸ್ತ್ರೀಯರಲ್ಲಿ ಸಮೂಹ ಶಕ್ತಿ ಸಂಚರಿಸಿ ಬಲ, ಸಾಮರ್ಥ್ಯಗಳು ಸಂಚಯಿಸಿದಾಗ, ಅಂದರೆ ಎಂಟು ಹತ್ತು ವರ್ಷಗಳಿಗೊಮ್ಮೆ ಬರುವ ಪಿಡುಗಾಗಿದೆ. ಇದರಂತೆ ಗೊಂಡ ಹುಡುಗಿಯರು 'ಕರ್ಮ' ಹಬ್ಬವನ್ನು ಆಚರಿಸುತ್ತಾರೆ. ಶ್ರಾವಣ ಮಾಸದಲ್ಲಿ ಕಾಡಿನಿಂದ 'ಕಲ್ಮಿ' ಇಲ್ಲವೇ 'ಗಲ್ಬು' ವೃಕ್ಷಗಳ ಟೊಂಗೆಗಳನ್ನು ಕಡಿದು ತಂದು, ಬಾಡದಂತೆ ಒದ್ದೆ ಬಟ್ಟೆಗಳಲ್ಲಿ ಸುತ್ತಿಡುವರು. ಕುಮಾರಿಯರು ತೂತು ಮಾಡಿದ ಮಡಕೆಗಳಲ್ಲಿ ಶಾಂತಿಯ ಪ್ರತೀಕವಾದ ಪಾರಿವಾಳದ ಮೂರ್ತಿ ಮತ್ತು ಉರಿಯುವ ಹಣತೆಯೊಂದಿಗೆ ಮನೆ ಮನೆಗೆ ತಿರುಗಿ ಜನರಿಂದ ಚಂದಾ ಹಣವನ್ನು ಶೇಖರಿಸುವರು. ರಸಿಕ ಶಿಖಾಮಣಿಗಳು, ಹಾಡುತ್ತ, ಕುಣಿಯುತ್ತ ಹಬ್ಬವನ್ನು ಆಚರಿಸುವರು. ಆ ದಿನ ಬಂದ ವರ್ಗಣಿಯಿಂದ ಭೋಜನಕೂಟ ಏರ್ಪಡಿಸಿ ಸಂತೋಷಿಸುವರು.

ಹಬ್ಬ ಹರಿದಿನ, ಮದುವೆ, ಶೋಭನಗಳಲ್ಲಿ ಗೊಂಡರು ವಾದ್ಯಗಳನ್ನು ನುಡಿಸಬೇಕು. ನೃತ್ಯ ಮಾಡಲೇಬೇಕು. ಸುಗ್ಗಿಯ ಕಾಲದಲ್ಲಿ ಮೈಮುರಿದು ದುಡಿದ ನಂತರ, ವಿರಾಮವಾಗಿ 'ಸೈಲಾ' ನೃತ್ಯದತ್ತ ಮನಸ್ಸು ಹಾಕುವರು. ಕೇರಿ ಕೇರಿಗೆ ಹೋಗಿ ನೃತ್ಯ ಪ್ರದರ್ಶನಮಾಡಿ ತಿಂಡಿ - ತೀರ್ಥ ಗಿಟ್ಟಿಸುವರು. ಮೃದಂಗ, ತಮಟೆ ವಾದ್ಯಗಾರರನ್ನು ಸುತ್ತುವರಿದು ಇತರರು ವರ್ತುಲಾಕಾರದಲ್ಲಿ ಕುಣಿಯುವರು. ಆವೇಶ ಬಂದಾಗ ವಾದ್ಯಗಾರರೂ ಅವರೊಡನೆ ಜಿಗಿಯುವರು. 'ದರರಿಯಾ' ನೃತ್ಯ ಮಳೆಗಾಲಕ್ಕಷ್ಟೇ ಸೀಮಿತ. 'ಗೆಂಡಿ' ನೃತ್ಯದಲ್ಲಿ ಯುವಕ - ಯುವತಿಯರು ಕಾಲಿಗೆ ಮರಗಾಲು ಕಟ್ಟಿಕೊಂಡು ಕುಣಿಯುತ್ತಾರೆ. ಕರ್ನಾಟಕದ ಕರಾವಳಿಯ ಕೃಷಿಕ ಹಾಲಕ್ಕಿ ಗೌಡರೂ ಅವರ ಹಗ(ರ)ಣ ದಲ್ಲಿಯೂ ಇದೇ ರೀತಿ ಮರಗಾಲುಗಳನ್ನು ಕಟ್ಟಿಕೊಂಡು 'ಉಲಲಲಲಲ ... ಕೀ ಹಾ!' ಎಂದು ಚೀರುತ್ತ ಕುಣಿಯುತ್ತಾರೆಂದು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಆದರೆ ಅವರ ಹೆಂಗಳೆಯರು ಅದರಲ್ಲಿ ಸೇರ್ಪಡೆಯಾಗುವದಿಲ್ಲ. ಗೊಂಡರು ದೇವಿಯನ್ನು ಸಂತುಷ್ಟ ಪಡಿಸಲು 'ಓವಾರಾ' ನೃತ್ಯ ಮಾಡುತ್ತಾರೆ. ಹುಡುಗಿಯರು ಕೂದಲು ಗಾಳಿಗೆ ತೂರ ಬಿಟ್ಟು, ಕೈಯಲ್ಲಿ ಅಗ್ನಿ ಹಿಡಿದು ಚೀರಾಟ ನಡೆಸಿದಾಗ ನೆರೆದವರಲ್ಲಿ ದುಗುಡವುಂಟಾಗದೇ ಇರದು. ಕೃಷಿಕಗೊಂಡರು ಹೋರಿ, ಎತ್ತುಗಳನ್ನು ಗೌರವಿಸುವ ಪೊಲಾ ಹಬ್ಬಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಾರೆ. ಕೋಡುಗಳಿಗೆ ಬಣ್ಣ ಬಳಿದು ಅಲಂಕರಿಸಿ, ಕೊರಳಿಗೆ ಬೆಳ್ಳಿಯ ಆಭರಣಗಳನ್ನು ತೊಡಿಸಿ ಬಾಲಕ್ಕೆ ಕೈಗಡಿಯಾರ ಕಟ್ಟುವ ರಸಿಕರೂ ಇದ್ದಾರೆ. ಅವುಗಳ ಮನರಂಜನೆ (!)ಗಾಗಿ ಮಸ್ತೀ ಕುಣಿಯುವವರಿದ್ದಾರೆ. ಕಿರಿಕೊಳಲಿನ ನಾದ ಮತ್ತು ಢೋಲಕ್‌ಗಳ ನಿನಾದದಿಂದ ಪ್ರೋತ್ಸಾಹಗೊಂಡು, ಕೈಕಾಲು ತೂರುತ್ತ ನರ್ತಿಸುತ್ತಾರೆ. ಭುಜದ ಮೇಲಿದ್ದ ವಸ್ತ್ರವನ್ನು ತಲೆಯ ಮೇಲೆ ಎಳೆದುಕೊಂಡು ಸುಟಿಕೊಂಡ ನಾರಿಯಂತೆ ನರ್ತಿಸುತ್ತ ರಂಜಿಸಿದಾಗ, ನೆರೆದವರು ಪ್ರೋತ್ಸಾಹಿಸಲೆಂದು ಒಂದೆರಡು ರೂಪಾಯಿಗಳನ್ನು ಜೇಬಿನಿಂದೆಳೆದು, ದೃಷ್ಟಿನಿವಾಳಿಸಿ ಆ ಹಣವನ್ನು ವಾದ್ಯಗಾರರಿಗೆ ನೀಡುತ್ತಾರೆ. ಇದರಿಂದ ಹೋರಿಗಳ ಮೇಲೆ ಯಾವ ಪ್ರಭಾವವೂ ಆದಂತೆ ಅನಿಸುವದಿಲ್ಲ!

ಗೊಂಡರು ಮಧ್ಯಪ್ರದೇಶದ ಅತಿದೊಡ್ಡ ಪಂಗಡವಾಗಿದ್ದು, ಒಟ್ಟು ಆದಿವಾಸಿಗಳ ಶೇಕಡಾ ನಲವತ್ತಾರರಷ್ಟು ಇದ್ದಾರೆ. ಅವರು ವಿಂಧ್ಯಾದ್ರಿ ಮತ್ತು ಸಾತಪುಡಾ ಪರ್ವತಾವಳಿಗಳಲ್ಲಿಯೂ ನರ್ಮದಾ ನದಿಯ ದಂಡೆಯಲ್ಲಿಯೂ ಬೀಡು ಬಿಟ್ಟಿದ್ದಾರೆ. ಗೊಂಡರು ತಮ್ಮನ್ನು 'ಕೊಯ್‌ತುರ' ಎಂದು ಕರೆದುಕೊಳ್ಳುತ್ತಾರೆ. ಮುಖ್ಯವಾಗಿ ಮಧ್ಯಪ್ರದೇಶದ ಬಸ್ತರ್, ಮಾಂಡ್ಲಾ, ಸರಗುಜಾ, ಛಿಂದವಾಡಾ, ಶಾಹದೋಲ, ಬಿಲಾಸಪುರ, ಬೇತುಲ್, ದುರ್ಗ, ಬಾಲಾಘಾಟ, ರಾಯಪುರ ಜಿಲ್ಲೆಗಳಲ್ಲಿ ಕೇಂದ್ರಿಕೃತರಾಗಿದ್ದಾರೆ. ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ, ಓರಿಸಾ, ಮಹಾರಾಷ್ಟ್ರಗಳಲ್ಲಿ ಗೊಂಡರಿದ್ದಾರೆ. ದ್ರಾವಿಡ ಭಾಷೆಗಳಾದ, ಗೊಂಡಿ, ದೋರ್ಲಿ ಮಾತನಾಡುವಂತೆ ಪ್ರಾದೇಶಿಕ ಪ್ರಭೇದಗಳಾದ ಹಲ್ಬಿ, ಭಾತ್ರಿಗಳಲ್ಲೂ ಮಾತನಾಡುತ್ತಾರೆ. ಸರ್ವೇಸಾಮಾನ್ಯವಾಗಿ ಬಳಸುವ 'ಗೊಂಡಿ' ಇನ್ನಿತರ ಭಾಷೆಗಳ ವರ್ಚಸ್ಸಿಗೆ ಒಳಗಾಗಿದೆ. ರಾಜ್ಯದ ಪಶ್ಚಿಮಕ್ಕೆ ರಾಜಸ್ಥಾನಿ, ಉತ್ತರಕ್ಕೆ ಹಿಂದಿ, ಪೂರ್ವಕ್ಕೆ ಓರಿಯಾ ಮತ್ತು ದಕ್ಷಿಣಕ್ಕೆ ಇರುವವರು ಮರಾಠಿ ಮತ್ತು ತೆಲುಗು ಶಬ್ದಗಳನ್ನು ಮಿಶ್ರಣಮಾಡಿ ಮಾತನಾಡುತ್ತಾರೆ. ಅದೊಂದು ಮೌಖಿಕ ಭಾಷೆಯಾದರೂ, ಮಿಶನರಿ ಪಾದ್ರಿಗಳು ರೋಮನ್ ಲಿಪಿಯನ್ನು ಬಳಕೆಗೆ ತಂದರು. ನಂತರ ಅದಕ್ಕೊಂದು ಸ್ವತಂತ್ರ ಲಿಪಿಯನ್ನು ತಯಾರಿಸಿದರು. ಆದರೆ ಅದು ಅಷ್ಟೊಂದು ಪ್ರಚಲಿತವಾಗದೇ, ಇಂದಿಗೂ ಗೊಂಡಿ ಸಾಹಿತ್ಯ ಮೌಖಿಕವಾಗಿಯೇ ಉಳಿದುಕೊಂಡಿದೆ. ಗೊಂಡಿಯಲ್ಲಿ ಏಳು ಉಪಭಾಷೆಗಳನ್ನು ಗುರುತಿಸಿದ್ದಾರೆ.

ಗೊಂಡರ ಎಲ್ಲ ಧಾರ್ಮಿಕ ಚಟುವಟಿಕೆಗಳಲ್ಲಿಯೂ ಗೋತ್ರಗಳಿಗೆ ಅಗ್ರಸ್ಥಾನವಿದೆ. ಧುರ್ವಾ, ಮರ್ಕಾಮ್, ಟೇಕಮ್, ಪರತೇತ್, ಇಡತಾಚಿ ಮುಂತಾದ ಮುಖ್ಯವಾದ ಗೋತ್ರಗಳನ್ನು ಪಶು ಪಕ್ಷಿಗಳ ಸಂಕೇತದಿಂದ ಗುರುತಿಸಲಾಗಿದೆ. ಐವತ್ತರ್ಕ್ಕೂ ಮಿಕ್ಕಿ ಉಪಪಂಗಡಗಳಿವೆ. ಕೈಕೊಳ್ಳುವ ವೃತ್ತಿಯನ್ನವಲಂಬಿಸಿ ವಿವಿಧ ಹೆಸರುಗಳಿಂದ ಗುರುತಿಸಲಾಗುತ್ತದೆ. ಬಡಿಗರು 'ಶೋಲಾ', ವಾದ್ಯಗಾರರು ನಗಾರಿಚಿನ್, ನರ್ತಕರು ಕೊಲಾಭೂತಿ, ಭವಿಷ್ಯ ಹೇಳುವವರು ಓಝಾ, ಮುಖಂಡರು ಪ್ರಧಾನ್ ಎಂದೆಲ್ಲ ಕರೆಯಲ್ಪಡುತ್ತಾರೆ. ಹಿಂದೂ ಧರ್ಮದ ಬಲವಾದ ಪ್ರಭಾವವಿದ್ದ ಆದಿವಾಸಿಗಳು, ಹಿಂದೂ ದೇವ ದೇವತೆಗಳನ್ನೂ ಪೂಜಿಸುತ್ತಾರೆ. ಹೀಗಾಗಿ ಅವರೆಲ್ಲ ಶಿವ ಅಥವಾ ವಿಷ್ಣು ಎಂದು ಒಬ್ಬನೇ ದೇವತೆಯನ್ನು ಆರಾಧಿಸದೇ ಆರೇಳು ದೇವತೆಗಳನ್ನು ಪೂಜಿಸುತ್ತಾರೆ.

ಗೊಂಡರು ಇತಿಹಾಸ ಪ್ರಸಿದ್ಧ ಜನಾಂಗ. ಕ್ರಿ. ಶ. 605 ರಲ್ಲಿ ಹರ್ಷವರ್ಧನನ ಅಣ್ಣ ರಾಜವರ್ಧನನು (ಕನೋಜದ ದೊರೆ) ಮಾಳವದ ಮೇಲೆ ದಾಳಿ ನಡೆಸಿದಾಗ, ಗೊಂಡರಾಜನು ಆತನ ನೆರವಿಗೆ ಧಾವಿಸಿದ್ದ. ಕ್ರಿ. ಶ. 1563ರಲ್ಲಿ ಗೊಂಡಾರಣ್ಯದ ರಾಣಿ ದುರ್ಗಾವತಿ ಅಕ್ಬರನ ವಿರುದ್ಧ ಹೋರಾಡಿದ್ದಳು. ಇಂದಿಗೂ ಮನೆಮನೆಯಲ್ಲಿ ಅವಳ ಚಿತ್ರಪಟವನ್ನು ಪೂಜಿಸಲಾಗುತ್ತಿದೆ. ಆ ಕಾಲದಲ್ಲಿ ಆರು ನೂರು ಕಿಲೋಮೀಟರ ಉದ್ದ ಮತ್ತು ನಾನೂರ ಎಂಬತ್ತು ಕಿಲೋಮೀಟರ ಅಗಲ ಗೊಂಡವನದ ಹೆಚ್ಚಿನ ಭಾಗ ಕಾಡಿನಿಂದ ಆವರಿಸಲ್ಪಟ್ಟಿತ್ತು. ಮುಂದೆ ಮಾಳವದ ರಜಪೂತರು ಗೊಂಡಾರಣ್ಯವನ್ನು ಆಕ್ರಮಿಸಿಕೊಂಡು, ಗೊಂಡರೊಂದಿಗೆ ವಿವಾಹ ಸಂಬಂಧ ಬೆಳೆಸಿದರು. ಇವರ ಪೀಳಿಗೆಯನ್ನು ರಾಜಗೊಂಡರೆಂದು ಗುರುತಿಸಲಾಗುತ್ತದೆ. ಅವರು ನಾಲ್ಕು ಪ್ರಮುಖ ಗೊಂಡರಾಜ್ಯಗಳನ್ನು ಸ್ಥಾಪಿಸಿದ್ದರು.

ಕರ್ನಾಟಕದ ಉತ್ತರಕನ್ನಡಜಿಲ್ಲೆಯ ಹೊನ್ನಾವರ ಭಟಕಳ ತಾಲೂಕುಗಳಲ್ಲಿಯೂ ಅನಾದಿಕಾಲದಿಂದ ಗೊಂಡರು ವಾಸವಾಗಿದ್ದಾರೆ. ಅವರು ವೆಂಕಟಾಪುರ ನದಿಯ ಪರಿಸರಕ್ಕೆ ಸೀಮಿತವಾಗಿದ್ದಾರೆ. ಕೃಷಿಯನ್ನೆ ಜೀವನೋಪಾಯ ಮಾಡಿಕೊಂಡ ಇವರು ಹಿಂದೊಮ್ಮೆ ವಿಶಿಷ್ಟ ಉಡುಗೆ ಧರಿಸುತ್ತಿದ್ದರು. ಹೆಂಗಳೆಯರು ಕುಪ್ಪಸ ತೊಡದೇ ಕರಿಯ ಕಡವಾತ ಸೀರೆಯನ್ನು

ಮೈಮುಚ್ಚಿ ಬಿಗಿಯಾಗಿ ಉಟ್ಟು, ಭವ್ಯವಾದ ಓಲೆಯಗಾಲಿಗಳನ್ನು ಕಿವಿಗೆ ಸಿಕ್ಕಿಸಿಕೊಳ್ಳುತ್ತಿದ್ದರು. ಪುರುಷರು ಅಡ್ಡಕಚ್ಚೆ ಪಂಚೆಯುಟ್ಟು, ಕೋಟು ಧರಿಸಿ ತಲೆಗೆ ಕೆಂಪು ದುಲವಸ್ತ್ರ ಸುತ್ತಿಕೊಳ್ಳುತ್ತಿದ್ದರು. ಈ ಗೊಂಡರ ಜೀವನ. ಆಸು - ಪಾಸಿನ ಗ್ರಾಮೊಕ್ಕಲರದೊಂದಿಗೆ ಬಹಳ ಹೋಲುತ್ತಿದ್ದು, ಅವರೊಂದಿಗೆ ವೈವಾಹಿಕ ಸಂಬಂಧವನ್ನೂ ಬೆಳೆಸಿಕೊಂಡಿದ್ದಾರೆ. ಗೊಂಡಾರಣ್ಯದ ಗೊಂಡರ ಜೀವನ ಕ್ರಮಕ್ಕೂ, ಇವರದಕ್ಕೂ ಸಾಮ್ಯ ಇರುವದರಿಂದ. ಅಲ್ಲಿಯವರೇ ಆಂಧ್ರಪ್ರದೇಶದ ಮೂಲಕ, ಕರ್ನಾಟಕಕ್ಕೆ ವಲಸೆ ಬಂದು ಇಲ್ಲಿ ಸ್ಥಾಯಿಯಾಗಿರಬಹುದು. ಈ ದಿಸೆಯಲ್ಲಿ ವಿವರವಾದ ಸಂಶೋಧನೆ ನಡೆಯಬೇಕಾಗಿದೆ.

20.ನರ್ಮದೆಯ ಗುಂಟ



ಕರ್ನಾಟಕಕ್ಕೆ ಕಾವೇರಿ ಇದ್ದಂತೆ ಮಧ್ಯಪ್ರದೇಶಕ್ಕೆ ನರ್ಮದಾ ನದಿ. ತಲಕಾಡು ಉಗಮವಾದಂತೆ ಅಮರಕಂಟಕದಲ್ಲಿ ನರ್ಮದೆ. ಧರೆಗೆ ಇಳಿದು ಬರುತ್ತಾಳೆ. ಸಪ್ತಪುಣ್ಯ ನದಿಗಳಲ್ಲಿ ಒಬ್ಬಳೆಂದು ಪರಿಗಣಿಸಲ್ಪಡುತ್ತಾಳೆ. ಸಮುದ್ರ ಪಾತಳಿಯಿಂದ ಒಂಭೈನೂರು ಮೀಟರಿಗಿಂತ ಹೆಚ್ಚು ಎತ್ತರದಲ್ಲಿ ಪ್ರಾರಂಭಿಸಿ. ತನ್ನ ಪ್ರವಾಸವನ್ನು ಪಶ್ಚಿಮದಿಕ್ಕಿನ ಮಾಂಡ್ಲಾ, ಜಬಲಪೂರ್ ಜಿಲ್ಲೆಗಳ ಮೂಲಕ ಹದಿಮೂರು ನೂರು ಕಿಲೋಮೀಟರಿನಷ್ಟು ದೂರ ಓಡಿ ಗುಜರಾತ್‌ದ ಕ್ಯಾಂಬೇ ಖಾಡಿ (ಆಖಾತ)ಯಲ್ಲಿ ಸಮುದ್ರರಾಜನಲ್ಲಿ ವಿಲೀನಗೊಳ್ಳುತ್ತಾಳೆ. ದಾರಿಯುದ್ದಕ್ಕೂ ಬಂಜಾರ್. ಶೇರ್. ಶಕ್ಕರ್. ತವಾ. ಗಂಜಾಲ್ ಮತ್ತು ಛೋಟಾ ತವಾ. ಉಪನದಿಗಳು ಅವಳನ್ನು ಸೇರಿಕೊಳ್ಳುತ್ತವೆ. ನರ್ಮದಾ ನದಿ ಈ ದೇಶವನ್ನು ಉತ್ತರ ಮತ್ತು ದಕ್ಷಿಣ ಭಾರತವನ್ನಾಗಿ ವಿಂಗಡಿಸುವ ಸೀಮಾ ರೇಖೆ ಎಂದು ಗುರುತಿಸಲಾಗುತ್ತಿದೆ. ಜಬಲ್‌ಪುರ್ ಮತ್ತು ಹೋಶಂಗಾಬಾದಗಳ ನಡುವೆ ನರ್ಮದೆಯು ಕೊರಕಲಿನಲ್ಲಿ ಹಾಯುವದರಿಂದ. ದಂಡೆಯಿಂದ ಹನ್ನೆರಡು ಮೀಟರ್‌ನಷ್ಟು ಆಳದಲ್ಲಿ ಹರಿಯುತ್ತಾಳೆ. ಅವಳು ಎತ್ತರದಿಂದ ಕೆಳಗೆ ಇಳಿಯುತ್ತ ಹೋಗುವದರಿಂದ ದಾರಿಯುದ್ದಕ್ಕೂ ಅನೇಕ ಜಲಪಾತಗಳು. ತಡಸಲುಗಳು ಉಂಟಾಗಿವೆ. ಅವುಗಳಲ್ಲಿ ಮಂಚರ್ ಮತ್ತು ಪುನಾನಾದಲ್ಲಿರುವವು ಪ್ರವಾಸಿ ತಾಣಗಳಾಗಿವೆ.

ಜಬಲ್‌ಪುರದಿಂದ ಹದಿನಾರು ಕಿಲೋಮೀಟರ್ ದೂರವಿರುವ ಬೇಡಾಘಾಟ್. ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಿಸುವ ಸುಂದರ ತಾಣ. ಇಲ್ಲಿ ನರ್ಮದೆ, ಹನ್ನೆರಡು ಮೀಟರಿನಷ್ಟು ಎತ್ತರದಿಂದ ಕೆಳಗೆ ಧುಮುಕಿ, ಮುಂದೆ ಜಗತ್ ಪ್ರಸಿದ್ಧ ಸಂಗಮರವರಿಕಲ್ಲಿನ ಆಗರವನ್ನು ಸೀಳಿ ಮುಂದಕ್ಕೆ ಓಡುತ್ತಾಳೆ. ಈ ತಾಣಕ್ಕೆ ಹೋಗಲು ವಾಹನ ಸೌಕರ್ಯಗಳು ಸರಿಯಾಗಿಲ್ಲ. ಅಂತೆಯೇ ದಣಿದು ಬಾಯಾರಿಕೆಯಿಂದ ಬಂದ ಪ್ರವಾಸಿಗರನ್ನು ಸ್ವಾಗತಿಸಲು, ಕಬ್ಬನ್ನು ಹಿಂಡಿ ತಾಜಾಕಬ್ಬಿನ ಹಾಲನ್ನು ಪೂರೈಸುವವರು ಇದ್ದಾರೆ. ಕೈಗಾಡಿಗೆ ಜೋಡಿಸಿದ ಪುಟ್ಟ ಗಾಣದೊಂದಿಗೆ, ಸದಾಕಾಲ ಸಿದ್ಧರಾಗಿಯೇ ಇರುತ್ತಾರೆ. ಕಬ್ಬನ್ನು ರಾಮಾಯಣ ಕಾಲದ ಕೊರಡಿನ ಗಾಣವನ್ನು ಸರ್ವಶಕ್ತಿ ಬಳಸಿ ಬರಿಗೈಯಲ್ಲಿ ಅದನ್ನು ತಿರುವುದನ್ನು ನೋಡುವುದೇ ಒಂದು ಅನುಭವ. ಕಬ್ಬಿನ ಹಾಲಿಗೆ ಅದೆಂಥ ರುಚಿಯಾದ ಮಸಾಲೆ ಸೇರಿಸುತ್ತಾರೋ! ಅಮೃತಪಾನ ಮಾಡಿದ ಅನುಭವ. ಹೀಗಾಗಿ ಇನ್ನೊಂದು, ಮತ್ತೊಂದು ಎಂದು ೨-೩ ಲೋಟ ಕಬ್ಬಿನರಸ ಉದರಕ್ಕೆ ಇಳಿಸಿದಾಗಲೇ ಮುಂದಿನ ಕಾಲು ನಡಿಗೆ ಪ್ರಾರಂಭಿಸಲು ಆತ್ಮವಿಶ್ವಾಸ ಮೂಡುತ್ತದೆ. ಪ್ರವಾಸಿ ತಾಣಗಳು, ಒಳ್ಳೆಯ ಪ್ರವಾಸಿ ಕೇಂದ್ರಗಳೂ ಹೌದು ಎಂದು ಅನುಭವದಿಂದ ಅರಿತ ಅನೇಕರು ತಮ್ಮ ತಾತ್ಕಾಲಿಕ ಅಂಗಡಿಗಳನ್ನು ತೆರೆದಿದ್ದರು. ಹೆಚ್ಚಿನ ಹಿಂದಿವಾಲಾರಿಗೆ ಹತ್ತು ಕೈಬೆರಳುಗಳಿಗೆ ಹನ್ನೊಂದು ಉಂಗುರ ಧರಿಸುವ ಹವ್ಯಾಸ. ಅಂತೆಯೇ ಪಚ್ಚೆ, ಕೆಂಪು, ಹವಳಗಳನ್ನು ಮಾರುವ ಅಂಗಡಿಗಳಲ್ಲಿ ಅನೇಕರು ನುಗ್ಗಿದ್ದರು. ಮುಂಬರುವ ಅನಾಹುತಗಳನ್ನು ತಪ್ಪಿಸುವ ಹರಳುಗಳು ಇವೆ! ಶುಭವನ್ನು, ಲಾಭವನ್ನು ಒದಗಿಸುವ ಉಂಗುರಗಳು ಇದ್ದವು. ಆರೋಗ್ಯದ ಅಭಿವೃದ್ಧಿಗೊಳಿಸುವುದಕ್ಕಾಗಿ ರತ್ನಗಳಿದ್ದವು. ಪರಸ್ತ್ರೀಯರ ವಶೀಕರಣಕ್ಕಾಗಿಯೇ ಜಾದೂ ಉಂಗುರಗಳನ್ನು ಅಲ್ಲಿ ಮಾರುತ್ತಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಆ ಹರಳುಗಳೆಲ್ಲ ಸುಂದರವಾಗಿ ಸಾಣೆ ಕೊಟ್ಟ ಗಾಜಿನ ಚೂರುಗಳಾಗಿರಲೂ ಸಾಕು. ಅಗ್ಗ, ಅಗ್ಗ ಎಂದು ಹಣಕ್ಕೆ ಹಗ್ಗ ಹಾಕಿಕೊಂಡವರೇ ಹೆಚ್ಚು. ಅದರಂತೆ ಸಂಗಮರವರಿ ಕಲ್ಲಿನಿಂದ ಮಾಡಿದ್ದೆಂದು ಅನಿಸುವ ಅನೇಕ ಪ್ರತಿಮೆಗಳನ್ನು ಮಾರುವವರಿದ್ದರು. ಒಂದೊಂದಕ್ಕೆ ನಲವತ್ತು, ಐವತ್ತು ರೂಪಾಯಿ ಎಂದು ಹೇಳಿದಾಗ ಚೌಕಾಶಿ ಮಾಡಿ ಇಪ್ಪತ್ತು ಮೂವತ್ತು ರೂಪಾಯಿಗಳಿಗೆ ಕೊಂಡು ತಮ್ಮ ಜಾಣತನಕ್ಕೆ ಖುಷಿಪಟ್ಟರು ಪ್ರವಾಸಿಗರು. ಅವು ಸಂಗಮರವರಿ ಕಲ್ಲಿನವಾಗಿದ್ದರೆ ಅವು ಮೆತ್ತಗಿನ ಬಿಳಿ ಬಳಪದ ಕಲ್ಲಿನದಾಗಿರಬೇಕು ಎಂಬ ಸಂಶಯ ಮೂಡಿತು. ಆಗ್ರಾದಲ್ಲೇ ಇಂಥ ಕಲ್ಲಿನಿಂದ ತಾಜಮಹಲಿನ ಪ್ರತಿರೂಪಗಳನ್ನು ಸಿದ್ಧ ಮಾಡುವುದನ್ನು ನೆನೆಸಿಕೊಳ್ಳುವಂತಾಯಿತು. ಈ ಅನುಮಾನ ಖಚಿತಪಡಿಸಲೆಂಬಂತೆ ಓರ್ವ ಮಹಿಳೆ ತನ್ನ ಅಪೂರ್ವ ಖರೀದಿಯನ್ನು ವ್ಯಾನಿಟಿ ಬ್ಯಾಗಿಗೆ ಸೇರಿಸುವಾಗಲೇ ಎರಡು ಹೋಳಾದವು. ಅಂಗಡಿಕಾರನು, ಗಾಬರಿಯಾಗಬೇಡಿ ಎಂದು ಸಮಾಧಾನ ಹೇಳಿ, ತನ್ನ ಹತ್ತಿರ ಇರುವ ಪಾದರಕ್ಷೆ ಅಟ್ಟೆಗೆ ಜೋಡಿಸಲು ಬಳಸುವ ಅಂಟನಿಂದ ಜೋಡಿಸಿ, ಹಿಂದಿರುಗಿಸುತ್ತಿದ್ದಂತೆ 'ರಿಪೇರಿಗಾಗಿ ಏನೂ ಕೊಡಬೇಕಾಗಿಲ್ಲ, ನಾಜೂಕು ಕೆತ್ತನೆಯ ಕೆಲಸ ಮಾಡಿದ್ದರಿಂದ ಜೋಪಾನವಾಗಿ ಇಟ್ಟುಕೊಳ್ಳಿ'. ಎಂದಾಗ ಅವಳ ಮುಖ ಕಮಲ ತಿರುಗಿ ಅರಳಿಕೊಂಡಿತು. ಅಂದಿನ ಗಿರಾಕಿಗಳೆಲ್ಲರ ಖರೀದಿ ಮುಗಿದು ಅಂಗಡಿ ಮುಚ್ಚುತ್ತಿದ್ದಾಗ, ಮನಸ್ಸಿಗೆ ಬಂದ ಕಲಾಕೃತಿ ಒಂದೇ ಒಂದು ರೂಪಾಯಿಗೆ ಕೊಟ್ಟುಬಿಟ್ಟದ್ದರಿಂದ ಇನ್ನಿತರ ಪ್ರವಾಸಿಗರು ಮೋಸ ಹೋದದ್ದು ಅರಿಯುವಂತಾಯಿತು.

ಹಾಲು ಸಂಗಮರವರಿ ಕಲ್ಲಿನ ಬಂಡೆಗಳು ಸಹಸ್ರಾರು ವರ್ಷಗಳಿಂದ ಮಳೆ, ಬಿಸಿಲು, ತೆರೆ, ಮಹಾಪೂರಗಳ ಅಬ್ಬರಕ್ಕೆ ಸಿಕ್ಕಿ ನುಚ್ಚು ನೂರಾಗಿ ದಂಡೆಯನ್ನು ಆಕ್ರಮಿಸಿಕೊಂಡುಬಿಟ್ಟಿದ್ದವು. ಚಪ್ಪಲಿ, ಬೂಟುಧಾರಿಗಳಾದ ನಗರ ನಿವಾಸಿಗಳಿಗೆ ಸಮತೋಲನ ಕಾಯ್ದುಕೊಂಡು, ಅವುಗಳ ಮೇಲೆ ನಡೆಯುವುದೇ ಮಹಾ ಸಾಧನೆಯಾಯಿತು. ನದಿಯ ಹತ್ತಿರದ ಬಂಡೆಗಲ್ಲುಗಳು ಹಾವಸೆಯು ಕೃತಿಯನ್ನು ಹೊಂದಿದ್ದವು. ಅಂತೆಯೇ ಅಲ್ಲಿಂದ ಜಾರಿ ನೆಲಕಚ್ಚುವವರಿಗೆ ಏನೂ ಕಡಿಮೆಯಿರಲಿಲ್ಲ.

ಕೊನೆಗೊಮ್ಮೆ ಗಚ್ಚಿನಿಂದ ಕಟ್ಟಿದ ಕಟ್ಟೆ(ಘಾಟ) ತಲುಪಿದಾಗ, ಬದುಕಿದೆಯ ಬಡ ಜೀವ! ಎನಿಸಿತು. ತಲೆವರಿಗೆ ಏದುಸಿರು ಕಟ್ಟಿಕೊಂಡು. ಪಕ್ಕದಲ್ಲಿ ಚಹದಂಗಡಿ ಇದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಎನಿಸಿತು. ಕೇರಳದ ಕಾಕಾ, ಕರ್ನಾಟಕದ ಕಾಮತರಿಗೆ ಈ ಸ್ಥಳ ತಿಳಿದರೆ ನಾಳಿನಿಂದಲೇ ಚಹ ಸಿಗುವಂತಾಗುತ್ತದೆ ಎಂದು ಒಬ್ಬರು ಅಣಕವಾಡಿದರು. ಈ ಆಗಂತುಕರನ್ನು ನೋಡುತ್ತ ಸುತ್ತಮುತ್ತಲಿನ ಮಹಿಳೆಯರು, ಹಿತ್ತಾಳೆಯ ಕೊಡಗಳನ್ನು ಬಂಗಾರದವಂತೆ ಹೊಳೆಹೊಳೆಯುವಂತೆ ಬೆಳಗಿ ನರ್ಮದೆಯ ನೀರು ತುಂಬುತ್ತಿದ್ದರು. ಅವರಿಂದಲೇ ಬೊಗಸೆಯಲ್ಲಿ ನೀರು ಹನಿಸಿಕೊಂಡು ಬಾಯಾರಿಕೆ ನೀಗಿಸಿಕೊಳ್ಳಬೇಕಾಯಿತು. ಕೆಲವರು ಅವರಿಗೆ ಹತ್ತು ಪೈಸೆಗಳನ್ನು ಕೊಡಲು ಹೋದಾಗ ನಿರಾಕರಿಸಿಬಿಟ್ಟರು. ಪುಕ್ಕಟೆಯಾಗಿ ಹರಿಯುವ ನೀರನ್ನು ಹಣಕ್ಕಾಗಿ ಮಾರುವ ಮಾರವಾಡಿ ಬುದ್ಧಿ ಅವರಿಗೆ ಒಪ್ಪಿಗೆಯಾಗಲಿಲ್ಲ. ಕೈ ಚೀಲದಿಂದ ಕ್ಯಾಮರಾ ಎಳೆದಾಗ, ಲಗುಬಗೆಯಿಂದ ಗೃಹಾಭಿಮುಖಿಯಾದರು.

ಎತ್ತರದಿಂದ ಕೆಳಗೆ ಧುಮುಕುವ ಜಲಧಾರೆ, ನಿರಂತರ ಜನ್ಮ ತಾಳಿ ಕ್ಷಣದಲ್ಲಿ ಕಣ್ಮರೆಯಾಗುವ ನೊರೆ, ಸೂರ್ಯಕಿರಣಗಳಿಂದ ಉಂಟಾಗುವ ಸಪ್ತವರ್ಣಗಳನ್ನು ನೋಡುತ್ತಿದ್ದಂತೆ ಮೈನವಿರೆದ್ದಿತು. ಜುಳುಜುಳು ಎಂದು ಹರಿಯುವ ಶುಭ್ರ ನೀರಿನಲ್ಲಿ ಅಲ್ಲಲ್ಲಿ ನಿಂತ ವಿವಿಧ ಆಕೃತಿ ಹೊಂದಿದ ಸಂಗಮರವರಿ ಬಂಡೆಗಳು ತಮ್ಮ ಪ್ರತಿಬಿಂಬ ನೋಡುತ್ತವೆಯೇ! ಅನಿಸಿತು. ಕೊರಕಲು, ದಂಡೆಯ ಪಡಿನೆಳಲು, ನೀರಲ್ಲಿ ಏಳುವ ಮಂದ ತೆರೆಗಳು ಯಾವುದೋ ಬೇರೆ ಲೋಕದ ಅನುಭವಗಳನ್ನು ಕೊಟ್ಟವು. ಸಾಹಿತಿಗಳು ರಬ್ಬರಿನ ನಾವೆಗಳಲ್ಲಿ ಪಯಣಿಸಿ ಎಷ್ಟೊಂದು ಆನಂದಿಸಬಹುದು. ಎನಿಸಿತು. ಹುಣ್ಣಿಮೆಯ ರಾತ್ರಿಯಲ್ಲಿ ಈ ಪ್ರದೇಶವೆಲ್ಲ ಒಂದು ಮಾಯಾಲೋಕ, ಎಂಬ ಭ್ರಮೆ ಹುಟ್ಟಿಸುತ್ತಿರಬೇಕು. ನಾವೆಲ್ಲ ಪಾಶ್ಚಾತ್ಯ ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಬಾರ್, ರೆಸ್ಟೋರೆಂಟ್, ಪಂಚತಾರಾ ಹೋಟೆಲ್, ಕಾಸಾನೋವಾ, ವಾತ ನಿಯಂತ್ರಿತ ಟ್ಯಾಕ್ಸಿಗಳನ್ನು ಪೂರೈಸುವದರಲ್ಲಿ ಮೈಮರೆತಿದ್ದೇವೆಯೇ ಹೊರತು, ಇಂಥ ಅಪೂರ್ವ ತಾಣದ ಸೌಂದರ್ಯ ಸವಿಯಲು ಯಾವ ಸೌಕರ್ಯವನ್ನೂ ಕಲ್ಪಿಸಿಲ್ಲ, ಎಂದೆನಿಸದೇ ಇರಲಿಲ್ಲ. ಇಟಲಿ ದೇಶದಲ್ಲಿರುವ ಸಂಗಮರವರಿ ಕಲ್ಲುಗಳಿಂದ ಜಗತ್‌ಪ್ರಸಿದ್ಧವಾದ ಮೂರ್ತಿಗಳನ್ನು ಕಟೆದು ನಿಲ್ಲಿಸಿದ್ದಾರೆ. ತಾಜಮಹಲನ್ನು ಕಟ್ಟಲು ಸಹ ಇಲ್ಲಿಯ ಹಾಲುಗಲ್ಲುಗಳನ್ನು ಬಳಸಿಲ್ಲ. ಮಹಾನಗರದಿಂದ ಈ ತಾಣ ದೂರವಿರುವುದರಿಂದ ಸದ್ಯ ನದೀತೀರವನ್ನು ಕರ್ಕಸವಾಗಿ ಬಳಸುತ್ತಿಲ್ಲ. ಅದೇ ಏಳು ಜನ್ಮದ ಪುಣ್ಯವೆನ್ನಬೇಕು.

ಮನಸ್ಸಿಲ್ಲದ ಮನಸ್ಸಿನಿಂದ ಹಿಂದಿರುಗುತ್ತಿದ್ದಂತೆ, ಮುಂದೆ ಬರುವ ಹಳ್ಳಿಯ ಹೆಸರು ಗೋಪಾಲಪುರ ಎಂದು ಅರಿತು ವಿದ್ಯುತ್ ಸಂಚಾರವಾಯಿತು. ಅಲ್ಲಿದ್ದ ಮಹಾ ಸತಿಸ್ಮಾರಕಗಳು ಇತಿಹಾಸದ ಪುಟಗಳನ್ನು ಮೆಲುಕು ಹಾಕುವಂತೆ ಮಾಡಿದವು. ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಸೈನ್ಯಾಧಿಕಾರಿಯಾಗಿ ಭಾರತಕ್ಕೆ ಆಗಮಿಸಿದ ಕರ್ನಲ್ ಡಬ್ಲ್ಯು.ಹೆಚ್. ಸ್ಲೀಮನ್, ಮುಂದೆ ಜಿಲ್ಲಾ ಕಲೆಕ್ಟರ್, ಸಂಸ್ಥಾನಗಳ ರೆಸಿಡೆಂಟ್ ಮತ್ತು ವಿಶೇಷ ಕಮಿಷನರ್ ಆಗಿ ಸೇವೆ ಸಲ್ಲಿಸಿದನು. ಕ್ರಿ.ಶ.1809ರಿಂದ 1856ರವರೆಗೆ ಅವನು ಭಾರತದಲ್ಲಿದ್ದು ಸಿಪಾಯಿ ಬಂಡಾಯದ ಒಂದು ವರ್ಷ ಮೊದಲು ತಾಯ್ನಾಡಿಗೆ ತೆರಳುತ್ತಿದ್ದಾಗ ಹಡಗಿನಲ್ಲಿಯೇ ಹೃದಯವಿಕಾರದಿಂದ ನಿಧನನಾದನು. ಸಹಗಮನ ಪದ್ಧತಿಯನ್ನು ಪ್ರತಿಬಂಧಿಸುವದರಲ್ಲಿ ಅವನ ಪಾತ್ರ ಹಿರಿದಾಗಿತ್ತು.

ತನ್ನ ಭಾರತೀಯ ಅನುಭವಗಳನ್ನು ಎರಡು ಸಂಪುಟಗಳಲ್ಲಿ ಬರೆದಿಟ್ಟಿದ್ದಾನೆ. ಅವನು ಬರೆದಿಟ್ಟ ಸಹಗಮನದ ವಿವರಗಳು ನವಿರೇಳಿಸುವಂಥವು. ಉಮೇರ್‌ಸಿಂಗ್ ಉಪಾಧ್ಯಾಯ

ಎಂಬುವನು ಮೃತಪಟ್ಟಿದ್ದರಿಂದ ಅರವತ್ತು ವರ್ಷದ ಅವನ ಪತ್ನಿ ಸತಿ ಹೋಗಲಿದ್ದಾಳೆಂಬ ಸಮಾಚಾರ ಬಂದಿದ್ದರಿಂದ ಕಲೆಕ್ಟರನಾಗಿದ್ದ ಸ್ಲೀಮನ್ ಕುದುರೆ ಹತ್ತಿ, ಬೇಡಾ ಘಾಟ ತಲುಪಿ, ಅಲ್ಲಿಂದ ಮೂರು ಮೈಲಿ ದೂರದ ಗೋಪಾಲಪುರವನ್ನು ಸೇರುತ್ತಾನೆ. ಸಹಗಮನ ಮಾಡಲು ವಿಧವೆಗೆ ಸರಕಾರ ಅನುಮತಿಯನ್ನು ನೀಡದ್ದರಿಂದ ಅವಳು ತೊಟಕು ನೀರು ಕುಡಿಯದೇ, ಉರಿಬಿಸಿಲು, ಮೈ ಕೊರೆಯುವ ಚಳಿಗಳನ್ನು ಲೆಕ್ಕಿಸದೇ ಸ್ಮಶಾನದಲ್ಲಿಯೇ ಸತ್ಯಾಗ್ರಹ ಹೂಡಿದ್ದಳು. ಸತಿ ಹೋಗುವ ತನ್ನ ನಿರ್ಧಾರ ಅಚಲವಾದದ್ದು ಎಂದು ಸಾರಲು ಬಳೆಗಳನ್ನು ಒಡೆದು, ತಲೆಯನ್ನು ಕೆಂಪು ವಸ್ತ್ರದಿಂದ ಸುತ್ತಿಕೊಂಡು, ಎರಡೂ ಕೈಗಳಲ್ಲಿ ತೆಂಗಿನ ಕಾಯಿಗಳನ್ನು ಹಿಡಿದಿದ್ದಳು. ಹಿತ್ತಾಳೆಯ ಹರಿವಾಣದಲ್ಲಿ ಅಕ್ಕಿ, ಹೂ, ಪೂಜಾ ಸಾಮಗ್ರಿಗಳನ್ನು ಇರಿಸಿ, 'ಸೂರ್ಯ ಲೋಕದಲ್ಲಿರುವ ಪತಿಯೊಂದಿಗೆ ತಾನು ಆದಾಗಲೇ ಒಂದಾಗಿಬಿಟ್ಟಿದ್ದೇನೆ. ಈ ಹಿಂದಿನ ಮೂರು ಜನ್ಮಗಳಲ್ಲಿ ಕೂಡ ನನ್ನ ಭಸ್ಮ ಅವರೊಂದಿಗೆ ಒಂದಾಗಿದೆ. ಅಂತೆಯೇ ಈ ಜನ್ಮದಲ್ಲಿಯೂ ಅದು ಪ್ರತ್ಯೇಕವಾಗಿರಲು ಸಾಧ್ಯವೇ ಇಲ್ಲ. ನಮ್ಮಿಬ್ಬರ ಆತ್ಮಗಳು, ವಿವಾಹ ಮಂಟಪದಲ್ಲಿಯೇ ವಿಲೀನವಾಗಿ ಹೋಗಿದ್ದವು.' ಎಂದು ಘಂಟಾಘೋಷವಾಗಿ ಸಾರಿದಳು. ಅವಳ ನಾಡಿಯಲ್ಲಿ ವ್ಯತ್ಯಾಸ ಕಂಡು ಬಂದದ್ದನ್ನು ಸ್ಲೀಮನ್ನನು ಸ್ವತಃ ಪರೀಕ್ಷಿಸಿದಾಗ ನಿಂತೇ ಹೋದದ್ದನ್ನು ಗಮನಿಸಿ ಅಚ್ಚರಿಪಟ್ಟಿದ್ದ. ಸತಿ ಹೋಗಲು ಅನುಮತಿ ಕೊಡದೆ ಬೇರೆ ಮಾರ್ಗವೇ ಇರಲಿಲ್ಲ. ಆಗ ಅವಳಿಗಾದ ಆನಂದಕ್ಕೆ ಕೊನೆ ಮೊದಲಿರಲಿಲ್ಲ. ತಾಂಬೂಲ ಜಿಗಿದು ಕಿಂದುಟ ಪಡೆದಳು. ಕೈಯಲ್ಲಿದ್ದ ಹೂಗಳನ್ನು ಚಿತೆಗೆ ಅರ್ಪಿಸಿ, ಪ್ರದಕ್ಷಿಣೆ ಹಾಕಿ, 'ಅಯ್ಯೋ, ಪತಿರಾಜನೇ! ನಿಮ್ಮಿಂದ ನನ್ನನ್ನು ಐದು ದಿನಗಳವರೆಗೆ ಯಾವ ಪುರುಷಾರ್ಥಕ್ಕೆ ದೂರವಿಟ್ಟಿರು?' ಎಂದು ಮರುಗುತ್ತ ಉರಿಯುವ ಜ್ವಾಲೆಯ ಮಧ್ಯದಲ್ಲಿ ಕಾಲಿಟ್ಟು, ಹಾಸಿಗೆಯಲ್ಲಿ ಪವಡಿಸುವಷ್ಟು ಸುಲಭವಾಗಿ ಚಿತೆಗೆ ಅರ್ಪಿಸಿಕೊಂಡು ಕ್ಷಣಾರ್ಧದಲ್ಲಿ ಭಸ್ಮವಾದಳು. ಈ ಘಟನೆಗೆ ಒಂದುವರೆ ಶತಮಾನ ಕಳೆದಿದೆ. ಆದರೆ ಸತಿ ಪದ್ಧತಿ ಜೀವಂತವಾಗಿದೆಯೇನೋ ಎಂಬಂತೆ ನೆರೆ ರಾಜ್ಯ ರಾಜಸ್ಥಾನದಲ್ಲಿ ಈಗೊಮ್ಮೆ ಆಗೊಮ್ಮೆ ಸತಿ ಹೋಗುತ್ತಿದ್ದ ಉದಾಹರಣೆಗಳನ್ನು ನೆನೆದು ನಿಟ್ಟುಸುರು ಬಿಡುವಂತಾಯಿತು.

ಛಿಂದವಾಡಾದಿಂದ ಮುಂಜಾನೆ ಹೊರಟು ಹತ್ತಿರದ ಹೋಶಂಗಾಬಾದವನ್ನು ಸಾಯಂಕಾಲ ಸೇರಬೇಕಾದರೆ ದೊಡ್ಡ ಸಾಹಸ ಕೈಕೊಂಡಂತೆ ಅನಿಸಿಬಿಟ್ಟಿತು. ಅಂದು ಮುಲ್ತಾಯಿಯಲ್ಲಿ ಸಂತೆ ಇದ್ದುದರಿಂದ, ಸವಾರಿ ಮತ್ತು ಸಾಮಾನುಗಳನ್ನು ಹತ್ತಿಸಿ ಇಳಿಸುವದರಲ್ಲಿಯೇ ಸಮಯ ಹಾಕಲಾರಂಭಿಸಿದರು-ಡ್ರೈವರ್-ಕಂಡಕ್ಟರರು. ಇದು ತಾಪಿ (ಸ್ಥಾನೀಯರು ತಾಪ್ತಿ) ನದಿಯ ಉಗಮಸ್ಥಾನವಾದ್ದರಿಂದ ಪುಣ್ಯಕ್ಷೇತ್ರ ಅನಿಸಿಕೊಂಡಿದೆ. ಊರಿನಲ್ಲಿ ಇಲ್ಲೊಂದು ಅಲ್ಲೊಂದು ದೇವಸ್ಥಾನಗಳಿದ್ದರೂ ವಾಸ್ತು-ಶಿಲ್ಪದ ದೃಷ್ಟಿಯಿಂದ ಮಹತ್ವವಿರಲಿಲ್ಲ. ಹಳ್ಳಿಗರು ಟಗರು, ಹೋರಿ, ದನಕರುಗಳನ್ನು ಸಂತೆಯಲ್ಲಿ ವಿಕ್ರಯಿಸಲು ಹೊರಟಿದ್ದರು. ಹೆಂಗಳೆಯರು ಬೇವಿನಕಾಯಿಗಳನ್ನು ಬುಟ್ಟಿಯಲ್ಲಿ ಹೊತ್ತು ಮಾರಲು ಹೊರಟಿದ್ದರು. ಸಾಬೂನು ತಯಾರಿಸುವ ಕಾರ್ಖಾನೆಯವರು ಅವನ್ನು ದುಡ್ಡಿಗೆ ಪಂಛೇರಿನಂತೆ ಕೊಂಡುಕೊಳ್ಳುತ್ತಾರೆ. ಆ ನಂತರ ಬರುವ ಬೇತುಲ್ ಬರ್ಘಾರದಲ್ಲಿ ನಾಲ್ಕೈದು ಹಳೇ ದೇವಾಲಯಗಳು ಗೋಚರಿಸಿದವು. ಬಸ್ ಓಡುತ್ತಲೇ ಇದ್ದುದರಿಂದ ಅಲ್ಲಿಗೆ ಹೋಗಲಾಗಲಿಲ್ಲ. ಹೊಚ್ಚ ಹೊಸ ರಸ್ತೆಯಲ್ಲಿ ಚಾಲಕನ ನೈಪುಣ್ಯತೆಗೆ ಚಾಲನೆ ಸಿಕ್ಕಿರಬೇಕು. ಸಪಾಟಾದ ಬಯಲಿನಲ್ಲಿ ಓಡುವ ರಸ್ತೆ ಉತ್ತಮವಾಗಿದ್ದರೂ ಗಿಡಮರಗಳು ಪ್ರವಾಸಿಗಳಿಗೆ ನೆರಳು ನೀಡುವಷ್ಟು ಚೇತರಿಸಿಕೊಂಡಿರಲಿಲ್ಲ. ಬೇತುಲ್ ಊರು ಸೇರುವುದರೊಳಗೆ ಸೂರ್ಯನು ನೆತ್ತಿಗೇರಿಬಿಟ್ಟಿದ್ದ. ಈ ಊರು ಮದ್ರಾಸ್-ದಿಲ್ಲಿ ರೈಲು ಮಾರ್ಗದ ಮೇಲಿದ್ದರೂ ಚಿಕ್ಕದಾಗಿಯೇ ಉಳಿದಿದೆ. ಸನಿಹದಲ್ಲಿದ್ದ ಇಂಧನದ ವಿದ್ಯುತ್ ಆಗರವೇ ಅಲ್ಲಿಯ ದೊಡ್ಡ ಉದ್ದಿಮೆ. ಗುಪ್ತ ಚಟುವಟಿಕೆಗಳನ್ನು ನಡೆಸಲು ಅನೇಕ ತಾಣಗಳು ಇದ್ದುದರಿಂದ ಹಿಂದೊಮ್ಮೆ ವಾಮಪಂಥೀಯರು

ಅವುಗಳನ್ನು ತಮ್ಮವನ್ನಾಗಿ ಮಾಡಿಕೊಂಡಿದ್ದರು. ಬೇತುಲ್ ಬಸ್‌ನಿಲ್ದಾಣದಲ್ಲಿ ಮುಂದಿನ ಪ್ರಯಾಣಕ್ಕಾಗಿ ಕಾದು ಕುಳಿತಾಗ, ಅಲ್ಲಿ ಹಳಬ ದಂಪತಿಗಳು ತಮಗಿಂತಲೂ ಹಳೆಯದಾದ ತಂಬೂರಿಯೊಂದಿಗೆ ಕುಳಿತದ್ದು ಕಂಡಿತು. ಅದರ ಒಂದು ಅಂಚಿನಲ್ಲಿ, ಟೊಳ್ಳು ಮಾಡಿದ ಸೋರೆಕಾಯಿಯ ಬದಲಾಗಿ ಆನೆಯ ಸವಾರನ ಆಕೃತಿ ಜೋಡಿಸಿದ್ದರಿಂದ ಕಲಾತ್ಮಕವಾಗಿ ಕಂಡಿತು. ಅದರೆ ಕ್ಯಾಮರಾ ಹೊರಗೆಳೆಯುವದರೊಳಗಾಗಿ, ದಂಪತಿಗಳು ಯಾವುದೋ ಬಸ್ ಹತ್ತಿ ಅದೃಶ್ಯರಾಗಿಬಿಟ್ಟರು.

ಮಧ್ಯಪ್ರದೇಶದ ರಾಜಧಾನಿಯಾದ ಭೋಪಾಲ್‌ನ 'ಕೆಪಿಟಲ್'ಬಸ್ ಕಂಪನಿಯೊಂದು ದೊಡ್ಡ ಹೊಸ ವಾಹನಗಳನ್ನು ನಾಗಪುರ-ಮುಲ್ತಾಯಿಗಳ ನಡುವೆ ಓಡಿಸಲಾರಂಭಿಸಿದ್ದರಿಂದ ಅತ್ಯಂತ ಜನಪ್ರಿಯವಾಗಿದೆ. ನಾಗಪುರದಿಂದ ಭೋಪಾಲಕ್ಕೆ ಹೊರಟಿದ್ದ ಆ ಕಂಪನಿಯ ಬಸ್ಸಿನಲ್ಲಿ ಕಿಟಕಿಯ ಹತ್ತಿರ ಸ್ಥಳ ಸಿಕ್ಕಿದ್ದರಿಂದ ನೆಮ್ಮದಿಯೆನಿಸಿತು. ರಸ್ತೆಯ ಎಡಬಲದಲ್ಲಿ ದಟ್ಟ ಕಾಡು ಇದ್ದು, ಗಿಡ-ಬಳ್ಳಿಗಳು. ಹಸಿರು, ಹಳದಿ, ಕೆಂಪು, ಚಿಗುರು ತಳೆದು ನಿಂತದ್ದರಿಂದ ಕಣ್ಣಿಗೆ ಹಬ್ಬವಾಗಿತ್ತು. ರಕ್ತವರ್ಣದ ಹೂಗಳನ್ನು ಅರಳಿಸಿ ನಿಂತ ಮುತ್ತುಗದ ಮರಗಳು ಪ್ರವಾಸಿಗರನ್ನು ಸ್ವಾಗತಿಸಲೆಂದೇ ನಿಂತಿರಬಹುದೇ ಅನಿಸಿತು. ದೂರದಿಂದ ಕಂಡಾಗ ಈ ಹೂಗಳು ಭುಗಿಲೇಳುವ ಕಾಡುಕಿಚ್ಚು ಎಂಬ ಭ್ರಮೆ ಹುಟ್ಟಿಸುತ್ತವೆ. ಅಂತೆಯೇ ಅನೇಕ ಅರಣ್ಯಾಧಿಕಾರಿಗಳು. ತೋರಿಕೆಯ ಈ ಕಾಡ್ಗಿಚ್ಚನ್ನು ನಿಯಂತ್ರಿಸಲು ಧಾವಿಸಿದ ಅನೇಕ ಪ್ರಸಂಗಗಳಿವೆ. ಇದರಿಂದಾಗಿ ಈ ಹೂವುಗಳಿಗೆ 'ಅರಣ್ಯಜ್ವಾಲೆ' ಎಂಬ ಅನ್ವರ್ಥಕ ನಾಮ ಬಂದಿದೆ. ಶಹಪುರದ ಹತ್ತಿರ ಯಾವುದೋ ದೇವರ ಜಾತ್ರೆ ಜೋರಾಗಿ ನಡೆದಿತ್ತು, ಚಕ್ಕಡಿ, ಚಕಡಾಗಳಲ್ಲಿ ಧಾವಿಸಿ ಬಂದ ಆದಿವಾಸಿಗಳು ಹತ್ತು ಪೈಸೆಯ ಆಯ್ಸ್‌ಕ್ಯಾಂಡಿ ತಿಂದು ಆನಂದಿಸುತ್ತಿದ್ದರು. ಇಟಾರ್ಸಿ ದೊಡ್ಡ ರೈಲು ಜಂಕ್ಶನ್ ಆಗಿದ್ದರೂ ಊರೇನೂ ಅಷ್ಟು ದೊಡ್ಡದೆನಿಸಲಿಲ್ಲ ಪ್ರವಾಸಿಗರು ಪಕೋಡ ಮೆದ್ದು, ಹಸಿಶುಂಠಿ ಸೇರಿಸಿದ ಚಾಯ್ ಸವಿದು ಬಾಯ್ ಚಪಲ ತೀರಿಸಿಕೊಂಡರು. ಹೊಶಂಗಾಬಾದದಲ್ಲಿ ಇಳಿಯುತ್ತಿದ್ದಂತೆ, 'ಇಲ್ಲಿ ಉಳಿದುಕೊಳ್ಳಲು ಯಾವ ಜಾಗ ಚೆನ್ನಾಗಿದೆ?' ಎಂದು ಕಂಡಕ್ಟರನಿಗೆ ವಿಚಾರಿಸುತ್ತಿದ್ದಂತೆ 'ಪುಷ್ಪಕ್‌ರಾಜ್' ಎಂದು ಒಂದೇ ಉಸುರಿಗೆ ಹೇಳಿ, ಬಾಯಲ್ಲಿ ಬೆರಳಿಟ್ಟು ಸಿಳ್ಳು ಹಾಕಿ ಬಸ್ಸಿಗೆ ಮುಂದೋಡಲು ಅಪ್ಪಣೆ ಕೊಟ್ಟೇಬಿಟ್ಟ.

ಹೊಶಂಗಾಬಾದವನ್ನು ಪ್ರತಿನಿಧಿಸುವ ಲೋಕಸಭಾ ಸದಸ್ಯರಾಗಿದ್ದ ಹರಿವಿಷ್ಣುಕಾಮತರು (ಹೆಚ್.ವಿ. ಕಾಮತ್) ಹಿಂದಿ ನಾಡಿನಲ್ಲಿ ನೆಲೆಸಿದ ಕೊಂಕಣಿಗರಾದರು. ಅವರು ಉತ್ತಮ ಮಾತುಗಾರರಿದ್ದಂತೆ ಜನಪ್ರಿಯರೂ ಆಗಿದ್ದರು. 'ಪುಷ್ಪಕ್'ಲಾಜಿನ ಮಾಲಿಕರಿಗೆ ಅವರ ಊರಿನಿಂದಲೇ ಬಂದಿದ್ದೇನೆ ಎಂದಾಗ ಆತ್ಮೀಯ ಸ್ವಾಗತ ಕೋರಿದರು. ಯಾರೋ ಒಬ್ಬರು ಶ್ರೀರಾಮನ ದರ್ಶನಕ್ಕೆ ಬಹುದೂರದಿಂದ ಬಂದ ಯಾತ್ರಿಕನಿರಬೇಕೆಂದು ಊಹಿಸಿ, "ಹತ್ತಿರದಲ್ಲಿಯೇ ನರ್ಮದಾ ಘಾಟ್ ಇದೆ. ಸ್ನಾನ ಮಾಡಿ ಪೂಜಾವಿಧಿಗಳನ್ನು ಪೂರೈಸಿಕೊಂಡು ಬನ್ನಿ" ಎಂದು ಸೂಚಿಸಿದರು. ಬೇಡಾಘಾಟದಲ್ಲಿ ನಿಸರ್ಗ ನಿರ್ಮಿತ ಸೃಷ್ಟಿ ಸೌಂದರ್ಯಗಳಿಂದ ತುಂಬಿ ತುಳುಕಿದರೆ, ಇಲ್ಲಿ ಮಾನವನ ಕೈವಾಡವನ್ನು ಹೆಜ್ಜೆ ಹೆಜ್ಜೆಗೆ ಗುರುತಿಸಬಹುದಾಗಿತ್ತು. ರಾಜಮಹಾರಾಜರು ನದಿಯ ದಡದಲ್ಲಿಯೇ ಸುಂದರವಾದ ದೇವಾಲಯಗಳನ್ನು, ಸ್ನಾನದ ಘಾಟ್‌ಗಳನ್ನು ಕಟ್ಟಿಸಿದ್ದಾರೆ. ದೇವಾಲಯದ ಗೋಡೆಗಳ ಮೇಲೆಲ್ಲ ರಾಮಾಯಣ, ಮಹಾಭಾರತದ ಚಿತ್ರಗಳನ್ನು ರಚಿಸಿ ಅವುಗಳಲ್ಲಿ ಗೀತೋಪದೇಶದ ಪಂಕ್ತಿಗಳನ್ನು ಬರೆಯಿಸಿದ್ದಾರೆ. ಗಂಡು-ಹೆಣ್ಣು, ಮಕ್ಕಳು-ಮರಿ ಎಂಬ ಭೇದಭಾವವಿಲ್ಲದೇ ಸಕಲರೂ ನದಿಯ ನೀರಾಟದಲ್ಲಿ ಮೈಮರೆತಿದ್ದರು. ಸನ್ಯಾಸಿಯೊಬ್ಬ ತನ್ನ ಕಮಂಡಲುವಿನಲ್ಲಿ ನೀರು ಸೇರಿಸಿ ಹುಲುಸಾಗಿ ಬೆಳೆದ ಜಟೆಯ ಸ್ವಚ್ಛತೆಗೆ ತೊಡಗಿದ್ದ. ಪಶ್ಚಿಮ

ದಿಕ್ಕಿನಲ್ಲಿ ಸೂರ್ಯಾಸ್ತವಾಗುತ್ತಿದ್ದಂತೆ, ಗಗನ ಮಂಡಲವೆಲ್ಲ ಕೆಂಬಣ್ಣದಿಂದ ಹೊಳೆಯಲಾರಂಭಿಸಿತು. ಈ ಹಿನ್ನಲೆಯಲ್ಲಿ ಕೋಟೆ-ಕೊತ್ತಳಗಳು, ದೇವಾಲಯದ ಶಿಖರಗಳು, ನೆರಳ ಚಿತ್ರಗಳಂತೆ ರಮ್ಯವಾಗಿ ಕಂಡವು. ಆಗೊಮ್ಮೆ, ಈಗೊಮ್ಮೆ ಹಕ್ಕಿಗಳು ಗರಿಬಿಚ್ಚಿ ಹಾರುತ್ತ ಗೂಡು ಸೇರಿಕೊಳ್ಳುತ್ತಿದ್ದವು. ನೋಡನೋಡುತ್ತಿದ್ದಂತೆ ದೃಶ್ಯ ಬದಲಾಯಿಸಿತು. ಚಂದ್ರನು ಕಾಣಿಸಿಕೊಂಡು, ಮೆಲ್ಲಮೆಲ್ಲಗೆ ಹೆಜ್ಜೆ ಹಾಕುತ್ತ ನೀಲ ಆಕಾಶದಲ್ಲಿ ವಿರಲಾರಂಭಿಸಿದನು. ಇಲ್ಲಿ ಯಾರಾದರೂ ಬೆಳದಿಂಗಳಿನಲ್ಲಿ ನರ್ಮದೆಯ ದರ್ಶನ ಲಾಭ ಪಡೆಯುವಂತೆ ಆದದ್ದಕ್ಕೆ ಆನಂದವಾಯಿತು. ಎಲ್ಲವೂ ರಮಣೀಯವಾಗಿತ್ತು. ಇನ್ನೂ ಕೆಲವರು ಅಲ್ಲಿಯೇ ಇರುವ ಮನಸ್ಸಾದರೂ, ಹಸಿದ ಹೊಟ್ಟೆ ದಣಿದ ಕೈಕಾಲುಗಳು, ಶರೀರವನ್ನು ಲಾಜಿಗೆ ಕರೆದೊಯ್ದವು.

ಮರುದಿನ ನರ್ಮದೆಯ ಇನ್ನೂ ಒಂದು ಮುಖ ಕಾಣುವಂತೆ ಆಯಿತು. ಜಾತ್ರೆಯಲ್ಲಿ ಕಾಣುವಂತಹ ಬೃಹತ್ ಜನಸ್ತೋಮ ಅಲ್ಲಿತ್ತು. ಯಾತ್ರಿಕರು, ಭಕ್ತರು, ಸಾಧು-ಸಂತರು, ವಿದ್ಯಾರ್ಥಿಗಳು, ನಗರವಾಸಿಗಳು, ವಿವಿಧ ಉದ್ದೇಶಗಳಿಂದ ಬಂದಿದ್ದರು. ಇನ್ನೊಂದು ದಡ ಪ್ರಶಾಂತವಾಗಿರಬಹುದೆಂದು ಅಲ್ಲಿಗೆ ಹೊರಟ ನಾವೆಯನ್ನೇರಿದ್ದಾಯ್ತು. ಗಂಗೆಯನ್ನು ದಾಟಲು ಶ್ರೀರಾಮಚಂದ್ರನು ಬಳಸಿರಬಹುದಾದ ರಾಮಾಯಣ ಕಾಲದ ನಾವೆಯಂತಿತ್ತು ಅದು. ಆ ತೀರದಲ್ಲಿ ಆಡುಗಳು, ಎತ್ತುಗಳು, ಎಮ್ಮೆಗಳು, ಧೋಬಿಗಳು, ಕಟ್ಟಿಗೆ ಹೊರೆ ಹೊತ್ತವರು, ದಣಿದು ವಿಶ್ರಾಂತಿ ಪಡೆಯ ಬಂದವರೆಲ್ಲ ಇದ್ದರು. ಯಾವುದೋ ಪೂಜಾವಿಧಿ ಮುಗಿಸಿದ ಒಬ್ಬ ಭಾವುಕರು ಪ್ರಸಾದವನ್ನು ಕೊಟ್ಟರು. ಇನ್ನೊಂದು ಕುಟುಂಬದವರು ಇನ್ನರ್ಧ ಗಂಟೆಯಲ್ಲಿ ಭೋಜನ ಮುಗಿಸಿಯೇ ಹೋಗಬಹುದೆಂದು ಒತ್ತಾಯಿಸಿದರು. ಕ್ಷಮಿಸಲು ಕೇಳಿ, ಕ್ಯಾಮರಾಕ್ಕೆ ಕೆಲಸ ಕೊಡಲಾರಂಭಿಸಿದಾಗ, ಯಾವನೋ ಪೋಲಿ, "ಅರಿಯದೇ ಹೆಂಗಳೆಯರ ಛಾಯಾಗ್ರಹಣ ಮಾಡುವದು ಪಾಪ".... ಎಂದು ಏನೋ 'ಹಿತೋಕ್ತಿ' ಸಾರಿದ. ಅವನಿಗೆ ಉತ್ತರವನ್ನು ಕೊಡದೇ ಎದುರು ಹಾಕಿಕೊಳ್ಳದೇ ಅಲ್ಲಿಂದ ಕಾಲುಕಿತ್ತಿದ್ದಾಯಿತು. ಅವನಿಗೆ ಮುಖಭಂಗವಾಗಿ, ಅಲ್ಲಿಂದ ಅದೃಶ್ಯನಾಗಿ ಬಿಟ್ಟ. ಕಾಲು ಸೋತುಬರುವವರೆಗೆ ನರ್ಮದೆಯ ಗುಂಟ ಸುತ್ತಾಡಿ, ಲಾಜಿಗೆ ಹಿಂದಿರುಗಿ ಮುಂದಿನ ಪ್ರಯಾಣಕ್ಕೆ ಅಣಿಯಾದೆ.

ಹೋಶಂಗಾಬಾದ್ ಜಿಲ್ಲೆಯ ಸುಹಾಗ್‌ಪುರ ತಹಸೀಲ್‌ದಲ್ಲಿರುವ ಪಚಮಡಿ ವಿಶ್ರಾಂತಿ ಧಾಮವಾಗಿದ್ದು 1857ರಲ್ಲಿ ಕೆಪ್ಟನ್ ಫೋರ್‌ಸ್ಯಾತ್‌ನು ಅದನ್ನು ಆರೋಗ್ಯಧಾಮವೆಂದು ಗುರುತಿಸಿದ್ದರಿಂದ, ಮುಂದೆ ಬ್ರಿಟಿಷರು ಸೈನ್ಯದ ಠಾಣ್ಯವನ್ನಾಗಿ ಬಳಸಲಾರಂಭಿಸಿದ್ದರು. ಮಾಂಡುಧಾರ್‌ಗಳು ಐತಿಹಾಸಿಕ ಸ್ಥಳಗಳು, ಅಮರಕಂಟಕ, ಓಂಕಾರೇಶ್ವರ, ನೇಮಾವರ, ಶುಕ್ಲತೀರ್ಥಗಳು ಪುಣ್ಯಕ್ಷೇತ್ರಗಳೆಂದು ಹೆಸರುವಾಸಿಯಾಗಿವೆ. ನರ್ಮದೆಯಂತಹ ಸುಂದರ ನದಿಯನ್ನು ಸ್ವಾರ್ಥಿ ಮಾನವ ಧ್ವಂಸ ಕಾರ್ಯಕ್ಕಾಗಿ ಬಳಸಿದ್ದು ಸರ್ವವಿದಿತ. ಕೋಟ್ಯಂತರ ವರ್ಷಗಳಿಂದ ಮಾನವನಿಗೆ ಉಂಬಳಿಯಾಗಿ ಬಂದ ಈ ಜಲಸಂಪತ್ತನ್ನು ಹಾಳುಗೆಡವಲು ಈ ತಲೆಮಾರಿನವರಿಗೆ ಯಾವ ಅಧಿಕಾರವಿದೆ?

21. ಕಷ್ಟಸಹಿಷ್ಣು ಕೊರ್ಕು



ಮಧ್ಯಭಾರತದ ಅತಿ ಎತ್ತರವಾದ ಶಿಖರವೆನಿಸಿಕೊಂಡಿದ್ದ 'ಧೂಪಗಡ' ತಲುಪುವ ಯತ್ನದಲ್ಲಿ ಮಳೆರಾಯನಿಂದ ಚೆನ್ನಾಗಿ ಥಳಿಸಿಕೊಂಡು ಬಾರಾದರಿಗೆ ಹಿಂದಿರುಗಿದಾಗ ಜೀವ ಬದುಕಿಕೊಂಡಿತು. ಅನಿಸಿತು. ನಾಗಪಂಚಮಿಗೆ ನಾಗದ್ವಾರಾಕ್ಕೆ ಹೋಗುವ ಶಿವಭಕ್ತರಿಗೆಂದು ಕಾಡಿನ ನಡುವೆ ತಾತ್ಪೂರ್ತಿಕವಾಗಿ ಚಹದಂಗಡಿಗಳು ತಲೆಯೆತ್ತಿಕೊಂಡು ನಿಂತಿದ್ದರಿಂದ ಆಶ್ರಯದ ಜೊತೆಗೆ ಬಿಸಿ ಬಿಸಿ ಪಕೋಡ. ಚಹಗಳು ಸಿಕ್ಕವು. ಎದುರಿನ ಬೆಂಚಿನ ಮೇಲೆ ಆರೂಢರಾಗಿ ಸರದಿಯಂತೆ ಬೀಡಿ ಸೇದುತ್ತಿದ್ದ ಕೊರ್ಕು ಆದಿವಾಸಿಗಳನ್ನು ಎಲ್ಲೋ ನೋಡಿದಂತೆ ಅನಿಸಿತು. ಹೌದು. ಅಂದು ಬೆಳಕು ಹರಿಯುವ ಮೊದಲೇ ಕೈಯಲ್ಲಿರುವ ಲಾಠಿಯಿಂದ ನೆಲವನ್ನು ಕುಟ್ಟುತ್ತ ಕೊರ್ಕು ಸಹಾಯಬೇಕೇ? ಎಂದು ಪ್ರಯಾಣಿಕರನ್ನು ವಿಚಾರಿಸುತ್ತಿದ್ದ ತಂಡದವರಿರಬಹುದು ಎಂದು ನೆನಪಾಯಿತು. "ಎಂಥ ಸಹಾಯ ಮಾಡುತ್ತೀರಿ?" ಎಂದು ಕೇಳಿದಾಗ. 'ಗುಡ್ಡ-ಬೆಟ್ಟಗಳಲ್ಲಿ ದಾರಿ ತೋರಿಸುವುದು. ಭಾರವಾದ ಸಾಮಾನುಗಳನ್ನು ಹೊರುವುದು. ಮಕ್ಕಳು ಮತ್ತು ಮುದಿಯರನ್ನು ಹೊತ್ತುಕೊಂಡು ಹೋಗುವುದು ಮುಂತಾದವನ್ನು ಮಾಡುತ್ತೇವೆ' ಎಂದಿದ್ದ. ಅವರ ಮುಖಂಡನಂತೆ ಕಾಣುತ್ತಿದ್ದಾತ. ಹಿಮಾಲಯ ಪರ್ವತಾರೋಹಿಗಳಿಗೆ ಶರ್ಪಾ ಜನರು ಇದ್ದಂತೆ. ಮಹಾದೇವ ಪರ್ವತಾವಳಿಗಳಿಗೆ ಭೇಟಿ ಕೊಡುವವರಿಗೆ ಕೊರ್ಕುಗಳ ಸಹಾಯ ಇದ್ದೇ ಇರುತ್ತದೆ. ಎಂದು ತಿಳಿಯುವಂತಾಯಿತು. ಆದರೆ ಸಹಾಯ ಬೇಕಿರದಿದ್ದರಿಂದ ಅವರಿಗೆ ನಿರಾಶೆ ಮಾಡದೇ ಬೇರೆ ದಾರಿಯೇ ಇರಲಿಲ್ಲ.

ಗೂಡಂಗಡಿಯಲ್ಲಿ ಕುಳಿತಿದ್ದ ಕೊರ್ಕುಗಳನ್ನು ಮಾತಿಗೆಳೆಯುವ ಉದ್ದೇಶದಿಂದ "ಈ ನಾಗಪಂಚಮಿಗೆ ಆದಾಯ ಚೆನ್ನಾಗಿರಬೇಕಲ್ಲವೇ?" ಎಂದು ವಿಚಾರಿಸಿದಾಗ, "ಇಲ್ಲ ಬಾಬುಜಿ. ಈ ಭಗತ್ (ಭಕ್ತರು)ಜನರೆಲ್ಲ ಕಾಸುಗಳ್ಳರು! ನಮ್ಮಿಂದ ಸಾಧ್ಯವಿದ್ದಷ್ಟು ಹೆಚ್ಚು ಸಾಮಾನು ಹೊರಿಸಿ, ಅತಿ ಕಡಿಮೆ ಕೂಲಿ ಕೊಡುತ್ತಾರೆ. ಮಕ್ಕಳು, ಮುದುಕರನ್ನಂತೂ ಕರೆತರುವುದೇ ಇಲ್ಲ..... ಇತ್ತೀಚೆಗೆ, ಬಸ್ಸಿನಲ್ಲಿ ತಂಡತಂಡವಾಗಿ ನಾಗದ್ವಾರಕ್ಕೆ ಹೋಗಿ ಬಂದು ಬಿಡುತ್ತಾರೆ. ಅವರಿಗೆ ಈ ಬಡ ಕೊರ್ಕುಗಳ ಸಹಾಯ ಬೇಕಾಗುವದೇ ಇಲ್ಲ" ಒಬ್ಬ ನಿರಾಸೆಯಿಂದ ನುಡಿದ.

ಪ್ರವಾಸಿಗರಿಗೆ ನೆರವು ನೀಡುವದನ್ನೇ ವೃತ್ತಿ ಮಾಡಿಕೊಂಡು ಎಷ್ಟು ಕಾಲವಾಯ್ತು? ಎಂದು ಕೇಳಿದಾಗ ಮುಖ ಮುಖ ನೋಡಿಕೊಂಡರು. ಅವರಲ್ಲೇ ಹಿರಿಯಾತ ಗಂಟಲು ಸರಿಪಡಿಸಿಕೊಂಡು ಪ್ರಾರಂಭಿಸಿದ. 'ನಾವು ತುಂಬ ಹಳೆಕಾಲದಿಂದ ಇಲ್ಲಿಯ ಹಳ್ಳಿಗಳಲ್ಲಿ ವಾಸವಾಗಿದ್ದೇವೆ. ಒಂದಾನೊಂದು ಕಾಲದಲ್ಲಿ ಒಂದು ಘಟನೆ ನಡೆಯಿತಂತೆ ಬಾಬೂಜಿ. ನಮ್ಮವರ ತಂಡ ಬೇಟೆಗೆ ಹೊರಟಿತ್ತು. ಎಲ್ಲಿಂದಲೊ ಕಾಡುಕೋಣ ಪ್ರತ್ಯಕ್ಷವಾಯಿತು. ತಮ್ಮ ಅದೃಷ್ಟ ಚೆನ್ನಾಗಿದೆ. ಎಂದು ಅದನ್ನು ಬೆನ್ನಟ್ಟಿದಾಗ, ಅದು ನಾಗಾಲೋಟ ಹಾಕಿ ಇಕ್ಕಟ್ಟಾದ ಒಂದು ಗವಿಯನ್ನು ಹೊಕ್ಕಿತು. ಅದು ಹೊರಬರುವುದನ್ನೆ ಕಾಯುತ್ತ ಕೊರ್ಕುಗಳ ತಂಡ ಹೊರಗೆ ಕುಳಿತು ಹಸಿವಿನಿಂದ ಬಳಲಿ ಬೆಂಡಾದರು. ಆಗ ಧರ್ಮಿಷ್ಟನೊಬ್ಬ ಎಲ್ಲಿಂದಲೋ ಪ್ರತ್ಯಕ್ಷನಾಗಿ, ಕಾಳುಕಡ್ಡಿ ಪೂರೈಸಿ, ಅಡಿಗೆ ಮಾಡಿ ಉಣ್ಣಲು ನೆರವು ನೀಡಿದ. ನಾವೆಲ್ಲ ಮಹಾದೇವಬೆಟ್ಟದಲ್ಲಿ ಸ್ಥಾಯಿಯಾಗಿ ನೆಲೆಸಲು ಸಹಾಯವಾಗುವಂತೆ ಶಿವನೇ ಈ ನಾಟಕ ಹೂಡಿದ ಎಂದು ನಮ್ಮ ಹಿರಿಯರಿಗೆ ಜ್ಞಾನೋದಯವಾಯಿತಂತೆ. ಅಂದಿನಿಂದ ಶಿವನ ಭಕ್ತರಿಗೆ ನೆರವಾಗುವ ನಮ್ಮ ವೃತ್ತಿಯನ್ನು ಮಾಡುತ್ತ ಬಂದಿದ್ದೇವೆ. ಇಂದಿಗೂ ಮಹಾದೇವ ದೇವಾಲಯದ ಪೂಜಾರಿ ಮತ್ತು ಮೊಕ್ತೇಸರರು ನಮ್ಮವರೇ ಇದ್ದಾರೆ, ಎಂದು ಅಭಿಮಾನಪಟ್ಟ. "ಮೂಲ ಬುಡಕಟ್ಟಿಗೆ ಸೇರಿದ ನೀವು ಶಿವನ ಭಕ್ತರು ಹೇಗಾದಿರಿ?" ಎಂದಾಗ ಮಹಾದೇವನೇ ನಮ್ಮ ಪೂರ್ವಜರನ್ನು ಹುಟ್ಟಿಸಿದ. ಶಿವಭಕ್ತ ರಾವಣನಿಗೆ(ವಿಂಧ್ಯ ಸಾತಪುಡಾ ಪರ್ವತಶ್ರೇಣಿಗಳತ್ತ ಬೆರಳು ತೋರಿಸಿ) ಈ ಪ್ರದೇಶದಲ್ಲಿ ನರಪಿಳ್ಳೆಯೂ ಕಾಣಸಿಗದ್ದರಿಂದ, ಜನರ ಸೃಷ್ಟಿಗೆ ಕಠಿಣ ತಪಸ್ಸು ಮಾಡಿದನಂತೆ. ಮೆಚ್ಚಿದ ಮಹಾದೇವನು ತನ್ನ ಅನುಯಾಯಿ, ಕಾಕೇಶ್ವರನಿಂದ ಸಾಂವಲಿಗಡ ಮತ್ತು ಭಂವರಾಗಡ ಪರ್ವತಾವಳಿಗಳಿಂದ ಕೆಮ್ಮಣ್ಣು ತರಿಸಿ ಹೆಣ್ಣು-ಗಂಡುಗಳ ಗೊಂಬೆಗಳನ್ನು ನಿರ್ಮಿಸಿದ. ಆದರೆ ಇಂದ್ರನು ಸಿಟ್ಟಾಗಿ ತನ್ನ ಕುದುರೆಯನ್ನು ಕರೆದು ಅವುಗಳನ್ನು ಧ್ವಂಸ ಮಾಡಿದ. ಇದರಿಂದ ರೊಚ್ಚಿಗೆದ್ದ ಶಿವನು ನಾಯಿಯೊಂದನ್ನು ಛೂಬಿಟ್ಟು ಇಂದ್ರನ ಕುದುರೆ ಕಾಲಿಗೆ ಬುದ್ಧಿ ಹೇಳುವಂತೆ ಮಾಡಿದ. ಆನಂತರ ತಿರುಗಿ ಮುಲಾ ಮತ್ತು ಮುಲಾಯಿ ಎಂಬ ಗೊಂಬೆಗಳನ್ನು ಪುನಃ ರಚಿಸಿ, ಜೀವ ತುಂಬಿ, ಅವಕ್ಕೆ ಹೊಟ್ಟೆಪಾಡಿಗೆಂದು ಮಹುವಾ ವೃಕ್ಷ ಮತ್ತು ಇತರ ಹಣ್ಣಿನ ಗಿಡಗಳನ್ನು ರಚಿಸಿದ. ನಾವೆಲ್ಲ ಆ ಗೊಂಬೆಯ ಮೂಲ ಪುರುಷ ಕೊರ್ಕುವಿನ ವಂಶಜರು" ಎಂದು ಹೇಳುತ್ತಿದ್ದಂತೆ ಮಳೆರಾಯನ ಪ್ರಕೋಪ ಕಡಿಮೆಯಾದ್ದರಿಂದ, ತಮ್ಮ ಹರಡಿದ ಸರಂಜಾಮು ಎತ್ತಿಕೊಂಡು, ಕೂಲಿ ಕೆಲಸ ಹುಡುಕಿಕೊಂಡು ಹೊರಟೇಬಿಟ್ಟರು.

ಮಧ್ಯಪ್ರದೇಶದ ಆದಿವಾಸಿಗಳಲ್ಲಿ ಗೊಂಡ ಮತ್ತು ಭಿಲ್ಲರ ತರುವಾಯ, ಕೊರ್ಕುಗಳೇ ಬಹು ಸಂಖ್ಯೆಯಲ್ಲಿದ್ದಾರೆ. ತಮ್ಮ ಆದಿ ಪುರುಷರಿಗೆ ಶಿವನು ಕೊಟ್ಟ ಆಜ್ಞೆ ಪಾಲಿಸುವವರಂತೆ, ಇಂದಿಗೂ ಮಹಾದೇವ ಸಾತಪುಡಾ ಪರ್ವತಾವಳಿಗಳಲ್ಲಿ ಬೀಡು ಬಿಟ್ಟಿದ್ದಾರೆ. ತಾಪಿನದಿಯೇ ತಮಗೆ ಹಾಲು ಉಣಿಸುವ ತಾಯಿ ಎಂಬಂತೆ, ಅದರ ಎಡಬಲದ ದಂಡೆಗಳಲ್ಲಿ ಕೇಂದ್ರೀಕೃತರಾಗಿದ್ದಾರೆ. ಬೇತುಲ್, ಖಂಡ್ವಾ, ಛಿಂದವಾಡಾ, ಹೋಶಂಗಾಬಾದ ಜಿಲ್ಲೆಗಳಲ್ಲಿಯ ದಟ್ಟಕಾಡುಗಳನ್ನು ತಮ್ಮವನ್ನಾಗಿ ಮಾಡಿಕೊಂಡಿದ್ದಾರೆ. ಉತ್ತರ - ಮಹಾರಾಷ್ಟ್ರಕ್ಕೂ ಪಸರಿಸಿದ್ದಾರೆ. ರಾಜ್ಯದ ಉದಗಲಕ್ಕೂ

ಅಲೆದಾಡಿದಾಗ. ಅವರನ್ನು ತೀರ ಹತ್ತಿರದಿಂದ ಕಂಡು ಅರಿಯುವಂತೆ ಆಯಿತು. ಪ್ರಕೃತಿ ಹಚ್ಚ ಹಸಿರಾಗಿರುವಲ್ಲಿ ಸದಾಕಾಲ ನೀರಿನ ಪೂರೈಕೆ ಇರುವಲ್ಲಿ ತಮ್ಮವೇ ಕುಟೀರಗಳನ್ನು ಕಟ್ಟಿಕೊಳ್ಳುವಲ್ಲಿ ಕಾರ್ಯೋನ್ಮುಖರಾಗುತ್ತಾರೆ. ಪ್ರಥಮ ದರ್ಶನಕ್ಕೆ ಗೊಂಡರಂತೆ ಕಂಡರೂ ಇಬ್ಬರಲ್ಲಿಯೂ ಗಣನೀಯ ಭೇದಗಳಿವೆ. ಗೊಂಡರಂತೆ ಗುಂಪಾಗಿ ಮನೆ ಕಟ್ಟಿಕೊಳ್ಳದೇ ಗುಡಿಸಲ ಸುತ್ತಲೂ ಒತ್ತಲು ಇರುವಂತೆ ನೋಡಿಕೊಳ್ಳುತ್ತಾರೆ. ಗೊಂಡರಿಗಿಂತ ಎತ್ತರವಾಗಿದ್ದು, ಅಂಗಾಂಗಗಳು ಪ್ರಮಾಣಬದ್ಧವಾಗಿರುತ್ತವೆ. ಕೃಷ್ಣವರ್ಣದವರಾದರೂ ಮುಖ ಕಳೆಯಿಂದ ಕೂಡಿರುತ್ತದೆ. ಮೂಗು ಅಗಲವಾಗಿದ್ದು ಹೊಳ್ಳೆಗಳು ಗಗನದತ್ತ ಸದಾಕಾಲ ನೋಡುತ್ತಿರುವಂತೆ ಭಾಸವಾಗುತ್ತದೆ. ಗಡ್ಡಮೀಸೆಗಳಿಗೆ ಕೂದಲಿನ ಅಭಾವವಿರುವದರಿಂದ ಕ್ಷೌರಿಕನಿಗಾಗಿ ಕಾಯಬೇಕಾದ ಪ್ರಮೇಯ ಇವರಿಗಿಲ್ಲ. ತೋಳಿಲ್ಲದ ಲಂಡ ಅಂಗಿ, ಕಿರುಪಂಚೆ ಉಟ್ಟು ಕೊರಳು ಕೈಗಳಿಗೆ 'ಜಿಂಗಿ' ಮಣಿಗಳ ಸರಗಳಿಂದ ಅಲಂಕರಿಸಿಕೊಂಡಿರುತ್ತಾರೆ. ಕರ್ನಾಟಕದ ಕಾಡು ಕುರುಬರಂತೆ, ತಾವಿರುವ ಕಾಡಿನ ಸಮಗ್ರ ಪರಿಚಯ ಮಾಡಿಕೊಂಡಿರುತ್ತಾರೆ. ಗುಡಿಸಿಲಿನಿಂದ ಹೊರಬೀಳಬೇಕಾದರ ಕೈಯಲ್ಲಿ ಒಂದು ದೊಣ್ಣೆ ಇರಲೇಬೇಕು. ಬೆಟ್ಟಗಳನ್ನು ಹತ್ತಿ ಇಳಿಯಲು ಅದು ನೆರವಾಗುವಂತೆ ಅಪೇಕ್ಷಿತ ಪ್ರಸಂಗಗಳಲ್ಲಿ ಕಾಡು ಪ್ರಾಣಿಗಳನ್ನು ಸದೆಬಡೆಯಲು ಕೋವಿಯಂತೆ ಬಳಸಬಹುದಾಗಿದೆ. ಹೆಂಗಳೆಯರೂ ಪುರುಷರನ್ನು ಮೀರಿಸುವ ಶ್ರಮ ಜೀವಿಗಳು. ರಬ್ಬದ ರವಕೆ, ಸೀರೆಗಳಲ್ಲಿ ಕುಲುಕುಲು ನಗುತ್ತ ಕೆಲಸಗಳಲ್ಲಿ ಮೈಮರೆತಿರುತ್ತಾರೆ. ಮಾಟವಾದ ಶರೀರವನ್ನು ಅಗ್ಗದ ಅನೇಕ ಆಭರಣಗಳಿಂದ ಮತ್ತು ಹಲವು ಬಗೆಯ ಹಚ್ಚೆಗಳಿಂದ ಮೈ ಮುಚ್ಚುವಂತೆ ಮಾಡಿಕೊಂಡಿರುತ್ತಾರೆ. ಸ್ವಂತ ಸ್ವಚ್ಛತೆಯ ಕಡೆಗೆ ಅಷ್ಟೊಂದು ಲಕ್ಷ್ಯಪೂರೈಸದಿದ್ದರೂ ಮನೆ, ಓಣಿ ಕೇರಿಗಳನ್ನು ಶುಭ್ರವಾಗಿ ಇಡುತ್ತಾರೆ.

ತಲೆ ತಲಾಂತರಗಳಿಂದ ಕೊರ್ಕುಗಳು ಅತ್ಯುತ್ತಮ ಬೇಟೆಗಾರರೆಂದು ಹೆಸರುವಾಸಿಯಾಗಿದ್ದಾರೆ. ವಿವಿಧ ಪ್ರಾಣಿಗಳ ಶಿಕಾರಿಗಾಗಿ ಸ್ವಂತ ತಂತ್ರಜ್ಞಾನ ಬೆಳೆಸಿಕೊಂಡಿದ್ದಾರಲ್ಲದೇ ಅವಶ್ಯವಿದ್ದ ಬಲೆಗಳನ್ನು ತಾವೇ ಹೆಣೆಯುಕೊಳ್ಳುತ್ತಾರೆ. ಕಾಡುಕೋಳಿ, ಮೊಲಗಳಂತಹ ಪುಟ್ಟ ಪ್ರಾಣಿಗಳನ್ನು ಚಕ್ರವ್ಯೂಹ ಕೋಟೆಗಳಂತಹ ಬಲೆ ನಿರ್ಮಿಸಿ ಸದೆ ಬಡೆಯುತ್ತಾರೆ. ಅವುಗಳು ಆಹಾರಶೋಧಕ್ಕೆ ಬರುವ ತಾಣಗಳಲ್ಲಿ ಕಲ್ಲುಗಳನ್ನು ಸಿಲ್ಲಿಸಿ ಅವುಗಳನ್ನು ದಾರದಿಂದ ಪೋಣಿಸುತ್ತಾರೆ. ಆಹಾರ ಸೇವನೆ ಪ್ರಾರಂಭವಾದಾಗ ದಾರ ಹರಿದು, ಕಲ್ಲುಗಳ ಸುರಿಮಳೆ ಪ್ರಾರಂಭವಾಗಿ ಬೇಟೆಯ ಪ್ರಾಣಿ ಕ್ಷಣಾರ್ಧದಲ್ಲಿ ವೀರ ಸ್ವರ್ಗಸೇರುತ್ತದೆ. ಜಿಂಕೆ, ಸಾಂಭರ್, ಕರಡಿ, ಚಿರತೆಗಳಂತಹ ಪ್ರಾಣಿಗಳಿಗೆ ಗಟ್ಟಿಮುಟ್ಟಾಗಿ ರಚಿಸಿದ ಬೃಹತ್ ಬಲೆಗಳನ್ನು ಒಡ್ಡುತ್ತಾರೆ. ಹಲವು ಪ್ರಸಂಗಗಳಲ್ಲಿ ಹಳ್ಳಿಯವರಿಗೆಲ್ಲ ಒಟ್ಟಿಗೇ ಸುತ್ತುವರಿದು ಕಾಡುಪ್ರಾಣಿಗಳನ್ನು ಹಿಡಿಯುತ್ತಾರೆ. ಅಂಥ ದಿನಗಳಲ್ಲಿ ಸಾಮೂಹಿಕ ಭೋಜನಕೂಟದಲ್ಲಿ ಎಲ್ಲರೂ ಪಾಲುಗೊಳ್ಳುತ್ತಾರೆ. ತಗ್ಗುಗಳಲ್ಲಿ ಮಳೆಯ ನೀರು ಸಂಚಯವಾದುದನ್ನು ಹರಿದು ಹೋಗುವ ಏರ್ಪಾಡುಮಾಡಿ ಅಲ್ಲಿ ಸಿಕ್ಕಿ ಹಾಕಿಕೊಂಡ ಮೀನುಗಳನ್ನು ಹಿಡಿಯುತ್ತಾರೆ. ಹಳ್ಳ, ಹೊಳೆಗಳಲ್ಲೂ ಬಲೆ ಬೀಸಿ, ಚಿಕ್ಕ ದೊಡ್ಡ ಮೀನು ಹಿಡಿಯುತ್ತಾರೆ. ವಿಷಕಾರಿ ಬೀಜಗಳ ಹುಡಿಯನ್ನು ಮಡುವಿಗೆ ಹರಡಿ, ನೀರಿನ ಮೇಲೆ ತೇಲುವ ಮೃತ ಮೀನುಗಳನ್ನು ಸಂಗ್ರಹಿಸುವದೂ ಉಂಟು. ಭೂಮಿ ಇದ್ದವರು ಕುಮರಿ ಪದ್ಧತಿಯಿಂದ ಸಣ್ಣಪುಟ್ಟ ಬೆಳೆ ತೆಗೆಯುತ್ತಾರೆ. ಬೆಟ್ಟಗಳ ಇಳಿಜಾರಿನಲ್ಲಿ ಪಾವಟಣಿಗೆಗಳಂತಹ ಹೊಲ ಮಾಡಿಕೊಳ್ಳಬೇಕಾಗುತ್ತದೆ. ಕೃಷಿಯ ಸಹಾಯಕರೆಂದು ಇವರಿಗೆ ತುಂಬ ಬೇಡಿಕೆ ಇದೆ. ಕೊರ್ಕುಗಳಿಗೆ ಕಾಳು - ಕಡ್ಡಿ ರೂಪದಲ್ಲಿಯೇ ವೇತನ ಸಂದಾಯ ಮಾಡುವದು ಇಂದಿಗೂ ರೂಢಿಯಲ್ಲಿದೆ

ಕಪ್ಪುಸಟಿಷ್ಟು ಕೊರ್ಕು.

ಎಂಥ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ಬಂದದ್ದೆಲ್ಲವನ್ನೂ ಗಂಡೆದೆಯಿಂದ ಎದುರಿಸುವದರಿಂದ ಅವರ ಜೀವನ ಕ್ರಮದ ಕುರಿತಾಗಿ ಹಲವು ರೋಚಕ ಕಥೆಗಳು ಪ್ರಚಲಿತವಿದೆ. ಅವರು ತಿನ್ನಬಾರದೆಲ್ಲವನ್ನು ತಿಂದು ಹಸಿವು ನೀಗಿಸಿಕೊಳ್ಳಬಲ್ಲರೆಂಬುವ ವದಂತಿ ಸತ್ಯದಿಂದ ಬಹುದೂರವಾದದ್ದು. ಮುಂಜಾವಿನ ನಾಶ್ತಾ (ಮರಗಲ್)ಕ್ಕೆ ಕುಟಕಿ ಧಾನ್ಯ. ಇಲ್ಲವೇ ಗೋವಿನ ಜೋಳದ ತಿಳಿಯಾದ ಗಂಜಿ (ಪ್ಯಾಜ)ಗೆ. ಸಾಧ್ಯವಿದ್ದಾಗ ತರಕಾರಿ ಸೇರಿಸುತ್ತಾರೆ. ಮಧ್ಯಾಹ್ನ ಮತ್ತು ರಾತ್ರಿಯ ಪ್ಯಾಜ ದಪ್ಪವಾಗಿದ್ದು ಅದರ ಜೊತೆಗೆ ಹೊಲದಲ್ಲಿ ಬೆಳೆದ ತರಕಾರಿ. ಗಿಡ ಮರಗಳ ಚಿಗುರು ಕಾಯಿ ಹಣ್ಣುಗಳನ್ನೂ ಸೇರಿಸುತ್ತಾರೆ. ಅನುಕೂಲವಾದಾಗ ಅನ್ನ ಮಾಡಿ ಉಣ್ಣುತ್ತಾರೆ. ಒಣಗಿಸಿಟ್ಟ ಬೇರು ಹಣ್ಣುಗಳನ್ನು ಹಿಟ್ಟು ಮಾಡಿ ಗಂಜಿಯಲ್ಲಿ ಸೇರಿಸುವರಲ್ಲದೇ ಕೆಲವೊಂದು ಹಣ್ಣುಗಳ ಬೀಜಗಳನ್ನು ಹುರಿದು ತಿನ್ನುತ್ತಾರೆ. ದೊರೆತಾಗ ಏಡಿ. ಮೀನು ಕೋಳಿ. ಆಮೆಗಳ ವ್ಯಂಜನಗಳು ಅವರಿಗೆ ಹಬ್ಬ. ಅಪರೂಪಕ್ಕೆ ಇಣಚಿ. ಹೆಗ್ಗಣಗಳೂ ಅವರ ಉದರಗಳಲ್ಲಿ ಸೇರಿಕೊಳ್ಳುವದುಂಟು. ಬರಗಾಲದ ದಿನಗಳಲ್ಲಿ ಕಡು ಬಡವರು ಕೋಣ. ಕೋತಿಗಳನ್ನು ಭಕ್ಷಿಸಬಹುದು. ಹಸಿವು. ಅವರ ಆಹುತಿ ತೆಗೆದುಕೊಳ್ಳದೇ ಇರದು. ಎಂಥ ದುರ್ಭರ ಪ್ರಸಂಗಗಳಲ್ಲೂ ಸರಕಾರಿ ಅಧಿಕಾರಿಗಳು. ಎಂದೂ. ಅವರ ನೆರವಿಗೆ ಧಾವಿಸುವದಿಲ್ಲ ಎಂಬುದು ಸತ್ಯಸಂಗತಿ.

ಪ್ರತಿಯೊಂದು ಹಳ್ಳಿಯೂ ಸುವ್ಯವಸ್ಥೆಯಿಂದ ನಡೆಯುವದಕ್ಕಾಗಿ ಪಟೇಲನ ನೇಮಕವಾಗಿರುತ್ತದೆ. ಆತನ ಕೈ ಕೆಳಗೆ ಕೊತವಾಲನನ್ನು ಕೊಟ್ಟಿರುತ್ತಾರೆ. ಪ್ರತಿವಾರವೂ ತಮ್ಮ ಅಂಕಿತದಲ್ಲಿದ್ದ ಹಳ್ಳಿಯ ಆಡಳಿತದ ವಿವರವಾದ ವರದಿಯನ್ನು ಪೋಲಿಸ್ ಠಾಣೆಗೆ ಕಳುಹಿಸಲೇ ಬೇಕೆಂಬ ಕಡ್ಡಾಯವಿದೆ ಅವರ ಸಮಾಜದಲ್ಲಿ ಆತ್ಮಹತ್ಯೆ ಇಲ್ಲವೇ ಕೊಲೆ ಸಂಭವಿಸಿದಾಗ ಈ ಅಧಿಕಾರಿಗಳಿಗೆ ಪ್ರಾಣಾಂತಿಕ ಭಯ. ಕೊರ್ಕು ಸಮಾಜದ 'ಕಟ್ಟು' ಪ್ರಕಾರ. ಪತ್ನಿಯೊಡನೆ ಸಂಭೋಗ ಮಾಡಿದವನ ಕೊಲೆಯನ್ನು ಪತಿ ಮಾಡಿದರೆ ಅದು ಕ್ಷಮ್ಯ. ಆದರೆ ಪೋಲಿಸರ ಕಾನೂನಿನ ಪ್ರಕಾರ ಅದು ಅಕ್ಷಮ್ಯ ಅಪರಾಧ. ಇಂಥ ಪೇಚುಗಳಿಂದ ಜಾರಿಕೊಳ್ಳಲು ಪಟೇಲ. ಕೊತವಾಲರ ಹತ್ತಿರ ಕೆಲ ಉಪಾಯಗಳಿವೆ. ನಿರ್ದೋಷಿಯೋರ್ವನನ್ನು ಆಪಾದಿತನೆಂದು ಠಾಣೆಗೆ ವರದಿ ಮಾಡುವರು. ವಿಚಾರಣೆ ನಡೆಸಿದಾಗ ಅವನು ಆಪಾದಿತನೆಂದು ತೀರ್ಮಾನಿಸಲು ಯಾವ ಆಧಾರ ಮತ್ತು ಪುರಾವೆಗಳೂ ಇಲ್ಲದ್ದರಿಂದ ಅವನನ್ನು ಬಿಟ್ಟು ಬಿಡುತ್ತಾರೆ. ಕೋರ್ಟು - ಕಚೇರಿಗಳ ಕಾಟಗಳಿಂದ ಸಂರಕ್ಷಿಸಿದ್ದಕ್ಕಾಗಿ ನಿಜವಾದ ಆಪಾದಿತನು ಭೋಜನಕೂಟದ ಏರ್ಪಾಡು ಮಾಡಬೇಕಾಗುತ್ತದೆ. ತಾವು ಹುಟ್ಟಿ. ಬದುಕಿ. ಬಾಳುವ ಕಾಡುಗಳ ಕುರಿತಾದ ಅಗಾಧ ಅರಿವೇ ಕೊರ್ಕುಗಳಿಗೆ ಒಂದು ಶಾಪವಾಗಿ ಪರಿಣಮಿಸಿದೆ. ಅರಣ್ಯದಲ್ಲಿ ದುಡಿಮೆಗಾರರು ಸಿಗದಾದಾಗ. ಪ್ರತಿಯೊಂದು ಕುಟುಂಬದಿಂದಲೂ ಕಡ್ಡಾಯವಾಗಿ ಒಬ್ಬ ಬಿಟ್ಟಿ ಆಳು. (ಬೇಗಾರ್) ಕಳಿಸಿಕೊಡಬೇಕಾಗುತ್ತದೆ. ಇದರಂತೆ ರಸ್ತೆಗಳನ್ನು ರಚಿಸಬೇಕಾದಾಗ. ಅವುಗಳ ರಿಪೇರಿ ಮಾಡಬೇಕಾದಾಗ. ಲೋಕೋಪಯೋಗಿ ಖಾತೆಯು ಕೆಲಸ ಕೈಕೊಂಡಾಗ. ಆಳುಗಳನ್ನು ಪೂರೈಸುವದು ಪಟೇಲನ ಜವಾಬ್ದಾರಿಗಳಲ್ಲಿ ಒಂದು. ಸರಕಾರಿ ಅಧಿಕಾರಿಗಳು. ರಾಜಕಾರಣಿಗಳು ಹಳ್ಳಿಗೆ ಭೇಟಿಕೊಟ್ಟಾಗಲೆಲ್ಲ ಅವರ ಸಂರಕ್ಷಣೆ. ಆತಿಥ್ಯ. ಮೇಜವಾನಿಗಳ ಏರ್ಪಾಡು ಮಾಡಲೇಬೇಕು. ಇಷ್ಟೆಲ್ಲ ಕಾರ್ಯಗಳನ್ನು ನಿರ್ವಹಿಸುವ ಈ ಮುಖಂಡರಿಗೆ ಸಂದಾಯ ಮಾಡುವ ವೇತನ ಅತ್ಯಲ್ಪ. ಆದರೆ ಅವರ ಸಮಾಜದಲ್ಲಿ ಗೌರವದ ಸ್ಥಾನ - ಮಾನಗಳು ಅವರಿಗೆ ಇವೆ. ಹಳ್ಳಿಯಲ್ಲಿ ಯಾವುದೇ ಕಾರ್ಯಕಲಾಪಗಳು ನಡೆಸಬೇಕಾದರೂ ಇವರುಗಳ ಅಪ್ಪಣೆ ಪಡೆಯಲೇ ಬೇಕು. ವಿಶೇಷ ಸಮಾರಂಭಗಳಿಗೆ ಅವರನ್ನು ಆಮಂತ್ರಿಸಿ. ಭೋಜನ - ಸೆರೆಗಳ ಸರಬರಾಜು ಮಾಡಿ ಕೈ ಬೆಚ್ಚಗೆ ಮಾಡಲು ಕಾಸು ಬೇಕೇ ಬೇಕು.

ಇವರೊಂದಿಗೆ ಸಹಬಾಳ್ವೆ ಮಾಡಿದ ರಜಪೂತರ ದೇಹ ಸಂಬಂಧದಿಂದ ಅಸ್ತಿತ್ವಕ್ಕೆ ಬಂದ ವರ್ಗವನ್ನು 'ರಾಜ-ಕೊರ್ಕು'ಗಳೆಂದು ಗುರುತಿಸಲಾಗುತ್ತದೆ. ಅವರಿಗೆ ಹೊಲ - ಗದ್ದೆಗಳು ಇರುವದರಿಂದ ಧನಿಕರೆನಿಸಿಕೊಂಡಿದ್ದಾರೆ. ಭಿಲ್ಲರ ಮಿಶ್ರ ಸಂತತಿಗೆ ನಹಾಲ್‌ರೆಂದು ಹೆಸರು. ಈ ಎರಡು ವಿಭಾಗಗಳನ್ನು ಬಿಟ್ಟು ಉಳಿದವರಿಗೆ 'ಪೋತಾರಿಯಾ' ಎಂದು ಸಂಬೋಧಿಸಲಾಗುತ್ತದೆ. ಈ ಮೂರೂ ಬಣಗಳಲ್ಲಿ ಅಂತರ್ ವಿವಾಹ ನಿಷಿದ್ಧವಿರುವದರಿಂದ ಅವರಿಗೆ ತಮ್ಮತನ ಉಳಿಸಿಕೊಳ್ಳಲು ಸಾಧ್ಯವಾಗಿದೆ. ರಾಜ ಕೊರ್ಕುಗಳು ಗೌರವರ್ಣ ಹೊಂದಿ. ಹಿಂದುಗಳಿಗೆ ಹತ್ತಿರದವರೆನಿಸಿದ್ದಾರೆ. ಆಂತೆಯೇ ಅವರು ಇತರರಿಂದ ನೀರನ್ನು ಸಹ ಸೇವಿಸುವದಿಲ್ಲ. ಒಂದೇ ಬಣದಲ್ಲಿ ಕೂಡ ಸಗೋತ್ರ ವಿವಾಹ ನಿಷಿದ್ಧ. ಮಗನ ಸಂಟಸ್ಥನಕ್ಕಾಗಿ ತಂದೆಯೇ ಮುಂದುವರಿದು ಕನ್ಯಾ ಪಿತೃವಿನೊಂದಿಗೆ ಸಂಪರ್ಕ ಸ್ಥಾಪಿಸುತ್ತಾನೆ. ಈ ಸಂಬಂಧ ವಧೂವರರಿಗೆ ಒಪ್ಪಿಗೆಯಾದರೆ. ಊರ ಮುಖಂಡರ ನೇತೃತ್ವದಲ್ಲಿ ವಧು-ದಕ್ಷಿಣೆ ನಿರ್ಧರಿಸಲಾಗುತ್ತದೆ. ಇದು ಕಾಳು-ಕಡಿ. ಭೆಲ್ಲ. ಸೆರೆಗಳ ರೂಪದಲ್ಲಿ ಇರುವದರಿಂದ. ಮಂಗಳ ವಾದ್ಯಗಳು ಮೊಳಗುವ ಮೊದಲೇ ಅವನ್ನು ಸಂದಾಯ ಮಾಡಬೇಕಾಗುತ್ತದೆ. ಶುಭ ಮುಹೂರ್ತದಲ್ಲಿ ದಿಬ್ಬಣ ವಧೂಗೃಹಕ್ಕೆ ಆಗಮಿಸುತ್ತದೆ. ಮೊದಲು ಬಾಯುಪಚಾರಮಾಡಿ ನಂತರ ಮದ್ಯದ ಆತಿಥ್ಯವಾಗುತ್ತದೆ. ಸಿರಿವಂತರ ಮದುವೆಯಲ್ಲಿ ಗರ್ನಾಲು ಹಾರಿಸುವರು. ವಾದ್ಯಗಳನ್ನು ಮೊಳಗಿಸುವರು. ಆದರೆ ಬಡವರ ವಿವಾಹಗಳಲ್ಲಿ ಹಾಡು - ಕುಣಿತಗಳಿಗೆ ಕೊರತೆಯಿಲ್ಲ. ಅನೇಕ ವಿಧಗಳಲ್ಲಿ ಕೊರ್ಕುಗಳು ಹಿಂದುಗಳ ಮೇಲ್ಪಂಕ್ತಿ ಅನುಸರಿಸಿದರೂ. ವಿವರಗಳಲ್ಲಿ ಬಹಳಷ್ಟು ಅಂತರಗಳಿವೆ. ಅವರಲ್ಲಿ ಪುರೋಹಿತರನ್ನು ಆಮಂತ್ರಿಸುವದಿಲ್ಲ. ವಧು - ವರರು ಉಂಗುರಗಳನ್ನು ಅದಲು ಬದಲು ಮಾಡಿಕೊಂಡು ಅಗ್ನಿಗೆ ಸಪ್ತಪ್ರದಕ್ಷಿಣೆ ಹಾಕುತ್ತಾರೆ. ಅತಿಥಿಗಳಿಗೆ ಭೋಜನಕೂಟ ಮತ್ತು ಸುರಾಪಾನದ ಏರ್ಪಾಡು ಮಾಡಲಾಗುತ್ತದೆ. ನಶೆ ಏರಿದಂತೆ ವಾಕ್ ಯುದ್ಧ ಮಲ್ಲಯುದ್ಧಗಳು ಸಾಮಾನ್ಯ. ಬಹುಪತ್ನಿತ್ವ ಇನ್ನೂ ಪ್ರಚಲಿತವಿದೆ. ಹಿರೇ ಪತ್ನಿಯನ್ನು ಖಾಟ್. ಕಿರಿಯಳನ್ನು ಸಾನಿ ಎಂದು ಗುರುತಿಸಲಾಗುತ್ತದೆ. ವಿವಾಹಬಾಹ್ಯ ಸಂಬಂಧಕ್ಕೆ ಊರ ಹಿರಿಯರು ಪಂಚಾಯತ ಸೇರಿಸಿ ವಿಚ್ಛೇದನಕ್ಕೆ ಅನುಮತಿ ನೀಡುತ್ತಾರೆ. ವಿಧವಾ - ಪುನರ್ ವಿವಾಹಕ್ಕೆ ಸಕಲ ಪ್ರೋತ್ಸಾಹ ನೀಡಲಾಗುತ್ತದೆ. ಅಣ್ಣನ ವಿಧವೆಯನ್ನು ತಮ್ಮನು ವರಿಸುವದು ಸಾಮಾನ್ಯ. ಗರ್ಭಿಣಿಯರನ್ನು ಹೆಚ್ಚಿನ ಶಾರೀರಿಕ ಶ್ರಮದ ಕೆಲಸದಿಂದ ಬಿಡಿಸುತ್ತಾರೆ. ಸೂಲಗಿತ್ತಿಯರಿಲ್ಲದ ಹಳ್ಳಿಗಳಲ್ಲಿ ಜಾತಿಯ ಹೆಂಗಳೆಯರೇ ಹೆರಿಗೆಗೆ ಸಹಾಯ ನೀಡುತ್ತಾರೆ.

ಮೃತರನ್ನು ಸ್ವರ್ಗಕ್ಕೆ ಕಳಿಸಲು ಅತಿ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ನಗ್ನಶರೀರವನ್ನು ದಕ್ಷಿಣ ದಿಕ್ಕಿಗೆ ತಲೆ ಮಾಡಿ ಹುಗಿಯುವದು ಸಾಮಾನ್ಯ. ಇದಾದ ಕೆಲದಿನಗಳ ನಂತರ ಮೃತನ ಆತ್ಮಕ್ಕೆ ಆಮಂತ್ರಣಕೊಟ್ಟು, ಹಿರಿಯರೊಡನೆ ಒಂದಾಗಲು (ಪಿತರಮಿಲೋನಿ) ಆದೇಶ ಕೊಡಲಾಗುತ್ತದೆ. ಇಷ್ಟಾದರೂ ಮೃತನ ಭೂತ - ಪ್ರೇತಗಳಿಂದ ಕುಟುಂಬದವರಿಗೆ ತೊಂದರೆಯುಂಟಾದರೆ. ವಿಶೇಷ ಭೋಜನಕೂಟ ಏರ್ಪಡಿಸಿ. ವಿಶೇಷ ಸಮಾರಾಧನೆ ಏರ್ಪಡಿಸಲಾಗುತ್ತದೆ. ಮೃತರಿಗೆ ಸ್ಮಾರಕಗಳನ್ನು (ಗಾಥಾ) ಕೊರೆಯಿಸುವದು ಕೊರ್ಕುಗಳಲ್ಲಿ ಅನಾದಿಕಾಲದಿಂದ ನಡೆದು ಬಂದ ಪದ್ಧತಿ. ಹಿಂದೊಮ್ಮೆ ಇದಕ್ಕಾಗಿ ಶಿಲೆಯನ್ನು ಬಳಸುತ್ತಿದ್ದರು. ಇಂದಿನ ದಿನಗಳಲ್ಲಿ ಕೊರಡುಗಳನ್ನು ಬಳಸುತ್ತಾರೆ. ಪ್ರತಿಯೊಂದಕ್ಕೂ ನಿರ್ದಿಷ್ಟವಾದ ಸ್ಥಳವಿದೆ. ಕಾರಣಾಂತರಗಳಿಂದ ಪರ ಊರು. ತಹಶೀಲು. ಜಿಲ್ಲೆ. ರಾಜ್ಯಗಳಿಗೆ ವಲಸೆ ಹೋದರೂ ಮೃತರ ಗಾಥಾ ಹುಗಿಯಲು ಪೂರ್ವಜರ ಸ್ಥಾನಕ್ಕೇ ಹಿಂದಿರುಗಬೇಕೆಂಬ ಕಡ್ಡಾಯವಿದೆ. ಈ ಪದ್ಧತಿಯನ್ನು ಅವರು ಹಿಂದುಗಳಿಂದ ಎರವಲು ಪಡೆದದ್ದು ಆಗಿರದೇ ತಮ್ಮ ಇತಿಹಾಸಪೂರ್ವ ಕಾಲದ ಪಿತಾಮಹರಿಂದ ಆನುವಂಶಿಕವಾಗಿ ಪಡೆದ ಸಂಪ್ರದಾಯವೆಂದು ವಾದಿಸುವ ಇತಿಹಾಸಕಾರರಿದ್ದಾರೆ. ಮೃತನ ವೈಯಕ್ತಿಕ ಸಾಮಗ್ರಿಗಳನ್ನು ಅವನೊಂದಿಗೇ ಹುಗಿಯುವದರಿಂದ ಕುಟುಂಬದ ಸದಸ್ಯರಲ್ಲಿ ಹಂಚಿಕೊಳ್ಳಲು ಹೆಚ್ಚಿನ ಆಸ್ತಿ -

ಪಾಸ್ತಿಗಳು ಇರುವದಿಲ್ಲ. ಪಾಲಕರ ಒಟ್ಟಿಗೇ ವಾಸಿಸುವ ಅವಿವಾಹಿತ ಪುತ್ರನಿಗೇ ಇದ್ದು ಬಿದ್ದ ಆಸ್ತಿಯ ಸಿಂಹ ಪಾಲು ಸಿಗುತ್ತದೆ. ಸ್ವತಂತ್ರವಾಗಿ ವಾಸಿಸುವ ಮಕ್ಕಳಿಗೆ ಮತ್ತು ಮಗಳಂದಿರಿಗೆ ಯಾವ ಅಧಿಕಾರವೂ ಇರುವದಿಲ್ಲ.

ತಲೆ - ತಲಾಂತರಗಳಿಂದ ನಾಗರಿಕಜೀವನದಿಂದ ಬೇರ್ಪಟ್ಟು ಅಂಧಶ್ರದ್ಧೆಗಳಲ್ಲಿ ಮುಳುಗಿದ್ದರಿಂದ ಆಧುನಿಕ ಆಚಾರ - ವಿಚಾರ. ತರ್ಕಗಳಲ್ಲಿ ಈ ಜನಕ್ಕೆ ಎಳ್ಳಷ್ಟೂ ನಂಬಿಕೆಯಿಲ್ಲ. ಅವರ ಪುರೋಹಿತನಾದ 'ಭೂಮಕಾ' ನಲ್ಲಿ ಅಚಲ ವಿಶ್ವಾಸ. ಅಂತೆಯೇ ಕಷ್ಟ, ಕಾರ್ಪಣ್ಯಗಳು ಎದುರಾದಾಗ ಅವನಲ್ಲಿ ಧಾವಿಸುವರು. ಅವನು ಮಿಂದು ಇಡೀ ದಿನ ಉಪವಾಸವಿದ್ದು ಕೇಶರಾಶಿ ಹರಡಿಕೊಂಡು. ಪ್ರಸಂಗಕ್ಕೆ ಅನುಗುಣವಾಗಿ ವಿವಿಧ ದೇವ - ದೇವತೆಗಳನ್ನು ತನ್ನ ಶರೀರದಲ್ಲಿ ಬರಮಾಡಿಕೊಳ್ಳುವನು. ಭಕ್ತವೃಂದ. ತನ್ನ ಸಮಸ್ಯೆಗಳನ್ನು ಅರಿಕೆ ಮಾಡಿಕೊಳ್ಳುವದು. ಆಗ ಪರಿಹಾರವನ್ನು ಸೂಚಿಸುವನು. ಪಿತರರ ಅಸಂತೋಷವೇ ಹಲವು ಸಲ ಮುಖ್ಯ ಕಾರಣ (!)ವಾಗಿ ಪರಿಣಮಿಸುತ್ತದೆ. ಪತಿ ಕಾಯಿಲೆಯಿಂದ ನರಳಿದರೆ ಪತ್ನಿಗೆ ನಾಗಬೆತ್ತದಿಂದ ಬೆನ್ನಿಗೆ ಬಾಸುಂಡೆ ಬರುವಂತೆ ಥಳಿಸುವರು. ಕಾಡಿನಲ್ಲಿ ನರಭಕ್ಷಕ ಹುಲಿಯ ಕಾಟ ಹೆಚ್ಚಾದರೆ. ಬಾಘೇರ್ ದೇವ (ಹುಲಿ ದೇವ)ನನ್ನು ಸ್ಥಾಪಿಸಿ. ಅದಕ್ಕೆ ಯೋಗ್ಯ ಪೂಜೆ - ಪುನಸ್ಕಾರಗಳನ್ನು ಪೂರೈಸಬೇಕು. ಯಾವದೇ ಸಂಪತ್ತಿನ ಆಸೆ ಅವರ ಪುರೋಹಿತನಿಗೆ ಇಲ್ಲದ್ದರಿಂದ ಅವನೇ ಶ್ರೇಷ್ಠ ವೈದ್ಯ. ಅನುಭವಿ. ಜ್ಯೋತಿಷಿಯಾಗಿ ಬಿಡುತ್ತಾನೆ. ಮಾಟ - ಮಂತ್ರ ಮಾಡುವದೇ ಅವನ ಪರಿಹಾರೋಪಾಯ. ವೈರಿಯ ಸೇಡು ತೀರಿಸಿಕೊಳ್ಳುವಾಗ. ಮಣ್ಣಿನಿಂದ ಅವನ ಪ್ರತಿರೂಪವನ್ನು ತಯಾರಿಸಿ ಅದಕ್ಕೆ ಇರಿದರೆ. ಕಾಲಾಂತರದಲ್ಲಿ ಆ ವ್ಯಕ್ತಿಯೇ ಇರಿತಕ್ಕೆ ಬಲಿಯಾಗುವನೆಂದು ನಂಬಲಾಗುತ್ತದೆ. ಅವನು ತನ್ನ ಮಾಯಾವಿದ್ಯೆಯಿಂದ ಬಂಜೆಯನ್ನು ಫಲವತಿಯಾಗಿ ಮಾಡಬಲ್ಲ. ಸರ್ಪದ ವಿಷವನ್ನು ಹೊರಗೆ ಹಾಕಬಲ್ಲ. ಅನಾವೃಷ್ಟಿಯ ಕಾಲದಲ್ಲಿ ಮಳೆರಾಯನನ್ನು ಬರಮಾಡಿಕೊಳ್ಳಬಲ್ಲ. ಕಾಡುಪ್ರಾಣಿ ಆಕ್ರಮಿಸಿದವನನ್ನು ಜೀವಕಳೆ ತುಂಬಿಸಬಲ್ಲ. ಅವರಿಗೆ ಶಕುನಗಳಲ್ಲಿಯೂ ಅಪಾರ ನಂಬಿಕೆ. ಬೇಟೆಗೆ ಹೊರಟಾಗ, ವಿವಾಹದ ಮಾತುಕತೆ ಆಡಲು ನಿಶ್ಚಯಿಸಿದಾಗ, ಅಪಶಕುನವಾದರೆ. ಕಾರ್ಯಕ್ರಮಗಳನ್ನು ಮುಂದೂಡಿ ಬಿಡುತ್ತಾರೆ. ಬಾಹ್ಯ ಜಗತ್ತಿನ ಅರಿವು ಈ ದುರ್ದೈವಿಗಳಿಗೆ ಇಲ್ಲ. ಸಾರ್ವತ್ರಿಕ ಶಿಕ್ಷಣದ ವ್ಯವಸ್ಥೆಯಲ್ಲೂ ಇವರತ್ತ ಲಕ್ಷ್ಯ ಹರಿಸದೇ ಇದ್ದದ್ದು ಅನ್ಯಾಯ.

23. ರಸಿಕತೆಗೆ ಹೆಸರಾದ ಮಾವಾಶಿಯಾರು



ಮನಸೆಳೆವ ಬೆಟ್ಟಗಳಿಂದ ಹರಿಯುವ ಝರಿಗಳ ಪರಿಸರದಲ್ಲಿ. ಚಿಕ್ಕ ಪುಟ್ಟ ಗುಡಿಸಲುಗಳನ್ನು ಕಟ್ಟಿಕೊಂಡು, ನೆಮ್ಮದಿಯಿಂದ ಬಾಳುವ ಮಾವಾಶಿಯರನ್ನು ಕಂಡಾಗ ಹೊಟ್ಟೆ ಕಿಚ್ಚುಬಾರದಿರದು. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಹೂವು ಬೇಕೇ ಬೇಕು ಎಂದು ನಂಬಿದ ಆದಿವಾಸಿಗಳಿವರು. ತಲೆಯ ಮೇಲೆ ಸದಾಕಾಲ ಬದಲಾಗುತ್ತಿರುವ ನೀಲಿಗಗನ. ಪ್ರತಿ ನಿತ್ಯದ ಜೀವನದ ಬೇಕುಗಳನ್ನು ಪೂರೈಸುವ ದಟ್ಟವಾದ ಕಾಡು. ಎಂದೂ ಹಿಂಗದ ನೀರಿನ ಪೂರೈಕೆ. ನೆಮ್ಮದಿಯ ಜೀವನಕ್ಕೆ ಇದಕ್ಕಿಂತ ಹೆಚ್ಚಿನದು ಬೇಕಾಗುವದಿಲ್ಲವೆಂದು ಅರಿಯುವಂತಾಯಿತು. ಮಾವಾಶಿಯರು ಮಹಾನ್ ಸಂಶಯಗ್ರಸ್ತರು. ತಮ್ಮವರಲ್ಲದ ಯಾರನ್ನೂ ಹತ್ತಿರ ಸೇರಿಸುವದಿಲ್ಲ. ಪಟ್ಟು ಹಿಡಿದು ಮಾತನಾಡಲು ಯತ್ನಿಸಿದರೆ ಮೂಕರಂತೆ ವರ್ತಿಸುತ್ತಾರೆ. ಹೆಂಗಳೆಯರಂತೂ ಹುಲಿಯ ದರ್ಶನವಾದ ಹರಿಣದಂತೆ ಕಾಲಿಗೆ ಬುದ್ಧಿ ಹೇಳಿಬಿಡುತ್ತಾರೆ. ದೂರದಲ್ಲಿ ಕಾಡಿನಿಂದ ಉರುವಲಿನ ಹೊರೆ ಹೊತ್ತು ಗೃಹಾಭಿಮುಖಿಯಾದ ಹೆಂಗಳೆಯರ ತಂಡ ಆಸಕ್ತಿ ಕೆರಳಿಸಿತು. ಆಗೊಮ್ಮೆ ಈಗೊಮ್ಮೆ ತಲೆಯ ಭಾರ ಕಡಿಮೆ ಮಾಡುವ ಸಲುವಾಗಿ, ಭಾರವಾದ ಹೊರೆಯನ್ನು ಎರಡೂ ಕೈಗಳಿಂದ ಮೇಲಕ್ಕೆತ್ತಿ ನಡೆಯುವ ಪದ್ಧತಿ ವಿಶಿಷ್ಟವೆನಿಸಿತು. ಅವರು ಹಾದು ಹೋಗುವ ದಾರಿಯಲ್ಲಿ, ಒಂದು ಮರದ ಆಶ್ರಯ ಪಡೆದು, ಕ್ಯಾಮರಾ ಸಿದ್ಧಮಾಡಿ ನಿಲ್ಲುವಷ್ಟರಲ್ಲಿ ಅವರಿಗೆ ಈ 'ಫೋಟೋಗ್ರಾಫ'ರ ಸುಳಿವು ಸಿಕ್ಕಿ, ಬಳಸು ದಾರಿ ಬಳಸಿ ಅದೃಶ್ಯರಾಗಿ ಬಿಟ್ಟರು. ಇದರಿಂದ ಅವರನ್ನು ಕ್ಯಾಮರಾದಲ್ಲಿ ಸೆರೆ ಹಿಡಿಯಲೇಬೇಕೆಂಬ ಛಲ ಮೂಡಿತು.

ಅಂದು ಪಚಮಡಿಯಲ್ಲಿ ಸಂತೆ. ಸುತ್ತಮುತ್ತಲಿನ ಆದಿವಾಸಿಗಳು ಮಹಾದೇವ ಬೆಟ್ಟಗಳನ್ನು ಇಳಿದು ಬಂದಿದ್ದರು. ಅವರಲ್ಲಿ ತಂದೆಯೊಡನೆ ಬಂದ ಅಕ್ಕ-ತಂಗಿಯರು ಛಾಯಾಗ್ರಹಣಕ್ಕೆ ಹೇಳಿ ಮಾಡಿಸಿದಂತೆ ಇದ್ದರು. ಆದ್ದರಿಂದ ಪಿತನ ಹಳ್ಳಿ ಯಾವುದು? ಹೆಸರು ವಿಚಾರಿಸುತ್ತಿದ್ದಾಗಲೇ ಅದರ ಇಂಗಿತ ಅರಿತ ಸಹೋದರಿಯರು ಅದೃಶ್ಯವಾಗಿಯೇ ಬಿಟ್ಟರು. ಮುಂದೆ ಆ ತಂಡದವರು ಬಟ್ಟೆ ಅಂಗಡಿಯಲ್ಲಿ, ಎಣ್ಣೆ, ಉಪ್ಪು ಖರೀದಿಸುವಾಗ, ಮಿಠಾಯಿಕೊಳ್ಳುವಾಗ ನೋಡುವಂತೆ ಆದರೂ ಛಾಯಾಗ್ರಹಣದ ಅನುಕೂಲ ಅಲ್ಲಿರಲಿಲ್ಲ. ತಂದೆ, ಮಗಳಂದಿರನ್ನು ಒಂದು ಮರದ ಕೆಳಗೆ ಕುಳ್ಳಿರ ಹೇಳಿ ಕ್ಷೌರ ಮಾಡಿಕೊಂಡು ಬರಲು ಹೋದಾಗ, ಹುಡುಗಿಯರಿಬ್ಬರೂ ಕೈಗಳಿಂದ ಮುಖ ಮುಚ್ಚಿಕೊಂಡೇ ಇದ್ದರು. ಕ್ಯಾಮರಾ ನೋಡಿ ಗೊತ್ತಿದ್ದ ಜಿನ್ ಅವರಿಗೆ ಎಷ್ಟು ಬುದ್ಧಿ ಹೇಳಿದರೂ ಕಿವುಡ - ಮೂಕರಂತೆ ಇದ್ದು ಬಿಟ್ಟರು. ಇಷ್ಟಾದರೂ ಸೋಲು ಒಪ್ಪಿಕೊಳ್ಳಲು ಮನಸ್ಸಾಗಲಿಲ್ಲ. ಹಜಾಮತಿಯಿಂದ ಹಿಂತಿರುಗಿ ಬಂದ ಪಿತನನ್ನು ನಿಲ್ಲಿಸಿ ಅವನು ಕ್ಯಾಮರ ಗಾಜಿನಲ್ಲಿ ಅದೆಷ್ಟು ಚೆನ್ನಾಗಿ ಕಾಣುತ್ತಿದ್ದಾನೆಂದು ಉತ್ಸಾಹಿ ತರುಣನಿಗೆ ತೋರಿಸಿದ. ಇದರಿಂದ ಕಿರಿಯಳ ಬಿಗುಮಾನ ಸ್ವಲ್ಪ ಸಡಿಲವಾದ್ದರಿಂದ, ಅವಳಿಗೂ ತೋರಿಸಿದೆ. ತಂದೆಯನ್ನು ಕ್ಯಾಮರಾದಲ್ಲಿ ನೋಡಿ ಹಿಗ್ಗಿದ್ದರಿಂದ, ಅವಳ ಅಕ್ಕ ಹೇಗೆ ಕಾಣಿಸುತ್ತಾಳೆಂದು ತೋರಿಸುತ್ತ ಕ್ಲಿಕ್ಕಿಸಲಾರಂಭಿಸಿದೆ. ಇದರಿಂದ ಹಿರಿಯಳಿಗೆ, ಅವಮಾನವಾದಂತಾಗಿ ಗಂಟು - ಮೂಟೆ ತಲೆಯ ಮೇಲೆ ಹೇರಿಕೊಂಡು ಹೊರಟೇ ಬಿಟ್ಟಳು. ಆದರೆ ಕೆಲವೇ ನಿಮಿಷಗಳಲ್ಲಿ ಹಲವು ಭಾವಚಿತ್ರಗಳನ್ನು ಕ್ಲಿಕ್ಕಿಸಿ ಆಗಿತ್ತು. ಆ ನಂತರ ಅವಳ ಚಿತ್ರಗಳು ಅಪೂರ್ವವೆನಿಸಿದವು.

ಮಾವಾಶಿಯರು ದೃಢಕಾಯರಲ್ಲ, ಕೃಷ್ಣವರ್ಣೀಯರಾದರೂ ಸುರೂಪಿಗಳು. ಪುರುಷರು ಮುಂದಲೆಯನ್ನು ಬೋಳಿಸಿಕೊಂಡು ಕೇಶರಾಶಿಯನ್ನು ಮುಡಿಯನ್ನಾಗಿ ಕಟ್ಟಿಕೊಳ್ಳುತ್ತಾರೆ. ತಮ್ಮ ಪರಿಸರದಲ್ಲಿ ಕಿರಿಯಗಲದ ಬಟ್ಟೆಯನ್ನು ಸೊಂಟಕ್ಕೆ ಸುತ್ತಿಕೊಂಡು, ಬರಿಮೈಯಲ್ಲಿ ಇರುವದೇ ವಾಡಿಕೆಯಾದರೂ ಸಂತೆಗೆ ಬರುವಾಗ ಕಿರಿ ಧೋತ್ರ, ಬಂಡ ಅಂಗಿ ಧರಿಸುವರು. ಕುಮಾರಿಯರು ಲಂಗ, ರವಕೆ ಧರಿಸಿದರೆ, ಋತುಮತಿಯಾದವರು, ಒಳಕಚ್ಚೆಹಾಕಿ, ತುಂಡು ಸೀರೆ ಉಡುವರು. ಆಭರಣಪ್ರಿಯರಾದ್ದರಿಂದ ಅಂಗಾಂಗಳನ್ನು ಅಗ್ಗದ ಬಿಂಗಿಮಣಿಸರಗಳಿಂದ ಅಲಂಕರಿಸುವರು. ಗುಡಿಸಲುಗಳು ತೀರ ಚಿಕ್ಕವಾಗಿ ಇಕ್ಕಟ್ಟಿನವು ಆಗಿರುವದರಿಂದ ಹೆಚ್ಚಿನ ಸಮಯವನ್ನು ನಿಸರ್ಗದ ಮಡಿಲಲ್ಲೆ ಕಳೆಯುವರು. ಮಹಾದೇವನು ಅರಣ್ಯವನ್ನು ನಿರ್ಮಿಸಿ, ತಮ್ಮನ್ನು ಅದರ ಅಧಿಪತಿಯಾಗಿ ಆಳಲು ಜನ್ಮ ಕೊಟ್ಟಿದ್ದಾನೆಂದು ನಂಬುತ್ತಾರೆ. ಅಂತೆಯೇ ಒಂದಿಲ್ಲೊಂದು ನೆವದಿಂದ ಕಾಡಿನಲ್ಲಿ ಅಲೆಯುತ್ತಲೇ ಇರುತ್ತಾರೆ. ನಸುಕಿನಲ್ಲಿಯೇ ಕಾಡಿಗೆ ಧಾವಿಸಿ, ಪ್ರಾತರ್ವಿಧಿಗಳನ್ನು ಪೂರೈಸಿ ಸ್ವಲ್ಪ ಹೊತ್ತು ಈಜಾಡಿ, ಮಿಂದು ಬರುವಾಗ ನಿತ್ಯಬಳಕೆಗಾಗಿ ನೀರನ್ನೂ ಹೊತ್ತು ತರುವರು. ನಾಶ್ತಾಗೆ ತಿಳಿಗಂಜಿ ಸೇವಿಸಿ, ಗಾಳ ಹಿಡಿದು ಮೀನು ಹಿಡಿಯಲು ಹಳ್ಳಕ್ಕೆ ಧಾವಿಸುವರು. ಮನಸ್ಸಿಗೆ ಪಸಂದಾದ ಮೀನು ಸಾಕಷ್ಟು ಸಿಗದಿದ್ದರೆ ಕೈಬಲೆಯೊಂದಿಗೆ ಮೊಲದ ಶಿಕಾರಿ ನಡೆಸುವರು. ಹಿಂದಿನ ರಾತ್ರಿ ಮೊಲವು ಮರಿಗೆ ಮೊಲೆ ಉಣಿಸಿದ ತಾಣ, ನಂತರ ಕಾಲು ಹೆಜ್ಜೆಯ ಗುರುತಿನಿಂದ ಅಡಗಿರುವ ಗಿಡಗಂಟೆಗಳನ್ನು ಗುರುತಿಸಿ, ಅದರ ಸುತ್ತ ಬಲೆ ನಿಲ್ಲಿಸಿ, ಬೊಬ್ಬೆ ಹಾಕಿ, ಕಾಲಿಗೆ ಬುದ್ಧಿ ಹೇಳಿದ ಮೊಲ, ಕೊನೆಗೊಮ್ಮೆ ಬಲೆಯಲ್ಲಿ ಸಿಕ್ಕಿಕೊಂಡಾಗಲೇ ಅವರಿಗೆ ನೆಮ್ಮದಿ ಚಿಗರೆ, ನೀಲಗಾಯ್, ಕಾಡು - ಹಂದಿಗಳ ಬೇಟೆಗೆ ಬಿಲ್ಲು ಬಾಣಗಳೊಂದಿಗೆ ಹಳ್ಳಿಯ ಸಮಸ್ತರೂ ಹೊರಟಿರುತ್ತಾರೆ. ಸಿಕ್ಕ ಬೇಟೆಯಲ್ಲಿ ಸಮಪಾಲು ಮಾಡಿಕೊಂಡು, ವಿಶೇಷ ಅಡಿಗೆ ಮಾಡಿ ಉಂಡು ಆನಂದಿಸುತ್ತಾರೆ. ಇಂಥ ಸಮಯದಲ್ಲಿ ಸುರಾಪಾನಕ್ಕೆ ಸ್ವಾಗತ ಇದ್ದೇ ಇದೆ. ಗುಡಿಸಲಿನ ಸುತ್ತಮುತ್ತಲೂ ಅಲ್ಪಸ್ವಲ್ಪ ತರಕಾರಿ ಬೆಳೆಸಿ ಬಳಸುತ್ತಾರೆ. ಅರಣ್ಯದ ಮಧ್ಯದ ಬಯಲು ಪ್ರದೇಶವನ್ನು ಸವರಿ, ಕುಮರಿ ಪದ್ಧತಿಯಿಂದ

ಕೃಷಿಯನ್ನು ಕೈಗೊಳ್ಳುತ್ತಾರೆ. ಹಾಲುಣಿಸುವ ಭೂಮಾತೆಯನ್ನು ನೋಯಿಸಿ ಊಳುವ ಅಧಿಕಾರ ತಮಗಿಲ್ಲವೆಂದು ದೃಢವಾಗಿ ನಂಬುತ್ತಾರೆ. ಅವರು ಹೆಚ್ಚಾಗಿ ಬಳಸುವದು ಉಕ್ಕಿನ ಕೊಡಲಿಯೊಂದೇ.

ಯುವಕ - ಯುವತಿಯರಲ್ಲಿ ಯಾವರೀತಿಯ ಮಡಿವಂತಿಕೆಯೂ ಇಲ್ಲ. ಕೂಸಾಗಿದ್ದಾಗ ನೆರೆಹೊರೆಯವರೊಂದಿಗೆ ಆಡಿದಂತೆ ಬಾಲಕ - ಬಾಲಕಿಯರು ಕಾಡಿನಲ್ಲಿ ಜೊತೆಯಾಗಿ ಅಲೆದು ಹೂ, ಹಣ್ಣು, ಕಂದಮೂಲಗಳನ್ನು, ಜೇನುತುಪ್ಪವನ್ನು, ದೊನ್ನೆ ಮಾಡಲು ಎಲೆಗಳನ್ನು, ಬುಟ್ಟಿ ಹೆಣೆಯಲು ಬಿದುರುಗಳನ್ನು ಸಂಗ್ರಹಿಸುವರು. ಕುಮಾರಿಯು ಋತುಮತಿಯಾದಾಗ, ಯಾವ ಮುಚ್ಚುಮರೆಯೂ ಇಲ್ಲದೇ ತನಗೆ 'ತಿಂಗಳ ಬೇನೆ' ಪ್ರಾರಂಭವಾಗಿದೆ ಎಂದು ಹೇಳುವಳು. ಅವರು ಸೇವಿಸುವ ಆಹಾರದಲ್ಲಿ ಪೌಷ್ಟಿಕಾಂಶ ತೀರಾ ಕಡಿಮೆ ಇರುವದರಿಂದ, ಹುಡುಗಿಯರು ತಮ್ಮ ಹದಿನಾಲ್ಕನೆಯ ವಯಸ್ಸಿಗೂ, ಹುಡುಗರು ತಮ್ಮ ಹದಿನಾರನೆಯ ವಯಸ್ಸಿಗೂ ಪ್ರೌಢಾವಸ್ಥೆಯನ್ನು ತಲುಪುತ್ತಾರೆ. ಬಾಲ್ಯದಿಂದಲೂ ಪರಿಸರದಲ್ಲಿ ಜರುಗುತ್ತಲೇ ಇರುವ ಸಂತಾನೋತ್ಪತ್ತಿ ಪ್ರಕ್ರಿಯೆಯಲ್ಲಿ ಆಸಕ್ತಿ ವಹಿಸಿ ಕಣ್ಣಲ್ಲಿ ಕಣ್ಣಿಟ್ಟು ಗಮನಿಸುತ್ತಿರುತ್ತಾರೆ. ಹಾವುಗಳು ಒಂದನ್ನೊಂದು ಸುತ್ತಿಕೊಂಡು ಒಂದಾಗುವದನ್ನು ವೀಕ್ಷಿಸುತ್ತಾರೆ. ಗಂಡು ಕಾಡು ಪಾರಿವಾಳ ಗುಟುರ್, ಗುಟುರ್ ಎಂದು ಹೆಣ್ಣನ್ನು ಆಮಂತ್ರಿಸಿದಾಗ, ಮಾವಾಶಿ ಎಳೆಯರಿಗೆ ರೋಮಾಂಚನ ಆಗುತ್ತದೆ. ಎತ್ತರ ಮರವೇರಿದ ಗಂಡು - ಹೆಣ್ಣು ಕಪಿಗಳು ಕ್ರೀಡೆಯಲ್ಲಿ ಮೈಮರೆತಾಗ ಏಕಚಿತ್ತರಾಗಿ ನೋಡುತ್ತಿರುತ್ತಾರೆ. ಹೋರಿ, ಗೋವಿಗೆ ಪ್ರೇಮ ಭಿಕ್ಷೆ ಕೇಳುವದು, ಅವುಗಳ ಮೂಸಾಟ ಕಂಡಿರುತ್ತಾರೆ. ಹೀಗಾಗಿ ಈ ನಿಸರ್ಗದ ಮಕ್ಕಳಿಗೆ ಉಸಿರಾಡಿಸಿದಷ್ಟು ಸಹಜವಾಗಿ ಕಾಮಜ್ಞಾನ ರೂಢಿಯಾಗಿಬಿಡುತ್ತದೆ.

ತಿಂಗಳ ರಜೆ ಪಡೆದ ಹೆಣ್ಣು, ಕುಟುಂಬದವರೊಡನೆ ಕಟ್ಟುನಿಟ್ಟಿನಿಂದ ವರ್ತಿಸಲೇಬೇಕಾಗುತ್ತದೆ. ಹಾಗೆ ಮಾಡದಿದ್ದರೆ ಮೃತರು ಭೂತ ಪಿಶಾಚಿಗಳ ರೂಪದಲ್ಲಿ ತಮ್ಮನ್ನು ಸದಾ ಕಾಡುತ್ತಾರೆ ಎಂಬ ನಂಬಿಗೆ ಅವರದು. ಮುಟ್ಟಿನವಳು ಉಳಿದವರೊಂದಿಗೆ ಬೆರೆಯದೆ ಬೇರೆಯೇ ಇರಬೇಕು. ಈ ಮೂರು ದಿನಗಳಲ್ಲಿ ಅವಳು ನೀರು ತರುವಂತಿಲ್ಲ. ಅಡಿಗೆ ಮಾಡುವಂತಿಲ್ಲ. ಆದರೆ ಕೈತೋಟ, ಹೊಲ, ಕಾಡಿನಲ್ಲಿ ದಿನವಿಡೀ ದುಡಿಯಬಹುದು. ಇಂದಿಗೂ ಅವರ ಸಮಾಜದಲ್ಲಿ ಹೆಣ್ಣಿಗೇ ಪ್ರಾಧಾನ್ಯವಿರುವದರಿಂದ, ವರನ ಪಿತನೇ ಕನ್ಯೆಯನ್ನು ಕೇಳಲು ಹೋಗಬೇಕಾಗುತ್ತದೆ. ಮದುಮಗಳನ್ನು ಇಷ್ಟು ವರ್ಷ ಲಾಲನೆ ಪಾಲನೆ ಮಾಡಿದ್ದಕ್ಕೆ ವಧುದಕ್ಷಿಣೆ ತೆರಬೇಕಾಗುತ್ತದೆ. ಇದು ಹಣದ ರೂಪದಲ್ಲಿ ಇರುವದಕ್ಕಿಂತ ಕಾಳು - ಕಡಿಯ ರೂಪದಲ್ಲಿರುವದು ಹೆಚ್ಚು. ವರನು ಮೊದ್ದು ಅಥವಾ ಪೆದ್ದನಾಗಿದ್ದರೆ, ವಧು ಹಿಂದೆ ಮುಂದೆ ನೋಡದೇ ತಿರಸ್ಕರಿಸಿ ಬಿಡುವಳು. ತನ್ನ ಕಾಡಿನ 'ಸಂಗಾತಿ' ಒಪ್ಪಿಗೆಯಾದರೆ ಮಾತ್ರ ಅವನೊಂದಿಗೆ ವಿವಾಹ ನೆರವೇರಿಸಲು ಪಿತನಿಗೆ ಸೂಚಿಸುವಳು. ಅವನೂ 'ತೆರ' ತೆರದೇ ವರಿಸುವಂತಿಲ್ಲ. ಅವಿವಾಹಿತ ಗರ್ಭಿಣಿಯೂ ಆಗೀಗ ತನ್ನ ಪ್ರೇಮಿಯನ್ನು ವರಿಸುವದುಂಟು. ವಿವಾಹವಾದೊಡನೆ ಪತಿ ಗೃಹಕ್ಕೆ ತೆರಳುವದು ಸಾಮಾನ್ಯ. ಆದರೆ ಕಡುಬಡವ ಅಳಿಯನು ಮಾವನ ಮನೆಯನ್ನು ಸೇರಿಕೊಳ್ಳಬಹುದು. ವಿವಿಧ ಕಾರಣಗಳಿಗಾಗಿ ವಿವಾಹಬಾಹ್ಯ ಸಂಬಂಧ ಇಟ್ಟುಕೊಂಡ ಪ್ರಸಂಗಗಳೂ ಇರಬಹುದು. ಪತಿ - ಪತ್ನಿಯರು ವಿವಾಹ ವಿಚ್ಛೇದನ ಮಾಡಿಕೊಂಡು ಬೇರೊಬ್ಬರೊಂದಿಗೆ ಮದುವೆ ಮಾಡಿಕೊಳ್ಳಬಹುದು. ಆದರೆ ಪ್ರ ಪ್ರಥಮ ಮದುಮೆ ಮಾತ್ರ, ಧಾರ್ಮಿಕ ರೀತಿಯಿಂದ ನಡೆದದ್ದು ಎಂದು ಪರಿಗಣಿತವಾಗುತ್ತದೆ.

ಮಾವಾಶಿಯ ಗಂಡು ಉತ್ತಮ ಪ್ರೇಮಿ. ಸುರಾಪಾನ, ನೃತ್ಯಕೂಟ, ತಂಬಾಕು ಸೇವನೆಗಳಿಗಿಂತ ಪತ್ನಿಯಾದವಳ ಆಕರ್ಷಣೆ ಹೆಚ್ಚು ಅವನಿಗೆ. ಅಂತೆಯೇ ದಿನದ ಹೆಚ್ಚಿನ ಸಮಯವನ್ನು ಒಬ್ಬರ ಸಹವಾಸದಲ್ಲಿ ಇಬ್ಬರು ಇರಬಯಸುತ್ತಾರೆ. ಅವರ ಪ್ರಸ್ಥಕ್ಕೆ ಕಾಡೇ

ಅತ್ಯಂತ ಪ್ರಶಸ್ತ ತಾಣ. ಅಂತೆಯೇ ಕೂಟ ಬೇಕೆನಿಸಿದಾಗ ಕಾಡಿಗೇ ಧಾವಿಸುತ್ತಾರೆ. ಗುಡಿಸಲು ತೀರ ಚಿಕ್ಕವಾಗಿದ್ದು, ಅಲ್ಲಿ ಅಡಚಣೆಗಳೇ ಅಧಿಕ ಪ್ರಮಾಣದಲ್ಲಿ ಇರುವದೇ ಮುಖ್ಯ ಕಾರಣವಿರಬಹುದು. ಆದರೆ ಮಾವಾಶಿಯರು ನಿಸರ್ಗದ ಮಕ್ಕಳಲ್ಲವೇ? ಅವರ ರತಿಕ್ರೀಡೆಯಲ್ಲಿ ಚುಂಬನ, ಸ್ತನಮರ್ದನಗಳಿಗೆ ಸ್ಥಾನ ಇಲ್ಲವೇ ಇಲ್ಲ. (ಸ್ತನಗಳು ಕಾಮಾಂಗವಲ್ಲ). ಹುಲಿ ಕರಡಿಗಳಿಗೆ ಅವಶ್ಯ ಇಲ್ಲದ ಪ್ರೇಮಚೇಷ್ಟೆಗಳು ಮಾವಾಶಿಯರಿಗೆ ಏಕೆ ಬೇಕು? ಕೂಡುವಿಕೆಯಲ್ಲಿ ಹೆಣ್ಣು ಸಂಪೂರ್ಣವಾಗಿ ಗಂಡಿಗೆ ಒಪ್ಪಿಸಿಕೊಳ್ಳುವದರಲ್ಲಿ ಹೆಸರುವಾಸಿ. ಎಷ್ಟೋ ಸಲ ಅವಳೇ ಅಗ್ರೇಸರಳಾಗುವದುಂಟು. ಅಂತೆಯೇ ಮಾವಾಶಿಯ ಹೆಣ್ಣಿಗೆ ಆಸೆ ಪಡುವ ಗಂಡುಗಳಿಗೆ ಕೊರತೆ ಏನಿಲ್ಲ. ಪತಿಯಾದವನು ಪತ್ನಿಯ ಚಟುವಟಿಕೆಗಳ ಮೇಲೆ ಸದಾಕಾಲ ಕಣ್ಣಿಟ್ಟಿರುತ್ತಾನೆ. ಅವನಿಗೆ ನಡವಳಿಕೆಯಲ್ಲಿ ಅಲ್ಪ ಸ್ವಲ್ಪ ಸಂಶಯ ಕಂಡು ಬಂದರೆ ಸಂಭೋಗಕ್ಕೆ ಆಹ್ವಾನಿಸುತ್ತಾನೆ. ಅವಳು ನಿರಾಕರಿಸಿದರೆ ಅರೆ ಮನಸ್ಸಿನಿಂದ ಒಪ್ಪಿಕೊಂಡರೆ, ಇಲ್ಲವೇ ತನ್ಮಯತೆಯಿಂದ ಪಾಲುಗೊಳ್ಳದಿದ್ದರೆ, ಅವನು ತನ್ನ ಅನುಮಾನ ಖಚಿತ ಪಡಿಸಿಕೊಂಡಂತೆ ಆಗುತ್ತದೆ. ಅವರ ಸಮಾಜದಲ್ಲಿ ವ್ಯಭಿಚಾರಕ್ಕೆ ಕಠೋರವಾದ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಪತ್ನಿ ದ್ರೋಹ ಬಗೆದಾಗ, ಒಂದಿಲ್ಲೊಂದು ವಿಪತ್ತು ಕಾದಿದೆ, ಎಂದು ನಂಬುತ್ತಾರೆ. ಬೇಟೆಯಲ್ಲಿ ತೊಡಗಿದಾಗ, ಇಟ್ಟ ಗುರಿ ತಪ್ಪಿದರೆ, ಬಿಲ್ಲು - ಬಾಣ ಮುರಿದು ಬಿದ್ದರೆ, ಹುಲಿ - ಕರಡಿ ಆಕ್ರಮಣ ಮಾಡಿದರೆ, ಎಲ್ಲದಕ್ಕೂ ಪತ್ನಿಯ ಅಪ್ರಾಮಾಣಿಕತೆಯೇ ಕಾರಣವೆಂದು ಬಗೆಯುತ್ತಾರೆ. ಆಗ ನ್ಯಾಯ ವಿಚಾರಣೆಯಾಗುತ್ತದೆ. ಆಪಾದಿತರು ತಪ್ಪೊಪ್ಪಿಕೊಂಡರೆ, ರಾಜಿಯಾಗಿ ಊರವರಿಗೆಲ್ಲ ಭೋಜನಕೂಟ ಸೆರೆಯ ಸರಬರಾಜು ಮಾಡಬೇಕಾಗುತ್ತದೆ. ದಾಂಪತ್ಯದ ಸರಸ ಜೀವನದ ಸ್ಥಾನವನ್ನು ವಿರಸವು ಆಕ್ರಮಿಸಿದರೆ, ಆಪಾದಿತರು ಮನಮೆಚ್ಚಿದವರೊಂದಿಗೆ ವಿವಾಹವಿಲ್ಲದೇ ಸಹಜೀವನ ನಡೆಸಬಹುದು. ಆದರೆ ಅಂಥ ಪ್ರಸಂಗದಲ್ಲಿ ಪಡೆದ 'ತೆರ' ಹಿಂದಿರುಗಿಸಬೇಕಾಗುವದು.

ಪತ್ನಿ 'ತಿಂಗಳ ಬೇನೆ'ಯಲ್ಲಿದ್ದಾಗ ಕೂಟ ನಿಷಿದ್ಧ. ಹಾಗೆ ಮಾಡಿದರೆ ಅವಳು ಸರ್ವಕಾಲದಲ್ಲಿಯೂ ಬಂಜೆಯಾಗಿ ಬಿಡುತ್ತಾಳೆ ಎಂಬ ಭಾವನೆ ಬೇರೂರಿರುವದೇ ಇದಕ್ಕೆ ಮುಖ್ಯ ಕಾರಣ. ಆ ದಿನಗಳಲ್ಲಿ ಅವಳನ್ನು ಬಯ್ಯಬಾರದು, ಬಡಿಯಬಾರದು ಎಂಬ ಕಟ್ಟಳೆಯೂ ಇದೆ. ಒಂದು ವೇಳೆ ಹಾಗಾದ ಪ್ರಸಂಗವನ್ನು ಮುಕಾದಮನ ಗಮನಕ್ಕೆ ತಂದರೆ ಅವನು, ಪ್ರಾಯಶ್ಚಿತ್ತವೆಂದು ಭೋಜನಕೂಟ ಏರ್ಪಡಿಸಲು ಆಜ್ಞೆನೀಡುತ್ತಾನೆ. ಬಸುರಿಯೊಂದಿಗೆ ಸಂಭೋಗ ತ್ಯಾಜ್ಯವಲ್ಲ. ಆದರೆ ನವಮಾಸ ತುಂಬುವವರೆಗೆ ಮುಂದರಿಸಿದರೆ, ಮಗು ಅಶಕ್ತವಾಗುತ್ತದೆ ಎಂಬ ಭಾವನೆ ಇದ್ದೇ ಇದೆ. ಬಾಣಂತನದ ನೋವು ಕಾಣಿಸಿಕೊಳ್ಳುವವರೆಗೂ ಗೃಹಿಣಿಯು ಗೃಹ ಕೃತ್ಯದಲ್ಲಿ ತೊಡಗಿಯೇ ಇರುತ್ತಾಳೆ. ಸರಕಾರ ಊರು ಊರುಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದರೂ ಸಂಬಳಕ್ಕಾಗಿಯೇ ನೇಮಕಗೊಂಡ ಆಯಾಳ ಮೇಲೆ ಈ ಆದಿವಾಸಿಗಳಿಗೆ ವಿಶ್ವಾಸವಿಲ್ಲದ್ದರಿಂದ ಹಳ್ಳಿಯ ಸೂಲಗಿತ್ತಿಯನ್ನೇ ಬರಮಾಡಿಕೊಳ್ಳುತ್ತಾರೆ. ಅವಳು ಯಾವ ತರಬೇತಿಯನ್ನು ಪಡೆಯದಿದ್ದರೂ ಕೇವಲ ಅನುಭವದಿಂದಲೇ ಈ ಸ್ಥಾನ ಮಾನ ಪಡೆದಿರುತ್ತಾಳೆ. ಶ್ರಮಜೀವಿಯಾದ ಮಾವಾಶಿಯ ಮಹಿಳೆ, ಪ್ರಸೂತಿ ವೈರಾಗ್ಯಕ್ಕೆ ಅವಕಾಶ ಕೊಡದೇ ಸ್ವಾಭಾವಿಕ ರೀತಿಯಲ್ಲಿ ಹೆರಿಗೆಗೆ ಯತ್ನಿಸುತ್ತಾಳೆ. ಹೆರಿಗೆಯಲ್ಲಿ ಯಾವುದಾದರೂ ತೊಂದರೆ ಕಾಣಿಸಿಕೊಂಡರೆ ನೆರೆಹೊರೆಯ ಅನುಭವಿ ತಾಯಿಯನ್ನು ಬರಮಾಡಿಕೊಳ್ಳಲಾಗುತ್ತದೆ. ಆರಾಧ್ಯ ದೇವತೆಗೆ ಕುರಿ - ಕೋಳಿಯ ಹರಕೆ ಹೊರಲಾಗುತ್ತದೆ. ಇಷ್ಟಾಗಿ ತಾಯಿ - ಮಗು ಮೃತಪಟ್ಟರೆ, ಜೊತೆಯಾಗಿಯೇ ಹೂತು ಬಿಡುತ್ತಾರೆ. ಮಗು ಮಾತ್ರ ಬದುಕಿಕೊಂಡರೆ, ಆಡು ಮತ್ತು ಆಕಳ ಹಾಲಿನ ಮೇಲೆ ಮಗುವನ್ನು ಬೆಳೆಸಲು ಸರ್ವಪ್ರಯತ್ನ ಮಾಡುತ್ತಾರೆ. ಇದು ಸಾಧ್ಯವಾಗದಿದ್ದರೆ, ಬೇರೆಯವರಿಗೆ ಸಾಕಲು ಕೊಡುತ್ತಾರೆ. ಅದಕ್ಕೆ ಐದು ವರ್ಷ ತುಂಬುವದರೊಳಗೆ ಬಿತ್ತನು ಸಾಕಿದವರಿಗೆ ಯೋಗ್ಯ

ಕಾಣಿಕೆ ಕೊಟ್ಟು ಮಗುವನ್ನು ಹಿಂದಿರುಗಿ ಪಡೆಯಬೇಕು. ತೀರ ಬಡವರು ಕಾಣಿಕೆಯನ್ನು ಕಂತುಗಳಲ್ಲಿ ಸಂದಾಯ ಮಾಡುತ್ತೇವೆಂಬ ಆಶ್ವಾಸನೆಯೊಂದಿಗೆ ಮಗುವನ್ನು ಪಡೆಯಬಹುದು. ಆದರೆ ಆಶ್ವಾಸನೆಗೆ ತಪ್ಪಿದರೆ, ಮಗು ಸಾಕಿದವರ ಸೊತ್ತಾಗಿ ಪರಿಣಮಿಸುವದು. ರಸಿಕ ಶಿಖಾಮಣಿಗಳು ಪತ್ನಿವಿಯೋಗವಾದರೆ, ಮಗುವಿನ ಯೋಗ ಕ್ಷೇಮ ನೋಡಿಕೊಳ್ಳಲೆಂದು ಗುಪ್ತ ಗೆಳತಿಯನ್ನು ತಂದು ಮನೆ ತುಂಬಿಸಿಕೊಂಡೇ ಬಿಡುವರು!

ಹೆರಿಗೆಯ ವೇಳೆಯಲ್ಲಿ ಸರಿಯಾದ ಆರೈಕೆ ಆಗದಿದ್ದರೆ, ಸ್ವಚ್ಛತೆ ಕಾಯ್ದುಕೊಳ್ಳದಿದ್ದರೆ, ಸಕಾಲಕ್ಕೆ ಸರಿಯಾದ ಔಷದೋಪಚಾರಗಳು ಆಗದಿದ್ದರೆ, ಹೆಂಗಳೆಯರಲ್ಲಿ ಬಂಜೆತನ ಕಾಣಿಸಿಕೊಳ್ಳುವದು. ಇಲ್ಲವೇ ಅವರ ಶರೀರದಲ್ಲಿ ಭೂತಸಂಚಾರವಾಗುವದು, ಎಂದು ಅವರ ಮಂತ್ರವಾದಿ ವೈದ್ಯ, ಗುನಗನು ಭಾರಬಂದು ಸಾರುವದರಿಂದ, ಅದನ್ನು ಹೋಗಲಾಡಿಸಲು ಹರಕೆ ಹೊತ್ತುಕೊಳ್ಳುವರು. ಇದರಿಂದ ಇಚ್ಛಿತ ಫಲ ಸಿಗದಿದ್ದಾಗ, ಊರವರು ಪತಿಗೆ ಇನ್ನೊಂದು ವಿವಾಹ ಮಾಡಿಕೊಳ್ಳುವಂತೆ ಅಪ್ಪಣೆ ಕೊಡಿಸುವರು. ಅವಳೂ ಹಿರಿಯಳ ಹಾದಿಯನ್ನೇ ಹಿಡಿದರೆ, ಮೂರನೆಯವಳನ್ನೂ ಮಾಡಿಕೊಳ್ಳಬಹುದು. ಹೀಗಾದಾಗ, ಕಿರಿಯ ಪತ್ನಿ ತನ್ನ ತವರೂರಿನಲ್ಲಿ ವಾಸಮಾಡಿ ವಾರಕ್ಕೆ ಒಂದೆರಡು ಸಲ ಪತಿಯನ್ನೆ ತಾನಿರುವಲ್ಲಿ ಬರಮಾಡಿಕೊಳ್ಳುತ್ತಾಳೆ. ಪತಿಯು ಸ್ಥಿತಿವಂತನಾಗಿದ್ದರೆ, ಪ್ರತಿಯೊಬ್ಬ ಪತ್ನಿಗೂ ಸ್ವತಂತ್ರವಾಗಿ ಗುಡಿಸಲು ಕಟ್ಟಿಕೊಡುತ್ತಾನೆ. ಅವರು ಕೈ ತೋಟ, ಹೊಲ, ಅರಣ್ಯಗಳಲ್ಲಿ ದುಡಿದು ಉದರ ನಿರ್ವಹಣೆ ಮಾಡಿಕೊಳ್ಳುತ್ತಾರೆ. ಪಟ್ಟಣದವರಂತೆ ಅವರಲ್ಲಿ ಸವತಿ - ಮತ್ಸರ ಇರುವದಿಲ್ಲವಾದ್ದರಿಂದ ಒಬ್ಬರಲ್ಲಿ ಇನ್ನೊಬ್ಬರು ಬಂದು ಹೋಗಿ ನೆಮ್ಮದಿಯಿಂದಲೇ ಬಾಳಲು ಯತ್ನಿಸುತ್ತಾರೆ. ಪತಿಯು ಯಾವ ಪತ್ನಿಯೊಂದಿಗೆ ಎಷ್ಟು ದಿನ ವಾಸಿಸಬೇಕೆಂದು ನಿರ್ಧರಿಸುವ ಅಧಿಕಾರ, ಹಿರಿಯ ಪತ್ನಿಯ ಹತ್ತಿರವೇ ಇರುತ್ತದೆ. ಕಿರಿಯಳು ಮಕ್ಕಳನ್ನು ಪಡೆಯಲಾರಂಭಿಸಿದ ನಂತರ ಹಿರಿಯ ಪತ್ನಿಯೂ ಗರ್ಭಧರಿಸಿದ ಉದಾಹರಣೆಗಳಿವೆ. ಅಂಥ ಸಂದರ್ಭದಲ್ಲಿ ಒಬ್ಬರು ಇನ್ನೊಬ್ಬರಿಗೆ ನೆರವು ನೀಡುವದು ತೀರ ಸಾಮಾನ್ಯ.

ಅವರ ವಾಸಸ್ಥಾನದಲ್ಲಿ ವಿಪರೀತ ಆರ್ದ್ರತೆ ಇರುವದರಿಂದ ತಾಯಿ - ಮಗುವಿಗೆ ಹುಲ್ಲಿನ ಹಾಸಿಗೆ ಸಿದ್ಧಮಾಡಲಾಗುತ್ತದೆ. ಹೊಂಡ - ಝರಿಯ ನೀರಿನಲ್ಲಿ ಕ್ರಿಮಿ - ಕೀಟಗಳು ಇರುವದರಿಂದ, ಅದು ಬಾಣಂತಿಗೆ ಬಾಧಿಸಬಾರದೆಂದು, ಅದರಲ್ಲಿ ಕುಡಗೋಲು ಅದ್ದಿ ಶುದ್ಧೀಕರಿಸುತ್ತಾರೆ! ನೊಣ - ಸೊಳ್ಳೆಗಳ ಬಾಧೆ ತಪ್ಪಿಸಲು ಸದಾಕಾಲ ಬೆಂಕಿಯನ್ನು ಉರಿಸುತ್ತಿರುತ್ತಾರೆ. ಸ್ನಾನಕ್ಕಾಗಿ ನೀರು ಕಾಯಿಸುವಾಗ ಔಷಧದ ಗಿಡಮೂಲಿಕೆಗಳನ್ನು ನೀರಿಗೆ ಸೇರಿಸುತ್ತಾರೆ. ಗಿಡ ಮೂಲಿಕೆಗಳ ಕಷಾಯ ಮತ್ತು ತಿಳಿಗಂಜಿಗಳನ್ನು ಹಸಿಬಾಣಂತಿಗೆ ಕೊಡುತ್ತಾರೆ. ಮಗುವನ್ನು ತೊಟ್ಟಿಲಿಗೆ ಹಾಕುವದು, ನಾಮಕರಣ ಮಾಡುವದು, ಮುಂತಾದ ವಿಶೇಷ ಸಮಾರಂಭಗಳು ಅವರಲ್ಲಿ ಇಲ್ಲ. ಹುಟ್ಟಿದ ದಿನವೇ ಮಂತ್ರವಾದಿ ಸೂಚಿಸಿದ ಹೆಸರನ್ನು ಮಗುವಿನ ಕಿವಿಯಲ್ಲಿ ಉಸುರುತ್ತಾರೆ. ನಂತರದ ದಿನಗಳಲ್ಲಿ ಮಗುವನ್ನು ಆಪ್ತೇಷ್ಟರು ಕಿರುಹೆಸರಿನಿಂದ ಕರೆಯುವದೇ ವಾಡಿಕೆ. ಮಗುವಿನ ದೇಹರಚನೆ ಅವಲಂಬಿಸಿ, ಲಂಬು, ಗಿಡ್ಡು, ಮೋಟಾ ಎಂದೆಲ್ಲ ಕರೆಯುತ್ತಾರೆ. ಮಾವಾಶಿಯರಲ್ಲಿ ಕುರುಡ, ಕುಂಟ, ಕಿವುಡ, ಮೂಕ ಮಕ್ಕಳು ಕ್ವಚಿತ್ತಾಗಿ ಕಾಣಸಿಗುವರು. ಇಂಥವು ಹುಟ್ಟುವದಿಲ್ಲವೆಂದಲ್ಲ. ಆದರೆ ಅವಕ್ಕೆ ಯೋಗ್ಯ ಲಾಲನೆ - ಪಾಲನೆ ಮಾಡದ್ದರಿಂದ ಬೇಗನೆ ಸತ್ತು ವೀರ ಸ್ವರ್ಗ ಪಡೆಯುವವು. ವಿರೂಪದ ಮಗು ಹುಟ್ಟಿದರೆ, ರಾಕ್ಷಸನೆಂದು ಪರಿಗಣಿಸಿ ಮೃತ್ಯುದೇವತೆಗೆ ಅರ್ಪಿಸಿ ಬಿಡುತ್ತಾರೆ. ಅವಳಿ ಮಕ್ಕಳು ಹುಟ್ಟಿದರೆ ರಾಮಲಕ್ಷ್ಮಣರೆಂದು, ಅವು ಹುಡುಗಿಯರಾದರೆ, ಗಂಗಾ - ಜಮುನಾ ಎಂದು ನಾಮಕರಣ ಮಾಡುವರು.

ಮಾವಾಶಿಯರು ತಮ್ಮಷ್ಟಕ್ಕೆ ತಾವು ಬದುಕಲು ಯತ್ನಿಸಿದರೂ, ಸುಶಿಕ್ಷಿತರು, ಸುಧಾರಕರು, ಸರಕಾರಿ ಅಧಿಕಾರಿಗಳು ಅವರನ್ನು ಸದಾಕಾಲ ಕಾಡುತ್ತಲೇ ಇರುತ್ತಾರೆ. ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಬೇಕೆಂದು ಶಿಕ್ಷಣಾಧಿಕಾರಿಗಳು, ಕಾಡಿಗೆ ಹೋಗಲೇಕೂಡದೆಂದು ಅರಣ್ಯಾಧಿಕಾರಿಗಳು, ಅವರು ಬಳಸುವ ಭೂಮಿಗೆ ತೆರಿಗೆ ಕೊಡಬೇಕು, ಎಂದು ಕಂದಾಯ ಅಧಿಕಾರಿಗಳು ಬಹುಪತ್ನಿತ್ವ ಕಾನೂನುಬಾಹಿರವೆಂದು ಪೋಲಿಸ ಅಧಿಕಾರಿಗಳು, ಅವರನ್ನು ಹಿಂಸಿಸುತ್ತಲೇ ಇರುತ್ತಾರೆ. ಭೂಮಿಗಾಗಿ ಹಪಾಪಿಸುವವರು ಅವರ ಹೊಲಗಳನ್ನು ಕಸಿದುಕೊಂಡರೆ, ಹೆಣ್ಣಿನ ವ್ಯಾಮೋಹವಿದ್ದವರು, ಅವರ ಅಮಾಯಕ ಹೆಂಗಳೆಯರ ಮೇಲೆ ಬಲಾತ್ಕಾರ ಮಾಡುತ್ತಾರೆ. ಕಾಳು - ಕಡಿ ಸರೆಗಳನ್ನು ಮಾರುವ ವ್ಯಾಪಾರಿಗಳು, ಬಡ್ಡಿಗೆ ಚಕ್ರ ಬಡ್ಡಿ ಸೇರಿಸಿ, ಬಡಪಾಯಿಗಳು ಜೀವಮಾನವಿಡೀ ಸಾಲದ ಮಡುವಿನಲ್ಲಿ ಕೊಳೆಯುವಂತೆ ಮಾಡುತ್ತಾರೆ. ಸರಕಾರವು ಮೊಸಳೆಯ ಕಣ್ಣೀರು ಸುರಿಸಿ, ಅವರ ಅಭ್ಯುದಯಕ್ಕಾಗಿ ಕೋಟಿಗಟ್ಲೆ ಹಣವನ್ನು ವ್ಯಯಮಾಡಿದರೂ, ಅದರ ಕಾಲಾಂಶ ಕೂಡ ಅರ್ಹರಾದ ಆದಿವಾಸಿಗಳಿಗೆ ಎಟುಕದಿರುವದು ತೀರ ಶೋಚನೀಯ. ತಮ್ಮ ಬಗ್ಗೆ ನಿಜವಾದ ಕಳಕಳಿ, ಪ್ರೀತಿ, ಆಸಕ್ತಿ ಇರುವವರು ಯಾರು? ಎಂದು ಅರಿಯಲಾಗದೇ ಅವರು ಕಂಗೆಟ್ಟಿದ್ದಾರೆ. ಇದರ ಲಾಭ ಪಡೆದುಕೊಂಡು ಮತಾಂತರ ಮಾಡುವವರು ಅವರ ರಕ್ಷಕರೆಂದು ಸೋಗು ಹಾಕುತ್ತಿದ್ದಾರೆ.

ಮಾವಾಶಿಯ ರೂಪಸಿಯೊಬ್ಬಳನ್ನು ಮದುವೆ ಮಾಡಿಕೊಂಡಿದ್ದರೆ ಎಷ್ಟು ಚೆನ್ನಾಗಿತ್ತು! ಎಂಬ ವಿಚಾರದಿಂದಲೇ ರೋಮಾಂಚನವಾಯಿತು. ಆದರೆ ಮರುಕ್ಷಣವೇ ಧನ, ಆಸ್ತಿ, ನಗರದ ಐಷಾರಾಮಗಳಿಗೆ ಮಾವಾಶಿಯರು ಮನ ಸೋಲುವದಿಲ್ಲ, ಹಿರಿಯನನ್ನು ವಿವಾಹ ಮಾಡಿಕೊಳ್ಳುವದಿಲ್ಲ ಎಂಬುದನ್ನು ಮನಗಂಡು ನಿಟ್ಟುಸಿರು ಬಿಡುವಂತೆ ಆಯಿತು. ಯುವತಿಯೋರ್ವಳನ್ನು ಸೊಸೆಯನ್ನಾಗಿ ಬರಮಾಡಿಕೊಂಡರೆ...... ಎಂಬ ಹೊಸ ಯೋಚನೆ ಮಿಂಚಿತು. ಜಾತಕ ಹೊಂದಿಸಬೇಕಾಗಿಲ್ಲ. ಮದುವೆಗೆ ಖರ್ಚಿಲ್ಲ. ಸಿನೇಮಾ - ನಾಟಕಗಳಿಗೆ ಕರೆದೊಯ್ಯಬೇಕಾಗಿಲ್ಲ. ಕ್ಲಬ್ ಸದಸ್ಯತ್ವದ ತೊಂದರೆಯಿಲ್ಲ. ಮನೆಯಲ್ಲಿ ರೇಡಿಯೋ - ದೂರದರ್ಶನ ಸೆಟ್ ಕೊಂಡು ತರಬೇಕಾಗಿಲ್ಲ. ಟೆಲಿಫೋನಿನ ಅವಶ್ಯಕತೆ ಇಲ್ಲವೇ ಇಲ್ಲ. ಊರೂರು ಸುತ್ತಲು ವಾಹನಗಳ ಸೌಕರ್ಯ ಒದಗಿಸಬೇಕಾಗಿಲ್ಲ. ಕನ್ನಡ - ಇಂಗ್ಲಿಷ್ ವೃತ್ತ, ವಾರಪತ್ರಿಕೆಗಳನ್ನು ಕೊಳ್ಳಬೇಕಿಲ್ಲ. ಮನೆಯಲ್ಲಿ ಒಳ, ಹೊರಗಿನ ಕೆಲಸದವರನ್ನು ನೇಮಿಸಿಕೊಳ್ಳಬೇಕಾಗಿಲ್ಲ............... ಆದರೆ ಮದುಮಗನು ಅದಕ್ಕೂ ಹೆಚ್ಚಾಗಿ ಮದುಮಗಳು, ಈ ವಿವಾಹಕ್ಕೆ ಸಮ್ಮತಿ ನೀಡಬಹುದೇ, ಎಂಬ ಸಮಸ್ಯೆ ಎದುರಿಸಬೇಕಾಗಿ ಬಂದಾಗ ಮಾತ್ರ ಉತ್ತರಕ್ಕಾಗಿ ಪರದಾಡಬೇಕಾಯಿತು. ಇದಕ್ಕೂ ಹೆಚ್ಚಾಗಿ ಮಾವಾಶಿಯಳು ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವ ಕಾಡು, ಕರ್ನಾಟಕದಲ್ಲಿ ಎಲ್ಲಿಯೂ ಇಲ್ಲವಲ್ಲ! ಎಂಬ ಕಠೋರ ಸತ್ಯದಿಂದ ಜ್ಞಾನೋದಯವಾದಂತಾಯಿತು.

24 ಆದಿವಾಸಿಗಳ ಸ್ಮಾರಕಗಳು





ಗೊಂಡ, ಕೊರ್ಕು, ಮಾರಿಯಾ, ಭಿಲ್ಲ ಮೊದಲಾದ ಮಧ್ಯಪ್ರದೇಶದ ಆದಿವಾಸಿಗಳು ತಮ್ಮ ಮೃತರ ನೆನಪಿಗಾಗಿ ಸ್ಮಾರಕಗಳನ್ನು ಸ್ಥಾಪಿಸುವ ಪರಂಪರೆಯನ್ನು ಅನಾದಿಕಾಲದಿಂದಲೂ ನಡೆಯಿಸಿಕೊಂಡು ಬಂದಿದ್ದಾರೆ. ಅವರು ಈ ಪದ್ಧತಿಯನ್ನು ದಕ್ಷಿಣರಾಜ್ಯದವರಿಂದ ಎರವಲು ಪಡೆದಿರುವ ಸಾಧ್ಯತೆಗಳೇ ಹೆಚ್ಚು. ಒಂಭತ್ತನೇ ಶತಮಾನದಿಂದಲೇ ಆಂಧ್ರದವರು, ಚೋಳರು, ಚಾಲುಕ್ಯರು, ಹೊಯ್ಸಳರು ಒಂದಿಲ್ಲೊಂದು ರೀತಿಯಲ್ಲಿ ಈ ಪ್ರದೇಶದೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದಾರೆ. ಅಲ್ಲದೇ ಅವರ ಸ್ಮಾರಕಗಳ ಮೇಲೆ ದಕ್ಷಿಣದ ಛಾಯೆ ಎದ್ದು ಕಾಣುತ್ತದೆ. ಹಿಂದೊಮ್ಮೆ ಕೊರ್ಕು ಮೂಲಕಟ್ಟಿನವರು ಶಿಲೆಯ ಸ್ಮಾರಕಗಳನ್ನು ಕೊರೆಯಿಸುತ್ತಿದ್ದರು. ಎಂಟು ಹತ್ತು ಶತಮಾನಗಳಷ್ಟು ಹಿಂದಿನ ಸ್ಮಾರಕಗಳನ್ನು ಇಂದಿಗೂ ಪಚಮಡಿ, ತಾಮಿಯಾ, ಮತ್ತು ಚಂದನಪುರಗಳಲ್ಲಿ ಕಾಣಬಹುದಾಗಿದೆ. ಮಹಾದೇವ ಪರ್ವತಾವಳಿಯಲ್ಲಿರುವ ಪಚಮಡಿಯ ತಹಶೀಲ್ದಾರರ ಕಛೇರಿಯ ಹತ್ತಿರ ಇರುವ ವಿಸ್ತಾರವಾದ ಜೈಲಿನಲ್ಲಿರುವ ಒಂದು ಮಾವಿನ ಮರದ ಆಶ್ರಯದಲ್ಲಿ ಐದು ಶಿಲೆಯ ಮೃತ್ಯುಸ್ತಂಭಗಳನ್ನು ನಿಲ್ಲಿಸಲಾಗಿದೆ. ಸ್ಥಾನೀಯರು ಇವನ್ನು 'ಮುಂಡಾಸ' ಎಂದು ಗುರುತಿಸಿ, ಹತ್ತಿರದ ಕೊರ್ಕು ಆದಿವಾಸಿಗಳ ಹಳ್ಳಿಯಿಂದ ತಂದು ಇವನ್ನು ನಿಲ್ಲಿಸಿರಲು ಸಾಕು. ಮೃತಪಟ್ಟವರ ವೈಭವೀಕರಣವೇ ಸ್ಮಾರಕಗಳನ್ನು ನಿಲ್ಲಿಸುವ ಮುಖ್ಯ ಉದ್ದೇಶವಾಗಿದ್ದರಿಂದ ಅವುಗಳನ್ನು ಸಾರ್ವಜನಿಕರು ಬಂದು ಹೋಗುವ ಸ್ಥಳಗಳಲ್ಲಿ ಸ್ಥಾಪಿಸುವ ವಾಡಿಕೆ ಬೆಳೆದು ಬಂದಿದೆ.

'ಮುಂಡಾಸ' ಸ್ಮಾರಕಗಳು ಚಚ್ಚೌಕಾಕಾರದವಿದ್ದು ನಾಲ್ಕೂ ಕಡೆಯಲ್ಲಿಯೂ ನುಣುಪು ಮಾಡಿ ತುತ್ತತುದಿಯನ್ನು ಗೋಪುರದ ಆಕಾರದಲ್ಲಿ ಕಡೆಯಲಾಗಿದೆ. ಇವುಗಳ ಮೇಲಿನ ಅರ್ಧಭಾಗದಲ್ಲಿ ಒಂದು ಅಥವಾ ಎರಡು ಸ್ತರಗಳಲ್ಲಿ ಉಬ್ಬು ಚಿತ್ರಗಳನ್ನು ಕೊರೆಯಲಾಗಿದೆ. ಮೃತನು ಆತ್ಮೀಯವಾಗಿ ಪತ್ನಿಯಿಂದ ಹೇನು ಹೆಕ್ಕಿಸಿಕೊಳ್ಳುವದನ್ನು ಚಿತ್ರಿಸಿದಂತೆ ಅವನು ಕಾದಾಟದಲ್ಲಿ ಮೃತಪಟ್ಟನೆಂದು ಸೂಚಿಸಲು ಬಿಲ್ಲುಬಾಣಗಳೊಂದಿಗೆ ಖಡ್ಗ - ಢಾಲುಗಳನ್ನು ಹಿಡಿದು ವೈರಿಯನ್ನು ಎದುರಿಸುತ್ತಿದ್ದಾನೆ. ಅವನು ದಾನಿಯಾಗಿದ್ದನೆಂದು ಸೂಚಿಸಲು ಹಣದ ಚೀಲದಿಂದ ನಾಣ್ಯಗಳನ್ನು ಹೊರಗೆ ಎಳೆಯುತ್ತಿರುವಂತೆ ಸೂಚಿಸಲಾಗಿದೆ. ಅವನ ಕೀರ್ತಿ ಶಾಶ್ವತವಾಗಿ ಉಳಿಯಲೆಂದು, ಸೂರ್ಯಚಂದ್ರರಿಗೂ ಸ್ಥಾನ ಕಲ್ಪಿಸಲಾಗಿದೆ. ಮತ್ತೊಂದು ಮಗ್ಗಲಿಗೆ ಅವನು ಎತ್ತರವಿಲ್ಲದ ಕಾಲು ಮಣೆಯ ಮೇಲೆ ಕುಳಿತು ಲಿಂಗ ಪೂಜೆಯಲ್ಲಿ ತೊಡಗಿದ್ದಾನೆ. ಇನ್ನೊಂದು ಮಗ್ಗಲಿಗೆ ನಿಂತ ಗಣೇಶನ ಚಿತ್ರವೂ ಇದೆ. ಇಲ್ಲಿಯ ಚಿತ್ರಗಳೆಲ್ಲ ಪರಿಪಕ್ವವಾಗಿದ್ದರಿಂದ ಆದಿವಾಸಿಗಳ ಮೇಲ್ವಿಚಾರಣೆಯಲ್ಲಿ ಪ್ರಬುದ್ಧ ಶಿಲ್ಪಿಯೊಬ್ಬನಿಂದ ರಚಿಸಿರಲು ಸಾಕು. ಇನ್ನೊಂದು ಮಗ್ಗಲಿಗಿದ್ದ ಪತಿ ಪತ್ನಿಯರು ಈ ಸ್ಮಾರಕ ನಿಲ್ಲಿಸಿದ ಮೃತನ ಈರ್ವರು ಪುತ್ರರನ್ನು ಅವರ ಪತ್ನಿಯರನ್ನು ಪ್ರತಿನಿಧಿಸುತ್ತಿರಬಹುದು.

ತಾಮಿಯಾ ಹಳ್ಳಿಯಲ್ಲಿದ್ದ ಕೊರ್ಕು ಸ್ಮಾರಕ ಸ್ತಂಭಗಳನ್ನು ಈಗ ಛಿಂದವಾಡಾದ ಆದಿವಾಸಿ ಸಂಶೋಧನಾ ಕೇಂದ್ರದ ಆವಾರದಲ್ಲಿ ಸ್ಥಾಪಿಸಲಾಗಿದೆ. ಇವು ಗಿಡ್ಡವಾಗಿದ್ದು ಒಂದೇ ಅಂಕಣದಲ್ಲಿ ಉಬ್ಬು ಚಿತ್ರಗಳನ್ನು ಕೊರೆಯಲಾಗಿದೆ. ಇವು ಸ್ಫುಟವಾಗಿ, ಪಚಮಡಿಯವನ್ನು ಬಹಳವಾಗಿ ಹೋಲುವದರಿಂದ ಎರಡೂ ಪ್ರಕಾರಗಳು ಒಬ್ಬನೇ ಶಿಲ್ಪಿಯಿಂದ ರಚಿತವಾಗಿರಬೇಕು ಅನಿಸುತ್ತದೆ. ಒಂದು ಅಂಕಣದಲ್ಲಿ ಮಂಚದ ಮೇಲಿದ್ದ ಮೃತನಿಗೆ ದೇವರು ಆದೇಶ ನೀಡುತ್ತಿರುವಂತೆ ರೂಪಿಸಲಾಗಿದೆ. ಕುದುರೆ ಸವಾರಿ, ದ್ವಂದ್ವ ಕಾಳಗ, ಲಿಂಗಪೂಜೆ, ಸೂರ್ಯಚಂದ್ರರು ಇದ್ದೇ ಇದ್ದಾರೆ. ಚಂದನಪುರದ ಸ್ಮಶಾನದಲ್ಲಿ ಏಕಮಾತ್ರ ಕಂಬವಿದ್ದರೂ ವೈಶಿಷ್ಟ್ಯಪೂರ್ಣವಾಗಿದೆ. ಉಬ್ಬು ಚಿತ್ರದ ಒಂದೊಂದೇ ಅಂಕಣ, ಆಳೆತ್ತರದ ಸ್ತಂಭದ ಮಧ್ಯಕ್ಕೆ ಮಾತ್ರ ಸೀಮಿತವಾಗಿದೆ. ಒಂದರಲ್ಲಿ ಮಂಚದ ಮೇಲೆ ಲೋಡಿಗೆ ಆತು ಪವಡಿಸಿದ ವೀರನಿಗೆ, ಪ್ರತ್ಯೇಕ ಆಸನಾರೂಢಳಾದ ಪತ್ನಿ ಕಾಲನ್ನು ಆದುಮುವದರಲ್ಲಿ ಮೈ ಮರೆತಿದ್ದಾಳೆ. ಇನ್ನೊಂದರಲ್ಲಿ ಗೋವು ತನ್ನ ಕರುವಿಗೆ ಹಾಲುಣಿಸುತ್ತಿದೆ. ಕಾದಾಟ, ಸೂರ್ಯಚಂದ್ರರನ್ನು ಚಿತ್ರಿಸಲು ಶಿಲ್ಪಿ ಮರೆತಿಲ್ಲ.

ಬಸ್ತರ ಜಿಲ್ಲೆಯ ಮಾರಿಯಾ ಆದಿವಾಸಿಗಳು ಶಿಲೆಯ ಹಲಗೆಗಳನ್ನು ಸ್ಮಾರಕಗಳ ನಿರ್ಮಾಣಕ್ಕಾಗಿ ಬಳಸುತ್ತಾರೆ. ಜಗದಲಪುರ, ಗಿದಮ್, ಬಾರಸೂರ್, ದಂತೇವಾಡಾ, ಭೋಟೆಡೊಂಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂಥ ಅನೇಕ ಮೃತ್ಯುಶಿಲೆಗಳು ಕಾಣಸಿಗುತ್ತವೆ. ಅವುಗಳ ಮೇಲೆ ಒಂಟಿ ಉಬ್ಬು ಚಿತ್ರ ಇರುವದೇ ಸಾಮಾನ್ಯ. ಬಾರಸೂರಿನಲ್ಲಿ ಯುವಯೋಧನ ಸ್ಮಾರಕ ಒಂದಿದೆ. ಇದು ಐದಾರು ಶತಮಾನಗಳಷ್ಟು ಹಿಂದಿನದಾದರೂ, ವೇಷಭೂಷಣಗಳು ಇಂದಿನ ಮಾರಿಯರದವನ್ನು ಬಹುಮಟ್ಟಿಗೆ ಹೋಲುತ್ತವೆ. ಮುಂತಲೆ ಬೋಳಿಸಿಕೊಂಡು ಹಿಂದಿನ ಉದ್ದ ಕೂದಲನ್ನು ಮುಡಿಯಾಗಿ ಕಟ್ಟಿಕೊಂಡಿದ್ದಾನೆ, 'ವೀರ'. ಹಣೆಯ ಮೇಲಿಂದ ಮಣಿ ಸರವೊಂದು ಶಿರದ ಹಿಂಭಾಗಕ್ಕೆ ಓಡುತ್ತದೆ. ಕಿವಿಗೆ ಭಾರವೆನಿಸುವಷ್ಟು ಭವ್ಯಲೋಲಕಗಳಿವೆ. ಕೊರಳು, ಹಿಂಗೈ, ಮುಂಗೈಗಳಿಗೆ ಇಂಥವೇ ಸರಗಳಿವೆ. ಕಿರಿಪಂಚೆಯನ್ನು ಕಚ್ಚೆಹಾಕಿ ಉಟ್ಟಿದ್ದಾನೆ. ಇನ್ನೊಂದರ ಮೇಲೆ ವೀರನು ಕತ್ತಿ, ಢಾಲು ಗಳೊಂದಿಗೆ ವೈರಿಯ ಆಕ್ರಮಣಕ್ಕೆ ಹೋದಂತಿದೆ. ಇಲ್ಲಿ ಭಾವದ ಪ್ರದರ್ಶನವಾಗುತ್ತಿದ್ದರೂ ವ್ಯಕ್ತಿಯ ವಿವರಗಳಿಲ್ಲದ್ದರಿಂದ ಇದನ್ನು ಆದಿವಾಸಿಗಳೇ ಕೊರೆದಿರಬಹುದು ಅನಿಸುತ್ತದೆ. ಭೋಟೆಡೊಂಗರ ಪರಿಸರದಲ್ಲಿ ಮಾಸ್ತಿಕಲ್ಲುಗಳೂ ಕಾಣಸಿಗುತ್ತವೆ. ಕೆಲವು ಆದಿವಾಸಿಗಳು ಶಿಲಾಸ್ಮಾರಕಗಳ ಫಲಕಗಳನ್ನು ನಿಲ್ಲಿಸುವ ಬದಲಾಗಿ ಎತ್ತರದ

ಜಗಲಿಯ ಮೇಲೆ ಹಾಕಿರುತ್ತಾರೆ. ಗೀದಮ್‌ದ ಆಸುಪಾಸಿನಲ್ಲಿ ಇಂಥ ಸ್ಮಾರಕಗಳಿವೆ. ಹಣದ ಅಭಾವ ಇದ್ದವರು ಫಲಕದ ಮೇಲೆ ಕೇವಲ ಮೃತರ ಹೆಸರು, ಸ್ವರ್ಗವಾಸಿಯಾದ ದಿನಾಂಕಗಳನ್ನು ದೇವನಾಗರಿ ಲಿಪಿಯಲ್ಲಿ ಬರೆಯಿಸುವರು. ಅದೂ ಸಾಧ್ಯವಾಗದವರು ಒಂದು ಬಂಡೆಕಲ್ಲು ಇಲ್ಲವೇ ಮರಗಳರಾಶಿಯ ಸಂಕೇತದಿಂದ ಮೃತನ ಆತ್ಮಕ್ಕೆ ಚಿರಶಾಂತಿ ಕೊಡುವಂತೆ ಯತ್ನಿಸುವರು.

ಕರಿಶಿಲೆಯಿಂದ ಶಿಲ್ಪಗಳನ್ನು ಕೊರೆಯಿಸಿ ಸ್ಮಾರಕಗಳನ್ನು ನಿಲ್ಲಿಸುವದು ವಿಪರೀತ ಖರ್ಚಿನದಾದ್ದರಿಂದ ಕೊರ್ಕು ಆದಿವಾಸಿಗಳು ಕೊರಡಿಗೆ ಶರಣು ಹೋದರು. ವಿಪರೀತ ಮಳೆಯಾಗುವ ಮಹಾದೇವ ಪರ್ವತಾವಳಿಯಲ್ಲಿ ಸಾಗುವಾನಿ (ತೇಗು) ಮರಗಳಿಗೆ ಕೊರತೆ ಇಲ್ಲ. ಹಲಗೆಯನ್ನು ಕ್ರಿಕೆಟ್ ಬ್ಯಾಟಿನ ಆಕಾರದಲ್ಲಿ ಕೊರೆದು, ಚೂಪಾದ ದಿಕ್ಕನ್ನು ನೆಲದಲ್ಲಿ ಹುಗಿಯುವದು ವಾಡಿಕೆ. ಅವುಗಳ ಉದ್ದಳತೆ, ಮೃತನ ಸ್ಥಾನಮಾನ ಮತ್ತು ಕೊರೆಯುವವರ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಊರ ಮುಖಿಯಾ (ಮುಖ್ಯಸ್ಥ)ನಿಗೆ ಭವ್ಯವಾದ ಸ್ಮಾರಕ ಬಳಸಿದರೆ, ಜನಸಾಮಾನ್ಯರಿಗೆ, ಹೆಂಗಳೆಯರಿಗೆ, ಮಕ್ಕಳಿಗೆ ಮೀಸಲಾದವುಗಳು ತೀರ ಚಿಕ್ಕವಾಗಿರುತ್ತವೆ. ಬಡಗಿಗೆ ಹಣ ಕೊಡುವ ಶಕ್ತಿ ಇಲ್ಲದವರು ಯಾವ ಚಿತ್ರವೂ ಇಲ್ಲದ ಫಲಕ ನೆಟ್ಟು ಕೈ ತೊಳೆದುಕೊಂಡುಬಿಡುತ್ತಾರೆ. ತುತ್ತ ತುದಿಯಲ್ಲಿ ಸೂರ್ಯಚಂದ್ರರ ಚಿತ್ರವಿರುತ್ತದೆ. ಅರ್ಧಚಂದ್ರನು ನೆಲದತ್ತ ಮುಖವಾಗಿ ಚಿತ್ರಿತವಾಗಿರುವದೇ ಹೆಚ್ಚು. ಸೂರ್ಯನು ವರ್ತುಲಾಕಾರವಾಗಿಯೇ ಇರಬೇಕು ಎಂಬ ಕಡ್ಡಾಯವಿಲ್ಲ. ಉರಿಯುತ್ತಿರುವ ಸುರುಸುರುಬತ್ತಿಯಂತೆ ಕಂಡರೂ ಆಶ್ಚರ್ಯ ಪಡಬೇಕಾಗಿಲ್ಲ. ಅನಂತರ ದೇವನಾಗರಿ ಲಿಪಿಯಲ್ಲಿ ಸತ್ತವನ ಹೆಸರು, ಊರು ಮತ್ತು ಮೃತನಾದ ದಿನಾಂಕಗಳನ್ನು ಕೊರೆದಿರುತ್ತಾರೆ. ಅನಂತರ ನಾಲ್ಕೈದು ಅಂಕಣಗಳಲ್ಲಿ ಮೃತನ ಜೀವನದ ಚಿತ್ರಗಳನ್ನು ಚಪ್ಪಟೆ ಚಿತ್ರಗಳಲ್ಲಿ ಕೊರೆದಿರುತ್ತಾರೆ. ಮೃತನು ಕುದುರೆಯ ಸವಾರನಿದ್ದು ಹಗಲೆಲ್ಲ ಸವಾರಿ ಮಾಡುತ್ತಿದ್ದರೆ ಅದಕ್ಕೆ ಅಗ್ರಸ್ಥಾನ ಕೊಡಲಾಗುತ್ತದೆ. ಆದರೆ ಸ್ಮಾರಕದಲ್ಲಿ ತೋರಿಸಿದ ವಸ್ತುಗಳೆಲ್ಲ ಮೃತನ ಹತ್ತಿರ ಇದ್ದುವೆಂದು ಹೇಳಲು ಬರುವದಿಲ್ಲ. ಯಾಕೆಂದರೆ ಜೀವನದುದ್ದಕ್ಕೂ ಕುದುರೆಗೆ ಹಂಬಲಿಸಿ ಪಡೆಯದವನು ಸ್ವರ್ಗಕ್ಕಾದರೂ ಸುಖವಾಗಿ ಕುದುರೆಯ ಮೇಲೆ ತಲುಪಲಿ ಎಂದು ಸಂಸಾರದವರು ಅವನನ್ನು ಕುದುರೆ ಸವಾರನ ರೂಪದಲ್ಲಿ ಕೊರೆಯಿಸಿರುತ್ತಾರೆ. ಅದರಂತೆ ಜೀವನದಲ್ಲಿ ಒಮ್ಮೆಯೂ ಬಂದೂಕು ಹಿಡಿಯದವನು, ಪರಲೋಕಕ್ಕೆ ಹೊರಟು ನಿಂತಾಗ ಕೈಯಲ್ಲಿ ಕೋವಿ ಹಿಡಿದು, ಕುದುರೆ ಸವಾರಿ ಮಾಡುತ್ತಿದ್ದು, ಹಿಂದೆ - ಮುಂದೆ ಅಂಗ ರಕ್ಷಕರು ಹಿಂಬಾಲಿಸುತ್ತಿರುವಂತೆ ಚಿತ್ರಿಸಲಾಗುತ್ತಿದೆ! ಇನ್ನುಳಿದ ಸ್ತರಗಳಲ್ಲಿ ವೀರನು ತನ್ನವರೊಡನೆ ನರ್ತಿಸುತ್ತಿರುವಂತೆ ಚಿತ್ರಿಸಲಾಗುತ್ತಿದೆ. ಕೈ ಕೈ ಹಿಡಿದು ನಿಂತ ಆರೇಳು ನರ್ತಕರಲ್ಲಿ ಹೆಂಗಳೆಯರೂ ಇರುವರೇ ಎಂದು ಗುರುತಿಸುವದು ಕಷ್ಟ.

ಮೃತನು ಪ್ರಕೃತಿಯೊಂದಿಗೆ ಒಂದಾಗಿ ಬಾಳಿ ಬದುಕಿದ್ದರಿಂದ ಗಿಡಮರ, ಪಶು-ಪಕ್ಷಿಗಳಿಗೆ ಆದ್ಯತೆ ಕೊಡಲಾಗುತ್ತಿದೆ. ಒಂದು ಅಂಕಣದಲ್ಲಿ ಕುದುರೆ ಸವಾರನ ಎದುರಿನಲ್ಲಿ ಒಂದು ಭವ್ಯವಾದ ಈಚಲ ವೃಕ್ಷ ಇದೆ. ಈ ಮರ ಅಷ್ಟೊಂದು ನೆರಳಾಗಲಿ, ಕೊರಡಾಗಲಿ ಕೊಡದ್ದರಿಂದ ಮೃತನಿಗೆ ಈಚಲ ಸೆರೆ ತುಂಬ ಇಷ್ಟವಾಗಿತ್ತು ಎಂದು ಅರ್ಥೈಸಬಹುದು. ಮಹುವಾ ಸೆರೆಯ ಭಕ್ತನಿಗೆ ನೂರಾರು ಟಿಸಿಲುಗಳುಳ್ಳ ಮಹುವಾ ಮರವನ್ನು ಸೇರಿಸಲಾಗಿರುತ್ತದೆ. ಪಕ್ಷಿ ಪ್ರೇಮಿಗೆ ಚಿಕ್ಕದೊಂದು ಹೂಗಿಡ, ಕಾಗೆಯಂದ ಹಕ್ಕಿಯನ್ನು ಹೊತ್ತು ನಿಂತದ್ದು ತೋರಿಸಲಾಗುತ್ತದೆ. ಇನ್ನೂ ಕೆಲವು ಸ್ಮಾರಕಗಳಲ್ಲಿ ಕುಂಡಗಳಲ್ಲಿ ಹೂಗಿಡಗಳನ್ನು ರೂಪಿಸಿ ಅದರ ಆಶ್ರಯದಲ್ಲಿ ಹಕ್ಕಿ ವಿರಮಿಸುವಂತೆ ಚಿತ್ರಿಸಲಾಗುತ್ತದೆ. ಆದಿವಾಸಿಗಳು ಉತ್ತಮ ಬೇಟೆಗಾರರಾದರೂ ಪ್ರಾಣಿ - ಪ್ರೀತಿಗೂ ಏನೇನೂ ಕೊರತೆ ಇಲ್ಲ. ತಮ್ಮ ಕುರಿ, ಕೋಣ, ಕೋಳಿಗಳನ್ನು ಮೆಚ್ಚುವಂತೆ, ಕಾಡುಪ್ರಾಣಿಗಳ ಬಗೆಗೂ ಅವರಿಗೆ ಕಳಕಳಿ ಇದ್ದೇ ಇರುತ್ತದೆ. ಅಂತೆಯೇ ಅವರ ಮೃತರ ಕೊರಡುಗಳ ಮೇಲೆ ಚಿಗರೆ, ಮುಳ್ಳು ಹಂದಿಗಳ

ಚಿತ್ರಗಳೂ ಇರುತ್ತವೆ. ಕೆಲವೊಮ್ಮೆ ಚಿತ್ರಗಳು ತೀರ ಕಡಿಮೆ ಶ್ರಮದಿಂದ ನಿರ್ಮಿಸಿದ್ದರಿಂದ, ಅವು ಯಾವ ಪ್ರಾಣಿಗಳೆಂದು ನಿರ್ಧರಿಸುವದು ಕಷ್ಟಕ್ಕಿಟ್ಟುಕೊಳ್ಳುತ್ತದೆ. ಒಂದು ಅಂಕಣದಲ್ಲಿ ಇದ್ದ ಚತುಷ್ಪಾದಿ ಪ್ರಾಣಿ ಯಾವುದೆಂದು ಯಾರಿಂದಲೂ ಖಚಿತವಾಗಿ ಹೇಳಲಾಗುವದಿಲ್ಲ! ಕಡು ಬಡವರ ಸ್ಮಾರಕಗಳು, ಬಟ್ಟೆ ಬಡೆಯುವ ಕೊರಡಿನಂತಿದ್ದು, ಅವುಗಳ ಮೇಲೆ ಮೃತರ ಜೀವನ ಕುರಿತಾದ ಯಾವ ಚಿತ್ರವೂ ಇರುವದಿಲ್ಲ. ಸೂರ್ಯಚಂದ್ರರ ಜೊತೆಗೆ ಒಂದೆರಡು ಮಾನವಾಕೃತಿಗಳು ಇರುತ್ತವೆ. ಇವುಗಳನ್ನು ಗೊಂಡರ ವಿವಾಹ ಸ್ತಂಭಗಳೆಂದು ಮೋಸ ಹೋಗಕೂಡದು. ಅವು ಚಚ್ಚೌಕಾಕಾರವಾಗಿದ್ದರೆ ಇವು ಚಪ್ಪಟೆಯಾಗಿರುತ್ತವೆ. ಇನ್ನೊಂದು ಸ್ಮಾರಕ ಪಿಂಗ್ ಪೊಂಗ್ ಆಟದ ಬ್ಯಾಟಿನಂತಿದ್ದು ಅದರ ನಟ್ಟನಡುವೆ ಷಟ್ಕೋನಾಕಾರದ ಚಿತ್ರವಿದೆ. ಆದರೆ ಇದು ಕಮಲದ ಹೂವನ್ನು ಸೂಚಿಸುತ್ತದೆಯೇ, ನಕ್ಷತ್ರವನ್ನು ಪ್ರತಿನಿಧಿಸುತ್ತದೆಯೇ, ಇಲ್ಲವೇ ಚಕ್ರವಿದ್ದಿರಬಹುದೇ ಎಂದು ಅರ್ಥೈಸಲಾಗಲೇ ಇಲ್ಲ.

ಪ್ರಶಸ್ತವಾದ ತಾಣವನ್ನು ಹುಡುಕಿ, ಈ ಸ್ಮಾರಕಗಳನ್ನು ನೆಡುವ ತೊಂದರೆ ತಪ್ಪಿಸಿಕೊಳ್ಳುವದಕ್ಕಾಗಿ ಇಂದಿನ ಆದಿವಾಸಿಗಳು ಅವನ್ನು ಸಾರ್ವಜನಿಕ ಸ್ಥಳಗಳಲ್ಲಿ ದಾಸ್ತಾನು ಮಾಡುವ ಕ್ರಮವನ್ನು ಕೈಕೊಂಡಿದ್ದಾರೆ. ಪಚಮಡಿಯ ಮೈದಾನದಲ್ಲಿ ಭವ್ಯವಾದ ಒಂದು ಆಲದಮರದ ಅಡಿಯಲ್ಲಿ ಒಂದು ತುಳಸೀಕಟ್ಟೆ. ಯಾರೋ ಪುಣ್ಯಾತ್ಮರು ಅದಕ್ಕೆ ದಾಸವಾಳದ ಹೂವುಗಳನ್ನು ಅರ್ಪಿಸಿ, ಪೂಜೆ ಮಾಡಿದ ಕುರುಹುಗಳಿದ್ದವು. ಗರಟೆಯೊಂದರಲ್ಲಿ ನೈವೇದ್ಯ ಮಾಡಿದ ಹಾಲೂ ಇಟ್ಟಿದ್ದರು. ಈ ವೃಕ್ಷ ಮತ್ತು ತುಳಸಿಕಟ್ಟೆಯ ಸುತ್ತ ಕಟ್ಟೆ ಕಟ್ಟಿ ತಂತಿ ಬೇಲಿ ನಿಲ್ಲಿಸಿದ್ದರು. ಹೋಗಿ ಬರಲು ಇಕ್ಕಟ್ಟಾದ ದಾರಿ. ಅಲ್ಲಿ ನೂರಾರು ಕೊರಡಿನ ಸ್ಮಾರಕ ಫಲಕಗಳನ್ನು ಹರವಿದ್ದರು. ಕೆಳಗಿನಿಂದ ಗೆದ್ದಲು, ಮೇರೆಯರಿಯದ ಉದರದಾಹ ನೀಗಿಸಿಕೊಳ್ಳಲು ಧ್ವಂಸಕಾರ್ಯದಲ್ಲಿ ತೊಡಗಿದ್ದರೆ, ಮೇಲಿನಿಂದ ಏಕಪ್ರಕಾರವಾಗಿ ಸುರಿಯುವ ಮಳೆಯಿಂದಾಗಿ ದಟ್ಟಹಾವಸೆ ಬೆಳೆದಿತ್ತು. ಯಾರಿಗೂ ಬೇಡವಾಗಿ, ಅಸಹಾಯಕ ಸ್ಥಿತಿಯಲ್ಲಿರುವ ಫಲಕಗಳನ್ನು ನೋಡಿದಾಗ, ಅಯ್ಯೋ ! ಎಂದೆನಿಸದೇ ಇರಲಿಲ್ಲ. ಇನ್ನಿತರ ಕಡೆಗಳಲ್ಲಿ ಒಟ್ಟಿದ ಸ್ಮಾರಕಗಳಿಗೂ ಇದೇ ಸ್ಥಿತಿ ಇದ್ದಿರಬೇಕು. ಇಂಥ ಅನೇಕ ಫಲಕಗಳನ್ನು ತಂದು ಛಿಂದವಾಡಾದ ಆದಿವಾಸಿ ಸಂಶೋಧನಾ ಕೇಂದ್ರದಲ್ಲಿ ಸಂರಕ್ಷಿಸಿದ್ದಾರೆ. ಮಾವಾಶಿಯಾ ಆದಿವಾಸಿಗಳೂ ಇಂಥವೇ ಸ್ಮಾರಕಗಳನ್ನು ಮಾಡಿಸುತ್ತಾರೆ. ಆದರೆ ಅವನ್ನೂ ನೆಲದಲ್ಲಿ ಹುಗಿದು ಬಿಡುವದರಿಂದ ಸರ್ವಕಾಲಕ್ಕೂ ನಾಶವಾಗಿ ಬಿಡುವವು.

ಹಿಂದೊಮ್ಮೆ ಬಸ್ತರ ಜಿಲ್ಲೆಯ ಗಿಡಮ್ ಆಸುಪಾಸಿನ ಮಾರಿಯಾ ಆದಿವಾಸಿಗಳು ಭವ್ಯವಾದ ಕೊರಡು ಮೃತ್ಯುಸ್ತಂಭ ನಿಲ್ಲಿಸುತ್ತಿದ್ದರು. ಅಂಥ ಒಂದನ್ನು ಜಗದಲಪುರದ ಮಾನವ ವಿಕಾಸ ಸಂಶೋಧನಾ ಕೇಂದ್ರದಲ್ಲಿ ಸಂರಕ್ಷಿಸಿದ್ದಾರೆ. ಇದನ್ನು ಸಿದ್ಧ ಮಾಡಲು ಬಲಿತ ಒಂದು ತೇಗಿನ ವೃಕ್ಷವನ್ನೇ ಬಳಸಿರಬೇಕು. ಆದರೆ ಮಳೆ, ಗಾಳಿ, ಬಿಸಿಲುಗಳ ಕ್ರೌರ್ಯಕ್ಕೆ ಬಲಿಯಾಗಿ ಬಿರುಕು ಬಿಟ್ಟಿದೆ. ಚಚ್ಚೌಕಾಕಾರದ ಕಂಬದಲ್ಲಿ ಮೂರು ಸ್ತರಗಳಲ್ಲಿ ಉಬ್ಬು ಚಿತ್ರಕೊರೆದು ಶಿಖರವನ್ನು ದೇವಾಲಯದ ಗೋಪುರದಂತೆ ಮಾಡಲಾಗಿದೆ. ಮೃತನು ಭಾರೀ ವರ್ಚಸ್ಸು ಉಳ್ಳವನಾಗಿರಬೇಕು. ಅಂತೆಯೇ ಅವನ ವಿಗ್ರಹ ಕೈಗಳಲ್ಲಿ ಕೊಡೆ, ಕೊಡಲಿ, ಹಣದ ಚೀಲ ಹಿಡಿದು ಆನೆಯ ಅಂಬಾರಿಯಲ್ಲಿರುವಂತೆ ಚಿತ್ರಿಸಲಾಗಿದೆ. ಇನ್ನೊಂದು ಅಂಕಣದಲ್ಲಿ ಕುದುರೆಯನ್ನೇರಿ ಬಂದ ಮೃತನು ಕಠಾರಿ - ಢಾಲುಗಳೊಂದಿಗೆ ವೈರಿಯ ಹತ್ತಿರ ದ್ವಂದ್ವದಲ್ಲಿ ತೊಡಗಿದಂತೆ ತೋರಿಸಲಾಗಿದೆ. ಈರ್ವರು ಸೇವಕರ ಜೊತೆಗೆ ಬಳ್ಳಿಯಲ್ಲಿ ಗಿಳಿಯನ್ನೂ ಸೇರಿಸಲಾಗಿದೆ. ಇನ್ನೊಂದು ಅಂಕಣದಲ್ಲಿ ಹಾವು, ಮೊಸಳೆ, ಆಮೆ, ಕಪ್ಪೆಗಳಂಥ ಜಲಪ್ರಾಣಿಗಳನ್ನು ನೋಡಬಹುದಾಗಿದೆ. ಕಾಡಿನ ದೃಶ್ಯ ತೋರಿಸುವ ಅಂಕಣದಲ್ಲಿ ಹೆಬ್ಬುಲಿ, ಕರಡಿ, ತೋಳ, ಮೊಲ, ಗೋಸುಂಬೆಗಳನ್ನೆಲ್ಲ ಸೇರಿಸಲಾಗಿದೆ. ಇನ್ನೊಂದರ ಮೇಲೆ ಜೋಡಿ ಒಂಟೆಗಳನ್ನು ಚಿತ್ರಿಸಿ ಅದರ ಡುಬ್ಬದ ಮೇಲೆ ಸವಾರಿ ಮಾಡಲು

ಅನುಕೂಲವಾಗುವಂತೆ ಮೆತ್ತಗಿನ ಥಡಿಯನ್ನು ಜೋಡಿಸಲಾಗಿದೆ. ಹತ್ತಿರದಲ್ಲಿ ಬಲಗೈಯಲ್ಲಿ ಸರ್ಪ ಹಿಡಿದು ನಿಂತ ಮಾನವಾಕೃತಿಯನ್ನು ಹುಲಿಯೊಂದು ವಿಸ್ಮಯದಿಂದ ವೀಕ್ಷಿಸುತ್ತಿದೆ. ಇನ್ನೊಂದರಲ್ಲಿ ಮೃತನು ತನ್ನ ಹೊಲವನ್ನು ಉಳುತ್ತಿದ್ದಾನೆ. ಮತ್ತೊಂದರಲ್ಲಿ ಕಾಡುಕೋಣದ ಕೋಡುಗಳ ಶಿರೋಲಂಕಾರವನ್ನು ಧರಿಸಿದ ವಾದ್ಯಗಾರರು ಮತ್ತು ನೃತ್ಯದಲ್ಲಿ ತೊಡಗಿದ ಹೆಂಗಳೆಯರಿದ್ದಾರೆ. ಮಗದೊಂದು ಅಂಕಣದಲ್ಲಿ ಅಕ್ಕಿಯ ಹೆಂಡ (ಲಾಂದಾ)ವನ್ನು ಒಯ್ಯುವದನ್ನು ಕಾಣಬಹುದಾಗಿದೆ.

ಮೃತನು ಪ್ರೇತರೂಪದಲ್ಲಿ ಊರವರನ್ನು ಕಾಡದಂತೆ ಎಲ್ಲವನ್ನು ಶಾಸ್ತ್ರೋಕ್ತವಾಗಿ ಮಾಡಲಾಗುತ್ತದೆ. ಪ್ರಥಮ ದಿನ ಅವನ ಕುಟುಂಬದವರು, ಪುರೋಹಿತನೊಂದಿಗೆ ಕಾಡಿಗೆ ಹೋಗಿ ಯೋಗ್ಯವಾದ ಮರವನ್ನು ಗುರುತಿಸಿ ಹಿಂದಿರುಗುವರು. ಮರುದಿನ ಅದಕ್ಕೆ ಪೂಜೆ - ನೈವೇದ್ಯಗಳು ಸಕಲ ಸನ್ಮಾನದೊಂದಿಗೆ ಸಲ್ಲುವವು. ಮೂರನೆಯ ದಿನ ಅದನ್ನು ಕಡಿದು ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ತಂದು ಆಚಾರಿಗೆ ಒಪ್ಪಿಸಲಾಗುತ್ತದೆ. ಚಿತ್ರಗಳು ಹೇಗಿರಬೇಕು ಎಂದು ಆದಿವಾಸಿಗಳೇ ನಿರ್ಧರಿಸುವರು. ಅಂಕಣಗಳಲ್ಲಿ ವಿವರಗಳನ್ನು ಕೊರೆಯುವಾಗ ಸುಮಂಗಲೆಯರು ಮೃತನ ಗುಣಗಾನದ ಹಾಡು ಕಟ್ಟಿ ಹಾಡುವರು. ಈ ಹಾಡುಗಳೂ ಪರಂಪರಾಗತವಾಗಿ ಬಂದಿರಬೇಕು. ಹೆಸರು ಮಾತ್ರ ಬದಲಿಸುತ್ತಿದ್ದಿರಬೇಕು. ಸ್ಮಾರಕವೊಂದು ಸಿದ್ಧವಾದ ನಂತರ ಅದನ್ನು ವಾರ ಪ್ರತಿಷ್ಠಿತರ ಮನೆಗೆ ಒಯ್ದು ಗೌರವ ಸಲ್ಲಿಸಲಾಗುವದು. ಪುರೋಹಿತರು ಸೂಚಿಸಿದ ಶುಭದಿನದಂದು ಊರವರನ್ನೆಲ್ಲ ಹಬ್ಬದೂಟಕ್ಕೆ ಆಮಂತ್ರಿಸಿ ಮದ್ಯದ ಸರಬರಾಜನ್ನು ಮಾಡಲಾಗುತ್ತದೆ. ಆನಂತರ ಊರಿಗೆ ಬಂದು ಹೋಗುವವರಿಗೆಲ್ಲ ಗೋಚರಿಸುವಂತೆ ಪ್ರಶಸ್ತ ಜಾಗದಲ್ಲಿ ಸಕಲಸನ್ಮಾನಗಳಿಂದ ಅದನ್ನು ಸ್ಥಾಪಿಸಲಾಗುತ್ತದೆ. ಹಬ್ಬ ಹುಣ್ಣಿಮೆಯ ದಿನಗಳಲ್ಲಿ ಮಾಡಿದ ವಿಶೇಷ ಅಡಿಗೆಯಲ್ಲಿ ಸ್ವಲ್ಪ ಪಾಲು ಮೃತನಿಗಾಗಿ ಸ್ಮಾರಕದ ಅಡಿಯಲ್ಲಿ ಇಡಲಾಗುತ್ತದೆ. ಬೇಟೆಗೆ ಹೊರಡುವಾಗ, ಯಾವದೇ ಶುಭಕಾರ್ಯ ಮಾಡುವಾಗ, ಈ ಸ್ಮಾರಕದ 'ಅಪ್ಪಣೆ' ಪಡೆಯಲಾಗುತ್ತದೆ. ಅದಕ್ಕೆ ಸಂದಾಯವಾಗುವ ಗೌರವಗಳಲ್ಲಿ ಸ್ವಲ್ಪವಾದರೂ ಅಲಕ್ಷವಾದರೆ ಊರವರಿಗೆಲ್ಲ ಕಷ್ಟನಷ್ಟಗಳಾಗುವದು ಖಂಡಿತವೆಂದು ಅವರು ನಂಬುತ್ತಾರೆ. ಹಾಗಾದಾಗ ಕುರಿ, ಕೋಳಿಗಳನ್ನು ತಪ್ಪುಕಾಣಿಕೆಗಳೆಂದು ಬಲಿ ಕೊಟ್ಟು ಭೋಜನಕೂಟವನ್ನು ಏರ್ಪಡಿಸಲೇಬೇಕಾಗುತ್ತದೆ.

ಮಧ್ಯಪ್ರದೇಶದ ಪಶ್ಚಿಮ ಜಿಲ್ಲೆಗಳಲ್ಲಿ ಭಿಲ್ಲರು ಹೆಚ್ಚಾಗಿರುವದರಿಂದ ಅಲ್ಲೆಲ್ಲ ಅವರ 'ಗಾಥಾ' ಇಲ್ಲವೇ 'ಗಾಟಾ' ಎಂದು ಕರೆಯಲ್ಪಡುವ ಸ್ಮಾರಕಗಳನ್ನು ಕಾಣಬಹುದಾಗಿದೆ. ಗಂಡು - ಹೆಣ್ಣುಗಳ ನೆನಪಿಗಾಗಿ, ಇವನ್ನು ಕೊರೆಯಿಸುವ ಪರಿಪಾಠವಿದೆ. ಕೆಲ ಹಿಂದು ಶಿಲ್ಪಿಗಳು ಇವುಗಳ ಶಿಲ್ಪ ನಿರ್ಮಾಣದಲ್ಲಿ ಪರಿಣತಿ ಪಡೆದು ಅದನ್ನೇ ವೃತ್ತಿಯನ್ನಾಗಿಸಿಕೊಂಡಿದ್ದಾರೆ.'ಗಾಥಾ' ಕಲ್ಲುಗಳನ್ನು ಕಡೆದು ನುಣುಪು ಮಾಡಿ, ಅದಕ್ಕೆ ಆತ್ಯಾಕರ್ಷಕವಾದ ಬಣ್ಣಗಳನ್ನು ಬಳಿದು ಮೃತರನ್ನು ಹುಗಿದ ಸ್ಥಳದಲ್ಲಿಯೇ ನಿಲ್ಲಿಸಿರುತ್ತಾರೆ. ಸರ್ವಸಾಧಾರಣವಾಗಿ ಅವು ಆಳೆತ್ತರ ಇರುವದು ವಾಡಿಕೆ. ಭಿಲ್ಲರು ಆಧುನಿಕತೆಗೆ ಮಾರು ಹೋದ ಆದಿವಾಸಿಗಳಲ್ಲಿ ಪ್ರಮುಖರು. ಮೃತನು ಎಂಥ ಜೀವನ ನಡೆಸಿದನೆಂಬುದಕ್ಕಿಂತ ಸ್ಮಾರಕದಲ್ಲಿ ಹೆಚ್ಚು ಆಕರ್ಷಕವಾಗಿ ಕಾಣುವದು ಮುಖ್ಯ. ಪ್ರಥಮ ದರ್ಶನಕ್ಕೇ ಅಪ್ರತಿಮ ವೀರ, ಧೀರ, ಶೂರನ ದರ್ಶನದ ಅನುಭವವಾಗುವಂತೆ ಬಲಗೈಯಲ್ಲಿ ಬಂದೂಕು, ಎಡಗೈಯಲ್ಲಿ ಕಠಾರಿ, ಭುಜದ ಪಟ್ಟಿಯಲ್ಲಿ ಮದ್ದು, ಗುಂಡು ಹಾಕಿಕೊಂಡಂತೆ ಚಿತ್ರಿಸಲಾಗಿರುತ್ತದೆ. ಹಿನ್ನೆಲೆಯಲ್ಲಿ ಗಿಡಮರಗಳನ್ನು ಸೇರಿಸಿರುತ್ತಾರೆ. ಎರಡನೆಯ ಅಂಕಣದಲ್ಲಿ ಅವನು ಅಶ್ವಾರೋಹಿಯಾಗಿರುವಂತೆ ಚಿತ್ರಿಸಿರುತ್ತಾರೆ. ಕುದುರೆಯನ್ನು ನಿಯಂತ್ರಿಸಲೆಂದೇ ಸೇವಕನೊಬ್ಬನಿದ್ದಾನೆ. ಇನ್ನೊಂದು ಕಡೆ ನೀರಿನ ಕೊಡ ಹೊತ್ತ ಹೆಂಗಳೆಯ ಚಿತ್ರವಿರುತ್ತದೆ. ಎಂದಿನಂತೆ ಘಟನೆಗಳಿಗೆ ಸೂರ್ಯಚಂದ್ರರೇ ಸಾಕ್ಷಿ, ಎಂದು ಗಾಥಾದಲ್ಲಿ ಸೇರ್ಪಡೆ ಮಾಡಿರುತ್ತಾರೆ. ಹೆಂಗಳೆಯರಿಗಾಗಿ ನಿಲ್ಲಿಸಿದ ಸ್ಮಾರಕಗಳ ಮೇಲೆ ಶೌರ್ಯದ ಬದಲಾಗಿ ಭಕ್ತಿ ಪ್ರೇಮಗಳಿಗೆ ಆದ್ಯತೆ

ಕೊಡಲಾಗುತ್ತಿದೆ. ಮೃತಳು ರಾಜಸ್ಥಾನಿ ಹೆಂಗಳೆಯರು ತೊಡುವಂಥ ಲಂಗ, ಪೋಲಕ ಧರಿಸಿ, ಅದರ ಮೇಲೆ ಕಸೂತಿ ಮಾಡಿದ ಓಢಣಿ ಹೊದೆದುಕೊಂಡಿರುತ್ತಾಳೆ. ಬಲಗೈಯಲ್ಲಿ ಪ್ರೀತಿ - ಶಾಂತಿಗಳ ದ್ಯೋತಕವಾಗಿ ಹೂ ಗೊಂಚಲೊಂದನ್ನು ಹಿಡಿದಿರುತ್ತಾಳೆ. ಅವಳ ಕಿವಿ, ಕಂಠ, ಕೈ, ಕಾಲುಗಳ ಒಡವೆಗಳನ್ನೆಲ್ಲ ಗುರುತಿಸಬಹುದಾಗಿದೆ. ಹಿನ್ನೆಲೆಯಲ್ಲಿದ್ದ ಗಿಡಮರಗಳ ಮೇಲೆ ಗಿಳಿವಿಂಡು ವಿಶ್ರಮಿಸುವದನ್ನು ಸೇರಿಸಲಾಗಿರುತ್ತದೆ. ಅನೇಕ ಸ್ಮಾರಕಗಳ ಮೇಲೆ ದೇವನಾಗರಿ ಲಿಪಿಯಲ್ಲಿ ಮೃತಪಟ್ಟವರ ಹೆಸರು, ಊರು, ಸ್ವರ್ಗಸ್ಥರಾದ ದಿನಾಂಕಗಳನ್ನು ಸೇರಿಸಿರುತ್ತಾರೆ.

ಹೆಚ್ಚಿನ ಆದಿವಾಸಿಗಳು ಮೃತರ ಆಸೆ - ಆಕಾಂಕ್ಷೆಗಳನ್ನು ನೆರವೇರಿಸಲು ಹೆಚ್ಚಿನ ಕಾಳಜಿ ವಹಿಸುತ್ತಾರೆ. ಅವರ ನಿತ್ಯ ಬಳಕೆಯ ಸಾಮಾನುಗಳನ್ನು, ಅವರು ಪ್ರೀತಿಸಿದ ವಸ್ತುಗಳನ್ನು ಶವದೊಂದಿಗೇ ಹುಗಿದು ಬಿಡುತ್ತಾರೆ. ಇವೆಲ್ಲ ಆತನ ಪರಲೋಕದ ಬಳಕೆಗೆ ಬೇಕಾಗುತ್ತವೆ ಎಂಬ ನಂಬಿಕೆ ಅವರದು. ಅಲ್ಲದೇ ಇವುಗಳಿಂದ ಮೃತನು ವಂಚಿತನಾದರೆ, ಅವನು ಭೂತ, ಪ್ರೇತದ ರೂಪದಲ್ಲಿ ಕುಟುಂಬದವರನ್ನೂ, ಊರವರನ್ನೂ ಕಾಡದೇ ಇರಲಾರ ಎಂಬ ಭೀತಿಯೂ ಇದ್ದೇ ಇರುವದು. ಅಂತೆಯೇ ಕುಟುಂಬದವರಿಗೆ ಯಾವುದೇ ಕಷ್ಟನಷ್ಟ ಸಂಭವಿಸಿದಾಗ, ಮಂತ್ರವಾದಿಯನ್ನು ಬರಮಾಡಿಕೊಂಡು, ಆತನ ಸೂಚನೆಯಂತೆ ತಕ್ಕ ನಿವಾರಣೋಪಾಯಗಳನ್ನು ಕೈಕೊಳ್ಳುವರು. ಸ್ಥಾನೀಯ ಕಲಾಕಾರನಿಂದ ಗುಡಿಸಲಿನ ಗೋಡೆಗಳನ್ನು ಮೃತನನ್ನು ಗೌರವಿಸುವ ಚಿತ್ರಗಳಿಂದ ಅಲಂಕರಿಸುವರು. ಇದರಿಂದಾಗಿ ಆದಿವಾಸಿ ಕಲೆಗೆ ಇನ್ನೊಂದು ಆಯಾಮ ಬಂದಿದೆ. ಮೃತನೊಂದಿಗೆ ಮಣ್ಣು ಮಾಡಿದ ವಸ್ತು, ಒಡವೆ, ಸ್ಮಾರಕದ ಮೇಲೆ ರಚಿತವಾದ ಅವನ ಜೀವನ ದೃಶ್ಯಗಳಿಂದ ಮತ್ತು ಕುಟೀರದಲ್ಲಿರುವ ಭಿತ್ತಿ ಚಿತ್ರಗಳ ಆಧಾರದ ಮೇಲಿಂದ ಮೃತನ ಜೀವನದ ಹಲವಾರು ಮುಖಗಳನ್ನು ಅರಿಯಬಹುದಾಗಿದೆ. ಇನ್ನಿತರರೂ ಇದೇ ಪದ್ಧತಿ ಆಚರಿಸಿದ್ದಿದ್ದರೆ, ಇತಿಹಾಸಕಾರರಿಗೆ ಅದೆಷ್ಟು ನೆರವಾಗುತ್ತಿತ್ತು!